ಮಾರ್ಚ್
2003

ರೂ. 10/-

ಸಂವಾದ

ಮಾಸ ಪತ್ರಿಕೆ

- ದನ ಸಂಸ್ಕೃತಿ
- ಕ್ರಿಕೆಟ್‌ನ ಜಾತಿ
- ಲೋಹಿಯಾ ನೆನಪು

ಮೂಲಭೂತ ಅವಶ್ಯಕತೆಯೊಂದರ ಕುರಿತು

ಅಸ್ಪೃಶ್ಯತೆ ದಲತರ ಸಮಸ್ಯೆಯೆ ?

— ದೇವನೂರ ಮಹಾದೇವ

ಸಂವಾದ

ಮಾಸ ಪತ್ರಿಕೆ

ಸಂಪುಟ 1 ಸಂಚಿಕೆ 5

ಮಾರ್ಚ್ 2003

ಸಂಪಾದಕ :
ಇಂದೂಧರ ಹೊನ್ನಾಪುರ

ನೆರವು :
ಕೆ.ಸಿ. ಶಿವರಾಂ
ಡಾ|| ಎಂ. ಶಿವಲಿಂಗಯ್ಯ
ಸುಬ್ಬು ಹೊಲೆಯಾರ್

ವಿಳಾಸ : ಸ್ಫೂರ್ತಿಧಾಮ
ಬಾಬಾಸಾಹೇಬ್ ಅಂಬೇಡ್ಕರ್
ಸ್ಮಾರಕ ಕೇಂದ್ರ
ಅಂಚೆ ಪೆಟ್ಟಿಗೆ ಸಂಖ್ಯೆ : 9143
ಹೇರೋಹಳ್ಳಿ, ಮಾಗಡಿರಸ್ತೆ
ವಿಶ್ವನೀಡಂ ಅಂಚೆ
ಬೆಂಗಳೂರು - 560 091
ದೂರವಾಣಿ : 3287943 / 3281667

PRINTED AND PUBLISHED BY
S. R. GOVINDU
ON BEHALF OF SPOORTHIDHAMA
PB NO. 9143, HEROHALLI
VISHWANEEDAM POST
BANGALORE - 560 091
PHONE : 3287943, 3281667

EDITOR :
INDUDHARA HONNAPURA

ಒಳ ಪುಟಗಳಲ್ಲಿ



- ಪತ್ರಗಳು 3
- ಮೇರಾ ಭಾರತ್ ಮಹಾನ್ 4
- ಅಂತರಂಗ 5
- ರಾಜಕೀಯ ಸಂಕ್ರಮಣ ಸ್ಥಿತಿಯಲ್ಲಿ ಸಮಾಜ 6
- ದ್ರಾವಿಡರ ಸ್ವಾಭಿಮಾನದ ಸಂಕೇತ ಪೆರಿಯಾರ್ 8
- ದನ ಮತ್ತು ಸಂಸ್ಕೃತಿ — ಪ್ರೊ. ಕಾಂಚಾ ಐಲಯ್ಯ 10
- ದನದ ಬಾಡು ತಿನ್ನುವವರೇಕೆ ಅಸ್ಪೃಶ್ಯರಾಗುತ್ತಾರೆ ? 12
- ವಾಜಪೇಯಿ ಮತ್ತು ಗೋರಕ್ಷಣೆ — ಕೆ.ಪಿ. ಪೂರ್ಣಚಂದ್ರ ತೇಜಸ್ವಿ 13

- ಅಸ್ಪೃಶ್ಯತೆ ದಲಿತರ ಸಮಸ್ಯೆಯೆ ? — ದೇವನೂರ ಮಹಾದೇವ 14
- ಬಿಜೆಪಿಯಲ್ಲಿ ಜಾಗ ಮಾಡಿಕೊಳ್ಳುತ್ತಿರುವ ತಿರಸ್ಕೃತ ರಾಜಕಾರಣಿಗಳು 18
- ಇನ್ನು ನೀರಿಗೆ ಬರವಿಲ್ಲ 19
- ಕಲ್ಪನಾ ಚಾವ್ಲ ಭಾರತದ ಧ್ರುವತಾರೆಯೇ? 20
- ಲೋಹಿಯಾ ನೆನಪು 22
- ಕೌಟಿಲ್ಯನ ವೈದಿಕ ಅರ್ಥಶಾಸ್ತ್ರ 26
- ಕ್ರಿಕೆಟ್‌ನ ಜಾತಿ 28



- ದಲಿತ ಮಹಿಳೆಯರ ಸಮಸ್ಯೆಗಳು 32
- ಮೂಲಭೂತ ಅವಶ್ಯಕತೆಯೊಂದರ ಕುರಿತು... 36
- ಹಿಂದೂ ವಿವಾಹಗಳ ಸುತ್ತ ಮುತ್ತ-3 42

ಮುಖಪುಟ ರೇಖಾ ಚಿತ್ರ ಕಲಾವಿದ : ಯಕ್ಕನ್ ವಿನ್ಯಾಸ : ರಾಥೋಡ್

ದಲಿತ, ಹಿಂದುಳಿದ ಬುದ್ಧಿಜೀವಿಗಳ ಕಣ್ತೆರೆಸಲಿ

ಪ್ರಿಯ ಇಂದೂಧರ್‌ರವರೆ,

'ಸಂವಾದ'ದ ಮೂರನೆ ಸಂಚಿಕೆ ತುಂಬಾ ಚೆನ್ನಾಗಿ ಬಂದಿದೆ. ಕಳೆದೆರಡು ಸಂಚಿಕೆಗಿಂತಲೂ ಉತ್ತಮವಾದ ಹಾಗೂ ವೈಚಾರಿಕವಾದ ಲೇಖನಗಳನ್ನು ಹೊಂದಿರುವ ಸಂವಾದ ಹಿಂದಿನೆರಡು ಸಂಚಿಕೆಗಳ ಎಡರು-ತೊಡರುಗಳನ್ನು ದಾಟಿ ಆಕರ್ಷಕವಾಗಿ ಮೂಡಿ ಬಂದಿದೆ.

ಸಾಹಿತ್ಯ ಕ್ಷೇತ್ರದಲ್ಲಿ ತಾವು ಆಯ್ದುಕೊಂಡ ಒಂದಷ್ಟು ಕ್ಷೇತ್ರಗಳ ಬಗ್ಗೆ ಸಾಕಷ್ಟು ಕೃಷಿ ಮಾಡಿ ಹೆಸರುಗಳಿಸಿರುವ ಹಿಂದುಳಿದ ವರ್ಗದ ಬುದ್ಧಿಜೀವಿಗಳು ಕೋಮುವಾದಿಗಳ ಕುಕೃತ್ಯಗಳಿಗೆ ಭಾರತದ ದಲಿತರು, ಹಿಂದುಳಿದವರು, ಅಲ್ಪ ಸಂಖ್ಯಾತರು ಹಾಗೂ ಮಹಿಳೆಯರು ರಾಜಾರೋಷವಾಗಿ ಬಲಿಯಾಗುತ್ತಿರುವಾಗಲೂ ಸಂಘಟಿತ ಪ್ರಯತ್ನದ ಪರ್ಯಾಯಗಳಿಗೆ ಪ್ರಯತ್ನಿಸದಿರುವುದನ್ನು ನೋಡಿದಾಗ ನಿಮ್ಮ ಅಂತರಂಗದ ಭಾಷೆಯಲ್ಲೇ ಹೇಳುವುದಾದರೆ ಇವರಿಗೆಲ್ಲಾ ಗರಬಡಿದಿರುವುದು ನಿಜ.

ಅಖಿಲ ಭಾರತ ಮಟ್ಟದ ಅಘೋಷಿತ ಹಿಂದೂ ನಾಜಿಗಳ ಹಿಂಸಾಕಾಂಡ ಒಂದೆಡೆಯಾದರೆ ರಾಜ್ಯದಲ್ಲಿ ಅಧಿಕಾರದಲ್ಲಿರುವ ಕೃಷ್ಣರ ಕಾಂಗ್ರೆಸ್ ಸರ್ಕಾರದ ಕರಿ ನೆರಳಲ್ಲಿ ಪ್ರತಿ ಹಳ್ಳಿಯಲ್ಲಿ ಇಂದು, ಹಿಂದುಳಿದವರು ಮತ್ತು ದಲಿತರ ನಡುವೆ ದ್ವೇಷ-ಗಲಭೆಗಳು ಹೆಚ್ಚುತ್ತಲೇ ಇವೆ. ಸುದ್ದಿಪತ್ರಿಕೆಗಳ ನಿತ್ಯ ಆಹಾರವಾಗುತ್ತಿರುವ (ಸಂವಾದದ ಮೇರಾ ಭಾರತ್ ಮಹಾನ್

ಸೇರಿದಂತೆ) ಇಂತಹ ಪ್ರಕರಣಗಳ ಬಗ್ಗೆ ಈ ವರ್ಗಗಳ ಬುದ್ಧಿಜೀವಿಗಳ ತುಟಿ ಬಿಚ್ಚದೆ ತಟಸ್ಥರಾಗುತ್ತಿರುವುದರ ಕುರಿತು ಕಾಂಚಾಐಲಯ್ಯ ಮತ್ತು ನಟರಾಜ್ ಹುಳಿಯಾರ್‌ರರ ಲೇಖನಗಳು ಸಂದರ್ಭೋಚಿತವಾಗಿವೆ.

ಪ್ರತಿ ಹಳ್ಳಿಗಳನ್ನೂ ತಮ್ಮ ಹಿಂದುತ್ವದ ಸ್ಥಾಪನೆಯ ನೆಲೆಯಾಗಿಸಿಕೊಂಡು ದ್ವೇಷ-ಕಿಚ್ಚುಗಳನ್ನು ಹೆಚ್ಚಿಸಲು ಹೊರಟಿರುವ ಕೋಮುವಾದಿಗಳ ಕುತಂತ್ರದ ವಿರುದ್ಧ ಹಿಂದುಳಿದವರು ಮತ್ತು ದಲಿತ ವರ್ಗದ ಬುದ್ಧಿಜೀವಿಗಳು ಕಣ್ತೆರೆಸುವ ನಿಟ್ಟಿನಲ್ಲಿ "ಸಂವಾದ" ಯೋಗ್ಯ ಕೆಲಸ ಮಾಡಿದೆ. ಮುಂದೆಯೂ ಇವರ ಐಕ್ಯತೆಯ ಸಾಕ್ಷೀಭೂತವಾಗಿ ಸಂವಾದ ಬೆಳೆಯಲಿ ಎಂದು ಹಾರೈಸುವ,

ಹೆಚ್.ಎಸ್. ನಾರಾಯಣಗೌಡ
ಹಾಸನ

ನಮ್ಮ ಜವಾಬ್ದಾರಿ...

ಸಂಪಾದಕರೆ,

ಸಂವಾದ ಬಳಗಕ್ಕೆ ನನ್ನ ಅನಂತ ಧನ್ಯವಾದಗಳು. ದಲಿತ ಚಿಂತನೆ, ನೋವು, ನಲಿವುಗಳ ಸ್ಪಂದನೆಯ ಸಾಕಾರವಾದ ಸಂವಾದ ಪತ್ರಿಕೆ ಅಗಾಧವಾಗಿ ಬೆಳೆಯಲೆಂದು ಆಶಿಸುತ್ತಿದ್ದೇನೆ. ನಮ್ಮ ದಲಿತ ಬಾಂಧವರು ತಮ್ಮನ್ನು ತಾವೇ ಮರೆಯುತ್ತಿದ್ದಾರೆ. ಇದು ಅಕ್ಷರಶಃ ನಿಜ. ಒಬ್ಬ ದಲಿತ ಇಂದು ಒಂದು ಕೆಲಸ ಸಿಕ್ಕಿದರೆ ಸಾಕು ತನ್ನ ಹೊಣೆ ಈ ದಲಿತ ಸಮಾಜಕ್ಕೆ ಏನು ಎಂಬುದನ್ನು ಮರೆತಂತಿದೆ.

ಮೊನ್ನೆ ನಾನು ಪ್ರಜಾವಾಣಿಯಲ್ಲಿ ಪ್ರಕಟವಾದ "ದಲಿತರಿಗೆ ಬಹಿಷ್ಕಾರ" ಎಂದು ಬರೆದಿರುವ ವೃತ್ತಾಂತವನ್ನು ಓದಿದೆ. ಇದು ನನ್ನ ಮನಸ್ಸಿಗೆ ಬಹಳ ಖೇದವಾಯಿತು. ಇಪ್ಪತ್ತೊಂದನೆ ಶತಮಾನದಲ್ಲಿದ್ದರೂ ನಾವು ಇಂತಹ ಬಹಿಷ್ಕಾರ ಅನಿಷ್ಟ ಪದ್ಧತಿಗಳನ್ನು ಕಾಣುತ್ತಿದ್ದೇವೆ. ಇದು ದಲಿತರ ಬಡತನ ಹಾಗೂ ಸಾಮಾಜಿಕ ಶೋಷಣೆಯನ್ನು ಎತ್ತಿ ತೋರುತ್ತದೆ.

ಹೀಗೆ ದಲಿತರ ಬದುಕನ್ನು ನಿರಂತರ ಎಚ್ಚರಿಸುತ್ತಿರುವ "ಸಂವಾದ" ಇನ್ನೂ ಹೆಚ್ಚು ಬೆಳೆಯಲಿ ಎಂದು ಆಶಿಸುವ

ತಮ್ಮ ಬಂಧು,
ಪ್ರಸನ್ನ ಕುಮಾರ್, ಜಿ.ಕೆ.ವಿ.ಕೆ.,
ಬೆಂಗಳೂರು

ಧರ್ಮಾಂಧರಿಗೆ ಶಿಕ್ಷೆ ಏಕಿಲ್ಲ?

ಪ್ರಿಯ ಸಂಪಾದಕರೆ,

'ಸಂವಾದ' ಪತ್ರಿಕೆಯ ಉದ್ದೇಶಗಳಲ್ಲಿ ಹೇಳಿಕೊಂಡಿದ್ದಂತೆ 2 ಸಂಚಿಕೆಗಳಲ್ಲಿ ಕಾಣಲಾಗದಿದ್ದ ಮಹಿಳಾ ಪರ ಲೇಖನ 'ಸಂವಾದ'ದ ಮೂರನೇ ಸಂಚಿಕೆಯಲ್ಲಿದ್ದುದನ್ನು ನೋಡಿ ಸಂತೋಷವಾಯಿತು.

ಆದರೆ ಈ ಸಂತೋಷ ಬಹಳ ಹೊತ್ತು ಇರಲಿಲ್ಲ. ಯಾಕೆಂದರೆ ಆ ಲೇಖನದಲ್ಲಿ ಮಹಿಳಾ ವರ್ಗದ ಮೇಲೆ ಲಿಂಗ ಮತ್ತು ಜಾತಿ-ಧರ್ಮದ ನೆಪದಲ್ಲಿ ಧರ್ಮಾಂಧ ಅವಿವೇಕಿಗಳು ನಡೆಸಿರುವ ಅಮಾನುಷ ಕೃತ್ಯಗಳನ್ನು ಓದಿ ನಿಜವಾಗಿಯೂ ಕಣ್ಣಲ್ಲಿ ನೀರು ಬಂತು.

ಹೊಟ್ಟೆಪಾಡಿಗೆ ಸಣ್ಣಪುಟ್ಟ ಕಳ್ಳತನ ಇತ್ಯಾದಿಗಳನ್ನು ಮಾಡುವವರಿಗೆ ನೀಡುವ ಉಗ್ರ ಶಿಕ್ಷೆಗೆ ಬದಲಾಗಿ ಮಹಿಳೆಯರನ್ನು ಶೋಷಿಸುವ ಜಾತೀವಾದಿ-ಧರ್ಮಾಂಧ ಶಕ್ತಿಗಳಿಗೆ ಅದಕ್ಕಿಂತಲೂ ಉಗ್ರ ಶಿಕ್ಷೆಯಾಗಲಿ. ಈ ನಿಟ್ಟಿನಲ್ಲಿ ಸಂವಾದ ಅಸ್ತ್ರವಾಗಲಿ.

ಲಕ್ಷ್ಮಮ್ಮ, ಸುಂಕದಕಟ್ಟೆ
ಬೆಂಗಳೂರು

ಪುರೋಹಿತ ಶಾಹಿಯ ಪುಂಡಾಟಿಕೆ

ಗೆಳೆಯ ಇಂದೂಧರ್

ಪತ್ರಿಕೋದ್ಯಮದ ಇತ್ತೀಚಿನ ನಿಲುವುಗಳು ಮತ್ತು ನಕರಾಗಳಿಂದ ಬೇಸತ್ತು ಬಹಳ ವರ್ಷಗಳಿಂದ ದೂರವಿದ್ದ ನಿಮ್ಮನ್ನು 'ಸಂವಾದ' ಮತ್ತೆ ಈ ಕ್ಷೇತ್ರಕ್ಕೆ ಎಳೆದು ತಂದಿರುವುದು, ಬದಲಾವಣೆ ಮತ್ತು ಶೋಷಣೆ ಮುಕ್ತ ಸಮಾಜದ ಕನಸು ಹೊತ್ತ ನನ್ನಂತಹ ಹಲವರಿಗೆ ಖುಷಿ ತಂದಿದೆ. ಮುಂಗಾರು-ಪ್ರಜಾವಾಣಿ ದಿನ ಪತ್ರಿಕೆಗಳಲ್ಲಿ ಬದಲಾವಣೆಯ ಹೊಸ ಅಲೆಯನ್ನೇ ಎಬ್ಬಿಸಿದ ಲೇಖನಗಳನ್ನು ಬರೆಯುತ್ತಿದ್ದ ನೀವು, ಸುದ್ದಿ ಸಂಗಾತಿಯ ಮೂಲಕ ದಲಿತರು ಹಿಂದುಳಿದವರು ಮತ್ತು ಅಲ್ಪಸಂಖ್ಯಾತರನ್ನು ರಾಜಕೀಯ/ಸಾಮಾಜಿಕ ಸಾಹಿತ್ಯಕ ಮತ್ತು ಸಾಂಸ್ಕೃತಿಕವಾಗಿ ಸಂಘಟಿಸಲು ಪಟ್ಟ ಪಾಡು ನಮಗೆಲ್ಲಾ ತಿಳಿದಿದೆ.

ಹಾಗೆ ನೋಡಿದರೆ ಪಂಚಮದ ಮೂಲಕ ಶೋಷಿತ ಜನರಲ್ಲಿ ವೈಚಾರಿಕ ಚಿಂತನೆಯ ಬೀಜ ಬಿತ್ತಲು ಹೊರಟ ನೀವು ಇದೀಗ ಸಂವಾದದ ಮೂಲಕ ಆ ಚಿಂತನೆಯ ಸಾಧ್ಯಾ-ಸಾಧ್ಯತೆಗಳು ಹಾಗೂ ಸಿದ್ಧಿಯ ಸಂಕಲ್ಪಕ್ಕಾಗಿ ಕಾರ್ಯೋನ್ಮುಖ ರಾಗಿದ್ದೀರಿ. ನಿಜವಾಗಿಯೂ ಇದೊಂದು ಸ್ವಾಗತಾರ್ಹ ಪ್ರಯತ್ನ. ನಿಮ್ಮ ಪ್ರಯತ್ನಕ್ಕೆ ನಾವು ಹೆಗಲು ಕೊಡುವವರಿದ್ದೇವೆ. ಧೈರ್ಯವಾಗಿ ಮುಂದಡಿಯಿಡಿ.

ಪತ್ರಿಕೆಯ ಶೀರ್ಷಿಕೆಗಳು ಮತ್ತು ಲೇಖನಗಳ ಆಯ್ಕೆ ತುಂಬಾ ವಿಶಿಷ್ಟವಾಗಿದೆ. ಒಂದಕ್ಕಿಂತ ಒಂದು ಲೇಖನಗಳು ಉತ್ತಮವಾಗಿವೆ. ನನಗೆ ತಿಳಿದ ಮಾಹಿತಿಯ ಪ್ರಕಾರ ಪುರೋಹಿತ ಶಾಹಿಯ ಪುಂಡಾಟಿಕೆಯಿಂದ ಬೇಸತ್ತಿರುವ ಎಲ್ಲ ವರ್ಗದ ಬರಹಗಾರರು, ಬುದ್ಧಿಜೀವಿಗಳು ಸಂವಾದವನ್ನು ಓದುತ್ತಿದ್ದಾರೆ. ತಮ್ಮ ಜಡತ್ವವನ್ನು ಬಿಟ್ಟು ಇವರೆಲ್ಲರೂ ಇನ್ನು ಕೆಲವೇ ದಿನಗಳಲ್ಲಿ ತಮ್ಮ ಪತ್ರಿಕೆಗೆ ಬರೆಯುತ್ತಾರೆ. ಯಾಕೆಂದರೆ ಅಂತಹ ಪ್ರಭಾವವನ್ನು ಸಂವಾದ ಮಾಡಿದೆ.

ಸಂವಾದದ ಆಶಯ ನಿಮ್ಮ ಪ್ರಯತ್ನ ಯಶಸ್ವಿಯಾಗಲಿ.

ಪ್ರೀತಿಯಿಂದ,
ಪಿ.ಬಿ. ಮಹದೇವಸ್ವಾಮಿ
ಕೆ.ಕೆ.ವೈ. ಸಂಘ, ಮೈಸೂರು

ಮೇರಾ ಭಾರತ್ ಮಹಾನ್

ದಲಿತ ವ್ಯಕ್ತಿಯ ಮೈಗೆ ಬರೆ, ಕೊರಳಲ್ಲಿ ಚಪ್ಪಲಿ ಹಾರ...!

ಕಚ್ಚಲು ಬಂದ ನಾಯಿಗೆ ಅಂಜಿ ಮನೆ ಹೊಕ್ಕ ದಲಿತ ವ್ಯಕ್ತಿಯೋರ್ವನಿಗೆ ಕೊರಳಿಗೆ ಚಪ್ಪಲಿ ಹಾರ ಹಾಕಿ, ಕಾಯ್ದ ಕಬ್ಬಿಣದ ಸಲಾಖೆಯಿಂದ ಮೈಗೈ ಬರೆಕೊಟ್ಟು, ಕಂಬಕ್ಕೆ ಕಟ್ಟಿ ಮೂರು ಗಂಟೆಗಳ ಕಾಲ ಹಿಂಸಿಸಿದ ಹೃದಯ ವಿದ್ರಾವಕ ಘಟನೆಯೊಂದು ನರಗುಂದ ತಾಲ್ಲೂಕು (ಗದಗ ಜಿಲ್ಲೆ) ಸಿದ್ದಾಪುರ ಗ್ರಾಮದಲ್ಲಿ ಇತ್ತೀಚೆಗೆ ನಡೆದಿದೆ.

ಈ ಘಟನೆಯಿಂದ ತೀವ್ರ ಅಸ್ವಸ್ಥನಾಗಿರುವ ಸಿದ್ದಾಪುರ ಗ್ರಾಮದ ವಾಲ್ಮೀಕಿ ಜನಾಂಗಕ್ಕೆ ಸೇರಿದ ಶಂಭುಲಿಂಗ ಅಜ್ಜಪ್ಪ ತಳವಾರ (25) ಸದ್ಯ ಕಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಈ ಕುರಿತಂತೆ ನರಗುಂದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ನರಗುಂದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ಶಂಭುಲಿಂಗ, ಹೆಚ್ಚಿನ ಚಿಕಿತ್ಸೆಗಾಗಿ ಈಗ ಹುಬ್ಬಳ್ಳಿಯ ಕಿಮ್ಸ್‌ಗೆ ದಾಖಲಾಗಿದ್ದಾನೆ.

ಬೆಳಗಿನ ಜಾವ 5 ಗಂಟೆಗೆ ಈತನನ್ನು ಗ್ರಾಮದ ದೂರವಾಣಿ ಕಂಬಕ್ಕೆ ಕಟ್ಟಲಾಗಿದೆ. ಮೊದಲು ನಾಲ್ವರು ಸರದಿಯಂತೆ ಹಗ್ಗ, ಚಪ್ಪಲಿಯಿಂದ ಥಳಿಸಿದ್ದಾರೆ. ನಂತರ ಕಬ್ಬಿಣದ ಸಲಾಕೆ ಹಾಗೂ ಕುರುಪಿ (ಕಳೆ ತೆಗೆಯುವ ವಸ್ತು)ವನ್ನು ಚೆನ್ನಾಗಿ ಬೆಂಕಿಯಲ್ಲಿ ಕಾಯಿಸಿ, ಮುಖ, ಕುತ್ತಿಗೆ, ಬೆನ್ನು, ಕೈ, ಸೊಂಟ, ತೊಡೆ, ಕಾಲುಗಳಿಗೆ ಒಟ್ಟು 23 ಬರೆಗಳನ್ನು ಹಾಕಿದ್ದಾರೆ.

ಕುತ್ತಿಗೆಗೆ ಹಗ್ಗ ಬಿಗಿದು ಕೊಲ್ಲಲು ಯತ್ನಿಸುತ್ತಿರುವಾಗ ಗ್ರಾಮಸ್ಥರು ಬಿಡಿಸಿದ್ದರಿಂದ ಕುಪಿತಗೊಂಡ ಆರೋಪಿಗಳು ಕಸಬರಿಗೆ ಮತ್ತು ಚಪ್ಪಲಿಗಳನ್ನು ಸರ ಮಾಡಿ ಆತನ ಕೊರಳಲ್ಲಿ ಹಾಕಿದ್ದಾರೆ. ಈ ಹಿಂಸೆಯಿಂದ ಪ್ರಜ್ಞೆ ತಪ್ಪಿ ಬಿದ್ದ ಶಂಭುಲಿಂಗನನ್ನು ಬಿಡಿಸಿಕೊಳ್ಳಲು ಓಡಿ ಬಂದ ಆತನ ತಂದೆ ಅಜ್ಜಪ್ಪನಿಗೂ ಜೀವ ಬೆದರಿಕೆ ಹಾಕಿ ಓಡಿಸಿದ್ದಾರೆ.

ಅಜ್ಜಪ್ಪ ದೂರವಾಣಿ ಮೂಲಕ ನೀಡಿದ ದೂರಿನನ್ವಯ ಗ್ರಾಮಕ್ಕೆ ಬಂದ ಪೊಲೀಸರು ಕಂಬದ ಅಡಿಯಲ್ಲಿ ಪ್ರಜ್ಞೆತಪ್ಪಿ ಬಿದ್ದಿದ್ದ ಶಂಭುಲಿಂಗನನ್ನು ಬಿಡಿಸಿಕೊಂಡು ಹೋಗಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಈಗ ನಿಧಾನವಾಗಿ ಚೇತರಿಸಿಕೊಂಡಿರುವ ಗಾಯಾಳು ಶಂಭುಲಿಂಗ ನರಗುಂದ ಠಾಣೆಗೆ ಹೋಗಿ ವಿಚಾರಿಸಿದಾಗ ಪೊಲೀಸರು ತನ್ನ ದೂರನ್ನು ವ್ಯತಿರಿಕ್ತವಾಗಿ ತಿರುಚಿದ್ದನ್ನು ಕಂಡು ನ್ಯಾಯಬೇಡಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರ ಮೊರೆ ಹೋಗಿದ್ದಾನೆ.

(ಕನ್ನಡ ಪ್ರಭ)

ದಲಿತ ಕುಟುಂಬದ ಸಜೀವ ದಹನಕ್ಕೆ ವಿಫಲ ಯತ್ನ

ಇಲ್ಲಿಗೆ ಸಮೀಪದ ರಾಷ್ಟ್ರೀಯ ಹೆದ್ದಾರಿ 7ರ ಬೀಚಗಾನಹಳ್ಳಿ ಕ್ರಾಸ್ ಬಳಿ ಮಧ್ಯರಾತ್ರಿ 2 ಗಂಟೆ ಸಮಯದಲ್ಲಿ ಗಾಢ ನಿದ್ರೆಯಲ್ಲಿದ್ದ ಪ್ರಭಾವಿ ದಲಿತ ಮುಖಂಡರೊಬ್ಬರ ಇಡೀ ಕುಟುಂಬವನ್ನು ಪೆಟ್ರೋಲ್ ಹಾಕಿ ಸಜೀವ ದಹನ ಮಾಡುವ ವಿಫಲ ಯತ್ನ ನಡೆದಿದ್ದು, ಮೂವರ ಕಾಲುಗಳು ಸುಟ್ಟಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಬೋಗೇನಹಳ್ಳಿ ಕೃಷ್ಣಪ್ಪ ಮತ್ತು ಆತನ ಹೆಂಡತಿ ಗಂಗಮ್ಮ ಹಾಗೂ ಮೊಮ್ಮಗ ಶುಕ್ರವಾರ ರಾತ್ರಿ ಅಂಗಡಿ ಕೋಣೆಯಲ್ಲಿ ಮಲಗಿದ್ದಾಗ ಮಧ್ಯರಾತ್ರಿ 2 ಗಂಟೆ ವೇಳೆಯಲ್ಲಿ ಗಂಗಮ್ಮನ ಕಾಲುಗಳು ತಣ್ಣಗಾದಾಗ ಪತಿಯನ್ನೂ ಎಚ್ಚರಿಸಿ, ಬ್ಯಾಟರಿ ಹಾಕಿ ನೋಡಿದಾಗ ಪೆಟ್ರೋಲ್ ಸುರಿದಿರುವುದು ಕಂಡು ಬಂತು. ದೀಪ ಹಾಕಿ ಬಾಗಿಲು ತೆರೆಯಲು ಯತ್ನಿಸಿದಾಗ, ಬಾಗಿಲಿಗೆ ದಾರ ಕಟ್ಟಿರುವುದು ಗೊತ್ತಾಯಿತು. ಚಾಕುವಿನಿಂದ ಕತ್ತರಿಸಿ ಬಾಗಿಲು ತೆರೆದ ತಕ್ಷಣ ಎದುರಿನಲ್ಲಿದ್ದ ವೆಂಕಟೇಶಪ್ಪ ಎಂಬುವವನು ಬೆಂಕಿ ಹಚ್ಚಿ ಕತ್ತಲಲ್ಲಿ ಪರಾರಿಯಾದ ಎನ್ನಲಾಗಿದೆ.

ಮಲಗಿದ ಕೋಣೆಗೆ ಬೆಂಕಿ ಹತ್ತಿಕೊಂಡು ಹಾಸಿಕೊಂಡಿದ್ದ ಬಟ್ಟೆಗಳು, ಇತರೆ ಸಾಮಗ್ರಿಗಳು ಮತ್ತು ಒಂದು ಪಕ್ಕದ ಬಾಗಿಲು ಸುಟ್ಟುಹೋಗಿದೆ.

(ಕನ್ನಡ ಪ್ರಭ)

ಸಾಲಾಪುರದಲ್ಲಿ ಸಾಮೂಹಿಕ ಬಹಿಷ್ಕಾರ

ಪಂಚಾಯಿತಿ ಖಾಲಿ ಜಾಗೆಯಲ್ಲಿ ಮನೆಯೊಂದನ್ನು ನಿರ್ಮಿಸುವ ವಿಷಯದಲ್ಲಿ ದಲಿತರು ಮತ್ತು ಸವರ್ಣೀಯರ ನಡುವೆ ಉಂಟಾದ ಜಗಳದಿಂದಾಗಿ ಸುಮಾರು 12 ದಲಿತ ಕುಟುಂಬಗಳಿಗೆ ಸಾಮೂಹಿಕ ಬಹಿಷ್ಕಾರ ಹಾಕಿರುವ ಘಟನೆ ತಾಲ್ಲೂಕಿನ ಸಾಲಾಪುರ ಗ್ರಾಮದಲ್ಲಿ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ.

ಬಹಿಷ್ಕಾರಕ್ಕೆ ಒಳಗಾಗಿರುವ ದಲಿತ ಕುಟುಂಬಗಳು ಕುಡಿಯುವ ನೀರು ಮತ್ತು ಕೂಲಿ ಕೆಲಸಗಳಿಲ್ಲದೇ ಪರದಾಡು ವಂತಾಗಿದೆ ಎಂದು ವರದಿ ತಿಳಿಸಿದೆ.

ಈ ಗ್ರಾಮದಲ್ಲಿ ಮಾದರ ಕೋಮಿಗೆ ಸೇರಿದ ಒಬ್ಬರು ಪಂಚಾಯಿತಿ ಜಾಗೆಯಲ್ಲಿ ಮನೆಯೊಂದನ್ನು ನಿರ್ಮಿಸಿಕೊಂಡಿದ್ದರು. ತಮ್ಮ ಅನುಮತಿಯಿಲ್ಲದೇ ಮನೆ ನಿರ್ಮಿಸಿಕೊಂಡಿರುವುದನ್ನು ಮುಂದೆ ಮಾಡಿದ ಪಂಚಾಯಿತಿಯವರು ಇತರ ದಲಿತರಿಂದಲೇ ಮನೆಯನ್ನು ನೆಲಸಮ ಮಾಡಿಸಿದ ನಂತರ ಗ್ರಾಮದಲ್ಲಿ ಜಾತೀಯತೆಯ ವಿವಾದ ಭುಗಿಲೆದ್ದಿದೆ ಎನ್ನಲಾಗಿದೆ.

ಸುಮಾರು 40 ಸದಸ್ಯರನ್ನು ಹೊಂದಿದ ಮಾದರ ಕೋಮಿನ ಜನರಿಗೆ ಅಲ್ಲಿನವರು ಕುಡಿಯುವ ನೀರು ಪೂರೈಸುತ್ತಿಲ್ಲ. ಓಣಿಯಲ್ಲಿರುವ ಕೊಳವೆ ಬಾವಿ ದುರಸ್ತಿಗೊಂಡು ಒಂದು ವರ್ಷ ಗತಿಸಿದರೂ ಯಾರೂ ಇಣುಕಿ ನೋಡಿಲ್ಲ. ದುಡಿದು ಬದುಕುವ ಪರಿಶಿಷ್ಟರಿಗೆ ಯಾರೂ ಹೊಲಗಳಿಗೆ ಸೇರಿಸುತ್ತಿಲ್ಲ. ಕ್ಷೌರ ಮಾಡುವುದು ನಿಂತು ಹೋಗಿದೆ. ಬೇರೆ ಸ್ಥಳಗಳಿಗೆ ಪ್ರಯಾಣಿಸಲೂ ಸಹ ಖಾಸಗಿ ವಾಹನ ಮಾಲೀಕರಿಗೆ ತಾಕೀತು ಮಾಡಲಾಗಿದೆ. ಕುಡಿಯುವ ನೀರನ್ನು ಪೂರೈಸುವವರಿಗೆ ದಂಡ ಹಾಕುವುದಾಗಿ ತಕರಾರು ಮಾಡುತ್ತಿದ್ದಾರೆ.

(ಪ್ರಜಾವಾಣಿ)

ಕೊಲೆ, ದರೋಡೆ

ದೇಶದಲ್ಲಿ ಪ್ರತಿ 15 ನಿಮಿಷಕ್ಕೊಂದು ಕೊಲೆ, 45 ನಿಮಿಷಕ್ಕೊಂದು ಡಕಾಯಿತಿ, 20 ನಿಮಿಷಕ್ಕೊಂದು ಸುಲಿಗೆ, 17 ನಿಮಿಷಕ್ಕೊಂದು ಅಪಹರಣ ಪ್ರಕರಣಗಳು ನಡೆಯುತ್ತವೆ ಎಂದು ಪೊಲೀಸ್ ಮಹಾ ನಿರ್ದೇಶಕರ ಡಾ|| ಎಸ್. ಕೃಷ್ಣಮೂರ್ತಿ ಹೇಳಿದ್ದಾರೆ. ಬೆಂಗಳೂರು ವಕೀಲರ ಸಂಘದ ಹೈಕೋರ್ಟ್ ಘಟಕದಲ್ಲಿ ಗುರುವಾರ 'ಮಾನವ ಹಕ್ಕುಗಳು' ವಿಷಯ ಕುರಿತು ಮಾತನಾಡಿದ ಅವರು ಪ್ರತಿನಿತ್ಯ ದೇಶದ ವಿವಿಧ ಪೊಲೀಸ್ ಠಾಣೆಗಳಲ್ಲಿ 70 ಸಾವಿರ ದೂರುಗಳು ದಾಖಲಾಗುತ್ತವೆ. ಅವುಗಳ ಪೈಕಿ ಕರ್ನಾಟಕದ ಪಾಲು ಸರಾಸರಿ ಶೇ. 4.6 ಎಂದು ಹೇಳಿದರು.

(ಕನ್ನಡ ಪ್ರಭ)

ಜೀತಕ್ಕೆ ಬೇಸತ್ತು ಆತ್ಮಹತ್ಯೆ

ಭೂ ಮಾಲೀಕರ ಕಿರುಕುಳ ತಾಳಲಾರದೆ ಜೀತಕ್ಕಿದ್ದ ಕುಟುಂಬವೊಂದು ಆತ್ಮಹತ್ಯೆಗೆ ಯತ್ನಿಸಿದ್ದು, ಈ ಘಟನೆಯಲ್ಲಿ ಪತಿ ಮೃತಪಟ್ಟು, ಪತ್ನಿ ಸಾವು ಬದುಕಿನ ಮಧ್ಯೆ ಹೋರಾಟ ನಡೆಸಿದ್ದಾರೆ.

ತಾಲ್ಲೂಕಿನ ಮಾರನಹಳ್ಳಿ ಗ್ರಾಮದ ತಿಮ್ಮಯ್ಯ ಅವರು ಬಲ್ಲೇನಹಳ್ಳಿಯ ಅಣ್ಣಯ್ಯ, ವೀರಾಪುರದ ಬಸವೇಗೌಡ ಅವರಿಂದ 20 ಸಾವಿರ ರೂಪಾಯಿ ಸಾಲಪಡೆದಿದ್ದರು. ಸಾಲ ತೀರಿಸಲಾಗದೆ ಪರಿತಪಿಸುತ್ತಿದ್ದರು.

ಈ ನಡುವೆ ಹಣ ನೀಡಿದ ಜಮೀನ್ದಾರರು ಹಣಕ್ಕಾಗಿ ಪೀಡಿಸುತ್ತಿದ್ದರಿಂದ ಅದಕ್ಕೆ ತಿಮ್ಮಯ್ಯ ಜೀತ ಮಾಡಲಾರಂಭಿಸಿದ್ದರು. ಸಾಲ ತೀರದಾದಾಗ ಬೇಸತ್ತು ಫೇ. 24ರಂದು ರಾತ್ರಿ ಪತ್ನಿ ಅಮ್ಮಯ್ಯಮ್ಮ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು.

ತಿಮ್ಮಯ್ಯ ಫೆ. 27ರಂದು ರಾತ್ರಿ ಹಾಸನದ ಸರಕಾರಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಪತ್ನಿ ಅಮ್ಮಯ್ಯಮ್ಮ ಸಾವು ಬದುಕಿನ ನಡುವೆ ಹೋರಾಟ ನಡೆಸಿದ್ದಾರೆ. ಜೀತಪದ್ಧತಿ ನಿರ್ಮೂಲನೆ ಕಾಯಿದೆ 1976ರ ಅನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

(ವಿಜಯ ಕರ್ನಾಟಕ)

ಅಂತರಂಗ

ಬದುಕಿಗೆ ಬೆಂಕಿ ಹಚ್ಚಿದ್ದೇ ಸಾಧನೆ



ಅಟಲ ಬಿಹಾರಿ ವಾಜಪೇಯಿ ಅವರು ಐದು ವರ್ಷ ಪೂರೈಸಿದ್ದಾರೆ. ಐದು ವರ್ಷದ 'ಸಾಧನೆ'ಗಳನ್ನು ಪಟ್ಟಿ ಮಾಡಿ ಹೇಳುತ್ತಿರುವ ಸಂಘ ಪರಿವಾರಕ್ಕೆ ಈ ಐದು ವರ್ಷದ 'ಸಾಧನೆ'ಗಾಗಿ ದೇಶ ಎಂಥ ಬೆಲೆತೆತ್ತಿದೆ ಅನ್ನುವುದು ಅರ್ಥವಾಗುತ್ತಿಲ್ಲ.

ಯಾವುದೇ ಸರ್ಕಾರ ತನ್ನ ದೈನಂದಿನ ಆಡಳಿತಾತ್ಮಕ ಕೆಲಸಗಳನ್ನು ನಿರ್ವಹಿಸಿ ಕಾಲ ತಳ್ಳುವುದನ್ನೇ ಒಂದು 'ಸಾಧನೆ' ಅನ್ನುವುದಾದರೆ ಸಂಘ ಪರಿವಾರದವರ ಈ ಸಾಧನಾವಲೋಕನ ಸರಿಯೇ ಇದ್ದೀತು! ಆದರೆ ಸರ್ಕಾರದ ಕೆಲಸ ಅದಲ್ಲ ಅನ್ನುವ ಕನಿಷ್ಠ ಪ್ರಜ್ಞೆ ಇವರಿಗೆ ಇರಬೇಕು. ಇಡೀ ಸಮಾಜದ ಸಾಮಾಜಿಕ-ಆರ್ಥಿಕ ಬದುಕಿನ ಮೇಲೆ ಗುಣಾತ್ಮಕ ಪರಿಣಾಮ ಬೀರಿ ಅಭಿವೃದ್ಧಿಯೆಡೆಗೆ ಕೊಂಡೊಯ್ಯುವ ಕೆಲಸವನ್ನು ಮಾಡದ ಸರ್ಕಾರ?. ಅದೆಂಥ ಸರ್ಕಾರ. ಸಾಮಾನ್ಯ ಗುಮಾಸ್ತೆ ಮಾಡಬಹುದಾದ ಕೆಲಸವನ್ನು ಜನರಿಂದ ಆಯ್ಕೆಯಾದ ಸರ್ಕಾರವೊಂದು ಮಾಡುವುದೆಂದರೆ ಅದೊಂದು ವಿಪರ್ಯಾಸ!.

ಇಷ್ಟಕ್ಕೂ ಎನ್.ಡಿ.ಎ. ಸರ್ಕಾರದ ಸಾಧನೆಗಳೇನು? ಪೋಕ್ರಾನ್‌ನಲ್ಲಿ ಪರಮಾಣು ಪರೀಕ್ಷೆ ನಡೆಸಿದ್ದೇ? ಕಾರ್ಗಿಲ್‌ನಲ್ಲಿ ಅಣಕು ಯುದ್ಧ ಮಾಡಿ ದೇಶವನ್ನು ಯಾಮಾರಿಸಿದ್ದೆ? ದೇಶದ್ರೋಹಿ ಭಯೋತ್ಪಾದಕರನ್ನು ಒಪ್ಪಿಸಿ ಕಂದಹಾರ್‌ನಿಂದ ವಿಮಾನ ಬಿಡಿಸಿಕೊಂಡು ಬಂದಿದ್ದೆ? ಸಂಘ ಪರಿವಾರದ ಮತಾಂಧರಿಗೆ ಕಮಾಂಡೋ ರಕ್ಷಣೆ ಒದಗಿಸಿ ದೇಶಾದ್ಯಂತ ಬೆಂಕಿ ಹಚ್ಚಲು ಪ್ರೋತ್ಸಾಹಿಸಿದ್ದೆ? ಸಾವರ್ಕರ್‌ನಂಥ ಹೇಡಿ ಮತಾಂಧನ ಚಿತ್ರವನ್ನು ಪಾರ್ಲಿಮೆಂಟಿನಲ್ಲಿ ತೂಗು ಹಾಕಿದ್ದೆ? ಅಥವಾ ಮಿತ್ರ ಪಕ್ಷಗಳನ್ನು ಓಲೈಸಿ ಓಲೈಸಿ, ಐದು ವರ್ಷಗಳ ನಾಮಕಾವಸ್ತೆ ಕಾಲಹರಣ ಮಾಡಿದ್ದೆ? ವಾಜಪೇಯಿ ಮತ್ತವರ ಪರಿವಾರ ಇದನ್ನು ಭಂಡತನ-ವಿತಂಡವಾದ ಬಿಟ್ಟು ವಿವರಿಸಬೇಕು.

ಕಾಂಗ್ರೆಸ್‌ನ ಪುರೋಹಿತ ಪ್ರಧಾನಮಂತ್ರಿ ಪಿ.ವಿ. ನರಸಿಂಹರಾಯರ ಕಾಲದಲ್ಲಿ ಆರಂಭವಾದ ದೇಶದ ಅವನತಿ ವಾಜಪೇಯಿ ಅವರ ಕಾಲದಲ್ಲಿ ಎಂಥ ಅಧೋಗತಿಗೆ ಇಳಿದಿದೆ ಎನ್ನುವುದು ನಿಮಗೆಲ್ಲ ಗೊತ್ತಿದೆ. ಸ್ವಾತಂತ್ರ್ಯಾನಂತರ 1990ರವರೆಗೂ ಇಳಿಮುಖವಾಗಿದ್ದ ಬಡತನ ಪ್ರಮಾಣ ನಂತರ ಏರತೊಡಗಿತು. ಕಳೆದ ಪಾರ್ಲಿಮೆಂಟ್‌ನಲ್ಲಿ ಸರ್ಕಾರವೇ ಮಂಡಿಸಿದ ಅಂಕಿ ಅಂಶಗಳ ಪ್ರಕಾರ ಕಳೆದ ಹನ್ನೆರಡು ವರ್ಷಗಳಲ್ಲಿ ಶೇ. 13ರಷ್ಟು ಬಡತನ ಹೆಚ್ಚಾಗಿದೆ. ನಿರುದ್ಯೋಗ ನಿರಂತರವಾಗಿ ಮೇಲೇರುತ್ತಿದೆ. ಅಧಿಕಾರ ಸ್ವೀಕರಿಸಿದ ಸಮಯದಲ್ಲಿ ವಾಜಪೇಯಿ ಅವರು ದೇಶದಲ್ಲಿ ಕನಿಷ್ಠ ಒಂದು ಕೋಟಿ ಹೊಸ ಉದ್ಯೋಗಗಳನ್ನು ಒದಗಿಸುವುದಾಗಿ ಘೋಷಿಸಿದ್ದರು. ಆದರೆ ಮಾಡಿದ್ದೇನು? ಅಧಿಕಾರಕ್ಕೆ ಬಂದ ದಿನದಿಂದಲೂ ಸಾವಿರಾರು ಕೈಗಾರಿಕೆಗಳನ್ನು ಮುಚ್ಚಿ ಲಕ್ಷಾಂತರ ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡಲಾಗಿದೆ. ಬ್ಯಾಂಕ್‌ಗಳೂ ಸೇರಿದಂತೆ ಸರ್ಕಾರಿ ಇಲಾಖೆಗಳಲ್ಲಿ ಸ್ವಯಂ ನಿವೃತ್ತಿ ಯೋಜನೆ ಜಾರಿಗೊಳಿಸಲಾಗಿದೆ. ಶಿಕ್ಷಣವನ್ನು ವ್ಯಾಪಾರೀಕರಿಸಿ, ಶಾಲಾ-ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಿಗೆ ನೀಡಲಾಗುತ್ತಿದ್ದ ಧನ ಸಹಾಯವನ್ನು ಕಡಿತಗೊಳಿಸಲಾಗುತ್ತಿದೆ. ಇಂಥ ವಂಚನೆಗೆ ಏನೆನ್ನಬೇಕು?

ಇದಿಷ್ಟೆ ಆಗಿದ್ದರೆ ಬೇರೆ ಮಾತು. ಆದರೆ ಇದಕ್ಕಿಂತಲೂ ಹೀನಾಯವಾಗಿ ಇಡೀ ದೇಶವನ್ನೇ ಆತ್ಮದ್ರೋಹ ಹಾಗೂ ವಿವಂಚನೆಯತ್ತ ತಳ್ಳುವ ಕೆಲಸವನ್ನು ಬಿ.ಜೆ.ಪಿ. ನೇತೃತ್ವದ ಸರ್ಕಾರ ಮಾಡುತ್ತಿದೆ. ದೇಶದ ಗೌರವ ಹಾಗೂ ಸಾಮಾಜಿಕ ಸಹಬಾಳ್ವೆಗೆ ಹಿಂದೆಂದೂ ಬಂದಿರದಂತ ಗಂಡಾಂತರ ಈಗ ಬಂದೊದಗಿದೆ. ದೇಶದ ಜಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ ವ್ಯವಸ್ಥೆ ಯನ್ನು ಬುಡಮೇಲು ಮಾಡುವ ಮತಾಂಧ ಶಕ್ತಿಗಳು ಮೇರೆ ಮೀರಿ ವರ್ತಿಸುತ್ತಿವೆ. ರಾಜ್ಯಾಂಗ ಬದ್ಧವಾಗಿ ರಚಿತವಾದ ಜಾತ್ಯಾತೀತ-ಧರ್ಮಾತೀತ ರಾಷ್ಟ್ರವೊಂದನ್ನು ಬೆರಳೆಣಿಕೆಯಷ್ಟು ಪುರೋಹಿತರ 'ಹಿಂದೂ ರಾಷ್ಟ್ರ'ವನ್ನಾಗಿ ಪರಿವರ್ತಿಸುವ ಪಿತೂರಿ ನಡೆಯುತ್ತಿದೆ. ಬಹು ಜನರ ಸಂಸ್ಕೃತಿಗೆ ವಿರುದ್ಧವಾಗಿ ಕೆಲವೇ ಜನರ ಏಕ ಸಂಸ್ಕೃತಿಯನ್ನು ಬಲವಂತವಾಗಿ ಬಹು ಜನರ ಮೇಲೆ ಹೇರುವ ಪ್ರಯತ್ನಗಳು ಜರುಗುತ್ತಿವೆ. ಜನರ ಆಹಾರ ಕ್ರಮಗಳ ಮೇಲೆ ಕೂಡ ಹಲ್ಲೆ ಮಾಡುವ ಅನಾಗರಿಕ ಸ್ಥಿತಿಗೆ ಮತಾಂಧರು ತಲುಪಿದ್ದಾರೆ. ತಮಗೆ ಇಷ್ಟವಿಲ್ಲದ ಸಂಸ್ಕೃತಿ ಪಾಲಿಸುವವರನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲುವ ಅಮಾನವೀಯತೆಯನ್ನು ಪ್ರದರ್ಶಿಸುತ್ತಿದ್ದಾರೆ.

ರಾಜಕಾರಣ ಹಿಂದೆಂದೂ ಇಷ್ಟು ಹದಗೆಟ್ಟಿರಲಿಲ್ಲ. ದೇವರು-ಧರ್ಮಗಳನ್ನು ರಾಜಕೀಯ ಲಾಭಕ್ಕಾಗಿ ದುರುಪಯೋಗಪಡಿಸಿಕೊಂಡಿದ್ದು ಇರಲಿಲ್ಲ. ಬಿ.ಜೆ.ಪಿ. ನೇತೃತ್ವದ ಸರ್ಕಾರ ರಚನೆಯಾದ ಕ್ಷಣದಿಂದಲೇ ಆರಂಭವಾದ ಈ ನಿರಂತರ ರಾಜಕೀಯ ಲಾಭಕೋರತನಕ್ಕೆ ಈಗಾಗಲೇ ಸಾವಿರಾರು ಮುಗ್ಧರು ಬಲಿಯಾಗಿದ್ದಾರೆ. ಗುಜರಾತಿನಲ್ಲಿ ಅಲ್ಪಸಂಖ್ಯಾತರ ರಕ್ತಮಾಂಸಗಳಿಂದಲೇ ಅಧಿಕಾರದ ಗೋಪುರ ನಿರ್ಮಾಣವಾಗಿದೆ. ಕಂಡ ಕಂಡ ಮಸೀದಿಗಳಲ್ಲೆಲ್ಲಾ ದೇವಸ್ಥಾನಗಳನ್ನು ಹುಡುಕುವ ಕೆಲಸ ಆರಂಭವಾಗಿದೆ. ಬಡತನ, ಅನಕ್ಷರತೆ, ನಿರುದ್ಯೋಗಗಳಿಂದ ಜನರ ಗಮನವನ್ನು ಬೇರೆ ಕಡೆಗೆ ಸೆಳೆದು ಅವರನ್ನು ಧರ್ಮದ ಅಮಲಿನಲ್ಲಿ ತೇಲಿಸಲಾಗುತ್ತಿದೆ. ಸಾಮಾಜಿಕ ಅರಾಜಕತೆಯನ್ನು ಸೃಷ್ಟಿಸಿ ಸಮಾಜದಲ್ಲಿ ಅಂತಃಕ್ಷೋಭೆಯನ್ನು ಹುಟ್ಟು ಹಾಕಲಾಗಿದೆ.

ಇದೆಲ್ಲವನ್ನು ವಾಜಪೇಯಿ ಸರ್ಕಾರದ 'ಸಾಧನೆ'ಗಳೆಂದು ಸಂಘ ಪರಿವಾರ ಬೀಗುವುದಾದರೆ ನಮ್ಮ ಅಡ್ಡಿಯೇನಿಲ್ಲ! ಆದರೆ ಈ ದೇಶಕ್ಕೆ ಬೇಕಿರುವುದು ಇದಾವುದೂ ಅಲ್ಲ ಅನ್ನುವ ತಿಳುವಳಿಕೆ ಇವರಿಗಿಲ್ಲವಲ್ಲ ಎಂದು ನೋವಾಗುತ್ತದೆ ಮಾತ್ರ. ಸ್ಥಿರ ಸರ್ಕಾರದ ಹೆಸರಿನಲ್ಲಿ ಮತಾಂಧ ಶಕ್ತಿಗಳೊಂದಿಗೆ ಕೈಜೋಡಿಸಿರುವ ಇತರೆ ಕಾಂಗ್ರೆಸ್ಸೇತರ ಪಕ್ಷಗಳೂ ಕೊಂಚ ತಮ್ಮ ಆತ್ಮಸಾಕ್ಷಿಯನ್ನು ಮುಟ್ಟಿನೋಡಕೊಳ್ಳಬೇಕು. ನಮಗೆ ಬೇಕಿರುವುದು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಸರ್ಕಾರವೇ ಹೊರತು, ಒಡೆಯುವ, ಕ್ಷೋಭೆ ಉಂಟುಮಾಡುವ 'ಸ್ಥಿರ' ಸರ್ಕಾರವಲ್ಲ. 'ಸ್ಥಿರ ಸರ್ಕಾರ' ಎನ್ನುವುದೇ ದಬ್ಬಾಳಿಕೆಯ ಇನ್ನೊಂದು ಹೆಸರಾಗಿದೆ.

ದೇಶದಲ್ಲಿ ಕಾಂಗ್ರೆಸ್ ವಿರುದ್ಧ ಆರಂಭವಾದ ರಾಜಕಾರಣದ ಪೂರ್ಣ ಪ್ರಯೋಜನ ಪಡೆಯುವಲ್ಲಿ ಬಿ.ಜೆ.ಪಿ. ಇಂದು ಯಶಸ್ವಿಯಾಗಿದ್ದರೆ ಅದಕ್ಕೆ ಕಾಂಗ್ರೆಸ್ಸೇತರ ರಾಜಕೀಯ ಪಕ್ಷಗಳೇ ಕಾರಣ. ಜೆ.ಪಿ. ಚಳವಳಿಯವರೆಗೆ, ರಾಜಕೀಯ ಮುಖ್ಯವಾಹಿನಿಯ ಹೊರಗಿದ್ದ ಮತಾಂಧ ಶಕ್ತಿಗಳನ್ನು ಆಗ ಸೇರಿಸಿಕೊಂಡಿದ್ದೇ ಅನಾಹುತವಾಯಿತು. ಜನತಾ ಪಕ್ಷದ ಸರ್ಕಾರ ರಚನೆಯಲ್ಲಿ ಆಗಿನ ಜನ ಸಂಘ ಪಾಲುಗೊಳ್ಳಲು ಸಿಕ್ಕ ಅವಕಾಶವನ್ನೇ ಬಳಸಿಕೊಂಡು ದೇಶಾದ್ಯಂತ ಬೇರು ಬಿಡಲು ಆರಂಭಿಸಿ ಇಂದು ಎಲ್ಲ ಪಕ್ಷಗಳನ್ನು ತನ್ನ ಬೆರಳಲ್ಲಿ ಕುಣಿಸುವ ಮಟ್ಟಕ್ಕೆ ಬಂದಿದೆ. ಸಣ್ಣ ಪುಟ್ಟ ಲಾಭಗಳಿಗಾಗಿ ಇಡೀ ದೇಶವನ್ನು ಕೋಮುವಾದಿಗಳ ಕೈಗಿತ್ತು ಇತರೆ ಪಕ್ಷಗಳು ಅವರು ಹಚ್ಚಿದ ಬೆಂಕಿಯಲ್ಲಿ ಮೈ ಕಾಯಿಸಿಕೊಳ್ಳುತ್ತಿವೆ.

ಇಡೀ ದೇಶ ಸಂಪೂರ್ಣ ನಾಶವಾಗುವ ಮುನ್ನ ಜನತೆ ಎಚ್ಚೆತ್ತುಕೊಳ್ಳಬೇಕು. ಆಷಾಢಭೂತಿಗಳ ಮಂಕು ಬೂದಿಗೆ ಮರುಳಾಗಿ ದೇವರು-ಧರ್ಮದ ಹೆಸರಿನಲ್ಲಿ ಸಮಾಜ ವಿಭಜನೆಗೆ ಅವಕಾಶ ಕೊಡಬಾರದು. ಜನರ ಬದುಕು ಅಸ್ಥಿರಗೊಂಡರೆ, ಸಮಾಜದಲ್ಲಿ ಅನುಮಾನ-ಅಸಹಿಷ್ಣುತೆ ಬೆಳೆದರೆ ಆ ಸಮಾಜ ಬದುಕಿ ಉಳಿಯಲಾರದು.

○ ಇಂದೂಧರ ಹೊನ್ನಾಪುರ

ಸಂಪಾದಕ

ರಾಜಕೀಯ ಸಂಕ್ರಮಣ ಸ್ಥಿತಿಯಲ್ಲಿ ಸಮಾಜ

21 ನೆಯ ಶತಮಾನದ ವೈಜ್ಞಾನಿಕ ಯುಗದಲ್ಲಿ ಈ ದೇಶದ ಮೂಲ ನಿವಾಸಿಗಳ ಪಾತ್ರವೇನು? ಎಂಬುದನ್ನು ಗಮನಿಸಿದರೆ ಇಲ್ಲಿನ ಬಹುಜನ ಸಮಾಜವು ಒಂದು ರೀತಿಯ ಸಂಕ್ರಮಣ ಘಟ್ಟವನ್ನು ಎದುರಿಸುತ್ತಿದೆ ಎಂದು ಹೇಳಬಹುದು.

ಈ ದೇಶದ ಮೂಲನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳು ವರ್ಣ ವ್ಯವಸ್ಥೆಯ ನೇತಾರರಿಗೆ ಇಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ! ಸುಮಾರು ಆರು ಸಾವಿರ ಜಾತಿಗಳಾಗಿ ಚೂರು ಚೂರಾಗಿರುವ ಬಹು ಜನ ಸಮಾಜದ ದೊಡ್ಡ ದುರಂತವೇನೆಂದರೆ ಅದು ತನ್ನ ರಾಜಕೀಯ ಅಧಿಕಾರವನ್ನು ಕಳೆದುಕೊಂಡಿರುವುದು! ಒಂದು ಜನಾಂಗ ನಾಶವಾಗಬೇಕಾದರೆ ಮೊದಲು ಆ ಜನಾಂಗದ ಆಹಾರ ಪದ್ಧತಿಗಳು ಆಚಾರ ವಿಚಾರಗಳು ಕೀಳು ಎಂದು ನಿರಂತರವಾಗಿ ಪ್ರಚಾರ ಮಾಡಬೇಕು! ಅವರ ಹೆಸರುಗಳು, ಕುಲಗಳು ಆಚರಣೆಗಳು ಎಲ್ಲವೂ ಕೀಳು ಎಂದು ಪ್ರಚುರ ಪಡಿಸುತ್ತಿರಬೇಕು. ಮೇಲಾಗಿ ಅದು ತನ್ನ ರಾಜಕೀಯ ಅಧಿಕಾರವನ್ನು ಕಳೆದುಕೊಳ್ಳಬೇಕು! ಇದು ಒಂದು ಕಾಲದ ಬಲಾಢ್ಯ ಸಮೃದ್ಧಿಯಾಗಿ ಬಾಳಿ ಬದುಕಿದ, ಭವ್ಯ ನಾಗರೀಕತೆಗಳನ್ನು ಕಟ್ಟಿ, ಇಡೀ ವಿಶ್ವಕ್ಕೆ ಮಾದರಿಯಾಗಿ ಮೆರೆದ ನಾಗ ಜನಾಂಗದ ದುರಂತ ಇತಿಹಾಸ! ಈ ಜನಾಂಗದ ಪ್ರಬಲ ದೊರೆಗಳಾದ ರಾವಣ, ಮಹಿಷಾಸುರ, ಬಲಿಚಕ್ರವರ್ತಿ, ಜರಾಸಂಧ ಚಕ್ರವರ್ತಿ, ಅಶೋಕ ಸಾಮ್ರಾಟ್ ಇವರೆಲ್ಲರೂ ಜಗತ್ತನ್ನು ಆಳಿದ ಪ್ರಸಿದ್ಧ ದೊರೆಗಳು! ಇಡೀ ಜಗತ್ತಿಗೆ ಜ್ಞಾನದ ಬೆಳಕನ್ನು ಸಿಂಚನ ಪಡಿಸಿದ ಸಾಕ್ಯಮುನಿ ಗೌತಮ ಬುದ್ಧರು ನಾಗ ಜನಾಂಗಕ್ಕೆ ಸೇರಿದ ಜ್ಞಾನಿ! ಇವರೆಲ್ಲರು ಭವ್ಯ ನಾಗ ಜನಾಂಗದ ವಾರಸುದಾರರು!

ಈ ನಾಗ ಜನಾಂಗದ ಪಳೆಯುಳಿಕೆಗಳೇ ಈ ದೇಶದ ಮೂಲನಿವಾಸಿಗಳಾದ ಅಸ್ಪೃಶ್ಯರು ಹಿಂದುಳಿದವರು, ಶೂದ್ರರು ಮತ್ತು ಧಾರ್ಮಿಕ ಅಲ್ಪ ಸಂಖ್ಯಾತರು! ಇಂದು ಬಹು ಜನರು ಇಷ್ಟೊಂದು ಕಳಪೆಯಾದ ಜೀವನ ನಡೆಸುತ್ತಿರುವ ಏಕೈಕ ಕಾರಣವೇ ಬಹು ಜನರ ರಾಜಕೀಯ ಅಧಿಕಾರ ಹೀನತೆ! ಇತಿಹಾಸದ ಪುಟಗಳನ್ನು ನೋಡಿದರೇ ದಬ್ಬಾಳಿಕೆಗಳು, ದೌರ್ಜನ್ಯಗಳು ಎಲ್ಲಾ ರೀತಿಯ ಶೋಷಣೆಗಳು ಕೇವಲ ಗುಲಾಮರ ಮೇಲೆ ಆಗುತ್ತವೆಯೆ ಹೊರತು ಆಳುವ ವರ್ಗದವರ ಮೇಲೆ ಆಗುವುದಿಲ್ಲ! ಆದ್ದರಿಂದಲೇ ಬಾಬಾ ಸಾಹೇಬರು 'ಅಸ್ಪೃಶ್ಯತೆ ಎಂದರೆ ಅಧಿಕಾರ ಹೀನತೆ' ಎಂದು ಹೇಳಿದ್ದು!

ಪ್ರಾಚೀನ ಭಾರತದ ಮೌರ್ಯವಂಶದ ಕೊನೆಯ ದೊರೆಯಾದ ಬೃಹದ್ರಥ ಮೌರ್ಯನನ್ನು ಸೇನಾಪತಿ

ಸುಮಾರು ಆರು ಸಾವಿರ ಜಾತಿಗಳಾಗಿ ಚೂರು ಚೂರಾಗಿರುವ ಬಹು ಜನ ಸಮಾಜದ ದೊಡ್ಡ ದುರಂತವೇನೆಂದರೆ ಅದು ತನ್ನ ರಾಜಕೀಯ ಅಧಿಕಾರವನ್ನು ಕಳೆದುಕೊಂಡಿರುವುದು! ಒಂದು ಜನಾಂಗ ನಾಶವಾಗಬೇಕಾದರೆ ಮೊದಲು ಆ ಜನಾಂಗದ ಆಹಾರ ಪದ್ಧತಿಗಳು ಆಚಾರ ವಿಚಾರಗಳು ಕೀಳು ಎಂದು ನಿರಂತರವಾಗಿ ಪ್ರಚಾರ ಮಾಡಬೇಕು! ಅವರ ಹೆಸರುಗಳು, ಕುಲಗಳು ಆಚರಣೆಗಳು ಎಲ್ಲವೂ ಕೀಳು ಎಂದು ಪ್ರಚುರ ಪಡಿಸುತ್ತಿರಬೇಕು. ಮೇಲಾಗಿ ಅದು ತನ್ನ ರಾಜಕೀಯ ಅಧಿಕಾರವನ್ನು ಕಳೆದುಕೊಳ್ಳಬೇಕು! ಇದು ಒಂದು ಕಾಲದ ಬಲಾಢ್ಯ ಸಮೃದ್ಧಿಯಾಗಿ ಬಾಳಿ ಬದುಕಿದ, ಭವ್ಯ ನಾಗರೀಕತೆಗಳನ್ನು ಕಟ್ಟಿ, ಇಡೀ ವಿಶ್ವಕ್ಕೆ ಮಾದರಿಯಾಗಿ ಮೆರೆದ ನಾಗ ಜನಾಂಗದ ದುರಂತ ಇತಿಹಾಸ!

○ ವಿಜಯಾ ಮಹೇಶ್

ಪುಶ್ಯಮಿತ್ರಶೃಂಗನು ಕೊಂದು ಶೃಂಗ ಸಾಮ್ರಾಜ್ಯವನ್ನು ಸ್ಥಾಪಿಸುವ ಮೂಲಕ ಇಲ್ಲಿನ ಮೂಲನಿವಾಸಿಗಳಾದ ಬಹು ಜನರನ್ನು ಅಧಿಕಾರ ಹೀನರನ್ನಾಗಿ ಮಾಡಿದ್ದಲ್ಲದೆ, 90 ಅಶ್ವಮೇಧ ಯಾಗಗಳನ್ನು ಮಾಡಿ, ಸುಮತಿ ಭಾರ್ಗವನೆಂಬ ಬ್ರಾಹ್ಮಣನಿಂದ 'ಮನುಸ್ಮೃತಿ'ಯನ್ನು ಬರೆಯಿಸಿ ವರ್ಣ ವ್ಯವಸ್ಥೆಯನ್ನು ಅಧಿಕೃತವಾಗಿ ಜಾರಿಗೆ ತಂದನು! ಇದು ಪ್ರಾಚೀನ ಭಾರತದ ಕಥೆಯಾದರೇ...

ಇನ್ನು ಆಧುನಿಕ ಭಾರತದ ಸಾಮಾಜಿಕ ಪರಿವರ್ತನೆಯ ತಂದೆಯಾದ ಮಹಾತ್ಮ ಜ್ಯೋತಿಬಾಫುಲೆಯವರು ಬಹು ಜನರಿಗೆ ಅಕ್ಷರ ಜ್ಞಾನವನ್ನು ನೀಡುವ ಮೂಲಕ ಸಾಮಾಜಿಕ ಕ್ರಾಂತಿಗೆ ನಾಂದಿಯಾದರು! ಈ ಕ್ರಾಂತಿಯನ್ನು ಮುಂದುವರೆಸಿದ ಕೊಲ್ಹಾಪುರದ ಶಾಹುಮಹಾರಾಜರು, ಮೈಸೂರಿನ ನಾಲ್ವಡಿಯವರು ಕೇರಳದ ನಾರಾಯಣ ಗುರು, ತಮಿಳುನಾಡಿನ ತಂದೆ ಪೆರಿಯಾರರು, ಸಾಮಾಜಿಕ ಪರಿವರ್ತನೆಯ ರೂವಾರಿಗಳಾಗಿ ಬಹು ಜನ ಸಮಾಜದಲ್ಲಿ ಧ್ರುವತಾರೆಗಳಾದರು! ಇವರೆಲ್ಲರ ಹೋರಾಟವನ್ನು ರಾಷ್ಟ್ರಮಟ್ಟದಲ್ಲಿ ಕೊಂಡೊಯ್ದು ಬಾಬಾ ಸಾಹೇಬರು ಈ ದೇಶದ ಬಹು ಜನರಿಗೆ ಅಕ್ಷರಶಃ ತಂದೆಯಾಗಿ, ಮಾರ್ಗದಾತರಾಗಿ, ಇಂದು ನಾವು ಮನುಷ್ಯರಾಗಿ ಇರುವುದಕ್ಕೆ ಕಾರಣರಾದರು! ಅವರ ಅಸಾಮಾನ್ಯ ಹೋರಾಟಗಳು ನಮಗೆ ಇಂದು ಸಮಾಜದಲ್ಲಿ ಸ್ವಾಭಿಮಾನದಿಂದ, ಘನತೆಯಿಂದ ಬದುಕುವುದಕ್ಕೆ ಕಾರಣವಾದವು! ನಾವುಗಳು ಇಂದು ಗಳಿಸಿರುವ ವಿದ್ಯೆ, ಅಂತಸ್ತು, ಆಸ್ತಿ, ಅಧಿಕಾರ ಎಲ್ಲವೂ ಬಾಬಾ ಸಾಹೇಬ್ ಮತ್ತು ನಮ್ಮೆಲ್ಲ ಪೂರ್ವಿಕರ ಹೋರಾಟದ ಫಲಗಳು! 'ನನ್ನ ಜನ ಈ ದೇಶದ ಆಳುವ ದೊರೆಗಳಾಗಬೇಕು' ಎಂದು ಕನಸು ಕಂಡಿದ್ದ ಬಾಬಾ ಸಾಹೇಬರ ಚೇತನ 1956ರಲ್ಲಿ ಪ್ರಕೃತಿಯಲ್ಲಿ ಲೀನವಾಯಿತು! ಅವರ ಹೋರಾಟದ ರಥ ಅಲ್ಲಿಯೇ ನಿಂತಿದ್ದರೂ, ಅದು ಬಾಬಾ ಸಾಹೇಬರ ಘನತೆಗೆ ತಕ್ಕುದಾಗಿರುತ್ತಿತ್ತು! ದುರಂತವೆಂದರೆ ಬಾಬಾ ಸಾಹೇಬರ ಅನುಯಾಯಿಗಳು ಮುಂದೆ ಸಾಗುವುದಿರಲಿ ಇವರೆಲ್ಲರೂ ಅತ್ಯಂತ ಹೀನಾಯವಾಗಿ, ಚಮಚಗಳಾಗಿ ಹೋರಾಟದ ರಥವನ್ನು ಪ್ರಪಾತಕ್ಕೆ ತಳ್ಳಿ ಚಮಚಾ ಯುಗಕ್ಕೆ ನಾಂದಿ ಹಾಡಿದರು! ಇದು ಬಾಬಾ ಸಾಹೇಬರಿಗೆ ಅವರ ಅನುಯಾಯಿಗಳು ಎಸಗಿದ ಮಹಾ ದ್ರೋಹ! ಇವರ ಹೋರಾಟದ ಚಕ್ರ 1956 ರಿಂದ 1984ರವರೆಗೂ ನಿಂತಲ್ಲಿಯೇ ನಿಂತದ್ದನ್ನು "Secure set back to Ambedkar's movement" ಎಂದು ಗುರುತಿಸಬಹುದಾಗಿದೆ!

70ರ ದಶಕದಲ್ಲಿ ಪ್ರತಿಕ್ರಿಯಾತ್ಮಕ ಮತ್ತು ಪ್ರತಿಭಟನಾತ್ಮಕ ನೆಲೆಯಲ್ಲಿ ಹುಟ್ಟಿಕೊಂಡ ದಲಿತ ಸಂಘಟನೆಗಳು ಯಾವುದೇ ಸೈದ್ಧಾಂತಿಕ ನೆಲೆಯನ್ನು ಕಂಡುಕೊಳ್ಳಲಿಲ್ಲ. ಅಪಕ್ವ ನಾಯಕತ್ವ ಮತ್ತು ಗೊತ್ತುಗುರಿಯಿಲ್ಲದ ಹೋರಾಟಗಳು ದಲಿತ ಜನಾಂಗವನ್ನು ಆಳುವ ಸರ್ಕಾರಗಳ ಮುಂದೆ ಕೈಯೊಡ್ಡಿ ಬೇಡುವಂತೆ ಮಾಡಿದವು. "ಮೇಲ್ಜಾತಿ ಸರ್ಕಾರಗಳ ಮುಂದೆ ಕೈಯೊಡ್ಡಿ ಬೇಡುವ ಬದಲು ನೀವೇ ಸರ್ಕಾರವಾಗಿ" ಎಂಬ ಬಾಬಾ ಸಾಹೇಬರ ಮಾತು ದಲಿತ ನಾಯಕರ ಮೆದುಳಿಗೆ ತಲುಪಲೇ ಇಲ್ಲ. ಈ ಸಂಘಟನೆಗಳ ನಾಯಕರುಗಳಿಗೆ ಮಾರ್ಮಿಕವಾಗಿ ಮಾರ್ಗದರ್ಶನ ನೀಡುತ್ತಿದ್ದ ಮನುವಾದಿ ಪಟ್ಟಭದ್ರ ಹಿತಾಸಕ್ತಿಗಳು ಅವರಲ್ಲಿ ಸ್ವತಂತ್ರ ಚಿಂತನೆ ಮತ್ತು ಸ್ವತಂತ್ರ ನಾಯಕತ್ವ ಬೆಳೆಯಲು ಅವಕಾಶ ನೀಡಲಿಲ್ಲ. ಪ್ರತಿಯೊಂದು ಘಟನೆಗೂ ಬೀದಿಗಿಳಿದು ಪ್ರತಿಭಟನೆ ಮಾಡಿ ಮಾಡಿ ಸುಸ್ತಾದ ದಲಿತ ನಾಯಕರು, ವೈಯಕ್ತಿಕ ಅಲ್ಪ ಅಧಿಕಾರಕ್ಕಾಗಿ ಮೇಲ್ಜಾತಿ ರಾಜಕೀಯ ಪಕ್ಷಗಳ ಮುಂದೆ ಹಲ್ಲು ಗಿಂಜಿಕೊಂಡು ನಿಲ್ಲುವಂತಾಯಿತು. ಹಳ್ಳಿಯಿಂದ, ದಿಲ್ಲಿಯವರೆಗೂ ಹುಟ್ಟಿಕೊಂಡ ಇಂತಹ ಸಂಘಟನೆಗಳು ಮತ್ತು ನಾಯಕರು

ದಲಿತ ಸಮಾಜದ ಒಳಗೆ ಒಂದು ರೀತಿಯ ವಿಕೃತ ಪ್ರಜ್ಞೆಯನ್ನು ಮೂಡಿಸಿದರು! ಅವಿಶ್ವಾಸ, ಅಪನಂಬಿಕೆ ಒಬ್ಬರನ್ನೊಬ್ಬರು ಕಾಲೆಳೆಯುವ ಬುದ್ಧಿ, ಆರೋಪ ಪ್ರತ್ಯಾರೋಪಗಳು, ಈ ಜನಾಂಗವನ್ನು ವಿಮೋಚನೆ ಮಾಡಲು ಸಾಧ್ಯವೇ ಇಲ್ಲ ಎಂಬ ನಕಾರಾತ್ಮಕ ನಡವಳಿಕೆಗಳನ್ನು ಮೈಗೂಡಿಸಿಕೊಂಡ ದಲಿತ ಸಂಘಟನೆಗಳು ಮತ್ತು ನಾಯಕರು ಇಡೀ ಜನಾಂಗವನ್ನು ಅಸಹಾಯಕ ಸ್ಥಿತಿಗೆ ತಳ್ಳಿದರು !

ಬರಿಯ ಹೋರಾಟಗಳು ಧಿಕ್ಕಾರಗಳು ಪ್ರತಿಭಟನೆಗಳು ಯಾವುದೇ ಫಲವನ್ನು ನೀಡದೇ ಕೇವಲ ಗಂಟಲು ಹರಿದುಕೊಳ್ಳುವುದೇ ಕಸುಬಾಗಿ ಹೋದ ಅನೇಕ ದಲಿತ ನಾಯಕರುಗಳಿಗೆ ಕೊನೆಗೂ "ಬಾಬಾ ಸಾಹೇಬರು ಎಳೆದು ತಂದ ವಿಮೋಚನಾ ರಥ ಯಾವುದೆಂದು ತಿಳಿಯಲೇ ಇಲ್ಲ! ಇದರ ಪರಿಣಾಮ ಸಮಾಜದ ಇಡೀ ದಲಿತ ಸಮುದಾಯ ಅಕ್ಷರಶಃ ತೀವ್ರ ಪಾರ್ಶ್ವವಾಯುವಿಗೆ ಒಳಗಾಯಿತು!

'ಈ ದೇಶದ ಬಹು ಜನರ ವಿಮೋಚನೆಯು ಸ್ವಂತವಾಗಿ ಗಳಿಸಿಕೊಂಡ, ಮೇಲ್ಜಾತಿ ನಾಯಕರ ಹಿಡಿತದಲ್ಲಿ ಇಲ್ಲದ ರಾಜಕೀಯ ಅಧಿಕಾರದಲ್ಲಿದೆ" ಎಂಬ ಸಾರ್ವಕಾಲಿಕ ಸತ್ಯವೇ ಬಾಬಾ ಸಾಹೇಬರು ತನ್ನ ಜೀವ ಮಾನವಿಡೀ ಹೋರಾಡಿ ಎಳೆದು ತಂದಿದ್ದ ವಿಮೋಚನಾರಥವೆಂಬುದು ಕೊನೆಗೂ ದಲಿತ ನಾಯಕರಿಗೆ ಅರ್ಥವಾಗಲಿಲ್ಲ! ಇವರ ಜೊತೆ ಇದ್ದ ದಲಿತ ಸಮುದಾಯಕ್ಕೆ ಮಾರ್ಗದರ್ಶನ ತೋರುವುದಿರಲಿ, ಅವರೆಲ್ಲರೂ ಮೇಲು ಜಾತಿ ಹಿಡಿತದಲ್ಲಿರುವ ಪಕ್ಷಗಳ ಚಮಚಾಗಳಾಗಿ ದುಡಿಯುವ ಮಟ್ಟಕ್ಕೆ ಇಳಿದಿದ್ದು ಅಂಬೇಡ್ಕರ್ ವಾದಕ್ಕೆ ಬಿದ್ದ ಪ್ರಬಲವಾದ ಏಟು!

ಬಾಬಾ ಸಾಹೇಬರ ಭಾಷಣಗಳು ಮತ್ತು ಬರಹಗಳಲ್ಲಿ "ಬೇರೆ ರಾಜಕೀಯ ಪಕ್ಷದಲ್ಲಿರುವ ಅಸ್ಪೃಶ್ಯ ಪ್ರತಿನಿಧಿಗಳು ಬಾಯಿಗೆ ಬೆಲ್ಟ್ ಹಾಕಿಸಿಕೊಂಡ ನಾಯಿಗಳ ಹಾಗೆ, ಮೂಗುದಾರ ಹಾಕಿಸಿಕೊಂಡ ಎತ್ತುಗಳ ಹಾಗೆ ಇರುವುದನ್ನು ನೋಡಿದರೇ ಅನುಕಂಪವಾಗುತ್ತದೆ. (The representations of unlounchables for having joined Congress they are mussled dogs far from biliving they are not even able to bark. W. & S. vol. 5 page 346)

ಬಂಧುಗಳೇ ಈ ದೇಶದ ಮೂಲ ನಿವಾಸಿಗಳಾದ ಅಸ್ಪೃಶ್ಯರು ಹಿಂದುಳಿದವರು, ಶೂದ್ರರು ಅಲ್ಪ ಸಂಖ್ಯಾತರು ಎಲ್ಲಾ ರೀತಿಯ ಶೋಷಣೆಗಳಿಂದ ಬಡತನದಿಂದ ಮುಕ್ತಿ ಹೊಂದಲು ನಮಗೆ ಬೇಕಾಗಿರುವುದು ರಾಜಕೀಯ ಅಧಿಕಾರ ಎಂಬ ದಿಕ್ಕಿನೆಡೆ ಯಾಕೆ ಯೋಚಿಸಬಾರದು! ಬಾಬಾ ಸಾಹೇಬರ ಮತ್ತು ನಮ್ಮೆಲ್ಲ ಪೂರ್ವಿಕರ ಹೋರಾಟದಿಂದ ಇಂದು ನಾವು ಅಲ್ಪಸ್ವಲ್ಪ ವಿದ್ಯೆ ಅಂತಸ್ತುಗಳಿಸಿಕೊಂಡಿರುವ ವಿದ್ಯಾವಂತ ನೌಕರರು, ವಿದ್ಯಾರ್ಥಿಗಳು ಇತರ ಪ್ರಜ್ಞಾವಂತ ಬಹುಜನರು ಈ ದಿಕ್ಕಿನೆಡೆ ಯೋಚನೆ ಮಾಡುವುದು ಸೂಕ್ತವೆನಿಸುತ್ತದೆ! ತಮ್ಮ ವಿಚಾರಗಳನ್ನು ತಿಳಿಯಲು ಆಸಕ್ತಿಯುಳ್ಳವಳಾಗಿದ್ದೇನೆ!

ಜೈ ಭೀಮ್ ವಂದನೆಗಳು

ತಮ್ಮ ವಿಶ್ವಾಸಿ

ವಿಜಯಮಹೇಶ್

ಬೆಂಗಳೂರು

ಅಂಬೇಡ್ಕರ್ ವಿಶೇಷಾಂಕ

ತಮ್ಮ ವಿಶಿಷ್ಟ ಸಾಧನೆ ಮತ್ತು ಬದುಕಿನ ಜತೆಗೆ ವಾಸ್ತವ ಹಾಗೂ ವೈಜ್ಞಾನಿಕ ದೂರದೃಷ್ಟಿತ್ವದಿಂದ ಕೂಡಿದ ಚಿಂತನೆಗಳ ಮೂಲಕ ವಿಶ್ವದ ಮಹಾನ್ ಸಾಧಕರ ಗುಂಪಿಗೆ ಸೇರುವವರು ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರವರು. ಮುಂದಿನ ತಿಂಗಳ 14ನೇ ತಾರೀಖಿಗೆ ಅಂಬೇಡ್ಕರ್‌ರವರ ಜನ್ಮ ದಿನಾಚರಣೆ ಬರುವುದರಿಂದ 'ಸಂವಾದ' ಅಂಬೇಡ್ಕರ್‌ರನ್ನು ಕುರಿತ ವಿಭಿನ್ನ ಲೇಖನಗಳನ್ನು ಹೊತ್ತ ವಿಶೇಷಾಂಕವನ್ನು ಪ್ರಕಟಿಸಲು ಯೋಚಿಸಿದೆ.

ಆದುದರಿಂದ ಲೇಖಕರು ಅಂಬೇಡ್ಕರ್‌ರವರ ವ್ಯಕ್ತಿತ್ವದ ವಿವಿಧ ಮುಖಗಳ ಜತೆಗೆ ಸಂವಾದದ ಆಶಯಕ್ಕೆ ಹತ್ತಿರವಾದ ಲೇಖನಗಳನ್ನು ಕಳುಹಿಸಿಕೊಡಲು ಕೋರಿದೆ. ನಿಮ್ಮ ಲೇಖನ ನಮಗೆ ತಲುಪಲು ಕೊನೆ ದಿನಾಂಕ **5-4-2003.**

'ಸಂವಾದ' ಮಾಸ ಪತ್ರಿಕೆ, ಬಾಬಾಸಾಹೇಬ್ ಅಂಬೇಡ್ಕರ್ ಸ್ಮಾರಕ ಕೇಂದ್ರ, ಅಂಚೆ ಪೆಟ್ಟಿಗೆ ಸಂಖ್ಯೆ : 9143 ಹೇರೋಹಳ್ಳಿ, ಮಾಗಡಿರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು - 560 091

ಪತ್ರಿಕೆಯ ನಿಲುವು ಸ್ಪಷ್ಟವಿರಬೇಕು

ಆತ್ಮೀಯ ಗೆಳೆಯರಾದ ಇಂದೂಧರರವರಿಗೆ

ನಿಮ್ಮ ಪತ್ರಿಕೆಯ 3ನೆಯ ಸಂಚಿಕೆ ತಲುಪಿತು. ಕಳೆದ ಸಂಚಿಕೆಗೆ ಪ್ರತಿಕ್ರಿಯೆ ಬರೆದು ಕಳಿಸಲು ಸಾಧ್ಯವಾಗಲಿಲ್ಲ. ನನ್ನ ಒಳ ಕುದಿತಗಳ ಸ್ಪಂದನೆಯಾಗಿ ನನ್ನದೆ ಅಭಿಪ್ರಾಯವೆಂಬಂತೆ ಡಾ|| ಶಿವಲಿಂಗಯ್ಯನವರ ಪ್ರತಿಕ್ರಿಯೆಗೆ ಮೈಸೂರಿನ ಗೆಳೆಯರೋರ್ವರು ಪ್ರತಿಕ್ರಿಯಿಸಿದ್ದಾರೆ. ಅದಕ್ಕೆ ನೀವು ಜಾರಿಕೆಯ ಉತ್ತರ ನೀಡಿದ್ದೀರಾ. ಪತ್ರಿಕೆ ಸಮುದಾಯದ ಆಶಯಗಳಿಗಾಗಿ ಶ್ರಮಿಸುವಾಗ ನಮಗೆ ಸ್ಪಷ್ಟವಾದ ನಿಲುವುಗಳಿರಬೇಕು. ನೀತಿ ನಿಯಮಗಳು ಇಲ್ಲದೆ ಹೋದರೆ ಬೇರೆ ಪತ್ರಿಕೆಗಳಿಗೂ ನಮಗೂ ಯಾವುದೇ ವ್ಯತ್ಯಾಸ ಇರುವುದಿಲ್ಲ.

ಈ ಬಾರಿಯು ಸಹ ಪತ್ರಿಕೆಯಲ್ಲಿ "ಜಾಗತೀಕರಣದ ಐಡಿಯಾಲಜಿ" ಎಂಬ ಶೀರ್ಷಿಕೆಯಡಿ ಡಿ. ಡೊಮಿನಿಕ್‌ರ ಲೇಖನದಲ್ಲಿ ಲೇಖಕರು ಸುತ್ತಿ ಬಳಸಿ ಜಾಗತೀಕರಣದ ಸಮರ್ಥನೆ ಮಾಡಿದ್ದಾರೆ. ನಮಗೆ ಅದು ಭರವಸೆಗಳನ್ನು ಹುಟ್ಟು ಹಾಕಿದೆ ಎಂದು ಹೇಳಿದ್ದಾರೆ. ಬಡ ಜನರಿಗೆ ಆತ್ಮಹತ್ಯೆಗಳ ಭರವಸೆಯನ್ನು ಹುಟ್ಟಿಹಾಕಿದೆ ಎಂಬುದು ನನ್ನ ಅಭಿಪ್ರಾಯ. ಐಡಿಯಾಲಜಿ ಪ್ರಭುತ್ವ ಪದಗಳ ಅರ್ಥ ಹುಟ್ಟುಗಳನ್ನು ಹೇಳುತ್ತಲೆ ಅಂತಿಮವಾಗಿ ಜಾಗತೀಕರಣವನ್ನು ವಿರೋಧಿಸುವುದರಿಂದ ಉಪಯೋಗವಿಲ್ಲ ಅದರೊಳಗಿಂದಲೇ ಅದನ್ನು ವಿರೋಧಿಸಬೇಕು. ಪರ್ಯಾಯ ಸಾಧ್ಯವಿಲ್ಲ.

ನಾವು ಜಾಗತೀಕರಣ ದೊಳಗಿದ್ದುಕೊಂಡು ಅದನ್ನು ವಿರೋಧಿಸಲು ಸಾಧ್ಯವಿಲ್ಲದ ಮಾತು. ನಮ್ಮ ಶತ್ರು ಶತ್ರುವೇ. ಮಿತ್ರನಾಗಲು ಸಾಧ್ಯವಿಲ್ಲ ಜಾಗತೀಕರಣದ ಮುಖ್ಯಗುರಿ ಶೋಷಣೆಯೇ ಆಗಿರುವಾಗ, ನಾವು ಅದರೊಳಗಿರಬೇಕು. ನಮ್ಮ ಏಳ್ಗೆಗಾಗಿಯೇ ಬಂದಿದೆ ಎಂಬ ಮಾತುಗಳು ದಲಿತ ವಿರೋಧಿ, ಜನ ವಿರೋಧಿ ಮಾತುಗಳಾಗಿವೆ. ಜಾಗತೀಕರಣಕ್ಕೆ ಪರ್ಯಾಯಗಳನ್ನು ರೂಪಿಸುವುದು ಸುಲಭದ ಕೆಲಸವಲ್ಲ. ಬಹಳ ಕಷ್ಟದ ಕೆಲಸವೆಂದು ಕೈಕಟ್ಟಿ ಕೂತರೆ ಈ ಬೇತಾಳ ನಮ್ಮನ್ನ ನುಂಗಿ ನೀರು ಕುಡಿಯುತ್ತದೆ.

ಪ್ರಬಲ ಜನ ಹೋರಾಟವೊಂದೆ ಪರ್ಯಾಯ ಮತ್ತು ಅದಕ್ಕೆ ಉತ್ತರವಾಗುತ್ತದೆ.

ಜಾಗತೀಕರಣವನ್ನು ಕೆಲವು ಬುದ್ಧಿಜೀವಿಗಳು ಹಾಗೂ ವಿದೇಶದಿಂದ ಹಣ ಪಡೆದ 'ಕೆಲಸದ ವೇಳೆಯ ಕ್ರಾಂತಿಕಾರಿಗಳಾದ' ಸ್ವಯಂ ಸೇವೆಗಾಗಿಯೇ ಹುಟ್ಟಿಕೊಂಡಿರುವ ಸ್ವಯಂ ಸೇವಾ ಸಂಸ್ಥೆಗಳವರು ಸಮರ್ಥಿಸುತ್ತಿದ್ದು. ಜಾಗತೀಕರಣದೊಳಗೇನೇ ನಾವೊಂದು ಪರ್ಯಾಯ ರೂಢಿಸಬೇಕೆಂಬ ವಾದಗಳನ್ನು ಮಂಡಿಸುತ್ತಿದ್ದಾರೆ. ಇದು ಬಹಳ ಅಪಾಯಕಾರಿ ಬೆಳವಣಿಗೆ ದಲಿತ ದಮನಿತ ಜನರು ಇಂತು ಜನರನ್ನು ಸೂಕ್ಷ್ಮವಾಗಿ ಗ್ರಹಿಸಬೇಕಾಗಿದೆ. ಮುಗ್ಧ ಸಮುದಾಯವನ್ನು ದಿಕ್ಕು ತಪ್ಪಿಸುವಂತಹ ಕೆಲಸವನ್ನು ಮಾಡುವಂತಹ ಲೇಖನಗಳನ್ನು ಸಂವಾದ ಪತ್ರಿಕೆಯಲ್ಲಿ ಪ್ರಕಟಿಸಬಾರದಾಗಿ ಮನವಿ.

ಸಂಪಾದಕರೇ ನೀವು ಲೇಖಕರ ಅಭಿಪ್ರಾಯವೆಂದರೂ ಸಹ ಅದು ಸಮುದಾಯದ ವಿರೋಧಿಯಾಗಿದ್ದರೂ ಪ್ರಕಟಿಸುವುದು ಎಷ್ಟು ಸರಿ. ಮಿಕ್ಕಂತೆ ಇತರೆಲ್ಲ ಲೇಖನಗಳು ಉತ್ತಮವಾಗಿವೆ.

ವಂದನೆಗಳೊಂದಿಗೆ,

ಸಣ್ಣಂಗಿ ರಾಜ, ಚಿಕ್ಕಮಗಳೂರು

ದ್ರಾವಿಡರ ಸ್ವಾಭಿಮಾನದ ಸಂಕೇತ ಪೆರಿಯಾರ್

ರಾಮಸ್ವಾಮಿ ನಾಯ್ಕರರು ಊರೂರು ಸುತ್ತಿ, ಕಲ್ಕತ್ತೆಯ ಮೂಲಕ ವಾರಣಾಸಿ ತಲುಪಿದರು. ಸಾಧು ಸಂತರೊಡನೆ ಚರ್ಚೆ, ತರ್ಕ ಅವರೊಡನೆ ನಿಲ್ಲದ ಪ್ರಶ್ನೆಗಳನ್ನು ಕೇಳುತ್ತಿದ್ದರು. ಗಂಗಾ ನದಿಯ ದಡದ ಮೇಲೆ ಕುಳಿತು ಹೆಣದ ರಾಶಿಗಳನ್ನು ನೋಡಿದರು. ಪಿತೃಗಳನ್ನು ಸ್ವರ್ಗಕ್ಕೆ ಕಳುಹಿಸುತ್ತೇವೆಂದು ಹೇಳಿ ಹಣ ವಸೂಲಿ ಮಾಡುತ್ತಿದ್ದ ಭಂಡ ಬ್ರಾಹ್ಮಣರನ್ನು ಕಂಡು ದಿಗ್ಭ್ರಮೆಗೊಂಡರು. ಗಂಗಾನದಿಯ ಮೈಲಿಗೆಯನ್ನು ಕಂಡು ಹೇಸಿದರು. ವಿಧವೆಯರ ಕೇಶ ಮಂಡನದ ಸಮಯದಲ್ಲಿ ನಡೆಯುತ್ತಿದ್ದ ಅನಾಚಾರಗಳನ್ನು ಕಂಡು ಕೆಂಡಾಮಂಡಲವಾದರು. ಕೊನೆಗೆ ಹಿಂದು ಧರ್ಮದಲ್ಲಿನ ದೋಷಗಳನ್ನು ಕಂಡು ಪರೀಕ್ಷೆಗೆ, ಪ್ರಯೋಗಕ್ಕೆ, ತರ್ಕಕ್ಕೆ ನಿಲುಕದ್ದೆಲ್ಲವೂ ವಂಚನೆಯ ಜಾಲವೆಂದು, ಇತ್ಯರ್ಥ ಮಾಡಿಕೊಂಡು ಮತ್ತೆ ಊರಿಗೆ ಹೊಸ ರಾಮಸ್ವಾಮಿಯಾಗಿ ಹಿಂತಿರುಗಿದರು.

ದ್ರಾವಿಡ ಜನಾಂಗದ ಸ್ವಾಭಿಮಾನದ ಸಂಕೇತ ಪೆರಿಯಾರ್. ತಂದೆ ಪೆರಿಯಾರ್ ಎನ್ನುವುದು ನಾಯಕನೊಬ್ಬನ ನಾಮ ಮಾತ್ರವಲ್ಲ ಅದೊಂದು ಯುಗದ ಹೆಸರೂ ಅಹುದು.

ದಕ್ಷಿಣ ಭಾರತದಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಳುವಳಿಯನ್ನು ಕ್ರಾಂತಿಯ ಪ್ರಖರತೆಗೆ ಕೊಂಡೊಯ್ದು, ಜಗತ್ತಿನ ಗಮನವನ್ನು ಸೆಳೆದ ರಾಮಸ್ವಾಮಿ ನಾಯ್ಕರ್ ಜನಿಸಿದ್ದು ಸೆಪ್ಟೆಂಬರ್ 17, 1879ರಂದು. ಇವರ ತಂದೆ ವೆಂಕಟಪ್ಪನಾಯಕರು, ತಾಯಿ ಚಿನ್ನತಾಯಿ ಅಮ್ಮಾಳ್. ಇವರ ಪೂರ್ವಿಕರ ಕುಟುಂಬದವರು ಕರ್ನಾಟಕದ ಚಿತ್ರದುರ್ಗ ಜಿಲ್ಲೆಯವರು. ರಕ್ಕಸತಂಗಡಿ ಸಂಗ್ರಾಮದ ನಂತರ ಚೆಲ್ಲಾಪಿಲ್ಲಿಯಾಗಿ ಹೋದ ನಾಯಕರ ಒಂದು ಕುಟುಂಬ ಬಳ್ಳಾರಿಯ ಮೂಲಕ ಕೋಲಾರ ಜಿಲ್ಲೆಗೆ ಬಂದು, ಅಲ್ಲಿಂದ ತಮಿಳುನಾಡಿನ ಈರೋಡಿನಲ್ಲಿ ನೆಲಸಿದರು.

ಬಾಲಕ ರಾಮಸ್ವಾಮಿ ಶಾಲೆಯಲ್ಲಿ ಘಟಿಂಗ ವಿದ್ಯಾರ್ಥಿ, ಅವನು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಲಾಗದೆ ಮಾಸ್ತರು ಕಕ್ಕಾಬಿಕ್ಕಿಯಾಗುತ್ತಿದ್ದರು. ಇವರ ಅಸ್ಪೃಶ್ಯ ವಿದ್ಯಾರ್ಥಿಗಳ ಸಂಪರ್ಕ ಉಪಾಧ್ಯಾಯರಿಗೆ ಹಿಡಿಸದೆ ಅವರ ಅಪ್ಪ ಅಮ್ಮನಿಗೆ ದೂರು ಹೇಳುವುದು ಖಾಯಂ ಆಗಿತ್ತು. ಮನೆಯಲ್ಲಿ ರಾಮಸ್ವಾಮಿಗೆ ಚಿತ್ರ ಹಿಂಸೆ ತಪ್ಪಲಿಲ್ಲ. ಕೊನೆಗೆ ತಮ್ಮ ಸ್ವಾತಂತ್ರ್ಯ ಮತ್ತು ಸ್ವಾಭಿಮಾನಕ್ಕೆ ಅಡ್ಡಿ ಬರುವ ಶಾಲೆಯನ್ನು ತಾನು ಕಲಿಯುವುದು ಇಷ್ಟವಿರಲಿಲ್ಲ. ವಿಶಾಲ ಪ್ರಪಂಚವೇ ತನ್ನ ಶಾಲೆಯೆಂದೂ, ಸಮಾಜವೇ ತನ್ನ ಪ್ರಯೋಗಾಲಯ ಎಂದು ತಿಳಿದು ನಾಲ್ಕನೆಯ ಕ್ಲಾಸಿಗೆ ತನ್ನ ವ್ಯಾಸಂಗವನ್ನು ಮುಕ್ತಾಯಗೊಳಿಸಿದರು. ಶಾಲೆ ಬಿಟ್ಟು ತಂದೆಯ ವ್ಯಾಪಾರ ವೃತ್ತಿಗೆ ಇಳಿದ ರಾಮಸ್ವಾಮಿ ಅಲ್ಪಕಾಲದಲ್ಲಿಯೇ ವ್ಯಾಪಾರದಲ್ಲಿ ನಿಸ್ಸೀಮರಾದರು. ಅವರ ಚಾಕಚಕ್ಯತೆ, ಕ್ರಿಯಾಶೀಲತೆ, ಸಾಮರ್ಥ್ಯವನ್ನು ಎಲ್ಲರೂ ಮೆಚ್ಚುತ್ತಿದ್ದರು. ಎಂತಹ ಸಣ್ಣ ಕೆಲಸವನ್ನು ಹೀನವಾಗಿ ಭಾವಿಸದೆ ಮಾಡುತ್ತಿದ್ದನು. ವಿರಾಮ ಸಿಕ್ಕಗಾಲೆಲ್ಲಾ ಅನೇಕ ಧರ್ಮಗಳ ಹಾಗೂ ಪೌರಾಣಿಕ ಗ್ರಂಥಗಳನ್ನು ಓದಿ ಅದರಲ್ಲಿನ ದೋಷಗಳು ಮತ್ತು ವಿರೋದಾಭಾಸಗಳನ್ನು ಪ್ರಶ್ನಿಸುತ್ತಿದ್ದರು.

ವಿವಾಹ ಜೀವನಕ್ಕೆ ರಾಮಸ್ವಾಮಿ ನಾಯ್ಕರ್ : ತಮ್ಮ 19ನೆಯ ವಯಸ್ಸಿನಲ್ಲಿ ರಾಮಸ್ವಾಮಿ ನಾಯಕರಿಗೆ ತಮ್ಮ ಬಂಧುವರ್ಗಕ್ಕೆ ಸೇರಿದ 13 ವರ್ಷದ ನಾಗಮ್ಮಾಳ್ ಎಂಬುವರೊಡನೆ ಸಾಂಪ್ರದಾಯಿಕ ರೀತಿಯಲ್ಲಿ ಮದುವೆ ಜರುಗಿತು. ತುಂಬಾ ಸಂಪ್ರದಾಯಸ್ಥರಾಗಿದ್ದ ನಾಗಮ್ಮಾಳ್ ಉಗ್ರ ಸಂಪ್ರದಾಯ ವಿರೋಧಿಯಾದ ಪತಿಯೊಡನೆ ಹೊಂದಿಕೊಳ್ಳುವುದು ಕಷ್ಟವಾಯಿತು. ಆಸ್ತಿಕರಾಗಿದ್ದ ತಂದೆ ವೆಂಕಟಪ್ಪ ನಾಯಕರು ಮಗ ರಾಮಸ್ವಾಮಿಯ ವಿಚಾರಗಳಿಗೆ



ವಿರುದ್ಧವಾಗಿದ್ದರು. ಕಡೆಗೆ ಹೆಂಡತಿ, ತಂದೆತಾಯಿಯರ ಮೂಢ ಸಂಪ್ರದಾಯಗಳಿಗೆ ಶರಣಾಗಿ ಬದುಕುವುದಕ್ಕಿಂತ ವಿಶಾಲವಾದ ಜಗತ್ತಿನಲ್ಲಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದೆಂದು ನಿರ್ಧರಿಸಿಕೊಂಡು ಯಾರಿಗೂ ಹೇಳದೆ ಕೇಳದೆ ಮನೆಯಿಂದ ಹೊರಬಿದ್ದರು.

ರಾಮಸ್ವಾಮಿ ನಾಯ್ಕರ್ ಭಾರತ ಪ್ರವಾಸ : ಮನೆಯಿಂದ ಹೊರಬಿದ್ದ ರಾಮಸ್ವಾಮಿ ನಾಯ್ಕರರು ಊರೂರು ಸುತ್ತಿ, ಕಲ್ಕತ್ತೆಯ ಮೂಲಕ ವಾರಣಾಸಿ ತಲುಪಿದರು. ಸಾಧು ಸಂತರೊಡನೆ ಚರ್ಚೆ, ತರ್ಕ ಅವರೊಡನೆ ನಿಲ್ಲದ ಪ್ರಶ್ನೆಗಳನ್ನು ಕೇಳುತ್ತಿದ್ದರು. ಗಂಗಾ ನದಿಯ ದಡದ ಮೇಲೆ ಕುಳಿತು ಹೆಣದ ರಾಶಿಗಳನ್ನು ನೋಡಿದರು. ಪಿತೃಗಳನ್ನು ಸ್ವರ್ಗಕ್ಕೆ ಕಳುಹಿಸುತ್ತೇವೆಂದು ಹೇಳಿ ಹಣ ವಸೂಲಿ ಮಾಡುತ್ತಿದ್ದ ಭಂಡ ಬ್ರಾಹ್ಮಣರನ್ನು ಕಂಡು ದಿಗ್ಭ್ರಮೆಗೊಂಡರು. ಗಂಗಾನದಿಯ ಮೈಲಿಗೆಯನ್ನು ಕಂಡು ಹೇಸಿದರು. ವಿಧವೆಯರ ಕೇಶ ಮಂಡನದ ಸಮಯದಲ್ಲಿ ನಡೆಯುತ್ತಿದ್ದ ಅನಾಚಾರಗಳನ್ನು ಕಂಡು ಕೆಂಡಾಮಂಡಲವಾದರು. ಕೊನೆಗೆ ಹಿಂದು ಧರ್ಮದಲ್ಲಿನ ದೋಷಗಳನ್ನು ಕಂಡು ಪರೀಕ್ಷೆಗೆ, ಪ್ರಯೋಗಕ್ಕೆ, ತರ್ಕಕ್ಕೆ ನಿಲುಕದ್ದೆಲ್ಲವೂ ವಂಚನೆಯ ಜಾಲವೆಂದು, ಇತ್ಯರ್ಥ ಮಾಡಿಕೊಂಡು ಮತ್ತೆ ಊರಿಗೆ ಹೊಸ ರಾಮಸ್ವಾಮಿಯಾಗಿ ಹಿಂತಿರುಗಿದರು.

ರಾಮಸ್ವಾಮಿ ನಾಯ್ಕರರ ಸಾಮಾಜಿಕ ಚಳುವಳಿಗಳು : ರಾಮಸ್ವಾಮಿಯವರು ಪಾನನಿರೋಧ ಚಳುವಳಿ ಪ್ರಾರಂಭಿಸಿದಾಗ ಅವರ ಬಳಿ ಇದ್ದ ಒಂದು ಸಾವಿರ ತೆಂಗಿನ ಮರಗಳನ್ನು ಹೆಂಡ ಇಳಿಸಲಿಕ್ಕಾಗಿ ಗುತ್ತಿಗೆ ಕೊಟ್ಟಿದ್ದರು. ಈ ರೀತಿಯ ಆದಾಯವನ್ನು ಪಡೆದು ಸಮಾಜಕ್ಕೆ ಅಮಲು ಮಾರುವುದು ತನ್ನ ವಿಚಾರಧಾರೆಗೆ ವಿರುದ್ಧ ಎಂದು ತಿಳಿದು ಸಾವಿರ ತೆಂಗಿನ ಮರಗಳನ್ನು ನಿರ್ಧಯೆಯಿಂದ ಕಡಿಸಿ ಹಾಕಿದರು. ವ್ಯಾಪಾರದ ಜೊತೆಗೆ ಲೇವಾದೇವಿ ನಡೆಸುತ್ತಿದ್ದ ಇವರ ಕುಟುಂಬದಲ್ಲಿ ಗಡುವು ಮೀರುತ್ತಿದ್ದ 50,000 ಬೆಲೆಯ ಪತ್ರಗಳನ್ನು ಕೋರ್ಟಿಗೆ ಹಾಜರು ಪಡಿಸಬೇಕಾಗಿ ಬಂತು. ರಾಮಸ್ವಾಮಿಯವರು ಸಾಲಗಾರರನ್ನು ಕೋರ್ಟಿಗೆ ಎಳೆದು ಹಿಂಸೆಗೆ ಗುರಿಮಾಡುವುದು ತಮ್ಮಂಥವರಿಗೆ ತಕ್ಕುದಲ್ಲವೆಂದು ತಿಳಿದು ಆ ಪತ್ರಗಳನ್ನು ಹರಿದು ಬಿಸಾಕಿದರು.

ಐತಿಹಾಸಿಕ ವೈಕಂ ಪ್ರಕರಣ - 1924 : ತಿರುವಾಂಕೂರು ಸಂಸ್ಥಾನದಲ್ಲಿ ವೈಕಂ ಒಂದು ಚಿಕ್ಕ ಪಟ್ಟಣ. ವೈಕತ್ತಪ್ಪನ್ ಊರಿನ ಆದಿದೈವ. ಅಸ್ಪೃಶ್ಯರು, ನಾಡಾರು, ಕಮ್ಮಾರ, ಬೇಡರು ಈ ದೇವಸ್ಥಾನದಿಂದ ದೂರ ಇರಬೇಕೆಂಬ

ಕಟ್ಟುಪ್ಪಣೆ ಇದ್ದ ಕಾಲ. 1924 ಮಹಾರಾಜರ ವರ್ಧಂತಿಯ ಸಮಯದಲ್ಲಿ ನಾಯ್ಕರರು, ಶೂದ್ರ ಅತಿಶೂದ್ರರಿಗೆ ಆತ್ಮ ವಿಶ್ವಾಸ ತುಂಬಿ ಈ ಅನ್ಯಾಯ್ಯವನ್ನು ಪ್ರತಿಭಟಿಸಿ ದೇವಸ್ಥಾನ ಪ್ರವೇಶ ಮಾಡಲು ಸಿದ್ಧರಾದರು. ಇದನ್ನು ಕಂಡ ಸರ್ಕಾರ ಗಾಬರಿಗೊಂಡು ಅವರಿಗೆ ಜೈಲು ಶಿಕ್ಷೆಯನ್ನು ವಿಧಿಸಿತು. ಆದರೆ ಸತ್ಯಾಗ್ರಹ ಮುಂದುವರೆಯಿತು. ಸತ್ಯಾಗ್ರಹಕ್ಕೆ ನಾನಾ ಭಾಗಗಳಿಂದ ಕ್ರಿಸ್ತರು, ಸಿಖ್ಖರು, ಹಣ ಕಳುಹಿಸುತ್ತಿದ್ದರು. ಈ ಪ್ರಕರಣ ಕೇವಲ ಹಿಂದುಗಳಿಗೆ ಸಂಬಂಧಿಸಿದ್ದು, ಬೇರೆಯವರು ಇದಕ್ಕೆ ತಲೆ ಹಾಕಬಾರದು ಎಂಬ ಗಾಂಧಿಯ ಹೇಳಿಕೆಯನ್ನು ಕೇಳಿ ನಾಯ್ಕರರು ಗಾಂಧಿಯ ವಿರುದ್ಧ ಕಿಡಿ ಕಾರಿದರು. ತಿರುವಾಂಕೂರು ಮಹಾರಾಜರು ಅಕಾಲಿಕ ಮರಣದಿಂದಾಗಿ ಮಹಾರಾಣಿಯವರು ಬಂಧಿಗಳನ್ನು ಬಿಡುಗಡೆ ಮಾಡಿ ಸಂಧಾನಕ್ಕೆ ರಾಜಾಜಿ ಮತ್ತು ಗಾಂಧೀಜಿಯವರನ್ನು ಕರೆಸಿದರು. ಚರ್ಚೆಯಲ್ಲಿ ಇವರಿಬ್ಬರ ಇಬ್ಬಂದಿತನವನ್ನು ಕಂಡು ನಾಯ್ಕರರು "ರಾಣಿಯ ಜೊತೆ ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ ಮಾತನಾಡುವುದನ್ನು ನೀವಿಬ್ಬರು ಬಿಡಿ. ಆದಿ ಜನರಿಗೆ, ಶೂದ್ರರಿಗೆ ನಿಮ್ಮ ಕೆಟ್ಟ ಸಹಾನುಭೂತಿ ಬೇಡ. ದೇವಾಲಯ ಪ್ರವೇಶ ಹೇಗೆ ಮಾಡಬೇಕೆಂದು ನನಗೆ ಗೊತ್ತು" ಎಂದು ವಾದಿಸಿದರು. ಇದೇ ಸಂದರ್ಭದಲ್ಲಿ ಆದಿ ದ್ರಾವಿಡರಿಗೂ-ನಾಯರ್‌ಗಳಿಗೂ ಗಲಭೆಗಳನ್ನು ಸೃಷ್ಟಿಮಾಡಿ ನಾಯ್ಕರರ ಚಳುವಳಿಯನ್ನು ದಿಕ್ಕು ತಪ್ಪಿಸುವ ಪ್ರಯತ್ನ ನಡೆಯಿತು. ಕೊನೆಗೂ ಅಸ್ಪೃಶ್ಯರು ಮತ್ತು ಶೂದ್ರರಿಗೆ ದೇವಾಲಯ ಪ್ರವೇಶ ಮಾಡಿಸುವಲ್ಲಿ ರಾಮಸ್ವಾಮಿ ಯಶಸ್ವಿಯಾದರು.

ಕಾಂಗ್ರೆಸ್ಸಿನ ಬಣ್ಣ ಕಳಚಿದ ರಾಮಸ್ವಾಮಿ ನಾಯಕರು : ವೈಕಂ ಪ್ರಕರಣದ ಸಂದರ್ಭದಲ್ಲಿ ನಾಯ್ಕರರು ಮದ್ರಾಸ್ ಕಾಂಗ್ರೆಸ್‌ನ ಕಾರ್ಯದರ್ಶಿಯಾಗಿದ್ದರು. ನಾಯ್ಕರರ ಜನ ಪ್ರಿಯತೆಯನ್ನು ಸಹಿಸದ ಬ್ರಾಹ್ಮಣರು ಅವರ ವಿರುದ್ಧ ಅನೇಕ ಪಿರೂರಿಗಳನ್ನು ರೂಪಿಸುತ್ತಿದ್ದರು. ಇದರಿಂದಾಗಿ ಕಾಂಗ್ರೆಸ್ ಚಳುವಳಿಯ ಬಗ್ಗೆ ನಾಯ್ಕರರಲ್ಲಿ ಸಂದೇಹ ಉಂಟಾಯಿತು. ಕಾಂಗ್ರೆಸ್ ಪಕ್ಷವು ರಾಷ್ಟ್ರವೀರರ ತರಬೇತಿಗಾಗಿ ತಿರುನಲ್ವೇಲಿ, ಜಿಲ್ಲೆಯ ಕಲ್ಲಿಡ್ಸ್ ಕುರಿಚಿಯಲ್ಲಿ ಒಂದು ಗುರುಕುಲ ಶಾಲೆ ನಡೆಸುತ್ತಿದ್ದರು. ಅಲ್ಲಿ ಬ್ರಾಹ್ಮಣರಿಗೆ ಒಳ್ಳೆಯ ಊಟ, ವಸತಿ, ಬ್ರಾಹ್ಮಣೇತರರಿಗೆ ಕೀಳು ಊಟ-ವಸತಿಯನ್ನು ಕೊಡಲಾಗುತ್ತಿತ್ತು. ಈ ಪದ್ಧತಿಯನ್ನು ನಾಯಕರು ವಿರೋಧಿಸಿದಾಗ ಡಾ|| ರಾಜನ್ ಮತ್ತು ಸಂತಾನಂನಂಥ ಕಾಂಗ್ರೆಸ್ ಬ್ರಾಹ್ಮಣರು ರೂಢಿಗತ ಪದ್ಧತಿಯ ವಿರುದ್ಧ ಬದಲಾವಣೆ ಸಾಧ್ಯವಿಲ್ಲ ಎಂದು ಸಮರ್ಥಿಸಿದರು. ನಾಯ್ಕರರು ಈ ಅನ್ಯಾಯಗಳನ್ನು ಶಾಲೆಯ ದಾನಿಗಳ ಗಮನಕ್ಕೆ ತಂದು ಧನ ಸಹಾಯ ಮಾಡದಂತೆ ತಡೆದರು. ಇದರಿಂದ ಹತಾಶರಾದ ಬ್ರಾಹ್ಮಣರು, ನಾಯ್ಕರರು ಜಾತೀಯತೆಯ ಬೀಜ ಬಿತ್ತುತ್ತಿದ್ದಾರೆಂದು ಸಾರಿದರು. ಕಾಂಗ್ರೆಸ್‌ನ ಅಂತರಾಳವನ್ನು ಅರಿತ ನಾಯ್ಕರರು 'ಅದೊಂದು ಜಾತಿವಾದಿಗಳ, ಪಟ್ಟಭದ್ರರ ಪರ ಹಾಗೂ ಅಸ್ಪೃಶ್ಯರು, ಹಿಂದುಳಿದವರು ವಿರೋಧಿಗುಂಪೆಂದು' ಹೇಳಿ

1925ರಂದು ಕಂಚಿಯಲ್ಲಿ ನಡೆದ ಪ್ರಾಂತೀಯ ಕಾಂಗ್ರೆಸ್ ಅಧಿವೇಶನದಲ್ಲಿ, "ಬ್ರಾಹ್ಮಣರ ಮೇವುಗಾಡಾಗಿರುವ ಈ ಕಾಂಗ್ರೆಸ್‌ನ್ನು ನಾಶಪಡಿಸುವುದೇ ನನ್ನ ಪವಿತ್ರ ವ್ರತ" ಎಂದು ಘೋಷಿಸಿ ಕಾಂಗ್ರೆಸ್‌ನಿಂದ ಹೊರ ನಡೆದರು. ಜೊತೆಗೆ ಮಿತ್ರರು ಸಾವಿರ ಸಂಖ್ಯೆಯಲ್ಲಿ ಅವರನ್ನು ಹಿಂಬಾಲಿಸುತ್ತಿದ್ದಾಗ "ಅಡಕೆಯಷ್ಟು ಮಾನ ಮರ್ಯಾದೆ ಇದ್ದವನು ಕಾಂಗ್ರೆಸ್ ಸೇರುವುದಿಲ್ಲ" ಎಂದು ಹೇಳಿದರು. ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಮತೀಯ ಕ್ಷೇತ್ರಗಳಲ್ಲಿ ಬ್ರಾಹ್ಮಣರ ಪ್ರಭಾವವನ್ನು ಕುಗ್ಗಿಸುವುದು ಅವರ ಆಂದೋಲನದ ಗುರಿಯಾಯಿತು. ವೈಚಾರಿಕ ಚಳುವಳಿಯ ಮೂಲಕ ಸಾಮಾನ್ಯ ಜನತೆಯ ಅಜ್ಞಾನ ಮೌಢ್ಯಗಳನ್ನು ಹೊಡೆದು ಹಾಕುವುದನ್ನು ಗುರಿಯಾಗಿಟ್ಟುಕೊಂಡು 1925ರಲ್ಲಿ ಸ್ವಾಭಿಮಾನ ಆಂದೋಲನವನ್ನು ಪ್ರಾರಂಭಿಸಿದರು.

1925ರಂದು ಕಂಚಿಯಲ್ಲಿ ನಡೆದ ಪ್ರಾಂತೀಯ ಕಾಂಗ್ರೆಸ್ ಅಧಿವೇಶನದಲ್ಲಿ, "ಬ್ರಾಹ್ಮಣರ ಮೇವುಗಾಡಾಗಿರುವ ಈ ಕಾಂಗ್ರೆಸ್‌ನ್ನು ನಾಶಪಡಿಸುವುದೇ ನನ್ನ ಪವಿತ್ರ ವ್ರತ" ಎಂದು ಘೋಷಿಸಿ ಕಾಂಗ್ರೆಸ್‌ನಿಂದ ಹೊರ ನಡೆದರು. ಜೊತೆಗೆ ಮಿತ್ರರು ಸಾವಿರ ಸಂಖ್ಯೆಯಲ್ಲಿ ಅವರನ್ನು ಹಿಂಬಾಲಿಸುತ್ತಿದ್ದಾಗ "ಅಡಕೆಯಷ್ಟು ಮಾನ ಮರ್ಯಾದೆ ಇದ್ದವನು ಕಾಂಗ್ರೆಸ್ ಸೇರುವುದಿಲ್ಲ" ಎಂದು ಹೇಳಿದರು.

ಸ್ವಾಭಿಮಾನ ಆಂದೋಲನದ ಉದಯ 1925 : ಕಾಂಗ್ರೆಸ್‌ನ್ನು ತ್ಯಜಿಸಿದ ಕೂಡಲೆ ಅವರಲ್ಲಿ ಸುಪ್ತವಾಗಿದ್ದ ಆಕಾಂಕ್ಷೆಗಳು, ಗುರಿಗಳು, ಹೆಡೆಯುತ್ತಿದ್ದವು. ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಮತೀಯ ಕ್ಷೇತ್ರಗಳಲ್ಲಿ ಬ್ರಾಹ್ಮಣರ ಪ್ರಭಾವವನ್ನು ಕುಗ್ಗಿಸುವುದು ಅವರ ಆಂದೋಲನದ ಗುರಿಯಾಯಿತು. ವೈಚಾರಿಕ ಚಳುವಳಿಯ ಮೂಲಕ ಸಾಮಾನ್ಯ ಜನತೆಯ ಅಜ್ಞಾನ ಮೌಢ್ಯಗಳನ್ನು ಹೊಡೆದು ಹಾಕುವುದನ್ನು ಗುರಿಯಾಗಿಟ್ಟುಕೊಂಡು 1925ರಲ್ಲಿ ಸ್ವಾಭಿಮಾನ ಆಂದೋಲನವನ್ನು ಪ್ರಾರಂಭಿಸಿದರು. 1929ರ ಪ್ರಥಮ ಅಧಿವೇಶನದಲ್ಲಿ ನಾಯ್ಕರರು "ಆರ್ಯರು ದ್ರಾವಿಡರನ್ನು ನಿರ್ನಾಮ ಮಾಡಲು ಬಂದ ಪರದೇಶಿಗಳು. ದ್ರಾವಿಡರು ಎಂದು ಸ್ವಾಭಿಮಾನವನ್ನು ಮರೆತರೊ ಅಂದೇ ಅವರು ಸ್ವಂತಿಕೆಯನ್ನೂ, ಸ್ವಾತಂತ್ರ್ಯವನ್ನೂ ಕಳೆದುಕೊಂಡರು. ಅದನ್ನು ಮತ್ತೆ ಪಡೆಯಬೇಕಾದರೆ ವೈಜ್ಞಾನಿಕ ಹಾಗೂ ವೈಚಾರಿಕ ಶಿಕ್ಷಣ ಅತ್ಯಗತ್ಯ ಎಂದು ಹೇಳಿದರು.

ಜಸ್ಟೀಸ್ ಪಾರ್ಟಿ ಸೇರ್ಪಡೆ: 1925ರಲ್ಲಿ ಜಸ್ಟೀಸ್ ಪಾರ್ಟಿ ಸೇರಿದ ರಾಮಸ್ವಾಮಿ ನಾಯಕರು 1938ರಲ್ಲಿ ಅದರ ಅಧ್ಯಕ್ಷರಾದರು. ಬ್ರಾಹ್ಮಣೇತರರಿಗೆ ಮೀಸಲಾತಿ ನೀಡುವ ಕುರಿತು ಮಾತನಾಡುತ್ತಾ "ನಮ್ಮ ವಿಚಾರ ಧಾರೆಯನ್ನು ಗ್ರಹಿಸದೆ ಯಾರಾದರೂ ಕೋಮುವಾರು ಮೀಸಲಾತಿಗೆ ಸಂಬಂಧಿಸಿದ ಮಸೂದೆಯನ್ನು ವಿರೋಧಿಸಿದರೆ ನಾವು ರಕ್ತಪಾತಕ್ಕೂ ಸಿದ್ಧರಾಗಬೇಕು" ಎಂದರು. ಮುಂದುವರೆಸುತ್ತಾ "ಹಿಂದುಳಿದವರು ಮತ್ತು ಅಸ್ಪೃಶ್ಯರು ಬ್ರಿಟಿಷ್ ಆಳ್ವಿಕೆಯಲ್ಲಿ ಶಾಂತಿಯನ್ನು ಪಡೆದಿದ್ದೇವೆ. ಮೊದಲು ನಾವು ನಮ್ಮ ಶಿಕ್ಷಣ, ವ್ಯವಸಾಯ, ವಾಣಿಜ್ಯ ಹಾಗೂ ಸಮಾಜವನ್ನು ಉತ್ತಮಗೊಳಿಸಬೇಕು. ಸ್ವಯಂ ಆಡಳಿತ ಬಂದರೆ ಅದು ಪಟ್ಟಭದ್ರ ಹಿತಾಸಕ್ತಿಗಳ ಆಳ್ವಿಕೆ ಆಗುತ್ತದೆ. ಈಗ ಬ್ರಿಟಿಷರ ಮೇಲೆ ಒತ್ತಡ ತಂದರೆ ಅಧಿಕಾರ ಬ್ರಾಹ್ಮಣರ ಕೈಗೆ ಹೋಗುತ್ತದೆ" ಎಂದು ಪಾರ್ಟಿಯ ಧೋರಣೆಯನ್ನು ಸ್ಪಷ್ಟಪಡಿಸಿದರು.

ದ್ರಾವಿಡ ಕಳಗಂ ಸ್ಥಾಪನೆ : ಅನೇಕ ಏಳು ಬೀಳುಗಳನ್ನು ಕಂಡ ನಾಯ್ಕರರು 1944ರಲ್ಲಿ ಸೇಲಂನಲ್ಲಿ ನಡೆದ ಸಮ್ಮೇಳನದಲ್ಲಿ ಜಸ್ಟೀಸ್ ಪಾರ್ಟಿಯನ್ನು ದ್ರಾವಿಡ ಕಳಗಂ ಎಂದು ಪುನರ್‌ನಾಮಕರಣ ಮಾಡಿದರು. 1950ರಲ್ಲಿ ಕಾಂಗ್ರೆಸ್ ಸರ್ಕಾರ ಪ್ರೌಢ ಶಿಕ್ಷಣದಲ್ಲಿ ಹಿಂದಿ ಭಾಷೆಯ ಕಲಿಕೆಯನ್ನು ಕಡ್ಡಾಯಗೊಳಿಸಿದಾಗ ದ್ರಾವಿಡ ಕಳಗಂ ತೀವ್ರವಾಗಿ ವಿರೋಧಿಸಿತು. ಕೇಂದ್ರ ಸರ್ಕಾರ ಹಿಂದಿ ಹೇರಿಕೆಯ ತನ್ನ ನಿಲುವನ್ನು ಬದಲಿಸಿತು. ಆರ್ಯರ ಭಾಷೆಗಳಿಗಿಂತ ತಮಿಳು ಅತಿ ಪ್ರಾಚೀನವಾದದ್ದು ಎಂದು ಹೇಳಿ ಭಾಷಾ ಚಳುವಳಿಯ ಮೂಲಕ ತಮಿಳು ಭಾಷೆಯೊಳಗೆ ಆರ್ಯರ ಸಂಸ್ಕೃತ ಭಾಷೆಯು ಸೇರದಂತೆ ಜಾಗೃತಿ ಮೂಡಿಸಿದರು. ಇದರ ಪರಿಣಾಮವಾಗಿ ಇಂದಿಗೂ ಸಹ ತಮಿಳು ಭಾಷೆಯಲ್ಲಿ ಸಂಸ್ಕೃತದ ಒಂದು ಅಕ್ಷರವನ್ನೂ ಕಾಣಲು ಸಾಧ್ಯವಿಲ್ಲ. ಅಷ್ಟರಮಟ್ಟಿಗೆ ತಮಿಳು ಭಾಷೆ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡಿದೆ. ಈ ಚಳುವಳಿಯ ಮೂಲಕ ತಮಿಳುನಾಡಿನಾದ್ಯಂತ ರಾಮಸ್ವಾಮಿಯವರನ್ನು ಜನತೆ ತಂದೆ ಪೆರಿಯಾರ್ ಎಂದು ಕರೆಯಲಾರಂಭಿಸಿದರು.

ದ್ರಾವಿಡ ಕಳಗಂನ ಧ್ಯೇಯಗಳು :

1. ದೇವರು, ಧರ್ಮ ಮೂಢನಂಬಿಕೆಗಳಂತಹ ಮಾನಸಿಕ ಗುಲಾಮಗಿರಿಯನ್ನು ತೊರೆದು ಸ್ವಾಭಿಮಾನದಿಂದ ಬದುಕಬೇಕು.
2. ಜಾತಿಯಾಧಾರಿತ ಕಸುಬು, ನಂಬಿಕೆ ಮತ್ತು ಆಚರಣೆಗಳನ್ನು ನಾಶಮಾಡಬೇಕು. ಅಸ್ಪೃಶ್ಯತೆ ನಾಶಮಾಡಿ, ಸೋದರತ್ವ ಬೆಳೆಸುವುದು.
3. ಮಹಿಳೆಯರಿಗೆ ಸಮಾನತೆ ಮತ್ತು ಸಮಾನ ಹಕ್ಕುಗಳು ಸಿಗಬೇಕು.
4. ಬ್ರಾಹ್ಮಣವಾದಿ ವೇದ, ಶಾಸ್ತ್ರ, ಪುರಾಣಗಳಲ್ಲಿನ ವೈರುದ್ಯಗಳನ್ನು ಜನತೆಯ ಮುಂದೆ ಬಿಚ್ಚಿಟ್ಟು ಶೂದ್ರ-ಅತಿಶೂದ್ರರು ಅವನ್ನು ಧಿಕ್ಕರಿಸುವಂತೆ ಮಾಡಬೇಕು.
5. ಪ್ರತಿಜಾತಿಗಳಿಗೂ ಸಮಾನ ಅವಕಾಶ ದೊರೆಯಲು, ಜಾತಿ ಜನ ಸಂಖ್ಯಾವಾರು ಮೀಸಲಾತಿ ಜಾರಿಯಾಗಬೇಕು.
6. ವ್ಯವಸಾಯುವನ್ನು ಆಧುನೀಕರಣಗೊಳಿಸಿ, ಲಾಭದಾಯಕ ಕಸುಬಾಗಿಸಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಬೇಕು. ಮೂಢನಂಬಿಕೆಗಳನ್ನು

(35ನೇ ಪುಟಕ್ಕೆ)

ದನ ಮತ್ತು ಸಂಸ್ಕೃತಿ

> ದನ ತಿನ್ನುವುದು ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿತ್ತು. ವೇದಗಳ ಕಾಲದಲ್ಲಿ ಋಷಿ-ಮುನಿಗಳು ಗೋಮಾಂಸವನ್ನು ತಿನ್ನುತ್ತಿದ್ದರೆಂಬ ಬಗೆಗೆ ಹಲವು ಉಲ್ಲೇಖಗಳು ವೇದಗಳಲ್ಲೇ ನಮಗೆ ಸಿಗುತ್ತದೆ. ಅಲ್ಲದೆ ಆಗ ನಡೆಸುತ್ತಿದ್ದ ಹೋಮ-ಹವನಗಳಿಗೂ ಗೋವುಗಳನ್ನು ಬಲಿ ಕೊಡುತ್ತಿದ್ದರು. ಹಾಗೆ ಬಲಿ ಕೊಟ್ಟ ಗೋವಿನ ದೇಹದ ವಿವಿಧ ಭಾಗಗಳನ್ನು ಋಷಿ-ಮುನಿಗಳು ತಮ್ಮ ತಮ್ಮ ಸ್ಥಾನಮಾನಗಳಿಗೆ ಅನುಗುಣವಾಗಿ ಪಡೆಯುತ್ತಿದ್ದ ಉಲ್ಲೇಖ ಕೂಡ ವೇದಗಳಲ್ಲಿವೆ.
>
> ಮೂಲ : ಕಾಂಚಾ ಐಲಯ್ಯ ಅನು : ಕೆ.ಪಿ.ರೈ.

ಐದು ಮಂದಿ ದಲಿತರಿಗಿಂತ ಈ ದನದ ಜೀವವು ಘನವಾದದ್ದೆ? ಸಾವಿರಾರು ವರ್ಷಗಳಿಂದ ಹಳ್ಳಿಗಳ ಮತ್ತು ಪಟ್ಟಣಗಳ ಹೆಣಗಳನ್ನು ತೆಗೆಯುವುದಕ್ಕಾಗಿ-ಅಸ್ಪೃಶ್ಯರಾಗಿ ಉಳಿದಿರುವ ದಲಿತರು ಬಹುದೊಡ್ಡ ಬೆಲೆ ತೆತ್ತಿದ್ದಾರೆ/ತೆರುತ್ತಿದ್ದಾರೆ. ಭಾರತದಲ್ಲಿ ಚರ್ಮ ಕೈಗಾರಿಕೆಯನ್ನು ಕಟ್ಟಿದ್ದಕ್ಕೆ ಅವರು ತೆತ್ತ ಬೆಲೆಯೆಂದರೆ ಅನಕ್ಷರಸ್ಥರಾಗಿ ಉಳಿದುಕೊಂಡಿರುವುದು ಮತ್ತು ಅಭದ್ರರಾಗಿರುವುದು. ಇವರು ದನಗಳ, ನಾಯಿಗಳ ಮತ್ತು ಮನುಷ್ಯರ ಹೆಣಗಳನ್ನು ತೆಗೆಯದಿದ್ದಲ್ಲಿ, ಪಟ್ಟಣ ಮತ್ತು ಹಳ್ಳಿಗಳ ಜನತೆಯು ಭಯಂಕರ ಅಂಟುಜಾಡ್ಯದಿಂದ ಸಾಯಬೇಕಾಗುತ್ತಿತ್ತು. ಹರಿಯಾಣದ ಜಾಜ್ಜರ್‌ನಲ್ಲಿ ನಡೆದಂತೆ, ಈಗಲೂ ಸಹ ಅವರು ತಮ್ಮ ಬದುಕನ್ನು ತ್ಯಾಗ ಮಾಡುವ ಮೂಲಕ ಬೆಲೆಯನ್ನು ತೆರುತ್ತಲೇ ಇದ್ದಾರೆ.

ಯಾವುದನ್ನು ಆಧ್ಯಾತ್ಮಿಕವಾಗಿ ವೈಜ್ಞಾನಿಕ ಸತ್ಯವೆಂದು ಕಟ್ಟಲಾಗಿದೆಯೇ ಅದು ಮನುಧರ್ಮಶಾಸ್ತ್ರದಲ್ಲಿ ಕೆಟ್ಟದ್ದು ಮತ್ತು ಪಾತಕವಾದುದು. ಇಂತಹ ಮೂಢನಂಬಿಕೆಗಳನ್ನು ಆಧ್ಯಾತ್ಮ ಮತ್ತು ವೇದಗಳ ಮೂಲಕ ಕಾನೂನುಬದ್ಧವಾಗಿಸಿದೆ. ಇದಕ್ಕಿಂತ ಹೆಚ್ಚಿನ ಆಘಾತವೆಂದರೆ, ಹಿಂದುತ್ವ ಪರಿವಾರದ ಸಂಘಟನೆಯಿಂದ ವಿಹೆಚ್‌ಪಿಯು ಈ ಮೂಢನಂಬಿಕೆಗಳನ್ನು ಅನುಷ್ಠಾನಗೊಳಿಸಲು ತುದಿಗಾಲಲ್ಲಿ ನಿಂತಿರುವುದಕ್ಕೆ, ರಾಜ್ಯಾಂಗದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಅವರ ದಾಯಾದಿಗಳ ಸೈದ್ಧಾಂತಿಕ ಕುಮ್ಮಕ್ಕಿಗೆ ಕಾರಣವಾಗಿದೆ. ಹರಿಯಾಣಾದ ರಸ್ತೆಬದಿಯಲ್ಲಿ ಸತ್ತ ದನದ ಚರ್ಮವನ್ನು ಸುಲಿದದ್ದಕ್ಕಾಗಿ ಅವರು, ಐವರು ದಲಿತರನ್ನು ಬರ್ಬರವಾಗಿ ಹತ್ಯೆಗೈದಿದ್ದಾರೆ. ಹಿಂದೂಶಾಸ್ತ್ರಗಳು ಅಂತಹ ಕೃತ್ಯವನ್ನು ನಿಷೇಧಿಸಿದೆ ಎಂದು ಅವರು ಹೇಳುತ್ತಾರೆ. ಆಧುನಿಕ ಕಾನೂನು ಸಂದರ್ಭದಲ್ಲಿ, ಈ ಪ್ರಕರಣವನ್ನು ಎತ್ತಿ ಹಿಡಿಯುವುದಕ್ಕಾಗಿ, ದಲಿತ ಯುವಕರು ಜೀವಂತ ದನದ ಚರ್ಮ ಸುಲಿಯುತ್ತಿದ್ದರೆಂದು ಆ ಕೊಲೆಗಡುಕರು ಹೇಳುತ್ತಿದ್ದಾರೆ.

ಯುರೋಪಿಯನ್ನರು ಮತ್ತು ಅಮೇರಿಕನ್ನರಿಗಿಂತ, ಬಹಳ ಮುಂಚೆಯೇ ಭಾರತೀಯ ಸಮಾಜವು ಚರ್ಮ ಕೈಗಾರಿಕೆಯನ್ನು ಸ್ಥಾಪಿಸಿತ್ತು. ಅವರ ಬಗ್ಗೆ ಹೆಮ್ಮೆ ಪಡುವ ಬದಲಿಗೆ, ಸಮಾಜಕ್ಕೆ ಅಡಿಪಾಯ ಹಾಕಿದವರನ್ನೇ ಈ ಸಮಾಜವು "ಅಸ್ಪೃಶ್ಯರು" ಎಂದು ಮಾಡಿತು. ಈ ರೀತಿಯಾಗಿ ದೈವತ್ವ ಮತ್ತು ಆಧ್ಯಾತ್ಮಿಕತೆಯನ್ನು ಅರ್ಥೈಸಿಕೊಳ್ಳುವ ವಿಧಾನವು ಮೂಲಭೂತವಾಗಿ ತಪ್ಪು. ಈ ಸಮಸ್ಯೆಯು ವಿಹೆಚ್‌ಪಿಯ ವರ್ತಮಾನದ ವರ್ತನೆ ಮತ್ತು ಸ್ವಭಾವಕ್ಕಿಂತ ಆಳವಾದುದು. ಹಿಂದೂ ಮನೋಭಾವದಲ್ಲಿ ಅವೈಜ್ಞಾನಿಕತೆಯು ಗಾಢವಾಗಿ ಬೇರೂರಿದೆ. ಇದು ಗಂಭೀರ ಚರ್ಚೆಗೆ ಅರ್ಹವಲ್ಲವೇ? ಇಂತಹ ಆಧ್ಯಾತ್ಮಿಕ ಮನೋಭಾವದ ವಿರುದ್ಧ ಹೋರಾಟವು



ದಲಿತರಿಂದ ಮಾತ್ರ ಆಗಬೇಕೆ? ಅನೇಕ ಮಂದಿ ವಿಹೆಚ್‌ಪಿ ನಾಯಕರು ಕೈಗಾರಿಕೋದ್ಯಮಿ ಗಳಾಗಿದ್ದಾರೆ. ಅವರಲ್ಲಿ ಕೆಲವರು ತಮ್ಮ ಮಕ್ಕಳಿಗೆ ಯಶಸ್ವಿ ಕೈಗಾರಿಕೋದ್ಯಮಿಗಳಾಗುವುದಕ್ಕೆ ತಮ್ಮ ಕನಸಿನ ನಾಡಾದ ಅಮೇರಿಕದಲ್ಲಿ ತರಬೇತಿ ನೀಡುತ್ತಿದ್ದಾರೆ. ಇವರಲ್ಲಿ ಕೆಲವರು ಈಗಲೂ ಚರ್ಮ ಕೈಗಾರಿಕೆಯಲ್ಲಿ ತೊಡಗಿದ್ದಾರೆ. ಸತ್ತ ದನಗಳ ಚರ್ಮಗಳಿಲ್ಲದೆ ಚರ್ಮ ಕೈಗಾರಿಕೆಯು ಹೇಗೆ ಅಸ್ತಿತ್ವದಲ್ಲಿರಲು ಸಾಧ್ಯ? ಚರ್ಮ ವ್ಯಾಪಾರ ಮಾಡುವುದು ಪಾತಕವಲ್ಲದಿದ್ದರೆ, ದನದ ಚರ್ಮವನ್ನು ತೆಗೆಯುವುದು ಹೇಗೆ ಪಾತಕವಾಗುತ್ತದೆ? ಸತ್ತ ಪ್ರಾಣಿಗಳ ಚರ್ಮವನ್ನು

ತೆಗೆಯದಿದ್ದರೆ ಚರ್ಮ ಹೇಗೆ ಸಿಗಲು ಸಾಧ್ಯ? ಇದು ಮೊದಲ ಕೈಗಾರಿಕಾ ಉದ್ಯೋಗವಾಗಿದ್ದು ಇದನ್ನು ದಲಿತರು ಮಾಡುತ್ತಿದ್ದರಿಂದ ಅಸ್ಪೃಶ್ಯರಾಗಿದ್ದಾರೆಂದು ಶಾಸ್ತ್ರಗಳೇ ಹೇಳುತ್ತಿವೆ. ಈಗ ದಲಿತರು ಈ ಉದ್ಯೋಗವನ್ನು ಮಾಡುತ್ತಿರುವುದಕ್ಕಾಗಿ ಅವರನ್ನು ಕೊಲ್ಲಲಾಗುತ್ತಿದೆ. ಇದೆಂಥ ರಾಷ್ಟ್ರೀಯವಾದ?

ಅಕಸ್ಮಾತ್ತಾಗಿ, ಈ ಘಟನೆ ನಡೆದಾಗ ನಾನು ಭಾರತೀಯರ ಕನಸಿನ ನಾಡಾದ ಅಮೇರಿಕ ಪ್ರವಾಸದಲ್ಲಿದ್ದೆ. ನಾನು ಅನೇಕ ಹುಡುಗ-ಹುಡುಗಿಯರನ್ನು ಭೇಟಿಯಾದೆ-ಅವರಲ್ಲಿ ಹೆಚ್ಚಿನವರು ಬ್ರಾಹ್ಮಣರು. ಅವರು ಹಸುವಿನ ಮಾಂಸವನ್ನು ಸಂಸ್ಕರಿಸಿ ಪ್ಯಾಕು ಮಾಡುವ ಮತ್ತು ಚರ್ಮಘಟಕಗಳಲ್ಲಿ ಕೆಲಸ ಮಾಡುತ್ತಿರುವವರು. ಇವರಲ್ಲಿ ಹೆಚ್ಚಿನವರು ಚೆನ್ನಾಗಿ ದನದ ಮಾಂಸ ತಿನ್ನುವವರು. ಹಾಗಿದ್ದರೆ ಇವರೆಲ್ಲರೂ ಅಸ್ಪೃಶ್ಯರಾಗುವುದಿಲ್ಲವೇ? ಹಿಂದುತ್ವ ಶಕ್ತಿಗಳು ಮಾತನಾಡುವಂತೆ, ಅದೇ ಶಾಸ್ತ್ರಗಳನ್ನಾಧರಿಸಿ ಅವರನ್ನು ಸಹ ಅಸ್ಪೃಶ್ಯರೆಂದು ಘೋಷಿಸತಕ್ಕದ್ದು. ಮತ್ತು ಬಾಳಠಾಕ್ರೆ ಹೇಳುತ್ತಿರುವ ಹಿಂದೂ ರಾಷ್ಟ್ರಕ್ಕೆ ಪ್ರವೇಶಿಸಲು ಅವರಿಗೆ ಅನುಮತಿ ನೀಡತಕ್ಕದ್ದಲ್ಲ. ಈ ದನದ ಮಾಂಸ ತಿನ್ನುವ ಅನಿವಾಸಿ ಭಾರತೀಯರು ಡಾಲರ್‌ಗಳಲ್ಲಿ ತಮ್ಮ ಹುಂಡಿಗಳನ್ನು ತುಂಬಿಕೊಂಡಿದ್ದಾರೆ. ಆದ್ದರಿಂದ ಅವರು ಹೆಚ್ಚು ವಿಶ್ವಾಸಪಾತ್ರರಾಗಿದ್ದಾರೆ. ಅವರು ಈ ರೀತಿಯ ಹಿಂದು ಧರ್ಮವನ್ನು ಹೇಗೆ ವಿವರಿಸಿಕೊಳ್ಳುತ್ತಾರೆ?

ಭಾರತೀಯರು ಒಂದೇ ರೀತಿಯ ಶಾಸ್ತ್ರಗಳಲ್ಲಿ ಜೀವಿಸುತ್ತಿಲ್ಲ. ಬೌದ್ಧಗ್ರಂಥಗಳು ನಮ್ಮಲ್ಲಿವೆ. ಭಾರತದಲ್ಲಿ 2000 ವರ್ಷಗಳಿಂದ ಜೀವಂತವಾಗಿರುವ ಬೈಬಲ್ ಇದೆ. ಕುರಾನ್ ಕೂಡಾ 1000 ವರ್ಷಗಳಿಗಿಂತ ಹೆಚ್ಚು ಕಾಲದಿಂದ ಭಾರತದಲ್ಲಿದೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ದಲಿತರು ಹಿಂದೂಧರ್ಮಕ್ಕಿಂತ ಹೆಚ್ಚಿಗೆ ಬೌದ್ಧ ಹಾಗೂ ಕ್ರೈಸ್ತ ಧರ್ಮದ ಕಡೆ ಒಲವು ಹೊಂದಿದ್ದಾರೆ. ಇವರ ಆಧ್ಯಾತ್ಮಿಕ ಕ್ಷೇತ್ರದಲ್ಲಿ ದನ ಪೂಜನೀಯವಲ್ಲ. ಹಿಂದುತ್ವ ಶಕ್ತಿಗಳು ತಮ್ಮ ಆಧ್ಯಾತ್ಮಿಕತೆಯನ್ನು ಇತರರ ಮೇಲೆ ಹೇಗೆ ಹೇರುತ್ತಾರೆ? ಎರಡನೆಯದಾಗಿ, ಈ ಆಧ್ಯಾತ್ಮಿಕತೆಯು ದೈನಂದಿನ ಜೀವನದಲ್ಲಿ ಇಷ್ಟರಮಟ್ಟಿಗಿನ ಬೂಟಾಟಿಕೆ, ಭಯೋತ್ಪಾದನೆ ಮತ್ತು ಪಾಶವೀತನವನ್ನು ಹೇಗೆ ಅನುಮತಿಸಿದೆ? ಹಿಂದುತ್ವ ಶಕ್ತಿಗಳು ಆರ್ಥಿಕ ಜಾಗತೀಕರಣವನ್ನು ಸ್ವಾಗತಿಸುತ್ತದೆ. ಆದರೆ ಸಾಂಸ್ಕೃತಿಕ ಜಾಗತೀಕರಣದ ಪ್ರಕ್ರಿಯೆಯಿಂದ ಯಾವುದೇ ಅಂಶವನ್ನು ತಿಳಿದುಕೊಳ್ಳಲು ಇಷ್ಟಪಡುವುದಿಲ್ಲ. ಜಾಗತಿಕ ಆಧ್ಯಾತ್ಮಿಕ ಸಂಸ್ಕೃತಿಗಳು ಪ್ರಾಣಿಗಳು ಮತ್ತು ಮನುಷ್ಯರ ನಡುವಣ ಸಂಬಂಧವನ್ನು ಹೇಗೆ ನೋಡುತ್ತವೆ? ಎಲ್ಲ ಧನಾತ್ಮಕ ಸಂಸ್ಕೃತಿಗಳಿಂದ ಇದನ್ನು ತಿಳಿದುಕೊಳ್ಳುವುದು ಮುಖ್ಯವಲ್ಲವೇ?

ಆರ್ಥಿಕ ಕ್ಷೇತ್ರದಲ್ಲಿ, ಅವರು ಚರ್ಮ ವ್ಯಾಪಾರ ಮಾಡುವುದನ್ನೇ ಬಯಸುತ್ತಾರೆ. ಆದರೆ ರಾಜಕೀಯ ಕ್ಷೇತ್ರದಲ್ಲಿ, ದಲಿತರನ್ನು ಮತ ನೀಡುವವರನ್ನಾಗಿ ಉಪಯೋಗಿಸಲು ಬಯಸುತ್ತಾರೆ. ಮತ್ತು ಆಧ್ಯಾತ್ಮಿಕ ಕ್ಷೇತ್ರದಲ್ಲಿ, ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಕ್ರಿಯೆಗಳಲ್ಲಿ ದಲಿತರನ್ನು ಚಾರಿತ್ರಿಕವಾಗಿ ಅಶುದ್ಧರು, ಮೈಲಿಗೆಯವರೆಂದು ಕಟ್ಟಲಾಗಿದೆ. ದೈನಂದಿನ ಜೀವನದಲ್ಲಿ ಒಬಿಸಿಗಳು ತೊಡಗಿರುವ ಉದ್ಯೋಗಗಳಾದ ಬಟ್ಟೆ

ಭಾರತೀಯರು ಒಂದೇ ರೀತಿಯ ಶಾಸ್ತ್ರಗಳಲ್ಲಿ ಜೀವಿಸುತ್ತಿಲ್ಲ. ಬೌದ್ಧಗ್ರಂಥಗಳು ನಮ್ಮಲ್ಲಿವೆ. ಭಾರತದಲ್ಲಿ 2000 ವರ್ಷಗಳಿಂದ ಜೀವಂತವಾಗಿರುವ ಬೈಬಲ್ ಇದೆ. ಕುರಾನ್ ಕೂಡಾ 1000 ವರ್ಷಗಳಿಗಿಂತ ಹೆಚ್ಚು ಕಾಲದಿಂದ ಭಾರತದಲ್ಲಿದೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ದಲಿತರು ಹಿಂದೂಧರ್ಮಕ್ಕಿಂತ ಹೆಚ್ಚಿಗೆ ಬೌದ್ಧ ಹಾಗೂ ಕ್ರೈಸ್ತ ಧರ್ಮದ ಕಡೆ ಒಲವು ಹೊಂದಿದ್ದಾರೆ. ಇವರ ಆಧ್ಯಾತ್ಮಿಕ ಕ್ಷೇತ್ರದಲ್ಲಿ ದನ ಪೂಜನೀಯವಲ್ಲ. ಹಿಂದುತ್ವ ಶಕ್ತಿಗಳು ತಮ್ಮ ಆಧ್ಯಾತ್ಮಿಕತೆಯನ್ನು ಇತರರ ಮೇಲೆ ಹೇಗೆ ಹೇರುತ್ತಾರೆ?

ಒಗೆಯುವುದು, ಮಡಿಕೆ ತಯಾರಿಸುವುದು ಮತ್ತು ಕುರಿ, ದನ ಕಾಯುವುದು ಇವುಗಳು ಹಿಂದುತ್ವ ಶಕ್ತಿಗಳಿಗೆ ಆಧ್ಯಾತ್ಮಿಕವಾಗಿ ಅಂಗೀಕಾರಾರ್ಹವಾಗುತ್ತದೆ. ಅವರೂ ಸಹ ಇದುವರೆಗೆ ಯಾವತ್ತಿಗೂ-ಅಶುದ್ಧರಾಗಿಯೇ ಉಳಿಯುತ್ತಾರೆ. ಎಲ್ಲ ಶೂದ್ರರು/ಒಬಿಸಿಗಳು ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿರುವವರಾದರೂ ಹಿಂದೂ ದೇವಾಲಯಗಳಿಗೆ ಪೂಜಾರಿಗಳಾಗುವುದಕ್ಕೆ ಅಂಗೀಕಾರವಾಗದೆ ಉಳಿದಿರುವರು. ಆದರೆ ಇವರ ಬಾಹುಬಲವು ದನಸಂರಕ್ಷಣೆಯ ಹೆಸರಿನಲ್ಲಿ ದಲಿತರನ್ನು, ಧರ್ಮದ ಹೆಸರಿನಲ್ಲಿ ಮುಸ್ಲಿಮರನ್ನು ಕೊಲ್ಲುವುದಕ್ಕೆ ಬೇಕಾಗಿದೆ. ಹಿಂದುತ್ವ ಸಂಘಟನೆಗಳಲ್ಲಿ ಕೆಲಸ ಮಾಡುತ್ತಿರುವ ಯಾದವರು, ನಮ್ಮಲ್ಲಿ ಹೆಚ್ಚಿನವರಿಗೆ ಹಾಲುಕೊಡುತ್ತಿರುವ ಎಮ್ಮೆ ಯಾಕೆ ಪೂಜನೀಯವಲ್ಲವೆಂದು ಕೇಳುತ್ತಿಲ್ಲ. ಪ್ರಾಣಿ ಪವಿತ್ರತೆ ಮತ್ತು ಮಾನವ ಮೈಲಿಗೆ ಮುಂತಾದ ವಿಷಯಗಳ ಸುತ್ತ ಹಿಂದೂ ರಾಷ್ಟ್ರೀಯತೆಯನ್ನು ಏಕೆ ಕಟ್ಟಲಾಗಿದೆ ಎಂಬುದನ್ನು ನಮ್ಮ ಬುದ್ಧಿಜೀವಿ ವರ್ಗ ಪ್ರಶ್ನಿಸುತ್ತಿಲ್ಲ. ನಾನು ಕೊಲಂಬಿಯಾ ವಿಶ್ವವಿದ್ಯಾನಿಲಯ ಭಾಷಣದಲ್ಲಿ ಈ ಪ್ರಶ್ನೆಯನ್ನು ಕೇಳಿದಾಗ, ಭಾರತೀಯ ಅನಿವಾಸಿ ಬುದ್ಧಿಜೀವಿಗಳು ನನ್ನೊಂದಿಗೆ ಸಂಪೂರ್ಣ ಸಮ್ಮತಿಸಿದಂತೆ ತೋರಿಸಿಕೊಂಡರು. ಆದರೆ ಇಂತಹ ವಿಷಯಗಳ ಬಗ್ಗೆ ಎಷ್ಟು ಲೇಖನ ಬರೆದಿದ್ದಾರೆ ಎಂಬುದು ಮುಖ್ಯ ಪ್ರಶ್ನೆಯಾಗಿದೆ. ನಾವು ಯಾವ ರೀತಿಯ ಸೈದ್ಧಾಂತಿಕವಾದ ಮತ್ತು ಪ್ರಾಯೋಗಿಕವಾದ ರಾಷ್ಟ್ರೀಯತೆಯನ್ನು ಹೊಂದಿದ್ದೇವೆ? ರಾಜ್ಯನೀತಿಯ ನಿರ್ದೇಶಕ ತತ್ತ್ವಗಳ ಮೇರೆಗೆ ದನ ಮಾತ್ರ ಯಾಕೆ ಸಂವಿಧಾನಾತ್ಮಕವಾಗಿ ಸಂರಕ್ಷಿತ ಪ್ರಾಣಿಯಾಗಿದೆ ಎಂದು ಯಾರೂ ಪ್ರಶ್ನಿಸುತ್ತಿಲ್ಲ.

ಇಂದು ಕಪ್ಪು ಜನರ ಸಂಸ್ಕೃತಿಯು ಅಮೇರಿಕದ ನಾಗರಿಕ ಸಮಾಜದಲ್ಲಿ ಮಾತ್ರವಲ್ಲದೆ, ಎಲ್ಲ ಕಡೆ ಸಮ್ಮಿಲನಗೊಂಡಿದೆ ಎಂಬುದು ಇಡೀ ಜಗತ್ತಿಗೆ ತಿಳಿದಿದೆ. ಇದು ರಾಜ್ಯ ವ್ಯವಸ್ಥೆಯ ಭಾಗವಾಗಿದೆ. ಅಮೇರಿಕ ಸಂವಿಧಾನದ ಮೌಲ್ಯಗಳಲ್ಲಿ ಕಪ್ಪು ಜನರ ಜೀವನವು ಬಿಳಿಯರ ಜೀವನಕ್ಕೆ ಸಮಾನವಾಗಿದೆ. ಕಪ್ಪು ಜನರಿಗೆ ಸಮಾನ ಹಕ್ಕುಗಳನ್ನು ನೀಡುವುದಕ್ಕೆ ನಡೆದ ನಾಗರಿಕ ಯುದ್ಧದಲ್ಲಿ ಕಪ್ಪು ಜನರು ಹೋರಾಟ ನಡೆಸಲಿಲ್ಲ ಎಂಬುದನ್ನು ಭಾರತೀಯ ಬುದ್ಧಿಜೀವಿಗಳು ಅರಿತುಕೊಳ್ಳಬೇಕು. ಅಬ್ರಹಾಂ ಲಿಂಕನ್ನರ ಮುಂದಾಳತ್ವದಲ್ಲಿ ಬಿಳಿಯರು ಹೋರಾಟ ನಡೆಸಿದ್ದು. ಆಫ್ರಿಕಾ-ಅಮೇರಿಕದ ಟ್ಯಾಕ್ಸಿಡ್ರೈವರ್‌ಗಳು ಬಿಳಿಯ ಬುದ್ಧಿಜೀವಿಗಳ ಬಗೆಗೆ ಅನೇಕ ಧನಾತ್ಮಕ ಕಥೆಗಳನ್ನು ಹೇಳುತ್ತಾರೆ. ಅವರಲ್ಲನೇಕರು ಕಪ್ಪು ಜನರ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನು ತ್ಯಾಗಮಾಡಿದ್ದಾರೆ ಎಂದೂ ಅವರು ಹೇಳುತ್ತಾರೆ. ಭಾರತದಲ್ಲಿ ಇವರು ದಲಿತರ ಜೀವಕ್ಕಿಂತ ದನದ ಜೀವವೇ ಹೆಚ್ಚು ಬೆಲೆಯುಳ್ಳದ್ದೆಂದು ಪರಿಗಣಿಸುವ ಕ್ರೌರ್ಯದ ವಿರುದ್ಧ ಅಂತಹ ಪ್ರತಿಭಟನೆ ಎಲ್ಲಿದೆ? ಇಂತಹ ವಿಷಯವು ಇಂದು ಆಫ್ರಿಕನ್-ಅಮೇರಿಕನ್ನರ ಮಧ್ಯೆ ನಡೆಯುತ್ತಿದೆಯೆಂದು ಭಾವಿಸಿದ್ದಲ್ಲಿ, ಅಂತಹ ಘಟನೆಗಳು ಮತ್ತೊಂದು ನಾಗರಿಕ ಯುದ್ಧಕ್ಕೆ ಸಿಡಿಮದ್ದನ್ನು ಒದಗಿಸುವುದಿಲ್ಲವೇ? ಭಾರತೀಯ ಕಾನೂನು ಏಜೆನ್ಸಿಗಳು ಇಂತಹ ಪಾಶವೀತನವನ್ನು ವ್ಯವಹರಿಸುವ ರೀತಿಯನ್ನು ನೋಡಿ ದನದ ಚರ್ಮವನ್ನು ಸುಲಿಯುವಾಗ ಅದು ಸತ್ತಿತ್ತೆ ಅಥವಾ ಜೀವಂತವಾಗಿತ್ತೆ ಎಂಬುದನ್ನು ಕಂಡು ಹಿಡಿಯಲು ಅವರು ಕಾಯುತ್ತಿದ್ದಾರೆ. ಹಿಂದುತ್ವ ಶಕ್ತಿಗಳು ಇಂತಹ ಮೌಢ್ಯ ತುಂಬಿದ ನಂಬಿಕೆಗಳನ್ನು ತಮ್ಮ ಬದುಕು ಮತ್ತು ಧರ್ಮದಿಂದ ತಿರಸ್ಕರಿಸುವ ಬಗ್ಗೆ ಯೋಚಿಸುತ್ತಿಲ್ಲ. ವಿಹೆಚ್‌ಪಿ ಮಾಡಿದ ಈ ಸಂಗತಿಗೆ ಪ್ರತಿರೋಧವಾಗಿ ಇಲ್ಲಿಯ ತನಕ ಯಾವ ಹಿಂದೂ ಆಧ್ಯಾತ್ಮಿಕ ನಾಯಕತ್ವ ಇದ್ದಂತೆ ಕಾಣಿಸುವುದಿಲ್ಲ.

ನವದೆಹಲಿಯ ಆಡಳಿತಗಾರರು ನಿರ್ಲಿಪ್ತರಾಗಿ ಉಳಿದುಕೊಂಡಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬಂದ ನಂತರ, ದನದ ಪ್ರಶ್ನೆಯನ್ನು ಮತ್ತೆ ಮತ್ತೆ ರಾಷ್ಟ್ರೀಯ ಏಜೆಂಡಾಕ್ಕೆ (ಇತ್ತೀಚೆಗಷ್ಟೇ ವಾಜಪೇಯಿ ಗೋವು ಪೂಜನೀಯ ಎಂದದ್ದು ಹಾಗೂ ಆತನ ದಾಯಾದಿಗಳು ದನದ ಬಾಡು ತಿನ್ನುವುದಕ್ಕೆ ನಿಷೇಧಿಸಬೇಕೆಂದು ಬೊಬ್ಬಿಡುವುದನ್ನು ನೆನಪಿಸಿಕೊಳ್ಳಬಹುದು) ತರಲಾಗಿದೆ. ಮೊದಲಿಗೆ, ಯಾವಾಗಲೂ ಇದನ್ನು ಮುಸ್ಲಿಮರಿಗೆ ಉಲ್ಲೇಖಿಸಲಾಗುತ್ತಿತ್ತು. ಈಗ ದಲಿತರನ್ನು ನ್ಯಾಯಸ್ಥಾನಕ್ಕೆ ತರಲಾಗುತ್ತಿದೆ. ಅವರ ಅವಶ್ಯಕವಾದ ಜೀವನಾಧಾರದ ಮೇಲೆ ಆಕ್ರಮಣ ಮಾಡಲಾಗಿದೆ.

ಗುಜರಾತ್ ಹತ್ಯಾಕಾಂಡವು ಒಳಗೊಂಡಂತೆ, ಎಲ್ಲ ತರದ ಮೂಲಭೂತವಾದಿ ಚಟುವಟಿಕೆಗಳಲ್ಲಿ ಒಬಿಸಿಗಳನ್ನು ಬಳಸಲಾಗುತ್ತಿದೆ. ಹಾಗೆಯೇ ಈ ರೀತಿಯಾಗಿ ದಲಿತರನ್ನು ಸಹ ಕೊಲ್ಲಲು ಬಳಸಿದಂತೆ ಕಾಣುತ್ತಿದೆ. ತಮ್ಮ ವಿರುದ್ಧದ ಹೆಚ್ಚಿನ ಆಕ್ರಮಣಗಳಲ್ಲಿ ಒಬಿಸಿಗಳು ತೊಡಗಿಕೊಂಡಿದ್ದಾರೆಂದು ಅನೇಕ ದಲಿತ ಕಾರ್ಯಕರ್ತರು ದೂರು ನೀಡುತ್ತಿದ್ದಾರೆ. ಜಾತಿ ಶ್ರೇಣೀಕರಣದ ಪದ್ಧತಿಯು ಸಾಂಪ್ರದಾಯಿಕ ರೀತಿಯಲ್ಲಿ ಜಾರಿಗೆ ಬಂದಿದೆ ಎಂದು ಹೇಳುವ ಮೂಲಭೂತವಾದಿಗಳ ಬಗ್ಗೆ ಒಬಿಸಿಗಳು ಎಚ್ಚೆತ್ತುಕೊಳ್ಳಬೇಕು. ಚುನಾವಣೆಗಳಲ್ಲಿ ಸ್ಪರ್ಧಿಸುವುದನ್ನು ಮತ್ತು ರಾಜ್ಯದ ಆಡಳಿತದಿಂದ ಒಬಿಸಿಗಳನ್ನು ಅನರ್ಹಗೊಳಿಸಲು ಈ ರೀತಿ ಮಾಡುತ್ತಿದ್ದಾರೆ. ಹಿಂದುತ್ವವು ಮುಸ್ಲಿಮರ ಮೇಲಿನ ಆಕ್ರಮಣವನ್ನು ನಿಲ್ಲಿಸುವುದಿಲ್ಲ. ಅವರು ಕ್ರೈಸ್ತರ ಮೇಲೆ ಹಾಗೂ ಈಗ ದಲಿತರ ಮೇಲೆ ಗುರಿಯಿಟ್ಟಿದ್ದಾರೆ. ಈಗಲಾದರೂ, ಈ ರೀತಿಯ ಆಧ್ಯಾತ್ಮಿಕ ಮತ್ತು ರಾಜಕೀಯ (ಗುಂಡಾಗಿರಿ) ರಾಷ್ಟ್ರೀಯತೆಯ ವಿರುದ್ಧ ಇಡೀ ದೇಶವೇ ಎದ್ದುನಿಲ್ಲಬೇಕಾಗಿದೆ. ●

ದನದ ಬಾಡು ತಿನ್ನುವವರೇಕೆ ಅಸ್ಪೃಶ್ಯರಾಗುತ್ತಾರೆ?

ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ದನದ ಮಾಂಸ ತಿನ್ನುವುದನ್ನು ನಿಲ್ಲಿಸಿದ್ದು ಹಾಗೂ ತುಳಿತಕ್ಕೊಳಗಾದ ಜನ ಅದರ ತಿನ್ನುವಿಕೆಯನ್ನು ಮುಂದುವರೆಸಿರುವುದು ಹಿಂದಿನ ಪರಿಸ್ಥಿತಿಗಿಂತ ಭಿನ್ನ ಸ್ಥಿತಿಯನ್ನು ನಿರ್ಮಿಸಿದೆ. ಈ ಭಿನ್ನತೆಗಳ ಮೂಲ ಎಲ್ಲಿದೆಯೆಂದರೆ ಈ ಹಿಂದೆ ಎಲ್ಲರೂ ದನದ ಮಾಂಸವನ್ನು ತಿನ್ನುವವರೇ ಆಗಿದ್ದರು. ಆದರೆ, ಇಂದು ಕೆಲವರು ತಿನ್ನುವುದಿಲ್ಲವಾದರೆ ಮತ್ತೆ ಕೆಲವರು ತಿನ್ನುತ್ತಾರೆ. ಅಂದರೆ ನಿಜವಾದ ಭಿನ್ನತೆಯು ವಿಘಟನಾತ್ಮಕವಾಗಿ ಕಂಡು ಬರುತ್ತಿದೆ. ಆದರೂ ಈ ಭಿನ್ನತೆಯು ಅಸ್ಪೃಶ್ಯತೆಯಂಥ ತೀವ್ರತರವಾದ ಸಾಮಾಜಿಕ ವಿಭಜನೆಗೆ ಕಾರಣೀಭೂತವಾಗಿ, ಸಾಮಾಜಿಕ ಭಿನ್ನತೆಯಾಗಿ ಆಚರಣೆಯಲ್ಲಿ ಬಂದಿರುವುದು. ಸಮುದಾಯದ ಬೇರೆ ಬೇರೆ ವಿಭಾಗಗಳಲ್ಲಿ ಆಹಾರಕ್ಕೆ ಸಂಬಂಧಪಟ್ಟಂತೆ ವ್ಯತ್ಯಾಸ ಎದ್ದು ಕಾಣುವುದು ನಿಜ. ಒಬ್ಬರಿಗೆ ಒಂದು ಇಷ್ಟವಾದರೆ ಇನ್ನೊಬ್ಬರಿಗೆ ಅದು ಹಿಡಿಸದು. ಆದರೆ ಇಲ್ಲಿ ಮುಖ್ಯವಾದ ಸಂಗತಿಯೆಂದರೆ ಈ ನಡಾವಳಿ ಅವರಿಬ್ಬರ ಮಧ್ಯೆ ಗೋಡೆಯನ್ನು ನಿರ್ಮಿಸುವುದಿಲ್ಲ.

ಆದ್ದರಿಂದ, ಭಾರತದಲ್ಲಿ ನೆಲೆಯೂರಿರುವ ಸಮುದಾಯ ಮತ್ತು ತುಳಿತಕ್ಕೊಳಗಾದ ಜನರ ಮಧ್ಯೆ ದನದ ಮಾಂಸ ತಿನ್ನುವುದು ಅವರಿಬ್ಬರ ನಡುವೆ ದೊಡ್ಡ ಗೋಡೆಯನ್ನು ನಿರ್ಮಿಸಿರುವುದಕ್ಕೆ ವಿಶೇಷ ಕಾರಣಗಳಿರಲೇಬೇಕು. ಆ ಕಾರಣಗಳೇನು? ಎಂದು ನೋಡಿದಾಗ ದನದ ಮಾಂಸ ತಿನ್ನುವುದು ಜಾತ್ಯಾತೀತ ಸಂಗತಿಯಾಗಿದ್ದು ವೈಯುಕ್ತಿಕ ಅಭಿರುಚಿಯ ಸಂಗತಿಯಾಗಿದ್ದಲ್ಲಿ ಅಂತಹ ಗೋಡೆ ನಿರ್ಮಾಣವಾಗುತ್ತಿರಲಿಲ್ಲ. ದುರಾದೃಷ್ಟವಶಾತ್ ದನದ ಮಾಂಸ ತಿನ್ನುವುದು ಅಂತಹ ಸಂಗತಿಯಾಗದೆ ಅದೊಂದು ಧಾರ್ಮಿಕ ಸಂಗತಿಯಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಬ್ರಾಹ್ಮಣರು ಗೋವನ್ನು ಪೂಜ್ಯ ಪ್ರಾಣಿಯಾಗಿ ಮಾಡಿದ್ದು, ಇದು ದನದ ಮಾಂಸ ತಿನ್ನುವುದನ್ನು ಪಾತಕವನ್ನಾಗಿಸುತ್ತದೆ. ಹಾಗಾಗಿ ದಮನಕ್ಕೊಳಗಾದ ಜನ ಅಪರಾಧಿ ಪ್ರಜ್ಞೆಗೆ ಒಳಗಾಗಿ ಸಮಾಜದಾಚೆಗಿನವರಾಗಿ ಬಿಡುತ್ತಾರೆ. ಈ ಉತ್ತರ ಸಾಮಾಜಿಕ ಬದುಕಿನಲ್ಲಿ ಧರ್ಮದ ಪಾತ್ರ ಮತ್ತು ಪ್ರಭಾವದ ಬಗ್ಗೆ ಅರಿವಿಲ್ಲದ ಜನಕ್ಕೆ ಸರಿಯೆಂದು ಕಾಣದಿರಬಹುದು...ಅಸ್ಪೃಶ್ಯತೆ ಎನ್ನುವುದು ಇಂತಹ ನಿಯಮದ ಉಲ್ಲಂಘನೆಯಾಗುತ್ತದೆ. ಅಂದರೆ ಈ ಪೂಜ್ಯ ಪ್ರಾಣಿಯಾದ ದನವನ್ನು ತಿನ್ನುವುದು ಅಪರಾಧವಾಗಿಬಿಡುತ್ತದೆ... ಆದರೆ ಬ್ರಾಹ್ಮಣರು ಸತ್ತ ದನ ಮತ್ತು ಜೀವಂತ ದನದ ನಡುವೆ ವ್ಯತ್ಯಾಸವನ್ನು ಮಾಡಿಲ್ಲ. ದನ ಸತ್ತಿರಲಿ, ಬದುಕಿರಲಿ ಅದು ಪೂಜನೀಯ. ಆದ್ದರಿಂದ ದನದ ಮಾಂಸ ತಿನ್ನುವುದು ಕೇವಲ ಅಪರಾಧವಷ್ಟೇ ಅಲ್ಲ. ಅದೇನಾದರೂ ಅಪರಾಧವಾಗಿದ್ದಲ್ಲಿ ಅದಕ್ಕೊಂದು ಶಿಕ್ಷೆಯಿರುತ್ತಿತ್ತಷ್ಟೇ. ಆದರೆ ದನದ ಮಾಂಸ ತಿನ್ನುವುದು ಪಾತಕವಾಗಿ ಬಿಡುತ್ತದೆ. ಯಾರೇ ಆಗಲಿ ದನವನ್ನು ಅಪೂಜನೀಯವೆಂದಲ್ಲಿ ಅದು ಪಾಪವಾಗುತ್ತದೆ. ಹಾಗೂ ಸಂಘ ಬಾಹಿರವಾಗಿ ಬಿಡುತ್ತಾನೆ/ಳೆ. ತುಳಿತಕ್ಕೊಳಗಾದ ಜನ ನಿರಂತರವಾಗಿ ದನದ ಮಾಂಸ ತಿನ್ನುವುದರಿಂದ ಪಾತಕ ಜನರಾಗಿ ಬಿಡುತ್ತಾರೆ.



> ಒಮ್ಮೆ ಈ ದನ ಪೂಜನೀಯವಾದಲ್ಲಿ ಮತ್ತು ತುಳಿತಕ್ಕೊಳಗಾದ ಜನ ದನದ ಮಾಂಸ ತಿನ್ನುವುದರಿಂದ ಆ ಜನ ಸಂಘ ಬದುಕಿಗೆ ಹೊರತಾಗಿ ಅಸ್ಪೃಶ್ಯರಾಗಿ ಬಿಡುತ್ತಾರೆ...ಬ್ರಾಹ್ಮಣರು ದನದ ಮಾಂಸ ತಿನ್ನುವುದನ್ನು ಬಿಟ್ಟಾಗ, ಬ್ರಾಹ್ಮಣೇತರರು ಅವರನ್ನು ಅನುಸರಿಸಿದಂತೆ ಈ ದಮನಕ್ಕೊಳಗಾದ ಜನರೇಕೆ ಹಾಗೆ ಮಾಡಲಿಲ್ಲ?
>
> ○ ಡಾ. ಬಿ.ಆರ್. ಅಂಬೇಡ್ಕರ್

ಒಮ್ಮೆ ಈ ದನ ಪೂಜನೀಯವಾದಲ್ಲಿ ಮತ್ತು ತುಳಿತಕ್ಕೊಳಗಾದ ಜನ ದನದ ಮಾಂಸ ತಿನ್ನುವುದರಿಂದ ಆ ಜನ ಸಂಘ ಬದುಕಿಗೆ ಹೊರತಾಗಿ ಅಸ್ಪೃಶ್ಯರಾಗಿ ಬಿಡುತ್ತಾರೆ...ಬ್ರಾಹ್ಮಣರು ದನದ ಮಾಂಸ ತಿನ್ನುವುದನ್ನು ಬಿಟ್ಟಾಗ, ಬ್ರಾಹ್ಮಣೇತರರು ಅವರನ್ನು ಅನುಸರಿಸಿದಂತೆ ಈ ದಮನಕ್ಕೊಳಗಾದ ಜನರೇಕೆ ಹಾಗೆ ಮಾಡಲಿಲ್ಲ? ಈ ಜನರನ್ನೇಕೆ ದನದ ಮಾಂಸ ತಿನ್ನುವುದರಿಂದ ನಿಷೇಧಿಸಲಾಗಿಲ್ಲ? ಹಾಗೇನಾದರೂ ದನದ ಮಾಂಸ ತಿನ್ನುವುದನ್ನು ನಿಷೇಧಿಸಿದಲ್ಲಿ ಅಸ್ಪೃಶ್ಯತಾ ಆಚರಣೆಯು ಕೂಡಾ ಇಲ್ಲವಾಗುತ್ತಿತ್ತು. ಮೊದಲ ಪ್ರಶ್ನೆಗೆ ಉತ್ತರವೆಂದರೆ ಯಾವಾಗ ದನದ ಮಾಂಸ ತಿನ್ನುವುದು ಸಾಮಾನ್ಯವಾಗಿತ್ತೋ ಆಗಲೂ ನೆಲೆನಿಂತ ಬುಡಕಟ್ಟು ಜನ ಮತ್ತು ದಮನಕ್ಕೊಳಗಾದ ಜನರ ಮಧ್ಯೆ ಒಂದು ವ್ಯವಸ್ಥೆ ತಲೆಯೆತ್ತಿದ್ದು, ಈ ನೆಲೆನಿಂತ ಸಮುದಾಯವು ತಾಜಾ ಮಾಂಸವನ್ನು ತಿಂದರೆ, ದಮನಕ್ಕೊಳಗಾದ ಜನ ಸತ್ತ ದನದ ಮಾಂಸವನ್ನು ತಿನ್ನುತ್ತಾರೆ. ಆದರೆ ದಮನಿತ ಜನಕ್ಕೆ ಸಂಬಂಧಿಸಿದಂತೆ, ಸತ್ತ ದನವು ಈ ಜನರ ವಿಶಿಷ್ಟ ಆಸ್ತಿ ಮತ್ತು ಅಗತ್ಯವಾಗಿ ಬಿಡುವುದರಿಂದ ನಮಗೆ ನಕಾರಾತ್ಮಕ ಸಾಕ್ಷಿ ದೊರೆಯುತ್ತದೆ...ಮಹಾರಾಷ್ಟ್ರದ ಮಹಾರ್ ಜನಾಂಗವು ಈ ಸತ್ತ ಪ್ರಾಣಿಗೆ ಹಕ್ಕನ್ನು ಸ್ಥಾಪಿಸುತ್ತಾರೆ...ಯಾವಾಗ ದನದ ಮಾಂಸ ತಿನ್ನುವುದು ಸರ್ವೇ ಸಾಮಾನ್ಯವಾಗಿತ್ತೋ ಆಗ ಮಹಾರ್ ಜನಾಂಗವು ಸತ್ತ ದನವನ್ನು ತಿನ್ನುತ್ತಿದ್ದರು ಮತ್ತು ಹಿಂದೂಗಳು ತಾಜಾ ದನವನ್ನು ಭಕ್ಷಿಸುತ್ತಿದ್ದರು...

ದಮನಿತ ಜನ ಸತ್ತ ದನದ ಮಾಂಸ ತಿನ್ನುವುದು ಮತ್ತು ನೆಲೆನಿಂತ ಬುಡಕಟ್ಟುಗಳು ತಾಜಾ ಮಾಂಸವನ್ನು ತಿನ್ನುವ ರೂಢಿಯು ಪುರಾತನ ಕಾಲದಿಂದಲೇ ಬೆಳೆದುಬಂದಿರಬಹುದು. ಅಂತಹದೊಂದು ತರ್ಕವು ಬೆಳೆಯುವುದು ಮತ್ತು ಬೆಳೆಸುವುದು ಸಹಜವೆಂದೇ ಹೇಳಬೇಕು. ನೆಲೆನಿಂತ ಸಮುದಾಯವು ಬೇಸಾಯ ಮತ್ತು ಪಶುಪಾಲನೆಯಿಂದಾಗಿ ಸಮೃದ್ಧ ಸಮುದಾಯವಾಗಿರುತ್ತದೆ. ದಮನಿತ ಸಮುದಾಯವು ಬದುಕಿನ ನೆಲೆಗಳನ್ನು ಕಳೆದುಕೊಂಡು ಈ ನೆಲೆನಿಂತ ಸಮುದಾಯದ ಮೇಲೆ ಪೂರ್ಣವಾಗಿ ಅವಲಂಬಿತವಾಗಿರುತ್ತದೆ. ಇವರಿಬ್ಬರಿಗೂ ಮುಖ್ಯವಾದ ಆಹಾರವೆಂದರೆ ದನ. ನೆಲೆನಿಂತ ಸಮುದಾಯಕ್ಕೆ ಆಹಾರಕ್ಕಾಗಿ ಪ್ರಾಣಿಯನ್ನು ಕೊಲ್ಲುವುದು ಸಾಧ್ಯವಾಗಿರುತ್ತದೆ. ಯಾಕೆಂದರೆ ಅದು ಅವರಿಗೆ ಸೇರಿದ್ದು. ದಮನಿತ ಜನಕ್ಕೆ ಹಾಗೇ ಮಾಡಲಾಗುವುದಿಲ್ಲ. ಯಾಕೆಂದರೆ ಅದನ್ನು ಅವರು ಹೊಂದಿರುವುದಿಲ್ಲ.

ಈ ಪರಿಸ್ಥಿತಿಗಳಲ್ಲಿ ನೆಲೆನಿಂತ ಸಮುದಾಯವು ಪ್ರಾಣಿಯೊಂದನ್ನು ಕೊಲ್ಲುವುದು, ದಮನಿತ ಜನಕ್ಕೆ ಸತ್ತ ಪ್ರಾಣಿಯನ್ನು ಕೊಡಲು ಒಪ್ಪಿರುವುದು ಅವರು ಮಾಡುವ ಕೆಲಸಕ್ಕಾಗಿ ಕೂಲಿ ಇರಬಹುದೆಂದು ಭಾವಿಸುವುದು ಅಸಹಜವೆಂದು ತಿಳಿಯಬೇಕೇ? ಖಂಡಿತವಾಗಿಯೂ ಅಲ್ಲ. ಆದ್ದರಿಂದ ಪುರಾತನ ಕಾಲದಲ್ಲಿ ನೆಲೆನಿಂತ ಸಮುದಾಯ ಮತ್ತು ದಮನಿತ ಜನ ದನದ ಮಾಂಸವನ್ನು ತಿನ್ನುವುದು ಸಾಮಾನ್ಯವಾಗಿ, ನೆಲೆನಿಂತವರು ತಾಜಾ ದನದ ಮಾಂಸವನ್ನು ತಿಂದರೆ ಉಳಿದವರು ಸತ್ತ ದನವನ್ನು ತಿನ್ನುವಂತಹ ವ್ಯವಸ್ಥೆಯು ಭಾರತದಾದ್ಯಂತವೂ ಇದ್ದಂತಹ ಒಂದು ಸಾಮಾನ್ಯ ಸಂಗತಿ. ●

(ಬರಹಗಳು ಮತ್ತು ಭಾಷಣಗಳು ; ಸಂ. 7, 1990, ಪು. 350-354)

ವಾಜಪೇಯಿ ಮತ್ತು ಗೋರಕ್ಷಣೆ

ಹಿಮಾಚಲ ಪ್ರದೇಶದ ಚುನಾವಣೆ ಸಂದರ್ಭದಲ್ಲಿ ವಿರೋಧ ಪಕ್ಷಗಳು ಪ್ರಧಾನಿ ವಾಜಪೇಯಿಯವರು ಗೋಮಾಂಸ ತಿನ್ನುತ್ತಾರೆಂದು ಅವರ ಅನ್ನಾಹಾರಗಳನ್ನೂ ರಾಜಕೀಯ ಪ್ರಚಾರಕ್ಕೆ ಉಪಯೋಗಿಸಿರುವುದು ತಪ್ಪು. ಆದರೆ ಅದಕ್ಕೆ ಉತ್ತರಕೊಡುತ್ತಾ ವಾಜಪೇಯಿಯವರು ಆಡಿರುವ ಮಾತುಗಳು ಮತ್ತು ತಳೆದಿರುವ ನಿಲುವು ಅವರ ಘನತೆಗೆ ತಕ್ಕುದಲ್ಲವೆಂದು ಅನ್ನಿಸುತ್ತದೆ.

ಒಂದು ತಿಂಗಳ ಹಿಂದಷ್ಟೆ ವರ್ಷಾರಂಭದ ಸಂದರ್ಭದಲ್ಲಿ ವಾಜಪೇಯಿ ಹಿಂದುತ್ವದ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಹಿಂದೂ ಧರ್ಮದ ಉದಾರವಾದಿ ಧೋರಣೆಗಳನ್ನು ಆಧರಿಸಿ ಹಿಂದುತ್ವ ಎಂದರೆ ಅದು ಭಾರತೀಯತೆ ಮಾತ್ರವೇ ಎಂದು ಹೇಳಿದ್ದರು. ಹಿಂದೂ ಮೂಲಭೂತವಾದಿಗಳಾದ ಇತರ ಸಂಘ ಪರಿವಾರದವರ ಆಟೋಪದಿಂದ ಗಾಬರಿಯಾಗಿದ್ದ ಎನ್.ಡಿ.ಎ. ಮಿತ್ರಪಕ್ಷಗಳಿಗೇನೋ ವಾಜಪೇಯಿಯವರ ಹಿಂದುತ್ವದ ವ್ಯಾಖ್ಯಾನ ಕೊಂಚ ಸಮಾಧಾನ ತಂದಿದ್ದಿರಬಹುದು. ಆದರೆ ಹಿಮಾಚಲ ಪ್ರದೇಶದಲ್ಲಿ ಓಟಿಗೋಸ್ಕರ ಮತ್ತು ಸಂಘ ಪರಿವಾರದವರ ಮನಃಸ್ಸಂತೋಷಕ್ಕಾಗಿ ಅವರು ಗೋಮಾಂಸ ತಿನ್ನುವುದರ ಬದಲು ಪ್ರಾಣವನ್ನಾದರೂ ಬಿಟ್ಟೇನು ಆದರೆ ಗೋಮಾಂಸ ತಿನ್ನುವುದಿಲ್ಲ ಎಂದಿದ್ದಾರೆ.

ಅಷ್ಟಲ್ಲದೆ ಗೋಹತ್ಯೆ ನಿಷೇಧವನ್ನು ಇಡೀ ದೇಶಕ್ಕೆ ಅನ್ವಯವಾಗುವಂತೆ ಕಾನೂನು ಮಾಡಿ ಕಟ್ಟುನಿಟ್ಟಾಗಿ ಅದನ್ನು ಜಾರಿಗೊಳಿಸಲಾಗುವುದೆಂದು ಹೇಳಿದ್ದಾರೆ. ಇದರ ಸಾಧಕ ಬಾಧಕಗಳನ್ನು ಸಾಧ್ಯಾಸಾಧ್ಯತೆಗಳನ್ನು ಆಮೇಲೆ ಯೋಚಿಸೋಣ. ಈಗ ತಾವು ಗೋಮಾಂಸ ಈವರೆಗೂ ತಿನ್ನದಿರುವುದೇ ಬಹು ದೊಡ್ಡ ಆಧ್ಯಾತ್ಮಿಕ ಸಾಧನೆ ಎಂಬ ಅವರ ಮೊದಲ ಹೇಳಿಕೆ ಕುರಿತು ಯೋಚಿಸೋಣ. ವೈದಿಕ ಮನಸ್ಸು ಗೋಮಾಂಸ ತಿನ್ನುವವರು ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಮಾತ್ರ ಎಂದು ತಿಳಿದಿರುವಂತಿದೆ. ಗೋಮಾಂಸ ನಿಷೇಧವನ್ನು ರಾಷ್ಟ್ರದಾದ್ಯಂತ ಕಡ್ಡಾಯ ಮಾಡಿದರೆ ಹಿಂದುತ್ವವನ್ನು ಮುಸಲ್ಮಾನರಿಗೂ ಕ್ರಿಶ್ಚಿಯನ್ನರಿಗೂ ಕಡ್ಡಾಯ ಮಾಡಿದಂತಾಗುತ್ತದೆಂದು ಅವರ ಊಹೆ. ಹಿಂದುಗಳಲ್ಲಿ ಬಹುಸಂಖ್ಯಾತ ಶೂದ್ರರೂ ದಲಿತರೂ ಗೋಮಾಂಸಾಹಾರ ಮಾಡುತ್ತಾರೆಂಬುದನ್ನೂ, ಒಂದು ಕಾಲದಲ್ಲಿ ವೈದಿಕರೂ ಗೋಮಾಂಸ ತಿನ್ನುತ್ತಿದ್ದರೆಂಬುದನ್ನೂ ಸಂಘ ಪರಿವಾರವಾಗಲಿ, ಸಾಧು ಸಂಸತ್ ಆಗಲೀ ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ವಾಜಪೇಯಿಯವರ ಘೋಷಣೆಯ ಹಿನ್ನೆಲೆಯಲ್ಲೇ ತೊಗಾಡಿಯ ನೇತೃತ್ವದಲ್ಲಿ ನೆರೆದಿದ್ದ ಸಾಧು ಸಂಸತ್ ಗೋವಧೆ ಮಾಡುವವರಿಗೆ ಮರಣದಂಡನೆ ವಿಧಿಸಬೇಕೆಂದು ಆಗ್ರಹಪಡಿಸಿದೆ.

ಶೂದ್ರರಲ್ಲೂ ದಲಿತರಲ್ಲೂ ಬಹಳಷ್ಟು ಜನ ಈಗ ಗೋಮಾಂಸ ತಿನ್ನದಿರಬಹುದು. ಆದರೆ ತಾತ್ವಿಕವಾಗಿ ಇವರಾರಿಗೂ ಗೋಮಾಂಸ ನಿಷಿದ್ಧ ಅಲ್ಲ. ಈ ದೇಶದಲ್ಲಿ ಧರ್ಮ, ನಂಬುಗೆಗಳಲ್ಲಿ ಎಷ್ಟು ವೈವಿಧ್ಯತೆ ಇದೆಯೋ ಆಹಾರದಲ್ಲೂ ಅಷ್ಟೇ ಇದೆ. ನಾಯಿ, ಹಾವು, ಉಡ, ಓತಿಕ್ಯಾತ, ಮಳೆ ಹುಳು, ಕೆಂಜಿಗೆ, ಇರುವೆ, ಇಲಿ, ಹೆಗ್ಗಣ, ಬೆಕ್ಕು ಇವನ್ನೆಲ್ಲಾ ತಿನ್ನುವ ಅನೇಕ ಜಾತಿಗಳಿವೆ. ಇದನ್ನು ನಾನೇನೂ ಕೇವಲ ತರ್ಕಕ್ಕಾಗಿ ಮಂಡಿಸುತ್ತಿಲ್ಲ. ಇವುಗಳಲ್ಲಿ ಅರ್ಧದಷ್ಟು ಪ್ರಾಣಿಗಳ ಮಾಂಸವನ್ನು ನಾನೇ ಕುತೂಹಲಕ್ಕೆಂದು ರುಚಿ ನೋಡಿರುವುದರಿಂದ ಇವನ್ನು ಆಹಾರಕ್ಕೆ ಉಪಯೋಗಿಸುವುದು ಸತ್ಯವೆಂದು ಪ್ರಮಾಣೀಕರಿಸಿ ಹೇಳಬಲ್ಲೆ. ಹಾಗೇ ಈ ಅಷ್ಟು ಪ್ರಾಣಿಗಳನ್ನೂ ಪೂಜಿಸುವ ಅನೇಕ ಜಾತಿಗಳಿವೆ.

ವಾಸ್ತವವಾಗಿ ಈಗಿರುವ ಆಯ್ಕೆ ದನವನ್ನು ತಿನ್ನಬಹುದೋ, ಹಾವನ್ನು ತಿನ್ನಬಹುದೋ, ನಾಯಿಯನ್ನೋ, ಬೆಕ್ಕನ್ನೋ ಎನ್ನುವುದರಲ್ಲಿ ಇಲ್ಲ. ವೈದಿಕರು ಪೂಜಿಸಿದ ಮಾತ್ರಕ್ಕೆ ಕೆಲವಕ್ಕೆ ಕಾನೂನಿನ ರಕ್ಷಣೆ ಒದಗಿಸುವುದು! ಬೇರೆಯವಕ್ಕೆ ನಿರಾಕರಿಸುವುದು ! ಇದು ತತ್ವಮೀಮಾಂಸೆಯ ಮರ್ಜಿಯೇ ಅಲ್ಲ. ಗೌತಮ ಬುದ್ಧ ಹೇಳಿದಂತೆ ಆಹಾರಕ್ಕಾಗಿ ಕೊಲ್ಲುವುದು ಸರಿಯೋ ತಪ್ಪೋ ಎನ್ನುವುದಷ್ಟೆ ವಾಜಪೇಯಿಯವರ ಮುಂದಿರುವ ಪ್ರಶ್ನೆ. ವಾಜಪೇಯಿ ಗೋಮಾಂಸ ಭಕ್ಷಣೆಯನ್ನು

(17ನೇ ಪುಟಕ್ಕೆ)

ಸೌಜನ್ಯ : ದಿ ಹಿಂದೂ

ವರ್ಷಾರಂಭದಲ್ಲಿ ವಾಜಪೇಯಿ ಪ್ರತಿಪಾದಿಸಿದ ವಿಶಾಲ ಉದಾರವಾದಿ ಹಿಂದುತ್ವಕ್ಕೂ ಈಗ ಚುನಾವಣೆ ಕಣದಲ್ಲಿ ಪ್ರತಿಪಾದಿಸುತ್ತಿರುವ ಹಿಂದುತ್ವಕ್ಕೂ ಯಾವ ಸಂಬಂಧವೂ ಕಾಣುತ್ತಿಲ್ಲ. ವೈದಿಕ ಧರ್ಮದ ಮೌಲ್ಯಗಳನ್ನು ಎಲ್ಲರ ಮೇಲೂ ಹೇರುತ್ತಾ ಈ ಬ್ರಾಹ್ಮಣೀಕರಣವನ್ನು ಹಿಂದುತ್ವ ಎಂದು ಕರೆಯುತ್ತಿರುವುದು ಕುತಂತ್ರದ ರಾಜಕಾರಣ. ಈ ಧೋರಣೆಯನ್ನು ನಾವು ಹಿಂದುತ್ವ ಎಂದು ಒಪ್ಪಿಕೊಳ್ಳುವುದಾದರೆ ಬಹು ಬೇಗ ಜಾತಿ ಪದ್ಧತಿ, ಅಸ್ಪೃಶ್ಯತೆ, ಸ್ತ್ರೀ ಅಸಮಾನತೆ, ಸತಿ ಪದ್ಧತಿ ಇತ್ಯಾದಿ ಸನಾತನ ಮೌಲ್ಯಗಳ, ಇವರ ನೂತನ ಆವೃತ್ತಿಗಳನ್ನೂ ಒಪ್ಪಿಕೊಂಡು ಭಾರತದ ಸಂವಿಧಾನಕ್ಕೆ ತಿಲಾಂಜಲಿ ಕೊಡಬೇಕಾಗುತ್ತದೆ.

○ ಕೆ.ಪಿ. ಪೂರ್ಣಚಂದ್ರ ತೇಜಸ್ವಿ

'ಅಸ್ಪೃಶ್ಯತೆ' ದಲಿತರ ಸಮಸ್ಯೆಯೆ?



ದಕ್ಷಿಣ ಆಫ್ರಿಕಾದ ಡರ್ಬಾನ್‌ನಲ್ಲಿ ಜರುಗಿದ 'ಜನಾಂಗೀಯವಾದ, ವರ್ಣಭೇದ ಮತ್ತು ಅಸಹಿಷ್ಣುತೆ ಕುರಿತಾದ ವಿಶ್ವ ಸಮಾವೇಶದಲ್ಲಿ ಭಾಗವಹಿಸಲು ಭಾರತ ಸರ್ಕಾರವು ರಾಷ್ಟ್ರೀಯ ಸಮಿತಿಯೊಂದನ್ನು ರಚಿಸಿತ್ತು. ಅದರಲ್ಲಿ ಖ್ಯಾತ ಸಾಹಿತಿ ದೇವನೂರ ಮಹಾದೇವ ಕೂಡಾ ಒಬ್ಬರು. ಈ ಸಮಾವೇಶದ ಕಾರ್ಯಸೂಚಿಯಲ್ಲಿ ಹುಟ್ಟಿನ ನೆಲೆಯಿಂದ ಬಂದ ತಾರತಮ್ಯ ಮತ್ತು ಅಸಹಿಷ್ಣುತೆಯೂ ಸೇರಿದ್ದುದರಿಂದ ಭಾರತದ 'ಅಸ್ಪೃಶ್ಯತೆ'ಯೂ ಸೇರಬೇಕೆಂಬುದು ಸಹಜವಾಗಿಯೇ ಪ್ರಗತಿ ಪರರೆಲ್ಲರವಾದವಾಗಿತ್ತು. ಆದರೆ ವಾಜಪೇಯಿ ಸರ್ಕಾರ ಮಾತ್ರ ಅದನ್ನು 'ಭಾರತದ ಆಂತರಿಕ ಸಮಸ್ಯೆಯಾದ್ದರಿಂದ ವಿಶ್ವವೇದಿಕೆಯಲ್ಲಿ ಅದನ್ನು ಚರ್ಚಿಸುವುದು ಸೂಕ್ತವಲ್ಲ' ಎಂದು ಹೇಳಿತು. ಸರ್ಕಾರದ ಬದಲಾಗದ ಧೋರಣೆಯನ್ನು ವಿರೋಧಿಸಿ ದೇವನೂರು ಮಹಾದೇವರವರು ರಾಜೀನಾಮೆ ನೀಡಿದರು. ಆಗಸ್ಟ್ 3 ಮತ್ತು 4ರಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮತ್ತು ನ್ಯಾಷನಲ್ ಸ್ಕೂಲ್ ಆಫ್ ಇಂಡಿಯಾ ಜಂಟಿಯಾಗಿ ಏರ್ಪಡಿಸಿದ್ದ ವಿಚಾರದ ಸಂಕಿರಣದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ದೇವನೂರು 'ಭಾರತದ ಅಸ್ಪೃಶ್ಯತೆ'ಯ ಕುರಿತಂತೆ ಮಾಡಿದ ಉಪನ್ಯಾಸದ ಪೂರ್ಣ ಪಾಠವೇ ಈ ಲೇಖನ.

○ ದೇವನೂರ ಮಹಾದೇವ

ನಾನು ಜನಾಂಗೀಯವಾದ ಕುರಿತ ಭಾರತ ಸರ್ಕಾರದ ರಾಷ್ಟ್ರೀಯ ಸಮಿತಿಯ ಸದಸ್ಯನಾಗಿದ್ದೇನೆ. ಆದರೆ ನಾನೀಗ ನನ್ನ ವೈಯಕ್ತಿಕ ಅಭಿಪ್ರಾಯಗಳನ್ನು ತಮ್ಮ ಮುಂದೆ ಇಡುತ್ತಿರುವೆ, ಕ್ಷಮಿಸಿ,

ಮೊದಲಿಗೆ, ದಕ್ಷಿಣ ಆಫ್ರಿಕಾ ಸರ್ಕಾರದ ಪ್ರತ್ಯೇಕತಾ ಅಪಾರ್ಥೈಡ್ ಕಾನೂನುಗಳು ಕೊನೆಗೊಳ್ಳುವಂತಾಗಲು ಸತತವಾಗಿ ಪ್ರಯತ್ನಿಸಿದ ವಿಶ್ವಸಂಸ್ಥೆಯನ್ನೂ ಈ ಪ್ರಯತ್ನದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಭಾರತವನ್ನೂ ಕೃತಜ್ಞತೆಯಿಂದ ನೆನೆಯುವೆ. ದಕ್ಷಿಣ ಆಫ್ರಿಕಾದಲ್ಲಿ ಅಪಾರ್ಥೈಡ್ ಕಾನೂನುಗಳು ಕೊನೆಯಾದುದರಿಂದ ಪ್ರತ್ಯೇಕತೆ ತಾರತಮ್ಯಗಳನ್ನು ಕಾನೂನುಗೊಳಿಸಿ, ಕುಬ್ಜರಾಗಿದ್ದ ಅಲ್ಲಿನ ಬಿಳಿಯರ, ಘನತೆ ಹೆಚ್ಚಿದಂತಾಯ್ತು ಹಾಗೂ ಸಮಾನತೆಯ ಕಡೆಗೆ ಒಂದು ಹೆಜ್ಜೆ ಇಟ್ಟಂತಾಯ್ತು.

ಈಗ ಜನಾಂಗೀಯವಾದ, ಜನಾಂಗೀಯ ಭೇದಕ್ಕೆ ಸಂಬಂಧಿಸಿದ ವಿಶ್ವಸಂಸ್ಥೆಯ ಮೂರನೇ ವಿಶ್ವ ಸಮ್ಮೇಳನವು ಆಫ್ರಿಕಾದ ಡರ್ಬಾನ್‌ನಲ್ಲಿ ನಡೆಯಲಿದೆ. ಈ ಮೂರನೇ ಸಮ್ಮೇಳನವು 'ಜನಾಂಗ' ಎಂಬ ಪದವನ್ನು ಜನಪ್ರಿಯ ಮಾನವ ಶಾಸ್ತ್ರಜ್ಞರ ಶಾರೀರಕ ಲಕ್ಷಣದ ಸಂಕುಚಿತಾರ್ಥದಲ್ಲಿ ಬಳಸದೆ ವಿಶಾಲವಾದ ಅರ್ಥದಲ್ಲಿ ಗ್ರಹಿಸಿದೆ. ಅಂದರೆ 'ಇರುವುದೊಂದೇ ಜನಾಂಗ-ಮಾನವ ಜನಾಂಗ' ಎಂಬುದು ಸಮ್ಮೇಳನದ ಗ್ರಹಿಕೆಯಾಗಿದೆ. ಮಾನವ ಜನಾಂಗದೊಳಗಿನ ಸಾಂಸ್ಥಿಕ ತಾರತಮ್ಯ ನಿವಾರಣೆ ಕಡೆಗೆ ಹೆಚ್ಚು ಗಮನ ಕೊಡಲಾಗಿದೆ. ಜೊತೆಗೆ ಈ ಸಮ್ಮೇಳನದ ಚರ್ಚೆಯ ವ್ಯಾಪ್ತಿಯಲ್ಲಿ Descent (ಹುಟ್ಟಿನಿಂದಲೇ ತಾರತಮ್ಯ) ಸೇರ್ಪಡೆಯಾಗಿದೆ.

ಭಾರತದಲ್ಲಿ ಚಾತುರ್ವರ್ಣ ವ್ಯವಸ್ಥೆ ಇದ್ದಾಗಲೂ ಆ ವ್ಯವಸ್ಥೆಯಿಂದ ಆಚೆ ನೂಕಲ್ಪಟ್ಟು ವರ್ಣ ಬಾಹ್ಯರಾದವರು ಅಸ್ಪೃಶ್ಯರು, ಜಾತಿ ಪದ್ಧತಿಯಿಂದಲೂ ಆಚೆ ನೂಕಲ್ಪಟ್ಟು Out Caste ಆದವರು ಅಸ್ಪೃಶ್ಯರು. ಆದ್ದರಿಂದ ಹುಟ್ಟು ಕಾರಣವಾಗಿ ಸಾಮಾಜಿಕ ವ್ಯವಸ್ಥೆಯಿಂದಲೇ ಹೊರಹಾಕಲ್ಪಟ್ಟು 'ಹೀನವೃತ್ತಿ'ಯ ಕಾರಣದಿಂದಲೂ ಪ್ರತ್ಯೇಕತೆ ಭೇದ ನಿರ್ಬಂಧಗಳಿಗೆ ಒಳಗಾಗಿರುವ ಭಾರತದ ಅಸ್ಪೃಶ್ಯ ಸಮುದಾಯದ ಸಮಸ್ಯೆಯೂ ವಿಶ್ವಸಂಸ್ಥೆಯ ಸಮ್ಮೇಳನದಲ್ಲಿ ಚರ್ಚಿತವಾಗಬೇಕಾಗುತ್ತದೆ.

ಆದರೆ ಇದಕ್ಕೆ ಭಾರತ ಸರ್ಕಾರ ಒಪ್ಪುತ್ತಿಲ್ಲ. ಜನಪ್ರಿಯ ಮಾನವಶಾಸ್ತ್ರಜ್ಞರ ಸಂಕುಚಿತ ಅರ್ಥದ ಶಾರೀರಿಕ ಲಕ್ಷಣದ Raceಗಳಿಗೆ ಸಂಬಂಧಿಸಿದ ತಾರತಮ್ಯ ಈ Decent ಎಂದು ಭಾರತ ಸರ್ಕಾರ ವಾದಿಸುತ್ತಿದೆ. ಈ ವಾದವನ್ನು ಒಪ್ಪಿಕೊಂಡರೆ ವಿಶ್ವಸಂಸ್ಥೆಯ ಪರಿಕಲ್ಪನೆಯಾದ 'ಇರುವುದೊಂದೆ ಜನಾಂಗ ಮಾನವ ಜನಾಂಗ' ಎಂಬುದನ್ನು ನಿರಾಕರಿಸಿದಂತಾಗುತ್ತದೆ. ಈ ಬಿಕ್ಕಟ್ಟು ನಮ್ಮ ಮುಂದಿದೆ.

ಪದ, ವಾದಗಳನ್ನು ಸದ್ಯಕ್ಕೆ ಕೈಬಿಡೋಣ. ದಕ್ಷಿಣ ಆಫ್ರಿಕಾದಲ್ಲಿ ಬಣ್ಣ ಮತ್ತು ವಸಾಹತುಶಾಹಿ ಕಾರಣಕ್ಕಾಗಿ ಉಂಟಾದ ತಾರತಮ್ಯವಾದ ಅಪಾರ್ಥೈಡ್ ಅನ್ನೂ ಹಾಗೂ ಭಾರತದಲ್ಲಿ ಜಾತಿ ಪದ್ಧತಿ ಕಾರಣಕ್ಕಾಗಿ ಉಂಟಾದ ತಾರತಮ್ಯ ಅಸ್ಪೃಶ್ಯತೆಯನ್ನೂ ಹೋಲಿಸಿ ನೋಡಿದರೆ ಎರಡರ ನಡುವೆ ಇರುವ ಸಾಮ್ಯ ದಿಗ್ಭ್ರಮೆ ಹುಟ್ಟಿಸುತ್ತವೆ.

1948ರಿಂದ 1990ರವರೆಗೆ ದಕ್ಷಿಣ ಆಫ್ರಿಕದ ಬಿಳಿಯರ ಸರ್ಕಾರವು ಅಲ್ಲಿನ ಕರಿಯರನ್ನು ನಿಷೇಧ, ಭೇದ, ನಿರ್ಬಂಧ, ಪ್ರತ್ಯೇಕತೆಗೆ ಒಳಪಡಿಸಲು ರಚಿಸಿದ ಕೆಲವು ಕಾನೂನು ಕಟ್ಟಳೆಗಳು ಹೀಗಿವೆ : 1. ಕರಿಯರ ವಾಸಸ್ಥಾನ, ಶಾಲೆಗಳಿಗೆ ಪ್ರತ್ಯೇಕ ಸ್ಥಳ ನಿಗದಿ ಕಾನೂನು. 2. ಬಿಳಿ ಕರಿಯರ ನಡುವೆ ಮದುವೆ ಸಂಬಂಧ ನಿಷೇಧ ಕಾನೂನು. 3. ಹೋಟೆಲ್ ಕ್ಲಬ್ ಇತ್ಯಾದಿ ಸಾರ್ವಜನಿಕ ಸ್ಥಳಗಳಿಗೆ ಕರಿಯರ ಪ್ರವೇಶ ನಿಷೇಧ ಕಾನೂನು. 4. ಕರಿಯ ವ್ಯಕ್ತಿ ಪಾಸ್ ಹೊಂದಿರಬೇಕೆಂಬ ನಿಯಮ. 5. ಭಾರತದ ಅಸ್ಪೃಶ್ಯರ ಒಳಪಂಗಡಗಳ ವಿಂಗಡಣೆಯಂತೆಯೇ ಕರಿಯರನ್ನು ಮೂರು ಗುಂಪಾಗಿ ಪ್ರತ್ಯೇಕಿಸುವ ಕಾನೂನು 6. ಸಾರ್ವಜನಿಕ ರಾಜಕೀಯ ಹಕ್ಕು ನಿವಾರಣೆ....ಇತ್ಯಾದಿ.

ಹೆಚ್ಚೂ ಕಮ್ಮಿ ಇಂಥವೇ ಭಾರತದಲ್ಲಿ ರಾಜರ ಆಳ್ವಿಕೆಯಲ್ಲಿ ಕಾನೂನು ಕಟ್ಟಳೆಗಳು ಇರಲಿಲ್ಲವೇ? ಅಪಾರ್ಥೈಡ್, ಕಾನೂನಿನಲ್ಲಿ ಕರಿಯರಿಗೆ ಪ್ರತ್ಯೇಕ ಶಾಲೆ ಶಿಕ್ಷಣವಾದರೂ ಇತ್ತು. ಭಾರತದಲ್ಲಿ ಅಸ್ಪೃಶ್ಯರು ಶೂದ್ರರು ಶಿಕ್ಷಣ ಪಡೆಯುವುದೂ ಶಿಕ್ಷಾರ್ಹ ಅಪರಾಧವಾಗಿತ್ತು. ಆಗ ಆಡಳಿತ ನಿರ್ವಹಣೇ ಅಂದರೆ

ಚಾತುರ್ವರ್ಣ ಜಾತಿ ಪದ್ಧತಿಯ ತಾರತಮ್ಯಗಳು ಚಾಚು ತಪ್ಪದೆ ನಡೆಯುವಂತೆ ನೋಡಿಕೊಳ್ಳುವುದೇ ಆಗಿತ್ತು.

ಆದರೆ ಇತ್ತೀಚಿನದಾದುದರಿಂದ ದಕ್ಷಿಣ ಆಫ್ರಿಕಾದ ಅಪಾರ್ಥೈಡ್‌ನ ಹಸಿಯಾದ ಗಾಯ, ಅಲ್ಲಿಂದ ತೊಟ್ಟಿಕ್ಕುತ್ತಿರುವ ರಕ್ತ ನಮಗೆ ಕಾಣಿಸುತ್ತಿದೆ. ಅಪಾರ್ಥೈಡ್‌ನ ತಾರತಮ್ಯ ಕಾನೂನುಗಳನ್ನು ಪ್ರತಿಭಟಿಸಿದ್ದಕ್ಕೆ ಸಾವಿರಾರು ಜನ ಕರಿಯರ ಹತ್ಯೆಯಾಯ್ತು. ಹತ್ತಾರು ಸಾವಿರ ಜನರು ಜೈಲಲ್ಲಿ ಕೊಳೆಯುವಂತಾಯ್ತು. ಪ್ರತಿಭಟನೆ ತೀವ್ರಗೊಂಡಾಗ ಒಟ್ಟಿಗೆ ಹತ್ತಾರು ಜನ ಕರಿಯರು ಸೇರುವುದೂ ಅಪರಾಧ ಎನ್ನುವ ಮಟ್ಟಕ್ಕೆ ಹೋಯ್ತು. ಕಾನೂನೇ ಅಪರಾಧಿಯಾದಾಗ ಏನೆಲ್ಲಾ ಅವಾಂತರ ಆಗಬಹುದೋ ಅವೆಲ್ಲಾ ಆಯ್ತು.

ಈ ಭೀಕರವನ್ನು ನೆನೆಸಿಕೊಂಡಾಗಲೆಲ್ಲಾ ನನಗೆ ಪುರಾತನ ಭಾರತದಲ್ಲಿ ಚಾತುರ್ವರ್ಣ ಜಾತಿಪದ್ಧತಿಯಿಂದ ಒಂದು ಜನ ಸಮುದಾಯವನ್ನು ಆಚೆಗೆ ನೂಕಿ ಎಸೆದು ಅಸ್ಪೃಶ್ಯತೆಗೆ ಒಪ್ಪಿಸಿ ಒಗ್ಗಿಸಲು ನಡೆದಿರಬಹುದಾದ ಬಲಾತ್ಕಾರ, ಕ್ರೌರ್ಯ ಹಿಂಸೆ ಹತ್ಯೆಗಳೇ ದಕ್ಷಿಣ ಆಫ್ರಿಕಾದಲ್ಲಿ ವರ್ತಮಾನದಲ್ಲಿ ಅಪಾರ್ಥೈಡ್ ರೂಪದಲ್ಲಿ ಪುನರಾವರ್ತನೆ ಆದಂತೆ ಅನ್ನಿಸುತ್ತದೆ.

ಆನೆ ಹಿಡಿಯುವ ಖೆಡ್ಡಾ ನಿಮಗೆ ತಿಳಿದಿರಬಹುದು. ಕಾಡಲ್ಲಿ ದೊಡ್ಡ ಹಳ್ಳ ಮಾಡಿ, ಕಡ್ಡಿ ಸೊಪ್ಪು ಸೊದೆಯಲ್ಲಿ ಹಳ್ಳದ ಮೇಲ್ಭಾಗವನ್ನು ಛಾವಣಿಯಂತೆ ಮಾಡಿ ಹಳ್ಳ ಕಾಣದಂತೆ ಮಾಡುತ್ತಾರೆ. ನಂತರ ಶಬ್ದ ಮಾಡಿ ಆ ಹಳ್ಳದತ್ತ ಆನೆ ಓಡಾಡುವಂತೆ ಮಾಡುತ್ತಾರೆ. ಹಳ್ಳದತ್ತ ಹೋದ ಆನೆ ಹಳ್ಳ ಎಂದು ಅರಿಯದೆ ಹಳ್ಳಕ್ಕೆ ಬೀಳುತ್ತದೆ. ಬಿದ್ದ ಆನೆಗೆ ಸರಪಳಿ ಕಟ್ಟಿ ಬಂಧಿಸುತ್ತಾರೆ. ಬಂಧಿಸಿದ ಆನೆಯನ್ನು ಮೇಲೆತ್ತಿ ಹೊಡೆದು ಬಡಿದು ಹಿಂಸಿಸಿ ಪಳಗಿಸುತ್ತಾರೆ. ಪಳಗಿದ ಆನೆ ತನ್ನ ಸಹಜ ಸ್ವಭಾವ ಮರೆತು ಪಳಗಿಸಿದವನ ನಮ್ರ ಸೇವಕನಾಗುತ್ತದೆ. ಸೇವಕತನವೇ ಅದರ ಸ್ವಭಾವವಾಗುತ್ತದೆ. ದಕ್ಷಿಣ ಆಫ್ರಿಕಾದ ಕರಿಯರೆಂಬ ಆನೆಯನ್ನು ಹಳ್ಳಕ್ಕೆ ಬೀಳಿಸಲಾಯ್ತು. ಬಂಧಿಸಿಯೂ ಆಯ್ತು. ಹೊಡೆದು, ಬಡಿದು ಹಿಂಸಿಸಿ ಪಳಗಿಸಲು ಪ್ರಯತ್ನಿಸಲಾಯ್ತು. ಆದರೆ ದಕ್ಷಿಣ ಆಫ್ರಿಕಾದ ಕರಿಯರೆಂಬ ಆನೆ ಪಳಗಲಿಲ್ಲ. ಪಳಗಿದಿದ್ದಕ್ಕೆ ಹೆಚ್ಚಿನ ಹಿಂಸೆ, ಅನುಭವಿಸಬೇಕಾದ ಪರಿಸ್ಥಿತಿಯೂ ಉಂಟಾಗಿರಬಹುದು. ಆದರೆ ಭಾರತದ ಅಸ್ಪೃಶ್ಯರೆಂಬ ಆನೆ ಪಳಗಿಬಿಟ್ಟಿದೆ. ಇದು ಪುರಾತನ ಕಾಲದಲ್ಲೇ ಪಳಗಿಸಲ್ಪಟ್ಟ ಕಾರಣ, ಆ ಕ್ರೌರ್ಯ ನಮಗೆ ಕಾಣುತ್ತಿಲ್ಲ. ಜೊತೆಗೆ ಪಳಗಿಸಿದವನಿಗೂ ಈಗ ತಾನು ಪಳಗಿಸಿದವನು ಎಂಬ ನೆನಪಿಲ್ಲ. ಪಳಗಿಸಲ್ಪಟ್ಟವನಿಗೂ ತಾನು ಪಳಗಿಸಲ್ಪಟ್ಟವನು ಎಂಬ ನೆನಪಿಲ್ಲ. ತಾರತಮ್ಯವು ಸಮಾಜದಲ್ಲಿ ಆಂತರಿಕವಾಗಿ ವ್ಯಾಪಿಸಿ ಸಹಜ ಪದ್ಧತಿಯಾಗಿ ಬಿಟ್ಟಿದೆ.

ಯಾವುದು ಹೆಚ್ಚು ದಾರುಣವಾದುದು? ಇದನ್ನು ಹೇಗೆ ವಿವರಿಸೋಣ? ಪ್ರಾಥಮಿಕ ಹಂತದ ಅಸ್ಪೃಶ್ಯತೆಯನ್ನು ಅಪಾರ್ಥೈಡ್ ಎಂದೋ ಅಥವಾ ಅಪಾರ್ಥೈಡ್‌ನ ಮುತ್ತಜ್ಜ ಅಸ್ಪೃಶ್ಯತೆ ಎಂದೋ? ಒಟ್ಟಿನಲ್ಲಿ ಅಪಾರ್ಥೈಡ್ ಬಗೆಯ ಪ್ರತ್ಯೇಕತೆ ನಿರ್ಬಂಧ, ನಿಷಿದ್ಧ ಭೇದಗಳು ಸಾವಿರಾರು ವರ್ಷ

ದಕ್ಷಿಣ ಆಫ್ರಿಕಾದ ಕರಿಯರೆಂಬ ಆನೆಯನ್ನು ಹಳ್ಳಕ್ಕೆ ಬೀಳಿಸಲಾಯ್ತು. ಬಂಧಿಸಿಯೂ ಆಯ್ತು. ಹೊಡೆದು, ಬಡಿದು ಹಿಂಸಿಸಿ ಪಳಗಿಸಲು ಪ್ರಯತ್ನಿಸಲಾಯ್ತು. ಆದರೆ ದಕ್ಷಿಣ ಆಫ್ರಿಕಾದ ಕರಿಯರೆಂಬ ಆನೆ ಪಳಗಲಿಲ್ಲ. ಪಳಗಿದಿದ್ದಕ್ಕೆ ಹೆಚ್ಚಿನ ಹಿಂಸೆ, ಅನುಭವಿಸಬೇಕಾದ ಪರಿಸ್ಥಿತಿಯೂ ಉಂಟಾಗಿರಬಹುದು. ಆದರೆ ಭಾರತದ ಅಸ್ಪೃಶ್ಯರೆಂಬ ಆನೆ ಪಳಗಿಬಿಟ್ಟಿದೆ. ಇದು ಪುರಾತನ ಕಾಲದಲ್ಲೇ ಪಳಗಿಸಲ್ಪಟ್ಟ ಕಾರಣ, ಆ ಕ್ರೌರ್ಯ ನಮಗೆ ಕಾಣುತ್ತಿಲ್ಲ. ಜೊತೆಗೆ ಪಳಗಿಸಿದವನಿಗೂ ಈಗ ತಾನು ಪಳಗಿಸಿದವನು ಎಂಬ ನೆನಪಿಲ್ಲ. ಪಳಗಿಸಲ್ಪಟ್ಟವನಿಗೂ ತಾನು ಪಳಗಿಸಲ್ಪಟ್ಟವನು ಎಂಬ ನೆನಪಿಲ್ಲ. ತಾರತಮ್ಯವು ಸಮಾಜದಲ್ಲಿ ಆಂತರಿಕವಾಗಿ ವ್ಯಾಪಿಸಿ ಸಹಜ ಪದ್ಧತಿಯಾಗಿ ಬಿಟ್ಟಿದೆ.

ಬದುಕುಳಿದು ಧರ್ಮ, ಶಾಸ್ತ್ರ ಬಳಸಿಕೊಂಡು ಆಚರಣೆಯಾಗಿ ಬಿಟ್ಟರೆ ಅದೇ ಅಸ್ಪೃಶ್ಯತೆಯಾಗಿ ಬಿಡಬಹುದೇನೋ.

ಈ ಎರಡರ ನಡುವೆ ಭಿನ್ನತೆಯನ್ನು ಹೇಳಲೇಬೇಕೆಂದರೆ ಒಂದು ಭಿನ್ನತೆ ಎದ್ದು ಕಾಣುತ್ತದೆ. ಅಪಾರ್ಥೈಡ್‌ನಲ್ಲಿ ಬಿಳಿಯ ಮತ್ತು ಕರಿಯರ ನಡುವಿನ ಭೌತಿಕ ಬಣ್ಣದಿಂದಾಗಿ ನೋಡಿದಾಕ್ಷಣ ಬಲಿಪಶುವನ್ನು ಗುರುತಿಸಬಹುದಿತ್ತು. ಆದರೆ ಅಸ್ಪೃಶ್ಯತೆಯಲ್ಲಿ ಎಲ್ಲರೂ ಭೌತಿಕವಾಗಿ ಒಂದೇ ರೀತಿ ಇದ್ದುದರಿಂದ ಬಲಿಪಶುವನ್ನು ಗುರುತಿಸಲು ಕಷ್ಟವಾಗುತ್ತಿತ್ತು. ಅದಕ್ಕಾಗಿ ಬಲಿಪಶು ಅಸ್ಪೃಶ್ಯನನ್ನು ಗುರುತಿಸಲು ಹುಟ್ಟಿಕೊಂಡ ಕಟ್ಟುಪಾಡುಗಳು ತಾರತಮ್ಯದ ಎಲ್ಲೆಯನ್ನೇ ಮೀರಿದಂತಿದೆ.

ಅಸ್ಪೃಶ್ಯನ ವೇಷ, ಭಾಷೆ, ನಡೆ, ದೂರ, ಆಹಾರ ಇವುಗಳಿಂದಲೇ ಬಲಿಪಶುವನ್ನೇ ಗುರುತಿಸುವ ಲಕ್ಷಣಶಾಸ್ತ್ರ ಭಾರತದಲ್ಲಿ ಹುಟ್ಟಿದೆ. ಒಂದು ಉದಾಹರಣೆ ಕೊಡುವೆ- 1936ನೇ ನವೆಂಬರ್ 4ರ 'ಮುಂಬೈ ಸಮಾಚಾರ್' ಪತ್ರಿಕೆಯ ವರದಿ ಹೀಗಿದೆ: "ಮಲಬಾರಿನ ಉಟ್ಟಂಪಾಲ ಎಂಬಲ್ಲಿ 17 ವರ್ಷ ವಯಸ್ಸಿನ ಶಿವರಾಮನ್ ಎಂಬ ಅಸ್ಪೃಶ್ಯ ಎಜವ ಜಾತಿಯವನು ಉಪ್ಪು ಕೊಳ್ಳಲು ಸವರ್ಣಿಯ ಹಿಂದೂವೊಬ್ಬನ ಅಂಗಡಿಗೆ ಹೋಗಿ ಮಲಯಾಳಂ ಭಾಷೆಯಲ್ಲಿ 'ಉಪ್ಪು'ಬೇಕೆಂದು ಕೇಳಿದ. ಮಲಬಾರಿನ ಸಂಪ್ರದಾಯದಂತೆ ಸವರ್ಣಿಯ ಹಿಂದೂಗಳು ಮಾತ್ರ ಉಪ್ಪಿಗೆ 'ಉಪ್ಪು' ಎಂಬ ಪದ ಬಳಸಬಹುದು. ಅಸ್ಪೃಶ್ಯನಾಗಿ ಅವನು 'ಪುಲಿಚಾತನ್' ಎಂಬ ಪದ ಬಳಸಬೇಕಿತ್ತು. ಅದರಿಂದ ಮೇಲ್ಜಾತಿಯ ಅಂಗಡಿಯವನು ಕೋಪಗೊಂಡು ಶಿವರಾಮನ್‌ನನ್ನು ಚೆನ್ನಾಗಿ ಥಳಿಸಿದನೆಂದೂ ಮತ್ತು ಅದರಿಂದ ಆತ ಮರಣ ಹೊಂದಿದನೆಂದೂ ವರದಿಯಾಗಿದೆ' ಇಂಥವು ಸಾವಿರಾರು.

ಈಗ ಹಳೆಯದೆಲ್ಲಾ ಯಾಕೆ ಎಂಬ ಪ್ರಶ್ನೆ ಏಳುತ್ತದೆ. ದಕ್ಷಿಣ ಆಫ್ರಿಕಾವು 1990ರಲ್ಲಿ ಅಪಾರ್ಥೈಡ್ ಕಾನೂನು ಹಿಂತೆಗೆದುಕೊಂಡಾಕ್ಷಣ ತಾರತಮ್ಯವು ತನ್ನಷ್ಟಕ್ಕೆ ತಾನೇ ಇಲ್ಲವಾಯಿತು ಎಂದು ಹೇಳಲಾಗದು. ಆ ತಾರತಮ್ಯದ ಕಾನೂನುಗಳು ಉಂಟುಮಾಡಿದ ತಾರತಮ್ಯದ ಅವಾಂತರಗಳು ಸಮಾಜದಲ್ಲಿ ಮುಂದುವರಿಯುತ್ತಿರುತ್ತವೆ.

ಜನರು ಸಾಮಾನ್ಯವಾಗಿ ರಾಷ್ಟ್ರದ ಕಾನೂನಿಗಿಂತಲೂ ಸಂಪ್ರದಾಯ ರೂಢಿಗಳನ್ನೇ ಪರಿಣಾಮಕಾರಿಯಾಗಿ ಆಚರಿಸುತ್ತಾರೆ. ಭಾರತದಲ್ಲಿ ಈ ಪ್ರವೃತ್ತಿ ಭೀಕರವಾಗಿದೆ. ಉದಾಹರಣೆಗೆ ಭಾರತದ ಅಸ್ಪೃಶ್ಯರು ತಲೆಮೇಲೆ ಮಲ ಹೊರುವ ಪದ್ಧತಿಯ ನಿಷೇಧ ಕಾನೂನು ಇದ್ದರೂ ಇಂದಿಗೂ ಜನಜೀವನದಲ್ಲಿ ಆಚರಣೆಯಲ್ಲಿ ಇಲ್ಲವೇ? ಈ ಕಾರಣಕ್ಕೆ ಪ್ರತ್ಯೇಕಗೊಂಡಿಲ್ಲವೇ? ತಾರತಮ್ಯದ ಕಾನೂನುಗಳನ್ನು ಹಿಂತೆಗೆದುಕೊಂಡಿದರಿಂದ ಸ್ವಯಂ ಅಪರಾಧಿಯಾಗಿದ್ದ ಸರ್ಕಾರವು ತನ್ನ ಅಪರಾಧಿ ಸ್ಥಾನ ಕಳೆದುಕೊಂಡಿತು. ನಿಜ, ಆದರೆ ಸರ್ಕಾರ ಅಪರಾಧವನ್ನು ಮುಚ್ಚಿಟ್ಟುಕೊಂಡ ಅಪರಾಧಕ್ಕೆ ತುತ್ತಾಗಬೇಕಾಗುತ್ತದೆ.

ದಕ್ಷಿಣಾ ಆಫ್ರಿಕಾದಲ್ಲಿ ಕಷ್ಟನಷ್ಟ ಅನುಭವಿಸಿದ ಕರಿಯರಿಗೆ ದಾಖಲಾತಿಗಳು ಇರುವುದರಿಂದ ಅದಕ್ಕೆ ಅಲ್ಲಿ ಪರಿಹಾರ ಕೇಳುವ ಸಾಧ್ಯತೆ ಹುಟ್ಟಿಕೊಳ್ಳಬಹುದು. ಆದರೆ

ಭಾರತದಲ್ಲಿ ಅಸ್ಪೃಶ್ಯರ ಆಸ್ತಿಪಾಸ್ತಿ ನಷ್ಟದ ದಾಖಲಾತಿಯ ಮಾತಿರಲಿ, ಅದರ ನೆನಪುಗಳೂ ಇಲ್ಲವಾದುದರಿಂದ ಪರಿಹಾರದ ಸಮಸ್ಯೆ ಇಲ್ಲಿ ಬರಲಾರದು. ಆದರೂ ಅಸ್ಪೃಶ್ಯತೆಯ ಸಮಸ್ಯೆಯನ್ನು ಬಗೆಹರಿಸಲು ಭಾರತಕ್ಕೇ ಹೆಚ್ಚು ಸವಾಲುಗಳಿವೆ ಎಂದು ಅನ್ನಿಸುತ್ತದೆ.

ಯಾಕೆಂದರೆ ಅಂತಃಸಾಕ್ಷಿಯನ್ನು ಸಾಯಿಸಿ ತಾರತಮ್ಯವನ್ನು ಸುಪ್ತ ಮನಸ್ಸಿಗಿಳಿಸಲು ದೇವರು, ದರ್ಮ, ಶಾಸ್ತ್ರಗಳನ್ನೂ ದುರುಪಯೋಗಪಡಿಸಿಕೊಂಡ ಪಾಪ ಭಾರತದ ನೆಲದಲ್ಲಿ ನಡೆದಿದೆ. ಇಲ್ಲಿ ಧರ್ಮವೂ ಅಪರಾಧಿ. ರೋಮನ್ ಕಾನೂನು ಗುಲಾಮ ಮನುಷ್ಯನಲ್ಲ ಎಂದು ಸಾರುತ್ತದೆ. ಆದರೆ ರೋಮನ್ ಧರ್ಮ ಅದನ್ನು ಒಪ್ಪುವುದಿಲ್ಲ. ಭಾರತದಲ್ಲಿ ಧರ್ಮಗಳೇ ಮುಂದಾಗಿ ನಿಂತು ತಾರತಮ್ಯದ ಕಾನೂನು ಮಾಡಿಸಿದ ಇತಿಹಾಸವಿದೆ. ಇತ್ತೀಚೆಗೆ ಪುರಿಯ ಮಠದ ಧಾರ್ಮಿಕ ಮುಖಂಡ ಶಂಕರಾಚಾರ್ಯ ಅಸ್ಪೃಶ್ಯತೆಯನ್ನು ವೈಜ್ಞಾನಿಕ ಸತ್ಯ ಎಂಬಂತೆ ಪ್ರತಿಪಾದಿಸಿದರು. ಪಾಪಕ್ಕೆ ಪುಣ್ಯದ ವೇಷ ತೊಡಿಸಿಕೊಟ್ಟರು! ಇಂಥ ಮನಸ್ಥಿತಿಯೇ 'ಮಾದಿಗ ಸತ್ತ, ಮೈಲಿಗೆ ಕಮ್ಮಿಯಾಯಿತು' ಎಂಬಂಥ ಗಾದೆ ಹುಟ್ಟು ಹಾಕಿರಬೇಕು.

ಇಂಥ ಮನಸ್ಥಿತಿಯೇ ಭಾರತದಲ್ಲಿ ವರ್ಣ ವರ್ಣಗಳ ನಡುವೆ ಮದುವೆಯಾದಾಗಲೂ ಈ ಕೂಡುವಿಕೆ ಕೂಡ ಭಾರತವನ್ನು ಐಕ್ಯದ ಕಡೆಗೆ ನಡೆಯದಂತೆ ಮಾಡಿತು. ಬ್ರಾಹ್ಮಣ ಹೆಣ್ಣು ಶೂದ್ರ ಗಂಡಿಗೆ ಹುಟ್ಟಿದ ಸಂತಾನವನ್ನೂ ಅಸ್ಪೃಶ್ಯನನ್ನಾಗಿಸಿ ಸಮಾಜ ಆಚೆಗೆ ಎಸೆದುಬಿಟ್ಟಿತು. ಮತ್ತಷ್ಟು ಪ್ರತ್ಯೇಕತೆಯನ್ನು ಉಂಟುಮಾಡಿತು.

ಹೋಲಿಕೆಗೆ ನೋಡಿ-ಅಮೆರಿಕಾದಲ್ಲಿ ಕರಿಯ ಶಿಕ್ಷಣಕ್ಕೆಂದು ಬಿಳಿಯರು ಉಯಿಲು ಬರೆದು ಹಣ ಮುಡಿಪಿಟ್ಟ ಉದಾಹರಣೆಗಳಿವೆ. 1931ರಲ್ಲಿ ಪ್ರಕಟವಾಗಿರುವ ನೀಗ್ರೋ ಇಯರ್‌ಬುಕ್‌ನಲ್ಲಿ ಈ ವಿವರಗಳಿವೆ 15 ಲಕ್ಷ ಡಾಲರ್ ನೀಡುವ ಹಾರ್ಕ್ನೇಸ್, 1,60.00 ಡಾಲರ್ ನೀಡಿರುವ ಟ್ಯಾಟನ್ ಮುಂತಾಗಿ ನೀಗ್ರೋ ಶಿಕ್ಷಣಕ್ಕೆ ಉಯಿಲು ಬರೆದವರು ಸುಮಾರು ಜನ ಸಿಗುತ್ತಾರೆ. ಇದಲ್ಲದೆ ಚರ್ಚ್ ಶಿಕ್ಷಣಕ್ಕೆ ಮುಂದಾಗುತ್ತದೆ. 1865 ರಿಂದ 1930ರ ತನಕ ಕರಿಯರ ಶಿಕ್ಷಣ ಅಭಿವೃದ್ಧಿಗಾಗಿ ಧಾರ್ಮಿಕ ಮತ್ತು ಮಾನವತಾವಾದಿ ಸಂಸ್ಥೆಗಳು ಖರ್ಚು ಮಾಡಿದ ಒಟ್ಟು ಹಣ 13.5 ಕೋಟಿ ಡಾಲರ್‌ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 8.5 ಕೋಟಿಯಷ್ಟು ಡಾಲರ್‌ಗಳು ಬಿಳಿಯರ ವಂತಿಕೆಯಿಂದ ಬಂದದ್ದಾಗಿದೆ.

ಭಾರತದಲ್ಲಿ ಇದನ್ನು ನೆನಸಿಕೊಳ್ಳಲು ಸಾಧ್ಯವಿಲ್ಲ. ಡಾ|| ಅಂಬೇಡ್ಕರ್‌ರವರು 1932ರಲ್ಲಿ ಹರಿಜನ ಸೇವಕ ಸಂಘದ ಠಕ್ಕರ್‌ಬಾಪಾ ಅವರಿಗೆ ಬರೆದ ಪತ್ರದಲ್ಲಿ 'ಸವರ್ಣೀಯ ಹಿಂದೂಗಳು ಅಸ್ಪೃಶ್ಯರನ್ನು (ಕರಿಯರಂತೆ) ಸೇವಕರನ್ನಾಗಿಯಾದರೂ ಮಾಡಿಕೊಂಡು ಮನೆಯೊಳಕ್ಕೆ ಬಿಟ್ಟುಕೊಳ್ಳುವಂತಾಗಲು ಪ್ರೇರಣೆ ನೀಡಿರಿ' ಎಂದು ವಿನಂತಿಸುತ್ತಾನೆ. ಈ ವಿನಂತಿ ಯಾತನಾಮಯವಾಗಿ ಕಂಡರೂ ಭಾರತದ ಸಾಮಾಜಿಕ ಪರಿಸ್ಥಿತಿಯಲ್ಲಿ ಇದೂ ಪ್ರಗತಿಯ ಕಡೆಗೆ ಇಟ್ಟ ಒಂದು ಹೆಜ್ಜೆಯಾಗುತ್ತದೆ.

ಹಳ್ಳಿಗಾಡಿನಲ್ಲಿ ಸವರ್ಣೀಯರ ಮನೆಗೆ ಅಸ್ಪೃಶ್ಯರ ಪ್ರವೇಶ ಇಂದಿಗೂ ಕನಸಿನ ಮಾತು. ಭಾರತದ ಮುಕ್ಕಾಲು ಭಾಗವಿರುವ ಹಳ್ಳಿಗಾಡಿನಲ್ಲಿ ಸಮಾಜದಿಂದ ಹೊರಕ್ಕೆ ಎಸೆಯಲ್ಪಟ್ಟ ಅಸ್ಪೃಶ್ಯರ ನಿರ್ಬಂಧ, ನಿಷೇಧ, ಪ್ರತ್ಯೇಕತಾ ಭೇದಗಳು ಜೀವಂತವಾಗಿವೆ. ಅಸ್ಪೃಶ್ಯ ಜನಾಂಗವು ಸಮಾನತೆ ಮತ್ತು ಘನತೆ ಕಡೆ ಹೆಜ್ಜೆ ಇಟ್ಟಾಗಲೆಲ್ಲಾ, ಅಸಹನೆ ಉಂಟಾಗಿ ಹಿಂಸೆ, ಕೊಲೆ, ಲೂಟಿ ಸ್ಫೋಟಿಸುತ್ತದೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಭಾರತಮಾತೆ ತನ್ನ ಒಡಲಲ್ಲಿ ಅಸ್ಪೃಶ್ಯತೆಯನ್ನಿಟ್ಟುಕೊಂಡು ಮೈಲಿಗೆಯಾಗಿದ್ದಾಳೆ. ಎಷ್ಟು ಬೇಗ ಶುದ್ಧಿಯಾದರೆ ಅಷ್ಟು ಬೇಗ ನಮಗೆ ಒಳ್ಳೆಯದು. ಇದಾಗಲು ಭಾರತ ಸರ್ಕಾರ ತಾನು ಜನಪ್ರಿಯ ಶಾರೀರಿಕ ಮಾನವಶಾಸ್ತ್ರಜ್ಞ ಎಂದುಕೊಂಡಿರುವುದನ್ನು ಕೈಬಿಡಬೇಕಾಗಿದೆ, ಅಷ್ಟೇ.

ಕೊನೆಯದಾಗಿ, ಡಾ. ಅಂಬೇಡ್ಕರ್ ಮತ್ತು ಗಾಂಧೀಜಿ ಈ ಒಂದು ವಿಚಾರದಲ್ಲಿ ಒಂದೇ ಅಭಿಪ್ರಾಯವನ್ನು ಹೊಂದಿದ್ದರು. ಅಸ್ಪೃಶ್ಯತೆಯ ಸಮಸ್ಯೆ ಅಸ್ಪೃಶ್ಯರ ಸಮಸ್ಯೆ ಅಲ್ಲ ಎಂದು ಇಬ್ಬರೂ ಭಾವಿಸಿದ್ದರು. ಅಸ್ಪೃಶ್ಯರು ಅಸ್ಪೃಶ್ಯತೆಗೆ ಬಲಿಪಶುಗಳು ಮಾತ್ರ. ಅಂದರೆ ಸಮಸ್ಯೆ ಇರುವುದು ಅಸ್ಪೃಶ್ಯತೆಯನ್ನು ಆಚರಣೆ ಮಾಡುವವರಲ್ಲಿ, ಆದರೆ ಇಂದು ಭಾರತದ ಅಂತಃಸಾಕ್ಷಿಯಾದ ಭಾರತದ ಪ್ರಜ್ಞಾವಂತರು, ಲೇಖಕರು, ಕಲಾವಿದರು, ಪತ್ರಕರ್ತರು, ನ್ಯಾಯವಂತರು 'ಅಸ್ಪೃಶ್ಯತೆ ದಲಿತರ ಸಮಸ್ಯೆ' ಎಂದುಕೊಂಡು ಸುಮ್ಮನಿದ್ದಾರೆ. ಇದೇ ನನ್ನ ಖಿನ್ನತೆಗೆ ಕಾರಣವಾಗಿದೆ. ●

ಸೌಜನ್ಯ : ಆಂದೋಲನ, ಮೈಸೂರು

ಗೆಳೆಯಾ ಅಂಬೇಡ್ಕರ್...

— ರಾಜೀವ



ಹಗಲಿರುಳು ದುಡಿದುಡಿದು
ಹತ್ತು ಪೈಸೆಯ ತಂದು
ಒಪ್ಪೊತ್ತಿನ ಗಂಜಿಗಾಗಿ
ಪರದಾಡುವಾಗ ನೀನಿದ್ದೆ
ಈ ಜಗದಲ್ಲಿ, ಆದರೆ ನಾನಿರಲಿಲ್ಲ

ಜಗದಗಲ ಹುಚ್ಚೆದ್ದು
ಸ್ವಾರ್ಥ ಕುಣಿಯುತಿರುವಾಗ
ದಬ್ಬಾಳಿಕೆಯು ಕಬಳಿಸುತಿದೆ,
ನಮ್ಮ ನಿಮ್ಮನ್ನು ಹಣ
ಆಸ್ತಿ-ಅಂತಸ್ತು-ಅಧಿಕಾರಕ್ಕಾಗಿ,
ಈಗ ನಾನಿರುವ ಈ ಜಗದಲ್ಲಿ
ಆದರೆ ನೀನಿಲ್ಲವಲ್ಲ.

ನಾ ನಿನ್ನ ಕಂಡಿಲ್ಲ
ನಿನ್ನೊಂದಿಗೆಂದಿಗೂ ಬೆರೆತಿಲ್ಲ
ಆದರೂ ನಾ ಕರೆಯುವೆ ನಿನ್ನನ್ನ,
ಗೆಳೆಯಾ....ಬಾ ನನ್ನೊಂದಿಗೆ,
ಜಗದಗಲ ಹಬ್ಬಿರುವ ಸ್ವಾರ್ಥ
ಬಳ್ಳಿಗಳ ಕತ್ತರಿಸೋಣ,
ದೌರ್ಜನ್ಯದ ಬೇರುಗಳ ಕಿತ್ತೆಸೆಯೋಣ

ನಿಸ್ವಾರ್ಥದ ಬೀಜ ಬಿತ್ತೋಣ,
ಅದಕೆ ನಂಬಿಕೆಯ ನೀರುಣಿಸಿ
ಹೆಮ್ಮರವ ಮಾಡೋಣ
ಗೆಳೆಯಾ...ನಾನೂ ನೀನೂ
ಬೆಳೆಸಿದ ಆ ಹೆಮ್ಮರದ
ನೆರಳಲ್ಲಿ ನಮ್ಮವರೆಲ್ಲರಿಗೂ
ನೆರಳಿನ ಹಾಲುಣಿಸೋಣ.



ಪ್ರಿಯ ಓದುಗರೇ,

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ಅಭಿವ್ಯಕ್ತಿ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

ಬಿಡಿ ಪ್ರತಿ : ಹತ್ತು ರೂಪಾಯಿಗಳು (ರೂ. 10/-) ವಾರ್ಷಿಕ : ಒಂದು ನೂರು ರೂಪಾಯಿಗಳು (ರೂ. 100/-)

ಆಜೀವ : ಐದು ಸಾವಿರ ರೂಪಾಯಿಗಳು (ರೂ. 5,000/-)

ಚಂದಾ ಹಣವನ್ನು ಅಂಚೆ ಮೂಲಕ ಕಳುಹಿಸುವವರು ಡಿಡಿ, ಎಂ.ಓ, ಮೂಲಕ ಮಾತ್ರ ಕಳುಹಿಸಬೇಕು

ಚಂದಾ ಕಳಿಸಬೇಕಾದ ವಿಳಾಸ : ಸಂವಾದ ಮಾಸ ಪತ್ರಿಕೆ

ಬಾಬಾಸಾಹೇಬ್ ಅಂಬೇಡ್ಕರ್ ಸ್ಮಾರಕ ಕೇಂದ್ರ, ಅಂಚೆ ಪೆಟ್ಟಿಗೆ ಸಂಖ್ಯೆ : 9143, ಹೇರೋಹಳ್ಳಿ

ಮಾಗಡಿರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು - 560 091

(13ನೇ ಪುಟದಿಂದ)

ನಿರಾಕರಿಸಿದ್ದಾರಷ್ಟೆ ಹೊರತು, ಸಾರಾಸಗಟಾಗಿ ಮಾಂಸಹಾರವನ್ನೆ ತಿರಸ್ಕರಿಸಿಲ್ಲ. ಕೆಲವು ದಿನಗಳ ಹಿಂದೆ ಪೇಜಾವರ ಮಠಾಧೀಶರೂ ಸಂದರ್ಶನ ಒಂದರಲ್ಲಿ ಹಿಂದುಗಳು ಸಶಕ್ತರಾಗಲು ಮಾಂಸಾಹಾರದ ಅಗತ್ಯವನ್ನು ಪ್ರತಿಪಾದಿಸಿದ್ದು ಓದಿದ್ದೆ. ಈ ನಿಲುವಿನಿಂದ ಇವರು ತಮ್ಮೊಳಗೇ ತಾವು ಸೃಷ್ಟಿಸಿಕೊಳ್ಳುತ್ತಿರುವ ತಾತ್ವಿಕ ಮತ್ತು ಧಾರ್ಮಿಕ ವಿರೋಧಾಭಾಸಗಳ ಪರಿವೆ ಇರುವಂತೆ ಕಾಣುತ್ತಿಲ್ಲ.

ವರ್ಷಾರಂಭದಲ್ಲಿ ವಾಜಪೇಯಿ ಪ್ರತಿಪಾದಿಸಿದ ವಿಶಾಲ ಉದಾರವಾದಿ ಹಿಂದುತ್ವಕ್ಕೂ ಈಗ ಚುನಾವಣೆ ಕಣದಲ್ಲಿ ಪ್ರತಿಪಾದಿಸುತ್ತಿರುವ ಹಿಂದುತ್ವಕ್ಕೂ ಯಾವ ಸಂಬಂಧವೂ ಕಾಣುತ್ತಿಲ್ಲ. ವೈದಿಕ ಧರ್ಮದ ಮೌಲ್ಯಗಳನ್ನು ಎಲ್ಲರ ಮೇಲೂ ಹೇರುತ್ತಾ ಈ ಬ್ರಾಹ್ಮಣೀಕರಣವನ್ನು ಹಿಂದುತ್ವ ಎಂದು ಕರೆಯುತ್ತಿರುವುದು ಕುತಂತ್ರದ ರಾಜಕಾರಣ. ಈ ಧೋರಣೆಯನ್ನು ನಾವು ಹಿಂದುತ್ವ ಎಂದು ಒಪ್ಪಿಕೊಳ್ಳುವುದಾದರೆ ಬಹು ಬೇಗ ಜಾತಿ ಪದ್ಧತಿ, ಅಸ್ಪೃಶ್ಯತೆ, ಸ್ತ್ರೀ ಅಸಮಾನತೆ, ಸತಿ ಪದ್ಧತಿ ಇತ್ಯಾದಿ ಸನಾತನ ಮೌಲ್ಯಗಳ, ಇವರ ನೂತನ ಆವೃತ್ತಿಗಳನ್ನೂ ಒಪ್ಪಿಕೊಂಡು ಭಾರತದ ಸಂವಿಧಾನಕ್ಕೆ ತಿಲಾಂಜಲಿ ಕೊಡಬೇಕಾಗುತ್ತದೆ.

ಸಂಘ ಪರಿವಾರದವರು ಎಬ್ಬಿಸಿರುವ ಮತೀಯ ದ್ವೇಷದಲ್ಲಿ ಕುರುಡಾಗಿ ಹೋಗಿರುವ ಶೂದ್ರರೂ ದಲಿತರೂ ಈ ಕುತಂತ್ರಗಳನ್ನು ತತ್‌ಕ್ಷಣ ಅರ್ಥಮಾಡಿಕೊಳ್ಳದಿದ್ದರೂ ಮುಸ್ಲಿಮ್ ಮತ್ತು ಕ್ರಿಶ್ಚಿಯನ್ ದ್ವೇಷ ತಣ್ಣಗಾಗುತ್ತಿದ್ದಂತೆಯೇ ದಲಿತತ್ವ, ಶೂದ್ರತ್ವಗಳನ್ನು ಸಂಘ ಪರಿವಾರದವರ ಹಿಂದುತ್ವ ಎದುರಿಸಬೇಕಾಗುತ್ತದೆ.

ನಮ್ಮ ಭವಿಷ್ಯದ ಚುಕ್ಕಾಣಿ ಹಿಡಿದಿರುವ ಪ್ರಧಾನಮಂತ್ರಿ ಕಾನೂನಿನ ಕಾರ್ಯ ಸಾಧ್ಯತೆಯನ್ನು ವಿವರಗಳಲ್ಲಿ ಚಿಂತಿಸಿದೆ, ಒಂದಷ್ಟು ಜನ ಬೈರಾಗಿಗಳ, ಗೋಸಾಯಿಗಳ ಮನಃಸ್ಸಮಾಧಾನಕ್ಕೆ ಗೋಮಾಂಸವನ್ನು ರಾಷ್ಟ್ರವ್ಯಾಪಿ ನಿಷೇಧಿಸುವುದಾಗಿ ಘೋಷಣೆ ಮಾಡುವುದೂ, ಗೋಹತ್ಯೆ ಮಾಡುವವರಿಗೆ ಮರಣ ದಂಡನೆಯನ್ನೇ ವಿಧಿಸಿರೆಂದು ಸಾಧು ಸಮುದಾಯ ಅವರನ್ನು ಪ್ರೋತ್ಸಾಹಿಸುವುದೂ ನೋಡಲು ತಮಾಷೆಯಾಗಿ ಕಾಣಿಸಿದರೂ ಕಳವಳಕಾರಿ ಬೆಳವಣಿಗೆ. ಈಗ ಗೋಹತ್ಯೆ ನಿಷೇಧ ಕಾನೂನು ಹಲವು ರಾಜ್ಯಗಳಲ್ಲಿ ಜಾರಿಯಲ್ಲಿದ್ದರೂ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಎಲ್ಲೆಲ್ಲೂ ಗೋಮಾಂಸ ದೊರೆಯುತ್ತಿರುವುದು ವಾಸ್ತವ ಸಂಗತಿ. ಗೋಹತ್ಯೆ ಕಾನೂನನ್ನು ರಾಷ್ಟ್ರವ್ಯಾಪಿಯಾಗಿ ನಿಜಕ್ಕೂ ಕಟ್ಟುನಿಟ್ಟಾಗಿ ವಾಜಪೇಯಿಯವರೇನಾದರೂ ಜಾರಿಗೆ ತಂದರೆ ತತ್‌ಕ್ಷಣವೇ ಬೀದಿ ಪಾಲಾಗುವ ಅನೇಕ ಲಕ್ಷ ಗೊಡ್ಡು ಹಸುಗಳ ಪಾಡೇನು? ಪ್ರತಿ ದಿನ ಇದೇ ರೀತಿ ಲಕ್ಷ ಲಕ್ಷ ದನಗಳು ಹೊಸದಾಗಿ ಸೇರ್ಪಡೆಯಾಗುತ್ತಲೇ ಹೋಗುತ್ತವಲ್ಲ. ಇವುಗಳ ಪಾಲನೆ ಪೋಷಣೆಗೆ ತಗಲುವ ವೆಚ್ಚ ಮತ್ತು ಸಿದ್ಧತೆ ಯಾವ ರಾಜ್ಯದಲ್ಲಾದರೂ ಇದೆಯೆ? ನೈರ್ಮಲ್ಯ ಸಮಸ್ಯೆಯನ್ನು ಸಹ ನಾವು ಎದುರಿಸುವುದು ಕಷ್ಟ.

ಸರ್ಕಾರಗಳು ಬೀದಿ ನಾಯಿಗಳನ್ನು ಸಹ ನಿಯಂತ್ರಿಸಲಾರದ ಸ್ಥಿತಿಯಲ್ಲಿವೆ. ಪ್ರತಿ ವರ್ಷ ಲಕ್ಷಾಂತರ ಮಂದಿ ಹುಚ್ಚು ನಾಯಿ ಕಡಿತದಿಂದ ಸಾಯುತ್ತಿದ್ದಾರೆ. ಇದರೊಡನೆ ಬೀದಿ ದನಗಳೂ ಸೇರ್ಪಡೆಯಾದರೆ ದೇಶದ ರಕ್ಷಣಾ ವೆಚ್ಚವನ್ನೆಲ್ಲಾ ಈ ಗೊಡ್ಡು ಹಸುಗಳಿಗೇ ವಿನಿಯೋಗಿಸಿದರೂ ಸಾಲುವುದಿಲ್ಲ. 'ಗೋಬ್ರಾಹ್ಮಣೋ ಸುಖಿನೋ ಭವಂತು' ಎಂಬ ವೇದ ವಾಕ್ಯ ಬರೆದವರ ಕಾಲದ ಭಾರತಕ್ಕೂ ಇವತ್ತಿನ ಭಾರತಕ್ಕೂ ಇರುವ ಅಗಾಧ ವ್ಯತ್ಯಾಸ ಸಾಧುಸಂತತಿಗೆ ಇಲ್ಲದಿರಬಹುದು. ಆದರೆ ಈ ದೇಶದ ಪ್ರಧಾನಿಗೂ ಇಲ್ಲದಿದ್ದರೆ ತುಂಬ ಕಷ್ಟ. ವೇದಕಾಲದಲ್ಲಿದ್ದ ವಿರಳವಾದ ಜನಸಂಖ್ಯೆ, ಅಗಾಧ ಗೋಮಾಳಗಳು, ವಿಸ್ತಾರವಾದ ಕಾಡು, ಕಾಡಿಗಟ್ಟಿದ ಗೊಡ್ಡು ಗೋವುಗಳನ್ನು ತಿನ್ನಲು ಇದ್ದ ಮಾಂಸಾಹಾರಿ ವನ್ಯ ಮೃಗಗಳು ಇವೆಲ್ಲಾ ಭಾರತದಲ್ಲಿ ಇಂದು ಅಕ್ಷರಶಃ ಅಂತರ್ಧಾನವಾಗಿವೆ.

ಹೀಗಿರುವಾಗ ಇಂಥದೊಂದು ಅಬದ್ಧದ ಕಾನೂನು ಮಾಡಿದರೆ ಅದನ್ನು ಜಾರಿಗೊಳಿಸುವ ಸಿಬ್ಬಂದಿಯಾಗಲೀ, ಅದು ಅಪರಾಧವೋ ಅಲ್ಲವೋ ನಿರ್ಣಯಿಸುವ ನ್ಯಾಯಾಂಗವಾಗಲೀ ಇಲ್ಲದಿದ್ದಾಗ ಕಾನೂನುಗಳು ಆಸಕ್ತ ಜನರ ಕೈಗೆ ಆಯುಧಗಳಾಗಿ ಸಿಕ್ಕುತ್ತವೆ. ಮಾಯಾವತಿ, ಜಯಲಲಿತಾ ಮುಂತಾದವರು ಪೋಟಾ ಕಾಯ್ದೆಯನ್ನು ತಮ್ಮ ಅನುಕೂಲಕ್ಕೆ ಬಳಸಿಕೊಂಡಂತೆ ಈ ಕಾನೂನಿನ ಗತಿಯೂ ಆಗುತ್ತದೆ. ಉತ್ತರ ಪ್ರದೇಶದಲ್ಲಿ ಸತ್ತ ದನದ ಚರ್ಮ ತೆಗೆಯುತ್ತಿದ್ದ ಹಲವು ದಲಿತರನ್ನು ಭಜರಂಗದಳದ ಕಾರ್ಯಕರ್ತರು ವಿಚಾರಣೆ ಇಲ್ಲದೆ ಕ್ರೂರವಾಗಿ ಕೊಂದು ಹಾಕಿದಂಥ ಪ್ರಕರಣಗಳು ರಾಷ್ಟ್ರದುದ್ದಕ್ಕೂ ಪುನರಾವರ್ತನೆಯಾಗುವಂತೆ ಮಾಡುವುದೇ ಇಂಥ ಕಾನೂನುಗಳಿಂದ ಆಗುವ ಪರಿಣಾಮ. ಮುಲ್ಲಾಗಳು-ಮೌಲ್ವಿಗಳ ಕೈಗೆ ರಾಜ್ಯಾಡಳಿತ ಕೊಟ್ಟು ಆದ ಘೋರ ಅನಾಹುತಕ್ಕೆ ತಾಲಿಬಾನ್ ಮತ್ತು ಅಫ್ಘಾನಿಸ್ತಾನದ ಉದಾಹರಣೆ, ನಮ್ಮ ಕಣ್ಣೆದುರಿಗೇ ಇರುವಾಗ ವಾಜಪೇಯಿಯವರು ಈ ಸಾಧುಗಳು, ಗೋಸಾಯಿಗಳು, ಬೈರಾಗಿಗಳನ್ನು ಓಲೈಸಲು ಕಾನೂನು ಮಾಡಲು ಮುಂದಾದರೆ, 'ಮನುಷ್ಯ ಚರಿತ್ರೆಯಿಂದ ಪಾಠ ಕಲಿಯುವುದಿಲ್ಲ' ಎನ್ನುವುದು ನಮಗೆ ಚರಿತ್ರೆ ಕಲಿಸುವ ಪಾಠ.

(ಸೌಜನ್ಯ : ಪ್ರಜಾವಾಣಿ)

ಬಿಜೆಪಿಯಲ್ಲಿ ಜಾಗ ಮಾಡಿಕೊಳ್ಳುತ್ತಿರುವ ತಿರಸ್ಕೃತ ರಾಜಕಾರಣಿಗಳು

ಅಂಬೇಡ್ಕರ್ ಬಗೆಗೆ ತಿಳಿದವರಾರೂ ಬಿಜೆಪಿಯ ಹಿಂದುತ್ವದ ಪರವಾಗಿರಲು ಸಾಧ್ಯವಿಲ್ಲ. ಮೇಲಾಗಿ ಬಿಜೆಪಿಯ ಈ ಹಿಂದುತ್ವವಾದ ಎನ್ನುವುದು ದಲಿರನ್ನು ಮತ್ತೆ ಕರ್ಮಟ ಬ್ರಾಹ್ಮಣರ ಸನಾತನ ಕಾಲಕ್ಕೆ ತೆಗೆದುಕೊಂಡು ಹೋಗುವಂತಹದ್ದು. ದಲಿತರಲ್ಲಿ ಯಾರಾದರೂ ಬಿಜೆಪಿಯಲ್ಲಿ ಇದ್ದಾರೆಂದರೆ ಅವರಿಗೆ ಬೇರೆ ಪಕ್ಷಗಳಲ್ಲಿ ಸ್ಥಾನಮಾನದ ಅವಕಾಶ ಸಿಗದೆ ವಂಚಿತರಾದ ರಾಜಕಾರಣಿ ವರ್ಗ ಎಂದೇ ನನ್ನ ಗ್ರಹಿಕೆ. ನನ್ನ ಅನುಭವದ ತಿಳುವಳಿಕೆಯಂತೆ ಬಿಜೆಪಿಯಲ್ಲಿ ಇಂದು ಹೆಚ್ಚು ಮಂದಿ ಇರುವವರು ಬ್ರಾಹ್ಮಣರನ್ನು ಹೊರತು ಪಡಿಸಿದರೆ, ಹಿಂದುಳಿದ ವರ್ಗಗಳು, ಗುಜರಾತಿ ಮಾರ್ವಾಡಿ ಮತ್ತು ಪಟೇಲ್ ಜಾತಿಗಳು.

○ ಎಸ್. ಗಣೇಶನ್

ಗುಜರಾತ್ ಹಿಂದೂ ಧರ್ಮಕ್ಕೆ ಹೇಳಿ ಮಾಡಿಸಿದ ಸನಾತನ ರಾಜ್ಯ. ಅಲ್ಲಿನ ಜನರು ಕಟ್ಟಾ ಸನಾತನವಾದಿಗಳು. ಅಂದ ಮೇಲೆ ಅವರು ಎಷ್ಟು ಧರ್ಮಾಂಧರು ಎಂಬುದು ಇದರಿಂದ ತಿಳಿಯುತ್ತದೆ. ಅಲ್ಲಿ ಜನ್ಮ ತಾಳಿದ ಮಹಾತ್ಮ ಗಾಂಧಿ ಅವರು ಸಹಾ ಸನಾತನವಾದಿಯೇ ಆಗಿದ್ದರು ಎಂಬುದನ್ನು ಅವರ ವಿಚಾರಗಳೇ ಹೇಳುತ್ತವೆ. ಹಾಗಾಗಿ ಇಂತಹ ರಾಜ್ಯ ಹಿಂದುತ್ವವನ್ನು ಬೋಧಿಸುವ ಭಾರತೀಯ ಜನತಾ ಪಕ್ಷಕ್ಕೆ ಹೇಳಿ ಮಾಡಿಸಿದ ರಾಜ್ಯ. ಇಲ್ಲಿ ಪರಿಶಿಷ್ಟ ಜಾತಿಯ ಜನರು ತೀರಾ ಕಮ್ಮಿ. ಜನಗಣತಿಯ ಸಂಖ್ಯೆಯ ಪ್ರಕಾರ ಶೇ. 7ರಷ್ಟು ಮಾತ್ರ ಪರಿಶಿಷ್ಟ ಜಾತಿಯವರಿದ್ದಾರೆ. ಇವರನ್ನು ಬಿಟ್ಟರೆ ಹೆಚ್ಚಾಗಿ ಬುಡಕಟ್ಟು ಜನರಿದ್ದಾರೆ. ದೆಹಲಿಯಲ್ಲಿ ನಾನು ಪ್ರಜಾವಾಣಿಯ ಮುಖ್ಯ ವರದಿಗಾರನಾಗಿದ್ದಾಗ ಗುಜರಾತ್ ಸೇರಿದಂತೆ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಚುನಾವಣೆ ವೇಳೆ ಸುತ್ತಾಡಿದ್ದೇನೆ. ನನ್ನ ಅನುಭವದ ಪ್ರಕಾರ ದಲಿತರು ಬಿಜೆಪಿಯ ಕಡೆ ಒಲಿದಿಲ್ಲ. ಅವರು ಹೆಚ್ಚಾಗಿ ಬಹುಜನ ಸಮಾಜ ಪಕ್ಷ ಇಲ್ಲವೇ ಕಾಂಗ್ರೆಸ್ಸಿನ ಪರವಾಗಿದ್ದಾರೆ. ಮತ್ತು ದಲಿತರಿಗೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬಗೆಗೆ ಅಲ್ಪ ಸ್ವಲ್ಪವಾದರೂ ತಿಳಿದಿದ್ದಾರೆ. ಅಂಬೇಡ್ಕರ್ ಬಗೆಗೆ ತಿಳಿದವರಾರೂ ಬಿಜೆಪಿಯ ಹಿಂದುತ್ವದ ಪರವಾಗಿರಲು ಸಾಧ್ಯವಿಲ್ಲ. ಮೇಲಾಗಿ ಬಿಜೆಪಿಯ ಈ ಹಿಂದುತ್ವವಾದ ಎನ್ನುವುದು ದಲಿರನ್ನು ಮತ್ತೆ ಕರ್ಮಟ ಬ್ರಾಹ್ಮಣರ ಸನಾತನ ಕಾಲಕ್ಕೆ ತೆಗೆದುಕೊಂಡು ಹೋಗುವಂತಹದ್ದು. ದಲಿತರಲ್ಲಿ ಯಾರಾದರೂ ಬಿಜೆಪಿಯಲ್ಲಿ ಇದ್ದಾರೆಂದರೆ ಅವರಿಗೆ ಬೇರೆ ಪಕ್ಷಗಳಲ್ಲಿ ಸ್ಥಾನಮಾನದ ಅವಕಾಶ ಸಿಗದೆ ವಂಚಿತರಾದ ರಾಜಕಾರಣಿ ವರ್ಗ ಎಂದೇ ನನ್ನ ಗ್ರಹಿಕೆ. ನನ್ನ ಅನುಭವದ ತಿಳುವಳಿಕೆಯಂತೆ ಬಿಜೆಪಿಯಲ್ಲಿ ಇಂದು ಹೆಚ್ಚು ಮಂದಿ ಇರುವವರು ಬ್ರಾಹ್ಮಣರನ್ನು ಹೊರತು ಪಡಿಸಿದರೆ, ಹಿಂದುಳಿದ ವರ್ಗಗಳು, ಗುಜರಾತಿ ಮಾರ್ವಾಡಿ ಮತ್ತು ಪಟೇಲ್ ಜಾತಿಗಳು. ಈ ರೀತಿ ಎಲ್ಲ ರಾಜ್ಯಗಳಲ್ಲಿಯು ಕಂಡು ಬರುತ್ತದೆ. ಉದಾಹರಣೆಗೆ ಗುಜರಾತಿನಲ್ಲಿ ಪಟೇಲ್ ಜಾತಿಯ ಕೇಶು ಭಾಯಿ ಪಟೇಲ್, ಹಿಂದುಳಿದ ಜಾತಿಯ ನರೇಂದ್ರ ಮೋದಿ, ಕಾಶೀರಾಂ ರಾಣಾ, ಉಮಾಭಾರತಿ, ಗೋಫಿ ನಾಥ್ ಮುಂಡೆ ಮತ್ತು ಈ ಹಿಂದೆ ಬಿಜೆಪಿಯ ನಾಯಕರಾಗಿದ್ದ ಹಿಂದುಳಿದ ಜಾತಿಯ ಶಂಕರ್ ಸಿಂಗ್ ವಘೇಲಾ. ಗುಜರಾತಿನಲ್ಲಿ ದಲಿತ ವರ್ಗದಿಂದ ಬಿಜೆಪಿಯಲ್ಲಿ ಹೇಳಿಕೊಳ್ಳುವಂತಹ ನಾಯಕರಾರೂ ಇಲ್ಲ. ಅದೇ ರೀತಿ ಉತ್ತರ ಪ್ರದೇಶದಲ್ಲಿ ಈ ಹಿಂದೆ ಹಿಂದುಳಿದ ವರ್ಗದ ಕಲ್ಯಾಣ್ ಸಿಂಗ್ ಮತ್ತು ಈಗ ಅಲ್ಲಿ ಬಿಜೆಪಿ ಅಧ್ಯಕ್ಷರಾಗಿರುವ ವಿನಯ್ ಕಟಿಯಾರ್ ಹಿಂದುಳಿದ ಜಾತಿಯವರು. ಬೇರೆ ಬೇರೆ ರಾಜ್ಯಗಳನ್ನು ನೋಡಿದಾಗ ಹೆಚ್ಚು ಕಡಿಮೆ ಇದೇ ಪರಿಸ್ಥಿತಿ ಇದೆ. ಊಳಿಗಮಾನ ವ್ಯವಸ್ಥೆಯ ಪ್ರತೀಕವಾಗಿರುವಂತಹ ಭೂಮಿಯ ಮೇಲಿನ ಒಡೆತನ, ಜಾತಿ ಮತ್ತು ತೋಳ್ಬಲದಿಂದ ಆಯಾ ರಾಜ್ಯಗಳಲ್ಲಿ ಅಧಿಕಾರ ರಾಜಕಾರಣದ ಸೂತ್ರ ಹಿಡಿದಿರುವ ಮಧ್ಯಂತರ ಜಾತಿಗಳು ಮತ್ತು ಸಾಮಾಜಿಕ ಹಿಂದುಳಿದಿರುವ ಹಿಂದುಳಿದ ಜಾತಿಗಳ ಜನರೇ ಹೆಚ್ಚಾಗಿ ಬಿಜೆಪಿಯಲ್ಲಿದ್ದಾರೆ. ಈ ವರ್ಗಗಳಿಗೆ ಹಿಂದೂ ಧರ್ಮದ ಮೇಲಿರುವಷ್ಟು ಪ್ರೀತಿ ಇಲ್ಲವೇ ವ್ಯಾಮೋಹ ಪರಿಶಿಷ್ಟ ಜಾತಿಗಳಲ್ಲಿ ಇಲ್ಲ. ಹಾಗಾಗಿ ಹಿಂದುತ್ವದ ಹೆಸರಿನಲ್ಲಿ ಪರಿಶಿಷ್ಟ ಜಾತಿಯ ಜನರು ಮುಸ್ಲಿಮರ ವಿರುದ್ಧ ನಡೆದ ದಾಳಿ, ಲೂಟಿ ಮತ್ತು ಹಿಂಸಾಕಾಂಡದಲ್ಲಿ ಭಾಗಿಯಾಗಿದ್ದರೆಂದು ನಂಬುವುದು ಕಷ್ಟ. ಪರಿಶಿಷ್ಟ ಜಾತಿಯ ಜನರ ಮೇಲಿನ ಈ ಆರೋಪ ಹೇಗಿದೆ ಎಂದರೆ, ಯಾರಾದರೂ ಪರಿಶಿಷ್ಟ ಜಾತಿಯ ಇಲ್ಲವೇ ಮುಸ್ಲಿಂ ಅಥವಾ ಕ್ರೈಸ್ತ (ಮುಖ್ಯವಾಗಿ ಉನ್ನತ ಅಧಿಕಾರಿ ಅಥವಾ ರಾಜಕಾರಣಿ) ವ್ಯಕ್ತಿಯ ಜೊತೆ ಆಕಸ್ಮಿಕವಾಗಿ ಇಲ್ಲವೇ ಆತನ ಬಳಿ ಕೆಲಸವಿದ್ದರೆ ಅವರ ಜಾತಿಯ ಒಂದಿಬ್ಬರು ಜೊತೆಗಿದ್ದರೂ ಸಾಕು ಅವನು ತುಂಬಾ ಜಾತಿವಾದಿ ಎನ್ನುತ್ತಾರೆ. ಆದರೆ ಒಬ್ಬ ಬ್ರಾಹ್ಮಣನ ಇಲ್ಲವೆ ಲಿಂಗಾಯತ ಇಲ್ಲವೇ ಒಕ್ಕಲಿಗ (ಅಧಿಕಾರಿ, ರಾಜಕಾರಣಿ) ವ್ಯಕ್ತಿಯ ಜೊತೆ ಅವರ ಜಾತಿಯವರೇ ದಿನವಿಡೀ ಸುತ್ತಾಡುತ್ತಿದ್ದರೂ ಅವರನ್ನು ಯಾರೂ ಜಾತಿವಾದಿಗಳು ಎಂದು ಗುರುತಿಸಲು ಹೋಗುವುದಿಲ್ಲ. ಹಾಗೆ ಒಂದಿಬ್ಬರು ಪರಿಶಿಷ್ಟ ಜಾತಿಯ ಜನ ಈ ಸಮೂಹ ಸನ್ನಿದೊಂಬಿಯಲ್ಲಿ ಸೇರಿದ್ದಿರಬಹುದಾದ ಕಾರಣಕ್ಕೆ ಗುಜರಾತ್ ಕೋಮು ಗಲಭೆಯಲ್ಲಿ ದಲಿತರು ಹಿಂಸಾಕಾಂಡದ ಮುಂಚೂಣಿಯಲ್ಲಿದ್ದರು ಎನ್ನುತ್ತಿರಬಹುದು. ಇದು ದಲಿತರ ಬಗೆಗೆ ಇರುವ ಹಿಂದೂಗಳ ಪೂರ್ವಗ್ರಹ ಪೀಡಿತ ಮನಸ್ಸು. ಆದರೆ ಒಬ್ಬ ಮನುಷ್ಯನನ್ನು ಮತ್ತೊಬ್ಬ ಹಿಂಸಿಸುವ ಹೇಯ ಕೃತ್ಯದಲ್ಲಿ ದಲಿತನಿರಲಿ ಯಾರೇ ಆಗಿರಲಿ ಭಾಗಿಯಾಗಿದ್ದರೆ ಅದು ಖಂಡನೀಯ.

ತಿರಸ್ಕೃತ ದಲಿತ ರಾಜಕಾರಣಿಗಳ ಬಿಜೆಪಿಯಲ್ಲಿ ಜಾಗ ಮಾಡಿಕೊಳ್ಳುತ್ತಿರುವ ದಲಿತ ಚಳುವಳಿ-ರಾಜಕಾರಣ ಈ ಹೊತ್ತಿನಲ್ಲಿ ಏನು ಮಾಡಬೇಕು ದಲಿತ ಚಳುವಳಿ ಎನ್ನುವುದು ಈಗ ದಾರಿ ತಪ್ಪಿದೆ. ಯಾವುದೇ ರಾಜ್ಯದಲ್ಲಿಯೂ ಇದು ಈ ಒಂದು ಅರ್ಥಪೂರ್ಣ ಚಳುವಳಿಯಾಗಿ ಉಳಿದಿಲ್ಲ. ಗುಜರಾತ್ ಮಟ್ಟಿಗಂತೂ ಈ ಚಲುವಳಿ ಎಂಬುದಿಲ್ಲ. ಆದರೆ ಕರ್ನಾಟಕದ ಮಟ್ಟಿಗೆ ಈ ಬಗೆಗೆ ಸ್ವಲ್ಪ ಹೇಳಬಹುದು. ಸಾಮಾಜಿಕ ಬದಲಾವಣೆ ತರುವಂತಹ ಚಳುವಳಿಗಳು ಪ್ರಾಮಾಣಿಕತೆ, ನಂಬಿದ ತತ್ವಕ್ಕೆ ಬದ್ಧತೆ ಮತ್ತು ಅದರ ಗುರಿ ಸಾಧನೆಗಾಗಿ ಸ್ವಹಿತವನ್ನು ತ್ಯಾಗ ಮಾಡಿ ಪೂರ್ಣ ಪ್ರಮಾಣದ ಬದುಕನ್ನು ಅರ್ಪಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ದಲಿತ ಚಳುವಳಿ ಎನ್ನುವುದು ಎಷ್ಟು ಜನರನ್ನು ತಯಾರಿ ಮಾಡಬಲ್ಲದು ಎನ್ನುವುದು ಈಗಿರುವ ಪ್ರಶ್ನೆ. ಎಪ್ಪತ್ತು ಮತ್ತು ಎಂಬತ್ತರ ದಶಕದ ದಲಿತ ಸಂಘರ್ಷ ಸಮಿತಿ ಇಂತಹ ಪ್ರಯತ್ನದಲ್ಲಿ ಪ್ರಮಾಣಿಕವಾಗಿ ನಡೆದಿದೆ. ಈ ಪ್ರಯತ್ನ 90ರ ಮಧ್ಯ ಭಾಗದವರೆವಿಗೂ ಆಗಿದೆ. ಆದರೆ ಆ ನಂತರ ಚಳುವಳಿ ದಾರಿ ತಪ್ಪಿದೆ. ಎಪ್ಪತ್ತರ ದಶಕದಲ್ಲಿ ದಲಿತ ಯುವಕರಲ್ಲಿ ಕಂಡು ಬಂದ ವೈಚಾರಿಕತೆ, ತಮ್ಮ ವಿಮೋಚನೆಗಾಗಿ ಹೊಸ ಹೊಸ ಸಿದ್ಧಾಂತ ಮತ್ತು ಹೋರಾಟಗಳಿಗೆ ನಡೆದ ತವಕ ಮತ್ತು ಹುಡುಕಾಟ ಮರುಕಳಿಸಬೇಕಾಗಿದೆ. ಅದಕ್ಕಾಗಿ ಅಧ್ಯಯನ ಮತ್ತು ಶ್ರದ್ಧೆ ಬರಬೇಕಾದ ಅವಶ್ಯಕತೆ ಇದೆ. ಈ ಸಾಮಾಜಿಕ ಜವಾಬ್ದಾರಿ ಕೇವಲ ದಲಿತರಲ್ಲಿ ಮಾತ್ರ ಬಂದರೆ ಸಾಲದು. ಉಳಿದ ವರ್ಗಗಳಲ್ಲಿಯೂ ಬಂದಾಗ ಮಾತ್ರ ಜಾತಿವಾದ ಮತ್ತು ಕೋಮುವಾದದ ವಿರುದ್ಧ ಹೋರಾಡಲು ಸಿದ್ಧ. ●

ಇನ್ನು ನೀರಿಗೆ ಬರವಿಲ್ಲ

— ಬಿ.ಎಂ. ಹನೀಫ್

“ಇದು ಗುಜರಾತ್, ಇಲ್ಲಿ ಕಣ್ಣೀರಿಗೆ ಬರವಿಲ್ಲ
ತಿಂಗಳಿಡೀ ಕಣ್ಣೀರಿನ ಮಳೆ ಧಾರಾಕಾರ ಸುರಿದು
ಸಾವಿರಕ್ಕೂ ಹೆಚ್ಚು ಮಂದಿ ನೀರಿನಲ್ಲಿ ಕೊಚ್ಚಿಹೋದರು
ಲಕ್ಷಾಂತರ ಗುಡಿಸಲುಗಳು ನಾಶವಾದವು
ಮೋರಿ, ರಸ್ತೆ ತುಂಬಾ ಹರಿದ ಕಣ್ಣೀರು ಮನೆಗೆ ನುಗ್ಗಿ
ಊರ ತುಂಬಾ ಮಲೇರಿಯಾ, ಸಾಂಕ್ರಮಿಕ ರೋಗ

ಚಹಾ ಕಾಸಲು ಹಾಲಿಲ್ಲ-ತನ್ನಿ ಎಂದಳು ಮಡದಿ
ಪಕ್ಕದ ಮನೆಯಲ್ಲಿ ಇದೀಗ ತಾನೆ ಹೆರಿಗೆಯಾದ
ಆ ಧರ್ಮದ ಹುಡುಗಿಯಿದ್ದಾಳೆ-ಕೆಚ್ಚಲನ್ನೇ ಕತ್ತರಿಸಿ ತರುತ್ತೇನೆ
ಎಂದು ಹೊರಟ ಕತ್ತಿ ಹಿಂದ ಗಂಡ

ಹಸಿವಾಗುತ್ತಿದೆ ಅಕ್ಕಿಯಿಲ್ಲ ತಾರೇ-ಎಂದಳು ತಾಯಿ
ಆಚೆ ಬಡಾವಣೆಯಲ್ಲಿ ಅಂಗಡಿ ಊಟ ನಡೆಯುತ್ತಿದೆ
ಇರು, ಇದೀಗ ತಂದೆ ಎಂದು ಕೈಚೀಲ ಹಿಡಿದು ಹೊರನಡೆದಳು ಮಗಳು
ವಯಸ್ಸಿಗೆ ಬಂದ ಮಗ ಇನ್ನೂ ಮಲಗಿದ್ದ
ಕೆಲಸಕ್ಕೆ ಹೋಗೋ ಎಂದು ಗದರಿದಳು ತಾಯಿ
ಆತ ಎದ್ದು ಗೊಣಗುತ್ತಾ ಕಿಸೆಯಿಂದ ಬೀಡಿ ತೆಗೆದ
ಬಲೆಯಲ್ಲಿ ಬೆಂಕಿ ಇಲ್ಲ-ಎದ್ದು ರಸ್ತೆ ದಾಟಿ ನಡೆದ
ಬೆಂಕಿಯಲ್ಲಿ ಉರಿಯುತ್ತಿದ್ದ ಎದುರುಮನೆಯ ಗಳ ಹಿರಿದು

ಬೀಡಿ ಹಚ್ಚಿ ಸೇದುತ್ತಾ ಕುಳಿತ
ಅಲ್ಲೀಗ ಪೊಲೀಸರಿಗೆ ಕೈತುಂಬಾ ಕೆಲಸ
ಕಣ್ಣೀರಿನ ಪ್ರವಾಹಕ್ಕೆ ಪರಿಹಾರ ಸೂಚಿಸಲು
ಅಮೆರಿಕಾದಿಂದ ತಂಪು ಪಾನೀಯ ಕಂಪೆನಿಯ
ವಕ್ತಾರರು ಬಂದಿದ್ದಾರೆ-ಕಣ್ಣೀರನ್ನು ಶುದ್ಧೀಕರಿಸಿ
ಬಾಟಲಿಗಳಲ್ಲಿ ತುಂಬಿ ದೇಶದೆಲ್ಲೆಡೆ ಮಾರಾಟ ನಡೆಸುವ
ಒಪ್ಪಂದಕ್ಕೆ ದೇಶದ ವಾಣಿಜ್ಯ ಸಚಿವರು ಸಹಿ ಹಾಕಿದ್ದಾರೆ

ಇನ್ನು ಭಾರತದ ಹಳ್ಳಿಗಳಲ್ಲಿ
ಕುಡಿಯುವ ನೀರಿಗೆ ಬರವಿಲ್ಲ
ಬಾಟಲಿಗಳ ತುಂಬ ಮನೆ ಮನೆಗೆ ಉಚಿತ
ಸರಕಾರವೇ ಒದಗಿಸುತ್ತದೆ

❑ ಗುಜರಾತ್‌ನಲ್ಲಿ ನಡೆದ ಅಮಾನವೀಯ ಮಾರಣಹೋಮಕ್ಕೆ ಬಲಿಯಾದ 2000ಕ್ಕೂ ಹೆಚ್ಚು ಮುಗ್ಧರಿಗೆ ಈ ಕವಿತೆ ನೆನಪೋಲೆ.





ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ
ಸಂವಾದ ಆಹ್ವಾನಿಸುತ್ತದೆ.
ಪ್ರಕಾಶಕರು/ಲೇಖಕರು ಪ್ರಕಟಿತ ಕೃತಿಯ 2 ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ : 'ಸಂವಾದ' ಮಾಸ ಪತ್ರಿಕೆ ಅಂಚೆ ಪೆಟ್ಟಿಗೆ ಸಂಖ್ಯೆ : 9143, ಹೇರೋಹಳ್ಳಿ
ಮಾಗಡಿರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು - 560 091
ದೂರವಾಣಿ : 3287943 / 3281667

ಕಲ್ಪನಾಚಾವ್ಲ ಭಾರತದ ಧ್ರುವತಾರೆಯೆ ?

ಫೆಬ್ರವರಿ 1ನೇ ತಾರೀಖಿನಂದು ಅಮೆರಿಕದ ಅಂತರಿಕ್ಷ ನೌಕೆ 'ಕೊಲಂಬಿಯ' ತನ್ನ 16 ದಿನಗಳ ಯಶಸ್ವಿ ಯಾತ್ರೆನ್ನು ಮುಗಿಸಿ ಭೂಮಿಗೆ ಇಳಿಯುವ ಸಂತಸದ ಕ್ಷಣಕ್ಕಾಗಿ NASAದ ವಿಜ್ಞಾನಿಗಳು ಮತ್ತು ಗನನಯಾತ್ರಿಗಳ ಸಂಬಂಧಿಕರು ಕಾತುರದಿಂದ ಕಾಯುತ್ತಿದ್ದರು. ಕೊಲಂಬಿಯ ನೌಕೆ 207135 ಅಡಿಗಳ ಅಂತರದಲ್ಲಿ ಗಂಟೆಗೆ 12,500 ಮೈಲಿಗಳ ವೇಗದೊಂದಿಗೆ ಭೂಮಿಗೆ ಇಳಿಯುವ ಸಂದರ್ಭದಲ್ಲುಂಟಾದ ತಾಂತ್ರಿಕ ತೊಂದರೆಯಿಂದ ಸ್ಫೋಟಗೊಂಡು ಭಸ್ಮವಾಗಿ ಹೋಯಿತು. ಅದರಲ್ಲಿದ್ದರ 7 ಜನ ಗಗನಯಾತ್ರಿಗಳ ಸುಟ್ಟು ಕರಕಲಾಗಿದ್ದ ದೇಹದ ಭಾಗಗಳು, ಧರಿಸಿದ್ದ ಬಟ್ಟೆಗಳು ಮತ್ತು ಹೆಲ್ಮೆಟ್‌ಗಳು ಕೂಡಿ ಚಿಂದಿಚಿಂದಿಯಾಗಿ ಸಿಡಿದುಹೋಗಿದ್ದವು.

ಇದರಿಂದ ಪ್ರಪಂಚಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಅಮೇರಿಕದ ಅಧ್ಯಕ್ಷ ಜಾರ್ಜ್‌ಬುಷ್, ಭಾರತದ ರಾಷ್ಟ್ರಪತಿ, ಪ್ರಧಾನಿ ಮತ್ತು ಉಪಪ್ರಧಾನಿ ಸೇರಿದಂತೆ ಅನೇಕರು ತಮ್ಮ ಶೋಕವ್ಯಕ್ತಪಡಿಸಿದರು. ವಿಶೇಷವಾಗಿ ಭಾರತದ ಪ್ರಧಾನಿಯವರು, ಕೊಲಂಬಿಯ ದುರಂತದ ಬಗ್ಗೆ ತಾವು ಪ್ರಾಮಾಣಿಕ ದುಃಖ ಮತ್ತು ಸಹಾನುಭೂತಿ ವ್ಯಕ್ತಪಡಿಸುತ್ತಿರುವುದಾಗಿ ಜಾರ್ಜ್‌ಬುಷ್‌ಗೆ ತಿಳಿಸಿದರು. (ಇತರೆ ದುರಂತರಗಳ ಬಗ್ಗೆ ವಾಜಪೇಯಿಯವರು ವ್ಯಕ್ತಪಡಿಸುವ ದುಃಖ ಮತ್ತು ಸಹಾನುಭೂತಿ ಕೇವಲ ನಾಟಕ ಎಂದರ್ಥ)! ಕೊಲಂಬಿಯ ಘಟನೆಯ ನಂತರ ಭಾರತದ ಬಹುಜನರ ಪಾಲಿಗೆ ಅಪರಿಚಿತವಾಗಿದ್ದ 'ಕಲ್ಪನಾಚಾವ್ಲಾ' ಎಂಬ ಹೆಸರು ದೇಶದ ಉದ್ದಗಲಕ್ಕೆ ಹರಡಿತು. ದೆಹಲಿ, ಪಂಜಾಬ್ ಮತ್ತು ಹರಿಯಾಣಗಳಲ್ಲಿ ಸರ್ಕಾರ ಪ್ರಾಯೋಜಿತ ಶ್ರದ್ಧಾಂಜಲಿ ಸಭೆಗಳು ನಡೆದವು. ಫೆಬ್ರವರಿ 5ರಂದು ಸಂಸತ್‌ಭವನದಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಚಾವ್ಲಾ ಹೆಸರಿನಲ್ಲಿ ಪ್ರಶಸ್ತಿ, ಸ್ಕಾಲರ್‌ಶಿಪ್ ಕೊಡುವುದಾಗಿ ಅನೇಕ ಸಂಘಸಂಸ್ಥೆಗಳು ಪ್ರಕಟಿಸಿದವು. ಕೇಂದ್ರ ಮಾನವ ಸಂಪನ್ಮೂಲ ಸಚಿವರಾದ ಮುರುಳಿ ಮನೋಹರ ಜೋಷಿ ಆಕೆಯ ಹೆಸರಿನಲ್ಲಿ 'ಪ್ರತಿವರ್ಷ ವಾರ್ಷಿಕ ಪ್ರಶಸ್ತಿ' ಕೊಡುವುದಾಗಿ ಘೋಷಿಸಿದ್ದಾರೆ.

ಒಂದಾನೊಂದು ಕಾಲದಲ್ಲಿ ಚಾವ್ಲಾ ವಾಸಿಸುತ್ತಿದ್ದ ಪಂಜಾಬಿನ ಚಂಡೀಗಢದ ಹಿಮಗಿರಿ ಎಂಜಿನಿಯರಿಂಗ್ ಹಾಸ್ಟೆಲ್‌ಗೆ ಆಕೆಯ ಹೆಸರಿಡಲು ತೀರ್ಮಾನಿಸಲಾಯಿತು. ವೈಮಾನಿಕ ವಿಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪದಕ **ಸಮೇತ** 25,000ರೂ. ಕೊಡುವುದಾಗಿ ಘೋಷಿಸಲಾಯಿತು. ಪುಣೆಯ ಮುನ್ಸಿಪಲ್ ಶಾಲೆಗೆ ಕಲ್ಪನಾ ಹೆಸರಿಡಲಾಯಿತು. ಹೀಗೆ ಭಾರತದಲ್ಲಿ ಕಲ್ಪನಾಚಾವ್ಲಾ ಸನ್ನಿ ಎಷ್ಟೊಂದು ಬೆಳೆಯಿತೆಂದರೆ ದಿನಪತ್ರಿಕೆಗಳು, ವಾರಪತ್ರಿಕೆಗಳು ಮತ್ತು ಟ್ಯಾಬೊಲಾಯ್ಡ್ ಪತ್ರಿಕೆಗಳು, ನಾ ಮುಂದೆ ತಾ ಮುಂದೆ ಎಂದು ಆಕೆಯ ಗುಣಗಾನದಲ್ಲಿ ತೊಡಗಿವೆ. ಜನಬಳಕೆಯಲ್ಲಿರುವ ಬಿರುದುಬಾವಲಿಗಳ ಹೆಸರುಗಳನ್ನೆಲ್ಲಾ ಕಲೆಹಾಕಿ ಆಕೆಯ ಹೆಸರಿನೊಂದಿಗೆ ತಳುಕು ಹಾಕಲು ತಿಣುಕಾಡುತ್ತಿವೆ. ಆಕೆಯ ಬಗ್ಗೆ ಹೊಗಳಿ ಬರೆಯದಿದ್ದರೆ ಜನ ಎಲ್ಲಿ ತಮ್ಮ ಪತ್ರಿಕೆಯನ್ನು ತಿರಸ್ಕರಿಸುತ್ತಾರೋ ಎಂಬಂತೆ ವರ್ತಿಸುತ್ತಿವೆ. ರಾಜಕಾರಣಿಗಳಂತೂ ಸಂಬಂಧವಿರದ ಕಡೆಯೂ ಆಕೆಯ ಹೆಸರನ್ನು ಎಳೆದು ತಂದು ಭಾಷಣ ಕುಟ್ಟುತ್ತಿದ್ದಾರೆ. ಜನರು ತಮ್ಮ ಜೀವನದಲ್ಲಿ ಕಲ್ಪನಾಚಾವ್ಲಾಳನ್ನು ಅನುಸರಿಸಬೇಕೆಂದು ಉಪದೇಶ ಮಾಡುತ್ತಿದ್ದಾರೆ.

ಕಲ್ಪನಾಚಾವ್ಲಾಳನ್ನು ಪೂಜಿಸುವ ಭರದಲ್ಲಿ ಆಕೆಯೊಂದಿಗೆ ಸತ್ತ ನತರ 6 ಜನರ ಹೆಸರುಗಳು ಭಾರತದಲ್ಲಿ ಅನಾಥವಾದವು. ಆಕೆಯನ್ನು ಹೊಗಳುವ ಪರಿ ಯಾವ ಅತಿರೇಕಕ್ಕೆ ಹೋಗಿದೆಯೆಂದರ, ಭಾರತರತ್ನ ಪ್ರಶಸ್ತಿಯನ್ನು ಕೊಡಬೇಕೆಂಬಷ್ಟರ ಮಟ್ಟಿಗೆ! (ಸರ್ಕಾರ ಕೊಡುವ ತಗಡು ಪ್ರಶಸ್ತಿಗಳಿಗೆ ಬಹು ಜನರು ಕವಡೆಕಾಸಿನ ಬೆಲೆ ಕೊಡುವುದಿಲ್ಲ ಎಂಬುದು ಬೇರೆ ಮಾತು)!

ಸಾವಿಗಿಂತ ಮುಂಚೆ ಭಾರತೀಯರ ಪಾಲಿಗೆ ನಗಣ್ಯವಾಗಿದ್ದ ಕಲ್ಪನಾಚಾವ್ಲ ತನ್ನ ಸಾವಿನ ನಂತರ ಇಷ್ಟೊಂದು ಚರ್ಚೆಯ ವಸ್ತುವಾಗಿರುವುದು, ಹೊಗಳಿಕೆ, ಪ್ರಶಸ್ತಿ ಮತ್ತು ಭಾರತ ರತ್ನವಾಗುವುದರತ್ತ ಹೊರಟಿರುವುದು ಯಾವ ಸಾಧನೆಗಾಗಿ? ಸತ್ತ ನಂತರವೂ ಆಕೆಯ ಛಿದ್ರವಾದ ಕಳೇಬರದ ತುಣುಕುಗಳನ್ನು ಈ ಹಂತಕ್ಕೆ ಎಳೆದುಕೊಂಡು ಹೋಗುತ್ತಿರುವ ಕೈಗಳು ಯಾವು? ಭಾರತದ ಬಹುಜನರ ಸ್ವಾವಲಂಬನೆ ಮತ್ತು ಅಭಿವೃದ್ಧಿಗಾಗಿ ಆಕೆಯ ವೈಜ್ಞಾನಿಕ ಕೊಡುಗೆ ಏನು? ಈ

ಕಲ್ಪನಾ ಚಿಕ್ಕಂದಿನಲ್ಲಿ ಕಲಿತ ಶಾಲೆಯಲ್ಲೂ ಆಕೆಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಚಿತ್ರ ಕೃಪೆ : ಇಂಡಿಯಾ ಟುಡೇ

> ಅತ್ಯಂತ ಶ್ರೀಮಂತ ಮನೆತನವೊಂದರಲ್ಲಿ ಹುಟ್ಟಿದ ಕಲ್ಪನಾರ ವಿದ್ಯಾಭ್ಯಾಸ, ವಿದೇಶಿ ಪಲಾಯನ ಮತ್ತು ವಿದೇಶಿ ಜೀವನವನ್ನು, ಒಂದು ಸಾಧನೆ ಎನ್ನಲು ಸಾಧ್ಯವಿಲ್ಲ. ಉತ್ತಮ ಆರ್ಥಿಕ ಹಿನ್ನಲೆಯಿಂದ ವಿದೇಶಿ ಶಿಕ್ಷಣವನ್ನು ಪಡೆದು ಅಮೇರಿಕ ಸೇರಿದಂತೆ ವಿಶ್ವದಾದ್ಯಂತ ಎಂಜಿನಿಯರ್, ಡಾಕ್ಟರ್ ವಿಜ್ಞಾನಿಗಳಾಗಿ ಕೆಲಸ ಮಾಡುತ್ತಿರುವ ಲಕ್ಷಾಂತರ ಭಾರತೀಯರಿದ್ದಾರೆ. ಇವರನ್ನು ಸಾಧಕರು ಎಂದು ಕರೆಯಲು ಸಾಧ್ಯವೆ? ಡಾಲರ್ ಹಾಗೂ ಯೂರೋ (EURO) ಸಂಪಾದಿಸಲು ಪಲಾಯನ ಮಾಡಿರುವ ರಾಷ್ಟ್ರದ್ರೋಹಿಗಳು ಇವರು.
>
> ○ ವೈ. ಮರಿಸ್ವಾಮಿ

ರೀತಿಯ ಅನೇಕ ಪ್ರಶ್ನೆಗಳನ್ನು ಯಾವ ಪರ್ತಕರ್ತರು, ರಾಜಕಾರಣಿಗಳು, ಸಮಾಜ ಸೇವಕರೆಂಬ ಹಟೆಪಟ್ಟಿ ಅಂಟಿಸಿಕೊಂಡಿರುವ ಐಷಾರ್‍ಯಾಮದ ಜೀವಿಗಳು, ಎಲ್ಲಿಯೂ ಎತ್ತುತ್ತಿಲ್ಲ. ಈ ಹಿನ್ನಲೆಯಲ್ಲಿ ಈ ಪ್ರಶ್ನೆಗಳು ಈಗಿನ ಸನ್ನಿವೇಶದಲ್ಲಿ ತಾರ್ಕಿಕ ಚರ್ಚೆಗೊಳಪಡುವ ಅಗತ್ಯವಿದೆ.

ವೈಯಕ್ತಿಕವಾಗಿ ನನಗೆ ಕಲ್ಪನಾಚಾವ್ಲಾರವರ ದುರ್ಮರಣದ ಬಗ್ಗೆ, ಅವರನ್ನೊಳಗೊಂಡಂತೆ ಉಳಿದ 6 ಜನರ ಬಗ್ಗೆ ಅನುಕಂಪವಿದೆ. ಆದರೆ ಚಾವ್ಲಾ ಬಗೆಗಿನ ಉತ್ಪ್ರೇಕ್ಷಿತ ವರದಿ ಮತ್ತು ಹೊಗಳಿಕೆಯ ಕುರಿತು ತಕರಾರಿದೆ.

ಅತ್ಯಂತ ಶ್ರೀಮಂತ ಮನೆತನವೊಂದರಲ್ಲಿ ಹುಟ್ಟಿದ ಕಲ್ಪನಾರ ವಿದ್ಯಾಭ್ಯಾಸ, ವಿದೇಶಿ ಪಲಾಯನ ಮತ್ತು ವಿದೇಶಿ ಜೀವನವನ್ನು, ಆರ್ಥಿಕ ಹಿನ್ನಲೆಯಲ್ಲಿ ಒಂದು ಸಾಧನೆ ಎನ್ನಲು ಸಾಧ್ಯವಿಲ್ಲ. ಬಡತನದ ಬೇಗುದಿಯಿಂದ ಬಹುದೂರವಿದ್ದ ಆಕೆ ಅವಕಾಶವಂಚಿತ ಜನಾಂಗಕ್ಕೆ ಸೇರಿದವರಲ್ಲ. ಉತ್ತಮ ಆರ್ಥಿಕ ಹಿನ್ನಲೆಯಿಂದ ವಿದೇಶಿ ಶಿಕ್ಷಣವನ್ನು ಪಡೆದು ಅಮೇರಿಕ ಸೇರಿದಂತೆ ವಿಶ್ವದಾದ್ಯಂತ ಎಂಜಿನಿಯರ್, ಡಾಕ್ಟರ್ ವಿಜ್ಞಾನಿಗಳಾಗಿ ಕೆಲಸ ಮಾಡುತ್ತಿರುವ ಲಕ್ಷಾಂತರ ಭಾರತೀಯರಿದ್ದಾರೆ. ಇವರನ್ನು ಸಾಧಕರು ಎಂದು ಕರೆಯಲು ಸಾಧ್ಯವೆ? ಖಂಡಿತವಾಗಿಯೂ ಇವರು ಸಾಧಕರಲ್ಲ. ಆದರೆ ಸಮಯ ಸಾಧಕರು. ಮೀಸಲಾತಿಯಿಂದ ತಮ್ಮ ಪ್ರತಿಭೆಗೆ ತಕ್ಕ ಪ್ರೋತ್ಸಾಹ ಮತ್ತು ಅವಕಾಶಗಳು ಸಿಗುತ್ತಿಲ್ಲವೆಂಬ ನೆಪವೊಡ್ಡಿ, ಡಾಲರ್ ಹಾಗೂ ಯೂರೋ (EURO) ಸಂಪಾದಸಿಲು ಪಲಾಯನ ಮಾಡಿರುವ ರಾಷ್ಟ್ರದ್ರೋಹಿಗಳು, ಜನವರಿ 20ರ OUTLOOK ವಾರಪತ್ರಿಕಯ ಸರ್ವೆ ಪ್ರಕಾರ, ಪ್ರಪಂಚದಲ್ಲಿಯೇ ವಿದ್ಯಾರ್ಥಿಗಳನ್ನು ಅಮೇರಿಕಕ್ಕೆ Export ಮಾಡುವುದರಲ್ಲಿ ಭಾರತವು ಅಗ್ರಸ್ಥಾನದಲ್ಲಿದೆ. ಅವರಲ್ಲಿ ಶೇ. 90ರಷ್ಟು ಜನ ಮರಳಿ ಭಾರತಕ್ಕೆ ಬರುವುದಿಲ್ಲ! ಅಂಥವರಲ್ಲಿ ಕಲ್ಪನಾಚಾವ್ಲಾ ಕೂಡ ಒಬ್ಬರು. ಹುಟ್ಟನ್ನು ಹೊರತುಪಡಿಸಿ ಉಳಿದಂತೆಲ್ಲಾ ವಿದೇಶಿಗಳಾಗಿರುವ ಇಂಥವರು ಮನುವಾದಿಗಳ ದೃಷ್ಟಿಯಲ್ಲಿ ಭಾರತೀಯರು, ಸೋನಿಯಾಗಾಂಧಿಯಂಥ'ವರು ಭಾರತೀಯರಾಗಿ ಬದುಕುತ್ತಿದ್ದರೂ ವಿದೇಶಿಯರು! ಚಾವ್ಲಾ ಅಮೇರಿಕದ ಡಲ್ಲಾಸ್‌ನಗರದಲ್ಲಿರುವ ಯೂನಿವರ್ಸಿಟಿ ಆಫ್ ಆರ್ಲಿಂಗ್‌ಟನ್ ಕ್ಯಾಂಪಸ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದ ತಕ್ಷಣ ಮಾಡಿದ ಮೊದಲ ಕೆಲಸವೆಂದರೆ, ಜಾನ್‌ಹ್ಯಾರಿಸನ್ ಎಂಬ ವೈಮಾನಿಕ ಹಾರಾಟದ ಬಗ್ಗೆ ತರಬೇತಿ ಕೊಡುವ ಶಿಕ್ಷಕನನ್ನು ಮದುವೆಯಾದದ್ದು. ಆಕೆಯ ಮದುವೆಯಲ್ಲೂ ಕೂಡ ವ್ಯವಹಾರಿಕ ಜ್ಞಾನ ಮತ್ತು ಅವಕಾಶವಾದಿತನ ಕಣ್ಣಿಗೆ ರಾಚುತ್ತದೆ. ತಮ್ಮ ಜೀವನೋದ್ಧಾರಕ್ಕಾಗಿ ಅಮೇರಿಕದಂತಹ ಪಾಶ್ಚಾತ್ಯ ರಾಷ್ಟ್ರಗಳಿಗೆ ವಲಸೆಹೋಗುವ ಭಾರತೀಯರು ತಮ್ಮ ನೆಲೆಯನ್ನು ಭದ್ರಪಡಿಸಿಕೊಳ್ಳಲು ಈ ರೀತಿಯ ವೈವಾಹಿಕ ಸಂಬಂಧಗಳನ್ನು ಹೆಣೆದುಕೊಳ್ಳುತ್ತಾರೆ. ಚಾವ್ಲಾ ತಮ್ಮ ಮದುವೆಯ ನಂತರ ಕೊಲರಾಡೊ ಯೂನಿವರ್ಸಿಟಿಯಿಂದ ಪಿಎಚ್‌ಡಿ ಮುಗಿಸಿ ಗಗನಯಾತ್ರೆಯಾಗಿ ರೂಪುಗೊಳ್ಳುವತ್ತ ಗಮನ ಕೇಂದ್ರೀಕರಿಸಿದರು.

ಆಸಕ್ತಿದಾಯಕ ಸಂಗತಿ ಎಂದರೆ, ಅಮೇರಿಕದ NASA ಕೊಲಂಬಿಯ ಅಂತರಿಕ್ಷಯಾನಕ್ಕೆ ಕರೆನೀಡಿದಾಗ, 2000ಕ್ಕಿಂತಲೂ ಹೆಚ್ಚು ಜನ ಪರಿಣಿತರು

ಭಾರತದಿಂದ ಕಾಲುಕಿತ್ತಿರುವ ಕೋಟಾದೇಶಭಕ್ತರಿಗೆ ಮಾನವೀಯತೆ ಎಂದರೆ ಅಲರ್ಜಿ. ಭಾರತದ ಸಂದರ್ಭದಲ್ಲಿ ಮಾನವೀಯತೆ ಎಂದರೆ ಮೀಸಲಾತಿ ಎಂದೇ ಅರ್ಥೈಸಿಕೊಂಡಿರುವ ಮನುವಾದಿಗಳು, ಸಂಪೂರ್ಣವಾಗಿ ಅದನ್ನು ತಿರಸ್ಕರಿಸುತ್ತಾರೆ. ಕಲ್ಪನಾಚಾವ್ಲಾಳ ಮರಣದಿಂದ ಭಾರತಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಮೊಸಳೆ ಕಣ್ಣೀರು ಸುರಿಸುವವರು, ಆಕೆಯಿಂದ ಬಡ ಭಾರತೀಯನಿಗಾದ ಲಾಭವೇನು? ಎಂದು ವಿವರಿಸುತ್ತಿಲ್ಲ. ಹತ್ತಾರು ವರ್ಷಗಳ ಹಿಂದೆ ಭಾರತ ತ್ಯಜಿಸಿ ವೈಯಕ್ತಿಕ ಸಾಧನೆ ಮತ್ತು ಡಾಲರ್‌ಗಳ ಸಂಪಾದನೆಗಾಗಿ ಅಮೇರಿಕ ರೀತಿಯಲ್ಲಿ ಭಾರತೀಯಳಾಗಿರಲಿಲ್ಲ OFCOURSE ಹೆಸರನ್ನು ಹೊರತುಪಡಿಸಿ ! ನಿಜವಾದ ದೇಶಭಕ್ತರು ಎಂದಿಗೂ ಯುರೋ-ಡಾಲರ್‌ಗಳಿಗಾಗಿ ಪರದೇಶಕ್ಕೆ ತಮ್ಮನ್ನು ಹರಾಜು ಹಾಕಿಕೊಳ್ಳುವುದಿಲ್ಲ!

ಗಗನಯಾತ್ರೆಯಲ್ಲಿ ಪಾಲ್ಗೊಳ್ಳಲು ಅರ್ಜಿ ಹಾಕಿದ್ದರು. ಅವರಲ್ಲಿ ಚಾವ್ಲಾ ಸೇರಿದಂತೆ 7 ಜನರನ್ನು ಆಯ್ಕೆ ಮಾಡಲಾಗಿತ್ತು!

ಕಲ್ಪನಾಚಾವ್ಲಾಳ ಮರಣದಿಂದ ಭಾರತಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಮೊಸಳೆ ಕಣ್ಣೀರು ಸುರಿಸುವವರು, ಆಕೆಯಿಂದ ಬಡ ಭಾರತೀಯನಿಗಾದ ಲಾಭವೇನು? ಎಂದು ವಿವರಿಸುತ್ತಿಲ್ಲ. ಹತ್ತಾರು ವರ್ಷಗಳ ಹಿಂದೆ ಭಾರತ ತ್ಯಜಿಸಿ ವೈಯಕ್ತಿಕ ಸಾಧನೆ ಮತ್ತು ಡಾಲರ್‌ಗಳ ಸಂಪಾದನೆಗಾಗಿ ಅಮೇರಿಕ ರೀತಿಯಲ್ಲಿ ಭಾರತೀಯಳಾಗಿರಲಿಲ್ಲ OR COURSE ಹೆಸರನ್ನು ಹೊರತುಪಡಿಸಿ ! ನಿಜವಾದ ದೇಶಭಕ್ತರು ಎಂದಿಗೂ ಯುರೋ-ಡಾಲರ್‌ಗಳಿಗಾಗಿ ಪರದೇಶಕ್ಕೆ ತಮ್ಮನ್ನು ಹರಾಜು ಹಾಕಿಕೊಳ್ಳುವುದಿಲ್ಲ!

ಕೋಮುವಾದವು ಅಪಾಯಕಾರಿಯಾಗಿ ಬೆಳೆಯುತ್ತಿರುವ ಇಂದಿನ ಸಂದರ್ಭಗಳಲ್ಲಿ, ಭಾರತದ ಕ್ರೈಸ್ತರು ಪಾಶ್ಚಾತ್ಯ ಸಂಸ್ಕೃತಿಯನ್ನು ಹರಡುತ್ತಿದ್ದಾರೆಂಬ ಆರೋಪವನ್ನು ಹಿಂದುತ್ವವಾದಿಗಳು ಮಾಡುತ್ತಿದ್ದಾರೆ. ಫೆಬ್ರವರಿ 14ರಂದು ನಡೆಯುವ 'ಪ್ರೇಮಿಗಳ ದಿನ'ವನ್ನು ಪಾಶ್ಚಾತ್ಯ ಸಂಸ್ಕೃತಿಯ ಆಚರಣೆ ಎಂದು ಪ್ರತಿಭಟಿಸುತ್ತಿರುವ ಶಿವಸೇನೆ, ಹಿಂದೂ ಮಕ್ಕಳ್ ಕಚ್ಚಿ ಇತ್ಯಾದಿ ಸಂಘ ಪರಿವಾರದ ತುಕಡಿಗಳು ಪರಿಷತ್ ಮತ್ತು ಭಜರಂಗದಳ ಹಿಂದು ಯುವಕ-ಯುವತಿಯರು ಅನ್ಯ ಧರ್ಮದ ಅದರಲ್ಲೂ ವಿಶೇಷವಾಗಿ ಮುಸ್ಲಿಂ ಧರ್ಮದ ಯುವಕ-ಯುವತಿಯರನ್ನು ಮದುವೆಯಾಗದಂತೆ ನಿರ್ಬಂಧಿಸಲು ಅನೇಕ ತಂತ್ರಗಳನ್ನು ನಡೆಸುತ್ತಿರುವುದನ್ನು ಕಾಣುತ್ತಿದ್ದೇವೆ. ಗುಜರಾತ್ ಕೋಮು ದಳ್ಳುರಿಯ ಸಂದರ್ಭದಲ್ಲಿ ಧಾರ್ಮಿಕ ಚೌಕಟ್ಟನ್ನು ದಾಟಿ ಮದುವೆಯಾಗಿದ್ದ ಹಿಂದೂ-ಮುಸ್ಲಿಂ, ಮುಸ್ಲಿಂ-ಹಿಂದೂ ದಂಪತಿಗಳನ್ನು ಮತಾಂಧರು ಅತ್ಯಂತ ಕ್ರೂರವಾಗಿ ಹತ್ಯೆಗೈದ ಘಟನೆಗಳು ನಮ್ಮ ಕಣ್ಣೆದುರಿಗಿದೆ.

ಆದರೆ, ಹಿಂದೂನಾಜಿಗಳು ಪರದೇಶದಲ್ಲಿದ್ದು ಅಲ್ಲಿಯವರನ್ನು ಮದುವೆಯಾಗಿ ಪಾಶ್ಚಾತ್ಯ ಜೀವನವನ್ನು ರಾಜರೋಷವಾಗಿ ನಡೆಸುತ್ತಿರುವವರ ತಮ್ಮ ಬಂಧುಗಳ ಬಗ್ಗೆ ಬಾಯಿಬಿಚ್ಚುತ್ತಿಲ್ಲ ಅವರು ಬಿಸಾಡುವ ಡಾಲರುಗಳ ಎಂಜಲಿನಿಂದ ಭಾರತದಲ್ಲಿರುವ ಕ್ರೈಸ್ತ-ಮುಸಲ್ಮಾನರ ಮಾರಣ ಹೋಮ ನಡೆಸಿ, ಅವರ ಸಮಾಧಿಯ ಮೇಲೆ ರಾಮರಾಜ್ಯವನ್ನು ಕಟ್ಟಿ ರಾಜಕೀಯ ಅಧಿಕಾರ ನಡೆಸುವುದೊಂದೇ ಅವರ ಮುಂದಿರುವ ಗುರಿ. ವಿದೇಶದಲ್ಲಿ ನೆಲೆಸಿರುವ ಭಾರತೀಯರಿಂದ ಮನುವಾದಿಗಳಿಗೆ ಲಾಭವಿದೆಯೇ ಹೊರತು ಬಹು ಜನರಿಗಲ್ಲ. ಕಲ್ಪನಾಚಾವ್ಲಾಳ ಕಾರ್ಯ, ಸಾಧನೆ ಮತ್ತು ಸಂಪಾದನೆಯಿಂದ ಭಾರತದ ಬಡಜನತೆಗೆ, ನಿರುದ್ಯೋಗಿಗಳಿಗೆ, ಅಂಗವಿಕಲರಿಗೆ, ಅನಕ್ಷರಸ್ಥರಿಗೆ, ಎಳ್ಳಷ್ಟು ಪ್ರಯೋಜನವಾಗಿಲ್ಲ. ಬಹುಜನರ ಬಡನತ ನೀಗಿಲ್ಲ. ಉದ್ಯೋಗ ಕನಸಿನ ಮಾತಾಗಿದೆ. ಆರೋಗ್ಯ ಮರೆಯಾಗಿದೆ. ವಿದ್ಯೆ ದುಬಾರಿಯಾಗುತ್ತಿದೆ. ಆದರೂ, ಆಕೆಯ ಸುಟ್ಟು ಕರುಕಲಾದ ದೇಹದ ತುಣುಕುಗಳನ್ನು ಎಳೆದು ತಂದು 'ಭಾರತ ರತ್ನ' ಎಂದು ಬಹು ಜನರ ಮೇಲೆ ಪ್ರತಿಷ್ಠಾಪಿಸುತ್ತಿರುವ ಶಕ್ತಿ ಯಾವುದು? ಅದೇ ಮನುವಾದ, ಸನಾತನವಾದ, ಬ್ರಾಹ್ಮಣ್ಯ.

ಭಾರತದ ವರ್ಣಾಶ್ರಮದ ಸಮಾಜದಲ್ಲಿ, ಉತ್ತಮ ಜಾತಿಯವರು ಎಲ್ಲೇ ಇರಲಿ, ಹೇಗೆ ಇರಲಿ, ಅವರು ಶ್ರೇಷ್ಠರು ಮತ್ತು ಪ್ರಶ್ನಾತೀತರು. ಬ್ರಾಹ್ಮಣರು ತಮ್ಮನ್ನು ಭೂಮಿಯ ಮೇಲೆ ನಡೆದಾಡುವ ದೇವತೆಗಳೆಂದು ದೇವರುಗಳೆಂದು ಎಗ್ಗಿಲ್ಲದೆ ಗುರುತಿಸಿಕೊಳ್ಳುತ್ತಾರೆ. ಬ್ರಾಹ್ಮಣ್ಯ ಎನ್ನುವುದು ಇಂದು ರಾಷ್ಟ್ರಗಳ ಎಲ್ಲೆಯನ್ನು ಮೀರಿ ಬೆಳೆಯುತ್ತಿದೆ. ಅದನ್ನು ಭಾರತದ ಬಹು ಜನರ ಮೇಲೆ ಬಲತ್ಕಾರವಾಗಿ ಸದಾ ಹೇರುವ ಪ್ರಯತ್ನ ನಡೆಯುತ್ತಿದೆ. ಅದಕ್ಕಾಗಿ ಅಪಘಾತವೊಂದರಲ್ಲಿ ಸತ್ತು ಹೋಗಿರುವ ಕಲ್ಪನಾಚಾವ್ಲಾರವರ ಸುಟ್ಟು ಕರುಕಲಾದ ದೇಹದ ತುಣುಕುಗಳನ್ನು ಕೂಡ ಅದು ಬಳಸಿಕೊಳ್ಳುತ್ತದೆ!

ಅಮೇರಿಕದ ಆತ್ಮವಾಗಿರುವ ಆಕೆಯನ್ನು ಭಾರತದ ಧ್ರುವತಾರೆ ಎಂದು ಪ್ರತಿಬಿಂಬಿಸುತ್ತಿದೆ! ಆಕೆಯ ತಿಥಿಯನ್ನು God bless America ಎಂಬ ಬ್ಯಾನರಿನಡಿ, ಆಕೆಯ ಮನೆಯವರೇ ಅಮೇರಿಕದಲ್ಲಿ ನಡೆಸಿದರು! ಕಲ್ಪನಾಚಾವ್ಲಾ ಮತ್ತು ಇತರ ಆರು ಜನ ಗಗನಯಾತ್ರಿಗಳ 'ಕೊಲಂಬಿಯ' ದುರ್ಘಟನೆಯ ಬೆನ್ನ ಹಿಂದೆಯೇ ಅಮೇರಿಕದ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ನಿರ್ಮಾಣದ 10ನೇ ಯಾನಕ್ಕೆ ಸಿದ್ಧತೆ ನಡೆದಿದೆ. ಈ ಸಲ ಭಾರತೀಯ ಮೂಲಕ (ಹುಟ್ಟು ಭಾರತ-ಮನಸು ಅಮೇರಿಕ) ಸುನೀತಾ ವಿಲಿಯಮ್ಸ್‌ರವರನ್ನು NASAಆಯ್ಕೆ ಮಾಡಿದೆ. ಸುನೀತಾ ವಿಲಿಯಮ್ಸ್ ಗುಜರಾತಿನ ಮಾಜಿಗೃಹಮಂತ್ರಿ ಹರೀನ್ ಪಾಂಡೆ ಅವರ ಸಂಬಂಧಿ! ಹರೀನ್ ಪಾಂಡೆ ತನ್ನ ಅಧಿಕಾರದ ಸಮಯದಲ್ಲಿ ಗುಜರಾತಿನ ಮುಸಲ್ಮಾನ ಮತ್ತು ಕ್ರೈಸ್ತರ ಪಾಲಿಗೆ ಕಟುಕನಾಗಿದ್ದ. ಅವರ ಜನಗಣತಿಯನ್ನು ಮಾಡುವುದರ ಮೂಲಕ ಕೋಮು ದಳ್ಳುರಿಯಲ್ಲಿ ಅವನ ನಿರ್ನಾಮ ಮಾಡಲು ಬೇಕಾದ ಮಾಹಿತಿ ಕಲೆ ಹಾಕಿ, ಸಂಘ ಪರಿವಾರದ ಹೀರೋ ಆಗಿದ್ದ. ಈ ಹಿಂದೂ ದೇಶಭಕ್ತನ ಸಂಬಂಧಿಯಾಗಿರುವ ಸುನೀತಾ ಅಮೇರಿಕದ ನೌಕಾ ಪಡೆಯ ಅಕಾಡೆಮಿಯಿಂದ ಪದವಿ ಪಡೆದಿರುವ ಹೆಲಿಕಾಪ್ಟರ್ ಪೈಲಟ್ ಆಗಿದ್ದಾರೆ. ಅಂದ ಹಾಗೆ ಇವರ ಗಂಡನ ಪೂರ್ತಿ ಹೆಸರು ಮೈಕಲ್ ವಿಲಿಯಮ್ಸ್!

NASAದ 10ನೇ ಗಗನಯಾನ ಯಶಸ್ವಿಯಾಗಲಿ ಎಂದು ಸುನೀತಾ ವಿಲಿಯಮ್ಸ್ ಮತ್ತು ಅವರ ಜೊತೆ ಹೋಗಲಿರುವ ಗಗನಯಾತ್ರಿಗಳಿಗೆ ಶುಭಕೋರೋಣ ! ●

ಅನುಮಾನಗಳ ಸುಳಿಯಲ್ಲಿ ಹಿಂದೂ-ಮುಸ್ಲಿಂ

ಡಾ. ರಾಮಮನೋಹರ ಲೋಹಿಯಾ ಭಾರತ ಕಂಡ ಅಪರೂಪದ ವ್ಯಕ್ತಿ. ಭಾರತದ ಶಾಪಗ್ರಸ್ತ ನೆಲದಲ್ಲಿ ಸಮಾಜವಾದದ ಮೂಲಕ ಹೊಸ ಬೆಳಕನ್ನು ತರಲು ಹೋರಾಡಿದವರಲ್ಲಿ ಲೋಹಿಯಾ ಪ್ರಮುಖರು. ಮಾರ್ಚ 24 ಅವರ ಹುಟ್ಟು ಹಬ್ಬ. ಗಾಂಧೀಜಿಯವರ ಮೆಚ್ಚಿನ ಶಿಷ್ಯರಾಗಿದ್ದ ಲೋಹಿಯಾ ಗಾಂಧಿಯ ಆರಾಧಕರಾಗಿದ್ದಂತೆ ವಿಮರ್ಶಕರೂ ಆಗಿದ್ದರು. ಸ್ವಾತಂತ್ರ್ಯೋತ್ತರದಲ್ಲಿ ನೆಹರೂ ಯುಗದ ಕಟು ಟೀಕಾಕಾರರಾದ ಲೋಹಿಯಾ ಕಾಂಗ್ರೆಸ್ಸೇತರವಾದದ ತೀವ್ರ ಪ್ರತಿಪಾದಕರಾಗಿದ್ದರು.

ಮೂಲ : ರಾಮ ಮನೋಹರ ಲೋಹಿಯಾ   ಅನು : ಹಸನ್‌ನಯೀಂ ಸುರಕೋಡ

ಹೌದು, ಇತಿಹಾಸವನ್ನು ಹೇಗೆ ನೋಡಬೇಕೆಂಬುದೇ ತುಂಬ ಮುಖ್ಯವಾಗುತ್ತದೆ. ಕಾರಣ, ಎಷ್ಟೇ ಆಗಲಿ ನಾವು ಹಿಂದೂ-ಮುಸಲ್ಮಾನ ಸಮಸ್ಯೆ ಕುರಿತು ಮಾತನಾಡುವಾಗ ದಂತಗೋಪುರದಲ್ಲಿ ಕೂತು ಚರ್ಚಿಸುವುದಿಲ್ಲ; ನಾವು ಅರಬಸ್ತಾನದ ಮುಸಲ್ಮಾನರ ಕುರಿತು ಮಾತನಾಡದೆ ಭಾರತದ ಮುಸಲ್ಮಾನರ ಕುರಿತು ಮಾತನಾಡುತ್ತೇವೆ. ಭಾರತದ ಮುಸ್ಮಲ್ಮಾನರು ಹಿಂದೂಗಳ ಸೋದರರರೇ ಹೊರತು ಅರಬಸ್ತಾನದ ಮುಸಲ್ಮಾನರ ಸೋದರರಲ್ಲ. ಈ ಸೋದರ ಸಂಬಂಧವೇ ಇಲ್ಲವೆಂದರೆ, ಇವರಲ್ಲಿ ಅರಿವು ಮೂಡುವುದು ಸಾಧ್ಯವೇ ಇಲ್ಲ. ಸಾಮಾನ್ಯವಾಗಿ ಹಿಂದೂ ಹಾಗೂ ಮುಸಲ್ಮಾನರಲ್ಲಿ ಒಂದು ಭ್ರಮೆ ಇದೆ. ಏಳೆಂಟು ನೂರು ವರ್ಷಗಳವರೆಗೆ ಮುಸಲ್ಮಾನರ ಆಡಳಿತವಿತ್ತು. ಅವರು ದಬ್ಬಾಳಿಕೆ ನಡೆಸಿದರು, ಅತ್ಯಾಚಾರ ಎಸಗಿದರು ಎಂದು ಹಿಂದೂ ಭಾವಿಸುತ್ತಾನೆ. ಮುಸಲ್ಮಾನ ಎಷ್ಟೇ ಕಡುಬಡವನಾದರೂ, ಏಳೆಂಟು ಶತಮಾನಗಳ ಕಾಲ ರಾಜ್ಯವಾಳಿದ ತನ್ನ ಕೋಮಿನವರು ಈಚೆಗಷ್ಟೇ ಕೆಟ್ಟ ದಿನಗಳನ್ನು ಎದುರಿಸಬೇಕಾಗಿದೆ ಎಂದು ಭಾವಿಸುತ್ತಾನೆ.

ಹಿಂದೂ ಹಾಗೂ ಮುಸಲ್ಮಾನರಿಬ್ಬರಲ್ಲೂ ಈ ತಪ್ಪು ಕಲ್ಪನೆ ಮನೆ ಮಾಡಿಬಿಟ್ಟಿದೆ. ಇದು ಸರಿಯಲ್ಲ. ಇದು ಸರಿ ಇದ್ದರೆ ಈ ಬಗ್ಗೆ ನಾನೇನನ್ನೂ ಹೇಳಬೇಕಾಗಿರಲಿಲ್ಲ. ನಿಜ ಸಂಗತಿ ಎಂದರೆ, ಕಳೆದ ಏಳೆಂಟು ನೂರು ವರ್ಷಗಳಲ್ಲಿ ಮುಸಲ್ಮಾನ ಮುಸಲ್ಮಾನನ್ನೇ ಕೊಂದಿದ್ದಾನೆ. ಇದು ಕೇವಲ ಸಾಂಕೇತಿಕವಾದ ಮಾತಲ್ಲ, ಇದು ಅಪ್ಪಟ ಸತ್ಯ. ತೈಮೂರಲಂಗ ಬರುತ್ತಲೆ ನಾಲ್ಕೈದು ಲಕ್ಷ ಜನರ ಕಗ್ಗೊಲೆ ಮಾಡಿದ. ಆ ಪೈಕಿ ಮೂರು ಲಕ್ಷ ಮುಸಲ್ಮಾನರೇ: ಕೊಲೆಯಾದವರು ಪಠಾಣ ಮುಸಲ್ಮಾನರು, ಕೊಲೆ ಮಾಡಿದವನು ಮೊಗಲ್ ಮುಸಲ್ಮಾನ. ಒಮ್ಮೆ ಮೊಗಲ್ ಮುಸಲ್ಮಾನರು ಪಠಾಣ ಮುಸಲ್ಮಾನರನ್ನೂ ಮತ್ತೊಮ್ಮೆ ಆಫ್ರಿಕಾದ ಮುಸಲ್ಮಾನರು ಮೊಗಲ್ ಮುಸಲ್ಮಾನರನ್ನೂ ಕೊಂದರು ಎನ್ನುವ ಮಾತು ಮುಸಲ್ಮಾನರ ಮನೆ ಮನೆಯಲ್ಲಿ ಜನಜನಿತವಾದರೆ-ಏಳೆಂಟು ಶತಮಾನಗಳ ಘಟನಾವಳಿ ಇವರ ಕಣ್ಣೆದುರು ಯಥಾವತ್ತಾಗಿ ಮೂಡಿ ಬರುತ್ತದೆ. ಇದು ಭಾರತದ ಮುಸಲ್ಮಾನರ ಸಮಸ್ಯೆಯಾಗಿರದೆ, ದೇಶೀ ಹಾಗೂ ವಿದೇಶೀಯರ ಪ್ರಶ್ನೆಯಾಗಿದೆ. ಎಲ್ಲಕ್ಕೂ ಮೊದಲು ಅರಬಸ್ತಾನದಿಂದ ಅಥವಾ ಬೇರೆಲ್ಲಿಂದಲೋ ಮುಸಲ್ಮಾನರು ಬಂದರು; ಇವರು ವಿದೇಶೀಯರು. ಈ ಜನ ಭಾರತೀಯರ ಆಡಳಿತವನ್ನು ಕೊನೆಗಾಣಿಸಿದರು. ಬರುಬರುತ್ತಾ ಇವರೇ ದೇಶೀಯರಾದರು. ಶತಮಾನ ಅಥವಾ ಅರ್ಧ ಶತಮಾನದಲ್ಲಿ ಅವರು ದೇಶೀಯರಾಗುವಷ್ಟರಲ್ಲಿ, ಮತ್ತೊಂದು ವಿದೇಶೀ ಅಲೆ ಬಂತು. ಈ ಹೊಸ ವಿದೇಶೀಯರು ಹಿಂದೂಗಳನ್ನು ಕೊಂದಂತೇ ದೇಶೀ ಮುಸಲ್ಮಾನರನ್ನೂ ಕೊಂದರು. ಮುಂದೆ ಈ ವಿದೇಶೀಯರೂ ಒಂದು ಶತಮಾನ ಅಥವಾ ಅರ್ಧ ಶತಮಾನ ಕಳೆದಂತೆ ಕ್ರಮೇಣ ದೇಶೀಯರಾದರು. ಮತ್ತೆ ಇನ್ನೊಂದು ಅಲೆ ಬಂತು. ಏಳೆಂಟು ಶತಮಾನಗಳಲ್ಲಿ ದೇಶೀಯರೆಲ್ಲ ನಪುಂಸಕರಾಗಿದ್ದರು ಹಾಗೂ ವಿದೇಶಿಯರು ಸುಲಿಗೆಕೋರರಾಗಿದ್ದರೆಂಬುದು, ದೇಶೀಯರೆಲ್ಲ ಹೇಡಿಗಳಾಗಿದ್ದರು ಹಾಗೂ ವಿದೇಶೀಯರು ಕಾಡು ಮನುಷ್ಯರಾಗಿದ್ದರೆಂಬುದು ನಮ್ಮ ದೇಶದ ದೌರ್ಭಾಗ್ಯವಾಗಿತ್ತು. ಆ ಏಳೆಂಟು ಶತಮಾನಗಳ ನಮ್ಮ ಇತಿಹಾಸದ ಸಮೀಕ್ಷೆಯ ಫಲವಿದು.

ಶಾಂತವೇರಿ ಗೋಪಾಲಗೌಡರೊಂದಿಗೆ ಡಾ. ಲೋಹಿಯಾ

ಈ ಮಾತನ್ನು ಹಿಂದೂ ಹಾಗೂ ಮುಸಲ್ಮಾನರಿಬ್ಬರೂ ಅರಿತುಕೊಳ್ಳಬೇಕು. ಅಂದರೆ, ಹಿಂದೂ, ಮುಸಲ್ಮಾನ ಎನ್ನದೇ ಪ್ರತಿಯೊಂದು ಮಗುವಿಗೆ ಶಾಲೆಯಲ್ಲೂ ಮನೆಯಲ್ಲೂ ರಜಿಯಾ, ಶೇರಶಹ, ಜಾಯಸಿ ಮುಂತಾದವರು ಹಿಂದೂಗಳ ಹಾಗೂ ಮುಸಲ್ಮಾನರ ಪೂರ್ವಜರು ಎನ್ನುವ ಸಂಗತಿಯನ್ನು ಮನವರಿಕೆ ಮಾಡಿಕೊಡಬೇಕು. ರಜಿಯಾ, ಶೇರಶಹ, ಜಾಯಸಿ ಮುಂತಾದವರು ನನ್ನ ಪೂರ್ವಜರೆಂದೇ ನಾನು ಭಾವಿಸುತ್ತೇವೆ. ಈಗ ನಾನಾಡಿದ ಮಾತು ಅಷ್ಟು ಸುಲಭದ ಮಾತಲ್ಲ. ಹಿಂದೂ ಅಥವಾ ಮುಸಲ್ಮಾನ ಎನ್ನದೇ ನಮ್ಮ ಜನರೆಲ್ಲ ಗಜನಿ, ಗೋರಿ ಹಾಗೂ ಬಾಬರ್ ಸುಲಿಗೆಕೋರರಾಗಿದ್ದರು ಹಾಗೂ ಆಕ್ರಮಣಕಾರ

ರಾಗಿದ್ದರೆಂಬುದನ್ನು ಒತ್ತಿ ಹೇಳಲು ಸಮರ್ಥರಾಗಬೇಕೆಂದೂ ನಾನು ಬಯಸುತ್ತೇನೆ. ಈ ಎರಡೂ ಮಾತುಗಳನ್ನು ಆಡಿ ತೋರಿಸಲು ಅಳುಕಬಾರದು. ಗಜನಿ, ಗೋರಿ ಹಾಗೂ ಬಾಬರ್ ಇಡೀ ದೇಶವಾಸಿಗಳ ದೃಷ್ಟಿಯಲ್ಲಿ ಸುಲಿಗೆಕೋರರು ಹಾಗೂ ಆಕ್ರಮಣಕಾರರಾಗಿದ್ದರು. ಅವರು ವಿದೇಶೀಯರಾಗಿದ್ದರು ಹಾಗೂ ಈ ದೇಶದ ಜನರ ಆಡಳಿತವನ್ನು ಕೊನೆಗಾಣಿಸಿದ್ದರು. ಅದೇ ರಜಿಯಾ, ಶೇರಶಹ ಹಾಗೂ ಜಾಯಸಿಯಂಥವರು ನಮ್ಮೆಲ್ಲರ ಪೂರ್ವಜರಾಗಿದ್ದರು. ಇದು ಆ ಏಳೆಂಟು ಶತಮಾನಗಳ ನಮ್ಮ ಇತಿಹಾಸವನ್ನು ನೋಡುವ ದೃಷ್ಟಿಕೋನವಾಗಿಬಿಟ್ಟರೆ, ಹಿಂದೂ ಹಾಗೂ ಮುಸಲ್ಮಾನರು ಇತಿಹಾಸವನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡದೆ ಸಮನ್ವಯ ದೃಷ್ಟಿಕೋನದಿಂದ ನೋಡಲಾರಂಭಿಸುವರು. ನಮ್ಮ ಇತಿಹಾಸದಲ್ಲಿ ಯಾರು ವಿದೇಶೀಯರಾಗಿದ್ದರು, ಯಾರು ದೇಶೀಯರಾಗಿದ್ದರು, ಯಾರು ನಮ್ಮವರಾಗಿದ್ದರು, ಯಾರು ಪರಕೀಯರಾಗಿದ್ದರು ಎನ್ನುವುದು ಸ್ಪಷ್ಟವಾದ ಮೇಲೆ ಎರಡೂ ಕೋಮಿನ ದೃಷ್ಟಿಕೋನ ಒಂದೇ ಆಗಬಲ್ಲದು.

ನಾವು ಇಷ್ಟು ದೂರ ಕ್ರಮಿಸಬಲ್ಲೆವಾದರೆ ಇಂದಿನ ಸಂದರ್ಭಕ್ಕೆ ಉಪಯುಕ್ತವಾಗುವ ಕೆಲವು ಅಭಿಪ್ರಾಯಗಳನ್ನು ಈ ವಿಚಾರ ಸರಣಿಯಿಂದ ರೂಪಿಸಬಯಸುತ್ತೇನೆ. ಇಂದು ಹಿಂದೂಗಳು ಮುಸಲ್ಮಾನರು ಇಬ್ಬರೂ ಬದಲಾಗಬೇಕಾಗಿದೆ. ಎರಡೂ ಕೋಮಿನವರ ಮನಸ್ಸುಗಳು ಕೆಟ್ಟು ಹೋಗಿವೆ. ಈಗ ನಾನು ಪ್ರತಿಪಾದಿಸುತ್ತಿರುವ ವಿಚಾರ ಇದೇ ವಿಷಯಕ್ಕೆ ಸಂಬಂಧಿಸಿದ್ದು, ಅದೆಷ್ಟು ಜನ ಹಿಂದೂಗಳು ಶೇರಶಹನನ್ನು ತಮ್ಮ ಪೂರ್ವಜ ಎಂದು ಪರಿಗಣಿಸುತ್ತಾರೆ? ಅದೆಷ್ಟು ಜನ ಮುಸಲ್ಮಾನರು ಗಜನಿ, ಗೋರಿ ಸುಲಿಗೆಕೋರರಾಗಿದ್ದರೆಂದು ಹೇಳಬಲ್ಲರು? ನಾನೀಗ ನಿಮ್ಮೆದುರು ಮಾತನಾಡುತ್ತಿದ್ದೇನೆ. ಇದನ್ನು ಕೇಳಿದ ನಿಮಗೇ ಈ ಮಾತು ಸರಿ ಎನಿಸುತ್ತದೆ. ನೀವು ಮನೆಗೆ ಮರಳಿದ ನಂತರ ಯಾವನೋ ಸೈತಾನನೊಬ್ಬ ಬಂದು, "ಎಂಥ ಅಡ್ಡದಾರಿಗೆಳೆವ ಮಾತನ್ನು ಕೇಳಿ ಬಂದಿದ್ದೀರಿ. ಗಜನಿ, ಗೋರಿ ಬಂದಿರದಿದ್ದರೆ ಇಲ್ಲಿ ಮುಸಲ್ಮಾನರೆಲ್ಲಿರುತ್ತಿದ್ದರು? ಗೊತ್ತಾಯಿತಲ್ಲ ಸೈತಾನನ ಮಾತಿನ ಶೈಲಿ?" ಎಂದು ನಿಮ್ಮನ್ನು ಮತ್ತೆ ಅಡ್ಡದಾರಿಗೆ ಎಳೆಯಬಹುದು. ಇಂಥವರಿಗೆ ಇಸ್ಲಾಂ ಅಥವಾ ಪ್ರವಾದಿ ಮೊಹಮ್ಮದ್ ಮುಖ್ಯವಲ್ಲ. ಇವರಿಗೆ ಗಜನಿ-ಗೋರಿಗಳೇ ಮುಖ್ಯವಾಗುತ್ತಾರೆ. ಇದರ ಪರಿಣಾಮಗಳು ಏನಾಗಬಲ್ಲವೆಂದು ಸ್ವಲ್ಪ ಯೋಚನೆ ಮಾಡಬೇಕು. ಸೈತಾನನ ಮಾತಿನ ಧಾಟಿಯೇ ಈ ಥರದ್ದು. "ಅವನೆಂಥ ಮಾತುಗಳನ್ನು ಆಡಬಲ್ಲ ಎನ್ನುವುದು ಗೊತ್ತಾಯಿತಲ್ಲ? ಆತ ಶೇರಶಹನನ್ನು ಸಹ ಹಿಂದೂಗಳ ಪೂರ್ವಜರಲ್ಲಿ ಒಬ್ಬನನ್ನಾಗಿ ಮಾಡಿಬಿಟ್ಟ" ಎನ್ನುತ್ತಾನೆ ಆ ಸೈತಾನ. ಸರಿಯಾಗಿ ಯೋಚನೆ ಮಾಡಿ, ನಿಮ್ಮ ತಲೆಗಳನ್ನೂ ನಿಮ್ಮ ಮನಸ್ಸುಗಳನ್ನೂ ಕೊಡಹಿ, ಏಳೆಂಟು ಶತಮಾನಗಳ ಹೊಲಸನ್ನೆಲ್ಲ ಝಾಡಿಸಿ ಸ್ವಚ್ಛಗೊಳಿಸಿಕೊಂಡ ನಂತರ ನನ್ನ ಮಾತನ್ನು ಮತ್ತೊಮ್ಮೆ ಪರಿಶೀಲಿಸಿ, ಹಿಂದೂ ಮುಸಲ್ಮಾನರೆಲ್ಲರೂ ತಮ್ಮ ಮನೋಧರ್ಮಗಳಲ್ಲಿ ಪರಿವರ್ತನೆ ಮಾಡಿಕೊಳ್ಳುವ ಅಗತ್ಯವಿದೆ.

ನಮ್ಮೆಲ್ಲರ ಮನಸ್ಸುಗಳು ಕೆಟ್ಟು ಹೋಗಿವೆ ಎನ್ನುವುದಕ್ಕೆ ಎರಡು ನಿದರ್ಶನಗಳನ್ನು ನೀಡಿ ಇದನ್ನು ಸ್ಪಷ್ಟಪಡಿಸುತ್ತೇನೆ. ಮೇಲ್ನೋಟಕ್ಕೆ ಎಲ್ಲವೂ ಸರಿ ಎನ್ನುವಂತಿದೆ. ಹೆಚ್ಚಿನಂಶ ಸರಿಯೇ ಇದೆ. ಈ ಗಲಭೆಗಳಾದರೂ ಎಲ್ಲಿ ಸಂಭವಿಸುತ್ತವೆ? ನಗರಗಳಲ್ಲೇ ಅಲ್ಲವೆ? ಹೊರನೋಟಕ್ಕೆ ಪರಿಸ್ಥಿತಿ ಮಾಮೂಲಾಗಿದ್ದರೂ ದಂಗೆಗಳಾಗುತ್ತಲೇ ಇವೆ. ಆದರೆ ಒಳಗೆ ಏನು ಹುದುಗಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಒಳಗೊಳಗೇ ಮನಸ್ಸುಗಳು ಒಡೆದು ಹೋಗಿವೆ ಎನ್ನುವ ಸತ್ಯವನ್ನು ಪ್ರಾಮಾಣಿಕ ವ್ಯಕ್ತಿ ನಿರಾಕರಿಸಲಾರ. ಇದರಿಂದಾಗಿ ನಮ್ಮ ದೇಶವೆ ಹಾಳಾಗಬಲ್ಲದು ಎನ್ನುವ ಕಾರಣಕ್ಕಾಗಿ ನನಗೆ ಕೆಡುಕೆನಿಸುತ್ತದೆ. ಯಾವುದೇ ದೇಶದ ಎಲ್ಲಾ ಅಲ್ಪಸಂಖ್ಯಾತರು ಎಲ್ಲಿಯವರೆಗೆ ಸುಖಿಯಾಗಿರಲಾರರೋ ಅಲ್ಲಿಯವರೆಗೆ ಯಾವ ದೇಶವೂ ಸುಖಿಯಾಗಿರಲಾರದು. ಇದರರ್ಥ ನಾನು ಮುಸಲ್ಮಾನರ ಬಗ್ಗೆ ಮಾತಾಡುತ್ತಿದ್ದೇನೆ ಎಂದಲ್ಲ. ನಾನು ಕೇವಲ ಮುಸಲ್ಮಾನರನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತಾಡುತ್ತಿಲ್ಲ. ಮುಸಲ್ಮಾನರಲ್ಲಿ ಹೆಚ್ಚಾಗಿ ನೇಕಾರ, ಪಿಂಜಾರರಂಥ ಹಿಂದುಳಿದವರೇ ಇದ್ದಾರೆ. ಐದು ಕೋಟಿ ಮುಸಲ್ಮಾನರ ಜನಸಂಖ್ಯೆಯಲ್ಲಿ ನಾಲ್ಕೂವರೆ ಕೋಟಿ ಹಿಂದುಳಿದ ಮುಸಲ್ಮಾನರಿದ್ದಾರೆ. ನಾನು ಅವರ ಓದು ಬರಹ, ಬಡತನ ಮುಂತಾದ ಎಲ್ಲ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅವರಿಗೇ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತೇನೆ. ಅದೇ ರೀತಿ ಹರಿಜನ, ಆದಿವಾಸಿ ಮುಂತಾದ ಜನರಿದ್ದಾರೆ. ಎಲ್ಲಿಯವರೆಗೆ ಇವರೆಲ್ಲ ಸುಖವಾಗಿರಲಾರರೋ ಅಲ್ಲಿಯವರೆಗೆ ಭಾರತ ಸುಖಿಯಾಗಲಾರದು. ಈ ವಿಷಯವಾಗಿಯೂ ನಮ್ಮ ಮನೋಧರ್ಮ ಬದಲಾಗಬೇಕು. ●

ರಾಮಮನೋಹರ ಲೋಹಿಯಾ

ಭಾರತೀಯ ಸಮಾಜವಾದದ ಪ್ರಮುಖ ಚಿಂತಕ-ರಾಜಕಾರಣಿ ಡಾ. ರಾಮಮನೋಹರ ಲೋಹಿಯಾ 1910 ಮಾರ್ಚ್ 23ರಂದು ಉತ್ತರ ಪ್ರದೇಶದ ಫೈಜಾಬಾದ್‌ಜಿಲ್ಲೆಯ ಅಕ್ಬರ್‌ಪುರದಲ್ಲಿ ಹುಟ್ಟಿದರು. ತಂದೆ : ಹೀರಾಲಾಲ್, ತಾಯಿ : ಚಂದಾ, ಮುಂಬಯಿ, ಕಾಶಿ, ಕಲ್ಕತ್ತಾದಲ್ಲಿ ವಿದ್ಯಾಭ್ಯಾಸ ಮಾಡಿದ ಲೋಹಿಯಾ 1932ರಲ್ಲಿ ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಉಪ್ಪಿನ ಸತ್ಯಾಗ್ರಹ ಕುರಿತು ಪ್ರೌಢಪ್ರಬಂಧ ಬರೆದು ಅರ್ಥಶಾಸ್ತ್ರದಲ್ಲಿ ಪಿಎಚ್.ಡಿ. ಪದವಿ ಪಡೆದರು. ಜರ್ಮನ್ ಭಾಷೆಯಲ್ಲೇ ಮಾರ್ಕ್ಸ್ ಮತ್ತು ಹೆಗೆಲ್‌ರ ಕೃತಿಗಳನ್ನು ಅಭ್ಯಸಿಸಿದ ಲೋಹಿಯಾ ಅವರಿಬ್ಬರಿಗಿಂತಲೂ ಭಿನ್ನವಾಗಿ ಚರಿತ್ರೆಯನ್ನು ಅರಿಯುವ ಅಗತ್ಯ ಕುರಿತು ಚಿಂತಿಸಿದರು. 1934ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆಗಾಗಿ ದುಡಿದರು. 1936-38ರವರೆಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ವಿದೇಶಾಂಗ ವ್ಯವಹಾರ ವಿಭಾಗದ ಕಾರ್ಯದರ್ಶಿಯಾಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಹಲವು ಸಲ ಬ್ರಿಟಿಷ್ ಸರ್ಕಾರದಿಂದ ಬಂಧನಕ್ಕೊಳಗಾದರು. 1942ರ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಕಾಲದಲ್ಲಿ ಭೂಗತ ಹೋರಾಟ ಮುಂದುವರಿಸಿದರು. 1946ರ ಜೂನ್ ಆರರಂದು ಗೋವಾ ಸ್ವಾತಂತ್ರ್ಯ ಹೋರಾಟದಲ್ಲಿ ಬಂಧನಕ್ಕೊಳಗಾದರು.

ಗಾಂಧೀಜಿಯವರ ಮೆಚ್ಚಿನ ಶಿಷ್ಯರಾಗಿದ್ದ ಲೋಹಿಯಾ ಗಾಂಧಿಯ ಆರಾಧಕರಾಗಿದ್ದಂತೆ ವಿಮರ್ಶಕರೂ ಆಗಿದ್ದರು. ಸ್ವಾತಂತ್ರ್ಯೋತ್ತರದಲ್ಲಿ ನೆಹರೂ ಯುಗದ ಕಟು ಟೀಕಾಕಾರರಾದ ಲೋಹಿಯಾ ಕಾಂಗ್ರೆಸ್ಸೇತರವಾದದ ತೀವ್ರ ಪ್ರತಿಪಾದಕರಾಗಿದ್ದರು. 1952ರಲ್ಲಿ ಪ್ರಜಾ ಸಮಾಜವಾದಿ ಪಕ್ಷದ ರಚನೆಯ ಸೂತ್ರಧಾರಿಯಾಗಿದ್ದ ಅವರು 1962ರಲ್ಲಿ ನೆಹರೂ ವಿರುದ್ಧ ಲೋಕಸಭೆಗೆ ಸ್ಪರ್ಧಿಸಿ ಸೋತರು. 1963ರಲ್ಲಿ ಫರೂಕಾಬಾದ್ ಲೋಕಸಭಾ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದ ಲೋಹಿಯಾ 1967ರಲ್ಲಿ ಕನೌಜ್ ಕ್ಷೇತ್ರದಲ್ಲಿ ಗೆದ್ದರು. 'ಮ್ಯಾನ್‌ಕೈಂಡ್' (ಇಂಗ್ಲಿಷ್) ಹಾಗೂ 'ಚೌಕಂಭಾ' (ಹಿಂದಿ) ನಿಯತಕಾಲಿಕ ಪತ್ರಿಕೆಗಳ ಸಂಪಾದಕರಾಗಿದ್ದ ಲೋಹಿಯಾ ಉತ್ತಮ ಲೇಖಕರೂ ಆಗಿದ್ದರು. 'ದಿ ಕಾಸ್ಟ್ ಸಿಸ್ಟಮ್', 'ಮಾರ್ಕ್ಸ್, ಗಾಂಧಿ ಅಂಡ್ ಸೋಷಲಿಸಂ', 'ಗಿಲ್ಟಿ ಮೆನ್ ಆಫ್ ಇಂಡಿಯಾಸ್ ಪಾರ್ಟಿಷನ್', 'ಇಂಟರ್‌ವಲ್ ಡ್ಯೂರಿಂಗ್ ಪಾಲಿಟಿಕ್ಸ್', 'ಲ್ಯಾಂಗ್ವೇಜ್', 'ಫ್ರಾಗ್ಮೆಂಟ್ಸ್ ಆಫ್ ಎ ವರ್ಲ್ಡ್‌ಮೈಂಡ್' 'ರುಪೀಸ್ 25000ಎ ಡೇ', 'ನೋಟ್ ಅಂಡ್ ಕಾಮೆಂಟ್ಸ್'-ಇವು ಅವರು ಇಂಗ್ಲೀಷಿನಲ್ಲಿ ಬರೆದ ಮುಖ್ಯ ಕೃತಿಗಳು. 'ಸಮಾಜವಾದಿ ಆಂದೋಲನ್ ಕಾ ಇತಿಹಾಸ್', 'ಹಿಂದೂ, ಮುಸಲ್ಮಾನ್, ' 'ಅನ್ನ ಸಮಸ್ಯಾ', 'ಆಜಾದ್ ಹಿಂದೂಸ್ಥಾನ್ ಕಿ ನಯಿ ರುಜ್‌ಹಾನ್' ಇವು ಹಿಂದೆ ಭಾಷೆಯಲ್ಲಿರುವ ಅವರ ಮುಖ್ಯ ಕೃತಿಗಳು.

ಅವಿವಾಹಿತರಾಗಿಯೇ ಉಳಿದಿದ್ದ ಲೋಹಿಯಾ 1967ರ ಅಕ್ಟೋಬರ್ 12ರಂದು ಕಾಲವಶವಾದರು.

ಜಾತಿ ಹಾಗೂ ವರ್ಗಗಳ ವಿನಾಶದೆಡೆಗೆ

ಜಾತಿ ಎಂಬುದು ಯಾವುದೇ ನಿಯಮಿತ ಕಂತುಗಳಿಲ್ಲದ, ಜಗತ್ತಿನ ಅತಿದೊಡ್ಡ ವಿಮೆಯಾಗಿದೆ. ಏನೆಲ್ಲ ವಿಫಲವಾದರೂ ಒಗ್ಗಟ್ಟಂತೂ ಅಲ್ಲಿದೆ. ಇತರ ರೀತಿಯ ಐಕ್ಯತೆ ತರಲು ಅಲ್ಲಿರುವ ಅವಕಾಶವೂ ಅತ್ಯಲ್ಪ. ಒಂದು ಜಾತಿಯ ಜನ ತಮ್ಮ ಜಾತಿಯೊಳಗೇ, ತಮ್ಮ ಕುಟುಂಬದೊಳಗೇ ಸ್ನೇಹಿತರನ್ನು ಆಯ್ದುಕೊಳ್ಳಲು ಬಯಸುತ್ತಾರೆ. ಜನನ, ಮರಣ, ವಿವಾಹ ಮುಂತಾದ ಸಂಸ್ಕಾರಗಳ ಸಂದರ್ಭಗಳಲ್ಲಿ ಕಂಡುಬರುವ ಐಕ್ಯತೆಯು ರಾಜಕೀಯದಂತಹ ಇತರೆ ಎಲ್ಲ ವಿಷಯಗಳ ಮೇಲೂ ತನ್ನ ಪ್ರಭಾವ ಬೀರುತ್ತದೆ. ಇದು ಮನಸ್ಸು ಮತ್ತದರ ಮೂಲ ಆಲೋಚನೆಗಳ ಮೇಲೂ ಪ್ರಭಾವ ಬೀರಿ ಅವುಗಳ ನಡೆಯನ್ನು ನಿರ್ಧರಿಸುತ್ತದೆ. ರಾಜಕೀಯ ವಿಚಾರಗಳಂತೂ ಬಹು ಸುಲಭವಾಗಿ ಪ್ರಭಾವಕ್ಕೊಳಗಾಗುತ್ತವೆ.

ಮೂಲ : ರಾಮ ಮನೋಹರ ಲೋಹಿಯಾ
ಅನು : ಗುರುರಾಜ ಬೇಡಿಕರ್

ಜಾತಿ ಎಂಬುದು ಭಾರತೀಯ ಜೀವನದಲ್ಲಿ ಎಲ್ಲೆಡೆ ಆವರಿಸಿಕೊಂಡಿರುವ ಅತ್ಯಂತ ದುರ್ದಮ್ಯ ಸಂಗತಿ. ಅದನ್ನು ಸೈದ್ಧಾಂತಿಕವಾಗಿ ಅಲ್ಲಗಳೆಯುವವರೂ ಕೂಡ ವಾಸ್ತವ ಬದುಕಿನಲ್ಲಿ ಸ್ವೀಕರಿಸುವವರೇ. ಇಲ್ಲಿನ ಬದುಕೆಲ್ಲ ಜಾತಿಯ ಪರಿಧಿಯ ಒಳಗೇ ನಡೆಯುತ್ತದೆ. ಸುಸಂಸ್ಕೃತ ಜನರು ನಾಜೂಕಾಗಿ ಜಾತಿವ್ಯವಸ್ಥೆಯ ವಿರುದ್ಧ ಮಾತನಾಡುತ್ತಾರಾದರೂ ಕೃತಿಯಲ್ಲಿ ಅದನ್ನು ತಿರಸ್ಕರಿಸಬೇಕೆಂದು ಮಾತ್ರ ಅವರಿಗೆ ಹೊಳೆಯುವುದಿಲ್ಲ. ಜಾತಿಯೊಂದಿಗೆ ನಂಬಲಸಾಧ್ಯವಾದ ತಾದಾತ್ಮ್ಯ ಹೊಂದಿದವರ ಕಾರ್ಯಗಳ ಬಗ್ಗೆ ಅವರ ಗಮನ ಸೆಳೆದಾಗ ಅಪಮಾನಿತರಾದಂತೆ ಕೋಪಾವಿಷ್ಟರಾಗುತ್ತಾರೆ. ತಾವು ತಾತ್ವಿಕವಾದ ಉನ್ನತ ರೂಪು ರೇಷೆಗಳ ಬಗ್ಗೆ ಆರೋಗ್ಯಪೂರ್ಣ ಚಿಂತನೆಗೆ ತೊಡಗಿರುವಾಗ ತಮ್ಮನ್ನು ಟೀಕಿಸುವವರು ಅವರ ಹೊಲಸಾದ ಕಾರ್ಯವೈಖರಿಯನ್ನು ಇಲ್ಲಿಗೆ ಎಳೆತಂದು ತಮ್ಮ ಚಿಂತನೆ, ಚರ್ಚೆಯನ್ನೇ ಹಾಳು ಮಾಡುತ್ತಾರೆ ಎನ್ನುತ್ತಾರೆ. ಯಾರಾದರೂ ಅವರ ಜಾತೀಯ ವರ್ತನೆಯನ್ನು ತೋರಿಸಿಕೊಟ್ಟಾಗ ಈ ಜಾತಿಪೀಡಿತ ಮನಸ್ಕರು ಹಾಗೆ ತೋರಿಸಿಕೊಟ್ಟವರನ್ನೇ ಆರೋಪಿಸುತ್ತಾರೆ. ಈ ಟೀಕಾಕಾರರೇ ಜಾತಿಯ ವಾತಾವರಣವನ್ನು ಸೃಷ್ಟಿಸುವವರು ಎನ್ನುತ್ತಾರವರು. ಇತರ ಯಾವುದೇ ಸಂಸ್ಕೃತಿಗಿಂತಲೂ ಭಾರತೀಯ ಸಂಸ್ಕೃತಿಯ ವಿಶಿಷ್ಟ ಲಕ್ಷಣವೆಂದರೆ ವಿಚಾರಕ್ಕೂ ಆಚರಣೆಗೂ ಸಂಬಂಧವೇ ಇಲ್ಲದಿರುವುದು. ಆದರೆ ಈ ವಿಚಿತ್ರ ಕಂದರವು ಪ್ರಧಾನವಾಗಿ ಜಾತಿಯಿಂದ ಸೃಷ್ಟಿಯಾದುದು ಎಂದು ಯಾರಿಗೆ ಗೊತ್ತಿದೆ? ಜಾತಿಯದು ಒಂದು ಬದಲಾಗದ ಚೌಕಟ್ಟಾಗಿದೆ. ಅದರೊಳಗೇ ಬದುಕಬೇಕೆಂದಿದ್ದಲ್ಲಿ, ಮಾತು ಮತ್ತು ಕೃತಿಗಳ ನಡುವಿನ ಅಸಂಬದ್ಧತೆಯನ್ನು ಅದರ ದುಪ್ಪಟ್ಟು, ಮೂರುಪಟ್ಟು ಅಥವಾ ಅದಕ್ಕೂ ಹೆಚ್ಚು ಪ್ರಮಾಣದಲ್ಲಿ ಅದು ನಿರೀಕ್ಷಿಸುತ್ತದೆ.

ಬದುಕಿನ ಮುಖ್ಯ ಘಟ್ಟಗಳಾದ ಹುಟ್ಟು, ಸಾವು, ಮದುವೆ, ಔತಣ ಮುಂತಾದ ವಿಧಿಗಳು ಈ ಜಾತಿಯ ಚೌಕಟ್ಟಿನಲ್ಲಿಯೇ ನಡೆಯುತ್ತದೆ. ಒಂದೇ ಜಾತಿಗೆ ಸೇರಿದ ಜನಗಳು ಈ ನಿರ್ಣಾಯಕ ಘಟ್ಟಗಳಲ್ಲಿ ತಮ್ಮ ತಮ್ಮೊಳಗೇ ಸಹಾಯ ಮಾಡುತ್ತಾರೆ. ಇತರ ಜಾತಿಯ ಜನರು ಇವುಗಳ ಅಂಚಿನಲ್ಲಿದ್ದು ಕೆಲವೊಮ್ಮೆ ಸಮೀಪದಿಂದ ನೋಡುವವರಾಗಿರುತ್ತಾರೆ. ಈ ಚರ್ಚೆಯ ಆರಂಭದಲ್ಲಿಯೇ ಸರ್ವಸಾಧಾರಣವಾದ ಗ್ರಹಿಕೆಯನ್ನು ತಪ್ಪಿಸಬೇಕಿದೆ. ಇತ್ತೀಚಿನ ದಶಕಗಳಲ್ಲಿ ಕೆಲವೊಂದು ಅಂತರ್ಜಾತೀಯ ಚಟುವಟಿಕೆಗಳು ದೇಶದ ಬಹುಭಾಗದಲ್ಲಿ ನಡೆದಿವೆ. ಮೊದಲ ಹಂತದಲ್ಲ ಅವು ಊಟೋಪಚಾರ ಮುಂಚಾದ ಸಣ್ಣಪುಟ್ಟ ವಿದ್ಯುಕ್ತ ಕ್ರಿಯೆಗಳಿಗಷ್ಟೆ ಸೀಮಿತಗೊಂಡಿದ್ದು, ದೊಡ್ಡ ಮಟ್ಟದಲ್ಲಿ ವಿವಾಹ, ಜನನ ಮುಂತಾದವುಗಳವರೆಗೆ ಹೋಗಿಲ್ಲ. ಎರಡನೆಯದಾಗಿ, ಇದು ಮೇಲು ಮೇಲಿನ ಹಾಗೂ ತೋರಿಕೆಗೆ ಮಾತ್ರ ಅಂತರ್ಜಾತೀಯ ಎನ್ನುವಂತಹ ಚಟುವಟಿಕೆಯಾಗಿದೆ. ಮೇಲ್ಜಾತಿಯ ವಿವಿಧ ಸಮುದಾಯಗಳು ಅನೇಕ ಸಂದರ್ಭಗಳಲ್ಲಿ ತಮ್ಮೊಳಗೆ ಪರಸ್ಪರ ಊಟ ಮಾಡುವುದು ಹಾಗೂ ವಿವಾಹ ಮಾಡಿಕೊಳ್ಳುವುದು ಉಂಟು. ಆದರೆ ನಿಜವಾದ ಸಮಷ್ಟಿ ಕ್ರಿಯೆಗಳಲ್ಲಿ ಮೇಲು-ಕೀಳು ಜಾತಿಗಳ ನಡುವಿನ ಅಂತರವು ಎಂದಿನಂತೆ ಅಗಾಧವಾಗಿಯೇ ಇದೆ. ಜನರು ಅಂತರ್ಜಾತೀಯ ವಿವಾಹ ಮುಂತಾಗಿ ಮಾತನಾಡುವಾಗ ಮೇಲ್ಜಾತಿಗಳ ಒಳಗಿರುವ ಬೇರೆ ಬೇರೆ ಪಂಗಡಗಳ ನಡುವಿನ ವಿವಾಹ ಎಂದೇ ಭಾವಿಸುತ್ತಾರೆ.

ಜಾತಿ ಎಂಬುದು ಯಾವುದೇ ನಿಯಮಿತ ಕಂತುಗಳಿಲ್ಲದ, ಜಗತ್ತಿನ ಅತಿದೊಡ್ಡ ವಿಮೆಯಾಗಿದೆ. ಏನೆಲ್ಲ ವಿಫಲವಾದರೂ ಒಗ್ಗಟ್ಟಂತೂ ಅಲ್ಲಿದೆ. ಇತರ ರೀತಿಯ ಐಕ್ಯತೆ ತರಲು ಅಲ್ಲಿರುವ ಅವಕಾಶವೂ ಅತ್ಯಲ್ಪ. ಒಂದು ಜಾತಿಯ ಜನ ತಮ್ಮ ಜಾತಿಯೊಳಗೇ, ತಮ್ಮ ಕುಟುಂಬದೊಳಗೇ ಸ್ನೇಹಿತರನ್ನು ಆಯ್ದುಕೊಳ್ಳಲು ಬಯಸುತ್ತಾರೆ. ಜನನ, ಮರಣ, ವಿವಾಹ ಮುಂತಾದ ಸಂಸ್ಕಾರಗಳ ಸಂದರ್ಭಗಳಲ್ಲಿ ಕಂಡುಬರುವ ಐಕ್ಯತೆಯು ರಾಜಕೀಯದಂತಹ ಇತರೆ ಎಲ್ಲ ವಿಷಯಗಳ ಮೇಲೂ ತನ್ನ ಪ್ರಭಾವ ಬೀರುತ್ತದೆ. ಇದು ಮನಸ್ಸು ಮತ್ತದರ ಮೂಲ ಆಲೋಚನೆಗಳ ಮೇಲೂ ಪ್ರಭಾವ ಬೀರಿ ಅವುಗಳ ನಡೆಯನ್ನು ನಿರ್ಧರಿಸುತ್ತದೆ. ರಾಜಕೀಯ ವಿಚಾರಗಳಂತೂ ಬಹು ಸುಲಭವಾಗಿ ಪ್ರಭಾವಕ್ಕೊಳಗಾಗುತ್ತವೆ. ಜೀವನದ ಪ್ರಮುಖ ಹಾಗೂ ಖಾಸಗಿ ಘಟನೆಗಳಲ್ಲಿ ಸತತವಾದ ಈ ರೀತಿಯ ಒಡನಾಟವೇರ್ಪಟ್ಟಿರುವಾಗ ರಾಜಕೀಯ ಸಂಗತಿಗಳು ಮಾತ್ರ ಅದರಿಂದ ಹೊರಗುಳಿಯಬೇಕೆಂದು ಅಪೇಕ್ಷಿಸುವುದು ವಿಚಿತ್ರವಾಗಿ ಕಾಣಬಲ್ಲದು.

ಜನರು ತಂತಮ್ಮ ಜಾತಿಯ ಪರವಾಗಿ ಮತ ನೀಡುವ ಸಂದರ್ಭ ಕಂಡು ಚಕಿತರಾಗುವವರು ಬೇರಾವುದೋ ಗ್ರಹದಿಂದ ಬಂದವರಂತೆ ವರ್ತಿಸುತ್ತಾರೆಂದೇ ಅರ್ಥ. ಜೀವನದಲ್ಲಿ, ಜನನದಲ್ಲಿ, ಮದುವೆಯಲ್ಲಿ, ಮರಣದಲ್ಲಿ, ಸಹಭೋಜನದಲ್ಲಿ ಒಂದೇ ರೀತಿ ವರ್ತಿಸುವ ಗುಂಪು ಇನ್ನು ಹೇಗೆ ವರ್ತಿಸಬಹುದೆಂದು ನಿರೀಕ್ಷಿಸುತ್ತೀರಿ? ಭಯಾನಕವೆನಿಸುವ ಈ ಕ್ರಿಯೆಗಳ ಸಾಮಾನ್ಯ ಪಟ್ಟಿಗೆ, ಅನ್ನ ಸಂಪಾದನೆಯ ಪ್ರಮುಖ ಕುಲಕಸುಬುಗಳನ್ನು ಸೇರಿಸಬೇಕು. ಕುಲ ಕಸುಬು ಕೂಡ ಎಷ್ಟೋ ಜಾತಿಗಳ ಗುರುತಾಗಿ ಉಳಿಯದೇ, ಅದೂ ಕುಂಟುತ್ತ, ತೆವಳುತ್ತ ನಡೆದರೂ

ಜನರು ಮಾತ್ರ ತಮ್ಮ ಜಾತಿಯ ಈ ಕಸುಬು ನಿರುದ್ಯೋಗದ ನಿಮಿತ್ತ ಮಾಡಲಾದ ವಿಮೆಯಂತೆ ಎಂದೇ ತಿಳಿದು ಈ ಕಸುಬಿಗಾಗಿ ಕಾರ್ಯಪ್ರವೃತ್ತವಾಗಿ ಮುಂದುವರೆಯುತ್ತಾರೆ. ಪರಿಸ್ಥಿತಿ ಹೀಗಿರುವಾಗ ಒಂದು ಜಾತಿ ಒಗ್ಗಟ್ಟಾಗಿ ಮತ ಚಲಾಯಿಸದಿದ್ದರೆ ಅದು ನಮ್ಮಲ್ಲಿ ಆಶ್ಚರ್ಯ ಹುಟ್ಟಿಸಬೇಕು. ಜಾತಿಯ ಎಲ್ಲೆ ಮೀರುವ ಇಂಥ ಕ್ರಿಯೆ ಕಷ್ಟ ಸಾಧ್ಯವಾದಾಗ್ಯೂ ಕನಿಷ್ಠ ಶೇ. 20ರಷ್ಟಾದರೂ ನಡೆದಲ್ಲಿ ಅದು ಕೂಡ ಪರ್ಯಾಯವೊಂದನ್ನು ಜಾತಿಯ ಜಾಗದಲ್ಲಿ ಕಾಣಬಹುದಾದ ಪ್ರಯತ್ನದ ಭಾಗವಾಗಿರುತ್ತದೆ, ಅಷ್ಟೆ.

ನೂರಾರು ಜಾತಿಗಳಾಗಿ ಛಿದ್ರವಾದ ಭಾರತೀಯ ಸಮಾಜದ ಈ ದೌರ್ಬಲ್ಯಕ್ಕೆ ಸಾಮಾಜಿಕ ಪ್ರಾಮುಖ್ಯತೆಯಷ್ಟೇ ರಾಜಕೀಯ ಪ್ರಾಮುಖ್ಯತೆಯೂ ಇದೆ. ವಿದೇಶೀ ಸೈನ್ಯಗಳ ಕೈಯಲ್ಲಿ ಸೋಲನ್ನನುಭವಿಸಿದುದರಲ್ಲಿ ಇದು ಕಂಡು ಬರುತ್ತದೆ. ಭಾರತ ಮಾತೆ ತನ್ನ ಇತಿಹಾಸದಲ್ಲಿ ಎಂದಾದರೂ ಹಾಗೆ ಸೋತಿಲ್ಲವೆಂದಲ್ಲಿ, ಅದು ಜಾತಿಯ ಬಿಳಲುಗಳು ಸಡಿಲವಾಗಿದ್ದ ಸಮಯದಲ್ಲಿ ಮಾತ್ರ. ಭಾರತದ ಇತಿಹಾಸವನ್ನು ಸದಾ ತಪ್ಪಾಗಿ ಗ್ರಹಿಸುವುದೇ ರೂಢಿಯಾಗಿ ಬಿಟ್ಟಿದೆ. ವಿದೇಶಿ ಆಕ್ರಮಣಗಳಿಗೆ ಭಾರತೀಯರು ತುತ್ತಾದುದಕ್ಕೆ ಆಂತರಿಕ ಜಗಳ ಹಾಗೂ ಸೆಣಸಾಟವೇ ಕಾರಣ ಎಂಬುದಾಗಿ ಆರೋಪಿಸಲಾಗಿದೆ. ಇದು ಅವಿವೇಕದ ಸಂಗತಿ. ಅದಕ್ಕೆ ಅತ್ಯಂತ ದೊಡ್ಡ ಹಾಗೂ ಏಕೈಕ ಕಾರಣವೆಂದರೆ ಜಾತಿ. ಅದು ಹತ್ತರಲ್ಲಿ ಒಂಭತ್ತು ಮಂದಿಯನ್ನು ರಾಷ್ಟ್ರದ ಗಂಭೀರ ದುರಂತಗಳನ್ನು ಸುಮ್ಮನೆ ನಿರ್ಲಿಪ್ತರಾಗಿ ನಿಂತು ನೋಡುವ ಮೂಕಪ್ರೇಕ್ಷಕರನ್ನಾಗಿಸುತ್ತದೆ.

ಜಾತಿಗಳು ನೂರಾರು ವರ್ಷಗಳಿಂದ ಮುಂದುವರೆದುಕೊಂಡು ಬಂದಿವೆ. ಹಲವಾರು ನಿರ್ದಿಷ್ಟ ಮನೋಭಾವ ಹಾಗೂ ಗುಣಲಕ್ಷಣಗಳನ್ನು ಅವು ಹುಟ್ಟುಹಾಕಿವೆ. ನೈಸರ್ಗಿಕ ಆಯ್ಕೆಗೆ ಸಮನಾದ ಒಂದು ಬಗೆಯ ಸಾಮಾಜಿಕ ಆಯ್ಕೆಯನ್ನು ಇಲ್ಲಿಯೂ ಕಾಣಬಹುದಾಗಿದೆ. ವ್ಯವಹಾರ, ಕೈಗಾರಿಕೆ, ಸಂಗೋಪನೆ, ಆಡಳಿತ ಹಾಗೂ ತತ್ವಗಳ ನಿರ್ವಹಣೆ ಮುಂತಾಗಿ ಎಲ್ಲವೂ ಅನುವಂಶಿಕವಾಗಿವೆ. ಇದನ್ನೆಲ್ಲ ಮೀರುವುದು ಕೇವಲ ಪ್ರತಿಭಾವಂತರಿಂದ ಮಾತ್ರ ಸಾಧ್ಯ ಎಂಬಂತಾಗಿಬಿಟ್ಟಿದೆ. ಆದರೆ ಜಾತಿವಾರು ನೈಪುಣ್ಯತೆಯ ನಿರ್ಧಾರವಾಗುವುದರಿಂದಾಗಿ, ಪ್ರವಾಹದೊಂದಿಗೆ ಈಜುವುದರಲ್ಲಿಯೇ ಎಲ್ಲರೂ ಲಾಭವನ್ನು ನಿರೀಕ್ಷಿಸುತ್ತಾರೆ. ಒಂದು ವೇಳೆ ಎಲ್ಲ ವೃತ್ತಿ ಕೌಶಲಗಳು ಎಲ್ಲರಿಗೂ ಸಮಾನ ಸಾಮಾಜಿಕ ಸ್ಥಾನ-ಮಾನಗಳನ್ನೂ, ಆರ್ಥಿಕ ಲಾಭಗಳನ್ನೂ ತರುವಂತಿದ್ದರೆ ಅವರು ಖಂಡಿತ ಹಾಗೆ ನಿರೀಕ್ಷಿಸುತ್ತಿರಲಿಲ್ಲ. ಕೆಲವು ಕೌಶಲಗಳು ಇತರ ಕೌಶಲಗಳಿಗಿಂತ ನಂಬಲಸಾಧ್ಯವೆನ್ನುವಷ್ಟು ಶ್ರೇಷ್ಠ ಎಂದು ಭಾವಿಸಲಾಗಿದೆ. ಕಡಿಮೆ ಕೌಶಲದ ವೃತ್ತಿಗಳು, ಜಾತಿಗಳನ್ನು ಕನಿಷ್ಠಗೊಳಿಸಲಾಯಿತು. ಅವರೆಲ್ಲ ಹೆಚ್ಚು ಕಡಿಮೆ ನಿರ್ಜೀವ ಸಮುದಾಯವೆನಿಸಿದ್ದರು. ದೇಶವು ಪುನರುಜ್ಜೀವಿತಗೊಳ್ಳಲುಬೇಕಾದ, ನವೀನಗೊಳ್ಳಲು ಬೇಕಾದ ಜನ ಸಮಷ್ಟಿ ಎನಿಸಲಿಲ್ಲ. ಸಂಖ್ಯೆಯಲ್ಲಿ ಕಡಿಮೆಯಿದ್ದಾಗ್ಯೂ ಹೆಚ್ಚಿನ ವೃತ್ತಿ ನೈಪುಣ್ಯವನ್ನು ಹೊಂದಿದ ಗುಂಪುಗಳು ರಾಷ್ಟ್ರದ ಮುಂದಾಳತ್ವವನ್ನು ವಹಿಸುತ್ತವೆ. ಆದರೆ ಅಸಹಜವಾದ ಬಲಾಢ್ಯತನವನ್ನು ಉಳಿಸಿಕೊಳ್ಳಲು ಬಯಸುವ ಈ ಪ್ರಚಂಡ ಮೋಸಗಾರಿಕೆಯ ಜನ ಹೊರರೂಪದಲ್ಲಿ ಮಾತ್ರ ಬಹುನಯವಾದ ಜನರಾಗಿ, ಸುಸಂಸ್ಕೃತರಾಗಿ ಕಂಡು ಬರುತ್ತಾರೆ. ಹೀಗೆ ಶ್ರೀ ಸಾಮಾನ್ಯರು ನಿರ್ಜೀವವಾಗಿದ್ದರೆ, ಸ್ಥಿತಿವಂತರು ವಂಚಕರಾಗಿದ್ದಾರೆ. ಇದೆಲ್ಲವೂ ಆದದ್ದು ಜಾತಿಯಿಂದ.

ಎಲ್ಲ ಕಾಲದಲ್ಲೂ ಉಪಸ್ಥಿತವಿರುವ ಜಾತಿಯ ಅಧ್ಯಯನಕ್ಕೆ ಇಲ್ಲಿ ಪ್ರಯತ್ನಿಸಿಲ್ಲ. ಜಾತಿವ್ಯವಸ್ಥೆಯು ಇಂದು ಇರುವ ಬಗೆ, ಅದು ರಾಷ್ಟ್ರದ ಅಧಃಪತನದ ಸಂದರ್ಭದಲ್ಲಿ ಕಂಡು ಬಂದ ಬಗೆ, ಹಾಗೂ ಜಟಿಲವಾಗಿದ್ದ ಎಲ್ಲ ಸಂದರ್ಭದಲ್ಲಿಯೂ ಕಂಡು ಬಂದ ರೀತಿ, ಇವೆಲ್ಲದರ ಬಗ್ಗೆ ನಾವಿಲ್ಲಿ ಅಧ್ಯಯನಕ್ಕೆ ತೊಡಗಿದ್ದೇವೆ. ಒಂದರ್ಥದಲ್ಲಿ ಜಾತಿಯು ಸಾರ್ವತ್ರಿಕ ವಿದ್ಯಮಾನ. ಇಂದಿನ ರಷ್ಯಾದಲ್ಲಿ ಉನ್ನತ ಶಿಕ್ಷಣ ಪಡೆದವರು ಶ್ರಮದ ಕೆಲಸಗಳನ್ನು ಮಾಡಲು ನಿರಾಕರಿಸಿದ ಸನ್ನಿವೇಶ ಕಂಡು ಅಧ್ಯಕ್ಷ ಕ್ರುಶ್ಚೇವ್ ವಿಷಾದಿಸಿರುವುದನ್ನು ಕಂಡರೆ ಅಲ್ಲಿಯೂ ಜಾತಿಯ ಬೇರುಗಳು ಇರುವುದು ಗೋಚರವಾಗುತ್ತದೆ. ದೈಹಿಕ ಬಲದಿಂದಾಗುವ ಕೆಲಸ

(35ನೇ ಪುಟಕ್ಕೆ)

ಅಂಬೇಡ್ಕರ್ ಕುರಿತು ಲೋಹಿಯಾ

ಹೈದ್ರಾಬಾದ್
1-7-1957

ಪ್ರೀತಿಯ ಮಧು

ಡಾ. ಅಂಬೇಡ್ಕರ್ ಜೊತೆಗೆ ನಡೆಸಲಾದ ಪತ್ರ ವ್ಯವಹಾರಗಳು ಸಿಕ್ಕಿವೆ. ಅದನ್ನು ಕಳಿಸುತ್ತಿರುವೆ. ಡಾ. ಅಂಬೇಡ್ಕರ್ ಅವರ ಆಕಸ್ಮಿಕ ಸಾವಿನಿಂದ ನನಗಾಗಿರುವ ವ್ಯಥೆ ವೈಯಕ್ತಿಕವಾದುದೂ ಕೂಡ ಅನ್ನುವುದನ್ನು ನೀವು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲಿರಿ. ಅವರನ್ನು ನಮ್ಮ ಕಕ್ಷೆಯೊಳಗೆ ತರಬೇಕೆನ್ನುವುದು ಸಂಘಟನೆಯ ದೃಷ್ಟಿಯಿಂದಷ್ಟೇ ಅಲ್ಲದೆ ತಾತ್ವಿಕ ದೃಷ್ಟಿಯಿಂದ ಕೂಡ ಮುಖ್ಯವಾಗಿತ್ತು ಹಾಗೂ ಆ ಕಾಲ ಸಂಪೂರ್ಣ ಹತ್ತಿರವಾಗುತ್ತಿರುವಂತೆ ಕಾಣುತ್ತಿತ್ತು.

ನಮ್ಮಿಬ್ಬರಿಗೂ ಸಮಾನವಾಗಿ ಆದ ವೈಯಕ್ತಿಕ ನಷ್ಟದ ಹಿನ್ನೆಲೆಯಲ್ಲಿ ನೀವು ಈ ಪತ್ರ ವ್ಯವಹಾರವನ್ನು ನೋಡಬೇಕೆಂದು ನಾನು ಸುತರಾಂ ಬಯಸುತ್ತಿಲ್ಲ. ನನ್ನ ದೃಷ್ಟಿಯಲ್ಲಿ ಡಾ. ಅಂಬೇಡ್ಕರ್ ಭಾರತದ ರಾಜಕೀಯದ ಮಹಾನ್ ನಾಯಕರಾಗಿದ್ದರು ಹಾಗೂ ಗಾಂಧೀಜಿಯವರೊಬ್ಬರನ್ನು ಬಿಟ್ಟು ಇನ್ಯಾವುದೇ ದೊಡ್ಡ ಸವರ್ಣೀಯ ಹಿಂದೂ ನಾಯಕರಷ್ಟೇ ದೊಡ್ಡ ನಾಯಕರಾಗಿದ್ದರು. ಹಿಂದೂಧರ್ಮದಲ್ಲಿನ ಜಾತಿ ಪದ್ಧತಿಯನ್ನು ಒಂದಿಲ್ಲೊಂದು ದಿನ ನಾಶಪಡಿಸಬಹುದೆಂಬ ಆತ್ಮವಿಶ್ವಾಸ ಹಾಗೂ ನೆಮ್ಮದಿ ಈ ಅಂಶದಿಂದಲೂ ನನಗೆ ದೊರಕಿತ್ತು. ನನಗೆ ಮನದಟ್ಟಾಗಿರುವ ಒಂದು ಮೂಲಭೂತ ವಿಚಾರವನ್ನು ಭಾರತದ ಹರಿಜನರಿಗೆ ಅರುಹಲು ನಾನು ಸದಾ ಯತ್ನಿಸುತ್ತಲಿದ್ದೇನೆ. ಡಾ. ಅಂಬೇಡ್ಕರ್ ಹಾಗೂ ಶ್ರೀ ಜಗಜೀವನರಾಮ್ ಭಾರತದಲ್ಲಿ ಆಧುನಿಕ ಹರಿಜನರ ಎರಡು ಮಾದರಿಗಳು. ಡಾ. ಅಂಬೇಡ್ಕರ್ ವಿದ್ವಾಸಂರಾಗಿದ್ದರು; ಪ್ರಾಮಾಣಿಕರಾದ, ಸಮಗ್ರತೆಯನ್ನುಳ್ಳ ಹಾಗೂ ಸ್ವತಂತ್ರರಾದ ವ್ಯಕ್ತಿಯಾಗಿದ್ದರು; ಬಾಹ್ಯ ಜಗತ್ತಿಗೆ ನೇರವಾದ ಭಾರತದ ಪ್ರತೀಕವೆಂದು ಅವರನ್ನು ಹೆಸರಿಸಬಹುದು; ಅವರು ಕಹಿಯಾಗಿದ್ದರು ಹಾಗೂ ಪ್ರತ್ಯೇಕವಾಗಿರಲು ಬಯಸುತ್ತಿದ್ದರು. ಹರಿಜನೇತರ ನಾಯಕರಾಗಲು ಅವರು ನಿರಾಕರಿಸಿದರು. 5000 ವರ್ಷಗಳ ನೋವು ಹಾಗೂ ಹರಿಜನರ ಮೇಲೆ ಅದರ ನಿರಂತರ ಪರಿಣಾಮವನ್ನು ನಾನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲೆ. ಪ್ರಮುಖ ಸಂಗತಿಯೊಂದು ಅಡಗಿರುವುದು ಇಲ್ಲೇ. ಡಾ. ಅಂಬೇಡ್ಕರ್‌ರಂಥ ಮಹಾನ್ ಭಾರತೀಯ ಒಂದಿಲ್ಲೊಂದು ದಿನ ಈ ಸ್ಥಿತಿಯನ್ನು ಮೀರಬಲ್ಲರೆಂದು ನಾನು ನಿರೀಕ್ಷಿಸಿದ್ದೆ. ಆದರೆ ಈ ನಡುವೆಯೇ ಸಾವು ಅವರನ್ನು ಒಯ್ದಿತು. ಶ್ರೀ ಜಗಜೀವನರಾಮರು ಮೇಲುನೋಟಕ್ಕೆ ಎಲ್ಲ ಭಾರತೀಯರೊಂದಿಗೆ, ಹಿಂದೂಗಳೊಂದಿಗೆ ಸ್ಪಷ್ಟ ಸದ್ಭಾವನೆ ಬೆಳೆಸಿಕೊಂಡಿದ್ದಾರೆ. ಆದರೆ ಅವರು ಸವರ್ಣೀಯರೊಂದಿಗೆ ವ್ಯವಹರಿಸುವಾಗ ಅವರ ಮುಖಸ್ತುತಿ ಮಾಡಿ ಅವರ ಮುಂದೆ ಡೊಗ್ಗು ಸಲಾಮು ಹೊಡೆಯುತ್ತಾರೆನ್ನುವುದು ಗೊತ್ತಿದೆಯಾದರೂ ಹರಿಜನರ ಪ್ರತ್ಯೇಕ ಸಭೆಗಳಲ್ಲಿ ರೋಷದ ಕಟುದನಿಯಲ್ಲಿ ಮಾತಾಡುತ್ತಿರುತ್ತಾರೆ ಎಂದೂ ಜನ ಹೇಳುತ್ತಾರೆ. ಆದರೆ ಇದು ಹರಿಜನರ ಅಥವಾ ಒಟ್ಟಾರೆಯಾಗಿ ಭಾರತದ ಏಳಿಗೆಗೆ ಬುನಾದಿ ಆಗಲಾರದು. ಅದೇ ವೇಳೆಗೆ, ಡಾ. ಅಂಬೇಡ್ಕರ್ ಮಾದರಿ ಕೂಡಾ ಬದಲಾಗಬೇಕಾಗಿರುವುದೂ ಅವಶ್ಯಕವಾಗಿದೆ.

ಈ ಅನುಸೂಚಿತ ಜಾತಿಗಳ ಒಕ್ಕೂಟವನ್ನು ಯಾರು ನಡೆಸುತ್ತಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ಭಾರತದ ಅನುಸೂಚಿತ ಜಾತಿಗಳು ಭಾರತದ ರಾಜಕೀಯದ ಕಳೆದ 40 ವರ್ಷಗಳ ಬಗ್ಗೆ ವಿವೇಚನೆಯಿಂದ ಆಲೋಚಿಸಬೇಕೆಂದು ನನ್ನ ಆಸೆ. ಅವರು ಡಾ. ಅಂಬೇಡ್ಕರ್ ಅವರ ಶ್ರದ್ಧೆ ಹಾಗೂ ಕಲಿಕೆಯನ್ನು ಒಂದು ಪ್ರತೀಕವನ್ನಾಗಿಸಿಕೊಳ್ಳಬೇಕು ಹಾಗೂ ಅಂಬೇಡ್ಕರ್‌ರರಲ್ಲಿದ್ದ ಕಹಿಯನ್ನು ಬಿಟ್ಟು ಅವರ ಸ್ವತಂತ್ರ ಮನೋಭಾವವನ್ನು ಅನುಕರಿಸಬೇಕು. ಬರಿ ಹರಿಜನರ ನಾಯಕರೆಂದಷ್ಟೇ ಅಲ್ಲ, ಅಖಿಲ ಭಾರತದ ನಾಯಕರಾಗಿ ಕಾರ್ಯಪ್ರವೃತ್ತರಾಗಬಲ್ಲ ಒಬ್ಬ ಡಾ. ಅಂಬೇಡ್ಕರರನ್ನು ಅವರು ಅನುಕರಿಸಬೇಕು.

ನಿಮ್ಮ ಪ್ರೀತಿಯ
ರಾಮಮನೋಹರ ಲೋಹಿಯಾ

(ಮಧುಲಿಮಯ ಅವರಿಗೆ ಬರೆದ ಪತ್ರ)

ಕೌಟಿಲ್ಯನ 'ವೈದಿಕ' ಅರ್ಥಶಾಸ್ತ್ರ

ರಾಜಕೀಯ ಅರ್ಥಶಾಸ್ತ್ರ ಅವೈದಿಕರ ನಾಸ್ತಿಕರ ಸಿದ್ಧಾಂತವಾಗಿತ್ತು. ಅವರ ಸಾಮಾಜಿಕ ಶಾಸ್ತ್ರವಾಗಿತ್ತು. ಅದನ್ನು ಚಾಣಕ್ಯ ವೈದಿಕೀಕರಿಸುತ್ತಿದ್ದಾನೆ. ದ್ರಾವಿಡರ ನಾಸ್ತಿಕ ಸಿದ್ಧಾಂತವನ್ನು, ಆರ್ಯ ವೈದಿಕರ ಆಸ್ತಿಕ ಸಿದ್ಧಾಂತವನ್ನಾಗಿ ಪರಿವರ್ತಿಸುತ್ತಿದ್ದಾನೆ. ಅನ್ವೇಷಣೆಯಲ್ಲಿ ಷಡ್‌ದರ್ಶನಗಳಲ್ಲಿ ಬರುವ ಸಾಂಖ್ಯ, ಯೋಗ, ನ್ಯಾಯಗಳು ಸೇರುತ್ತವೆಂದು ಹೇಳಿರುವುದೂ ಕೂಡ ತಮ್ಮ ವಿಚಾರಗಳನ್ನು ಬಲಪಡಿಸುತ್ತದೆ. ಏಕೆಂದರೆ ದೇವಿ ಪ್ರಸಾದ ಚಟ್ಟೋಪಾಧ್ಯಾಯ ಮೊದಲಾದ ವಿದ್ವಾಂಸರ ಪ್ರಕಾರ ಸಾಂಖ್ಯ, ನ್ಯಾಯ, ಯೋಗ ಮೊದಲಾದವು ಮೊದಲು ಅವೈದಿಕರ ನಾಸ್ತಿಕ ಸಿದ್ಧಾಂತಗಳಾಗಿದ್ದವು.

○ ಎಸ್.ಎಸ್. ಹಿರೇಮಠ

ಭಾರತೀಯ ತತ್ವಜ್ಞಾನ ಪರಂಪರೆಯಲ್ಲಿ 'ವೈದಿಕ ಆಧ್ಯಾತ್ಮವಾದವು. ವ್ಯವಸ್ಥೆಯನ್ನು ಸಮರ್ಥಿಸುವ, ಬೆಂಬಲಿಸುವ ನೀತಿಯನ್ನು ಅನುಸರಿಸಿದ್ದು ಆಕಸ್ಮಿಕವಲ್ಲ. ಇದರಿಂದಾಗಿ ಅದು ಲೌಕಿಕ ಬದುಕಿನ ವಿಭಿನ್ನ ಮಾನವ ವ್ಯಾಪಾರಗಳ ಬಗೆಗೂ ಆಲೋಚಿಸಬೇಕಾದ ಅನಿವಾರ್ಯವಿತ್ತು. ಈ ಬಗೆಯ ಚಿಂತನೆಯಲ್ಲಿ ಬ್ರಾಹ್ಮಣರ ಶ್ರೇಷ್ಠತ್ವವನ್ನು ಕಾಪಾಡಿಕೊಳ್ಳಬೇಕಿತ್ತು.

ಜೀವನದ ಎಲ್ಲ ಕ್ಷೇತ್ರಗಳಲ್ಲೂ ಬ್ರಾಹ್ಮಣ್ಯಕ್ಕೆ ಪ್ರಥಮ ಪ್ರಾಶಸ್ತ್ಯ ಸಲ್ಲಬೇಕಿತ್ತು. ವ್ಯವಸ್ಥೆಯ ನಿಯಂತ್ರಣ ಶಕ್ತಿ ಬ್ರಾಹ್ಮಣರೇ ಆಗಬೇಕಿತ್ತು.

ಈ ಹಿನ್ನಲೆಯಲ್ಲಿ, ಕೆಲವು ಮೂಲಭೂತ ಪರಿಕಲ್ಪನೆಗಳನ್ನು ಸೃಷ್ಟಿಸಲಾಯಿತು. 'ವರ್ಣಾಶ್ರಮ' ಮತ್ತು ಪುರುಷಾರ್ಥಗಳು ಇಂಥ ಕೆಲವು ಪರಿಕಲ್ಪನೆಗಳು. ಈ ತಾತ್ತ್ವಿಕಾಂಶಗಳ ಅಡಿಪಾಯದ ಮೇಲೆ ಸಮಾಜ ವ್ಯವಸ್ಥೆಯ ಕಟ್ಟಡವನ್ನು ಕಟ್ಟಬೇಕಿತ್ತು.

ಅರ್ಥಶಾಸ್ತ್ರ, ರಾಜ್ಯಶಾಸ್ತ್ರಗಳಂಥ ಶುದ್ಧ ಭೌತಿಕ ಶಾಸ್ತ್ರ ರಚನೆಯ ಸಂದರ್ಭದಲ್ಲಿ ಈ ತಾತ್ವಿಕಾಂಶಗಳನ್ನು ಆಧರಿಸಿರುವುದಕ್ಕೆ ಕಾರಣ ಇದೇ. ಕೌಟಿಲ್ಯನ ಅರ್ಥಶಾಸ್ತ್ರ ಕ್ರಿ.ಪೂ. 4ನೇ ಶತಮಾನದಲ್ಲಿ ಮೌರ್ಯ ಸಾಮ್ರಾಜ್ಯ ಸಂದರ್ಭದಲ್ಲಿ ರಚನೆಗೊಂಡಿತೆಂದು ಭಾವಿಸಲಾಗಿದೆ. 'ಚಾಣಕ್ಯ', 'ವಿಷ್ಣುಗುಪ್ತ' ಎಂಬ ಪರ್ಯಾಯನಾಮಗಳ 'ಕೌಟಿಲ್ಯ' ತನ್ನ ಹಿಂದಿದ್ದ ಅನೇಕ ಅರ್ಥಶಾಸ್ತ್ರ, ರಾಜ್ಯಶಾಸ್ತ್ರಾದಿಗಳನ್ನು ಆಧರಿಸಿ ತನ್ನ ಗ್ರಂಥವನ್ನು ರಚಿಸಿದ್ದಾಗಿ ಹೇಳಿಕೊಂಡಿದ್ದಾನೆ. ವೈದಿಕವಲ್ಲದ 'ದ್ರಾವಿಡ' ಮೂಲದ ಸಮಾಜ ಶಾಸ್ತ್ರಗಳ ಪರಂಪರೆಯೊಂದಿತ್ತು ಎಂದು ಇಲ್ಲಿರುವ ವಿವರಗಳಿಂದ ಊಹಿಸಲವಕಾಶವಿದೆ.

ಒಟ್ಟಾರೆ 1) ರಾಜ್ಯಶಾಸ್ತ್ರದಲ್ಲಿ ಬ್ರಾಹ್ಮಣರ ಶ್ರೇಷ್ಠತ್ವವನ್ನು ಪ್ರತಿಪಾದಿಸುವುದು, 2) ದ್ರಾವಿಡ ಪರಂಪರೆಯಿಂದ ಈ ಶಾಸ್ತ್ರ ಹುಟ್ಟಿದುದನ್ನು ಎತ್ತಿ ತೋರಿಸುವುದು. 3) ಕ್ರಿ.ಪೂ. 4ನೇ ಶತಮಾನದ ಭಾರತೀಯ ಆರ್ಥಿಕ-ರಾಜಕೀಯ ವಿಚಾರಗಳನ್ನು ತಿಳಿದುಕೊಳ್ಳುವುದು. 4) ಕಾಲಾಂತರದ ಭಾರತೀಯ ಪ್ರಭುತ್ವಕ್ಕೆ ಬೇಕಾದ ಮೂಲ ರಾಜಕೀಯಾರ್ಥಿಕ ಚಿಂತನೆಯನ್ನು ಒದಗಿಸಿದ್ದು, ಈ ವಿಭಿನ್ನ ರೀತಿಯಲ್ಲಿ ಚಾಣಕ್ಯನ ಗ್ರಂಥದ ಅಧ್ಯಯನ ಮಾಡಬೇಕಾದ ಅಗತ್ಯವಿದೆ.

ಧಾರವಾಡದ ಸಮಾಜ ಪುಸ್ತಕಾಲಯವು 1972ರಲ್ಲಿ ಕೆ. ಕೃಷ್ಣಭಟ್ಟ ಎಂಬುವರಿಂದ ಅನುವಾದಿಸಿ ಪ್ರಕಟಿಸಿರುವ "ಕೌಟಿಲ್ಯನ ಅರ್ಥಶಾಸ್ತ್ರ"ವನ್ನು ಆಧರಿಸಿ ಈ ಚರ್ಚೆಯನ್ನು ಕೈಗೊಳ್ಳಲಾಗಿದೆ" ಅನುವಾದ, ವಿವರಣೆ, ಬಿಡಿಟಿಪ್ಪಣಿ ನೀಡುವುದರಲ್ಲಿ ಒಂದು ಶಿಸ್ತಿಲ್ಲದೇ ಇರುವುದರಿಂದ ಈ ಸಾಮಾನ್ಯ ಗ್ರಂಥವನ್ನು ಅವಲಂಬಿಸುವುದು ಅಷ್ಟು ಸೂಕ್ತವಲ್ಲದಿದ್ದರೂ ಸಧ್ಯಕ್ಕೆ ಇದು ಅನಿವಾರ್ಯ.

ಮೊದಲನೆಯ ಅಧಿಕರಣದಲ್ಲಿ ಗ್ರಂಥ ಪ್ರಾರಂಭದಲ್ಲೇ ಶುಕ್ರಾಚಾರ್ಯರೆ ಮೊದಲಾದವರು ಬರೆದ ಅರ್ಥಶಾಸ್ತ್ರಗಳ ಸಂಗ್ರಹ ಈ ಗ್ರಂಥವೆಂದು ಹೇಳಲಾಗಿದೆ. ಇಲ್ಲಿ ಹೇಳಲಾದ ಶುಕ್ರಾಚಾರ್ಯ ಯಾರು? ರಾಕ್ಷಸರಿಗೆ ಗುರುವಾಗಿದ್ದ ಶುಕ್ರಾಚಾರ್ಯನೇ?

ದೇವತೆಗಳ ಗುರುವಾದ ಬೃಹಸ್ಪತಿ ಒಂದು ಸಲ, ಶುಕ್ರನ ವೇಷದಿಂದ ರಾಕ್ಷಸರಲ್ಲಿ ನಾಸ್ತಿಕವಾದವನ್ನು ಪ್ರಚಾರಮಾಡಿದನೆಂಬ ದೇವಿಭಾಗವತದಲ್ಲಿರುವ ಸಂಗತಿ ಕುತೂಹಲದ್ದು. ಈ ಮಾತೂ ಕೂಡ ಶುಕ್ರನ ಅವೈದಿಕ ಮೂಲವನ್ನು ಸೂಚಿಸುತ್ತವೆ. ವೈದಿಕ ಪರಂಪರೆ ಒಬ್ಬ ಬೃಹಸ್ಪತಿಯನ್ನು ನಾಸ್ತಿಕವಾದದ ಮೂಲ ಪ್ರವರ್ತಕವೆನ್ನುತ್ತದೆ. ಬೃಹಸ್ಪತಿ, ಶುಕ್ರ ಇವರೆಲ್ಲ ನಾಸ್ತಿಕವಾದಿಗಳು.

ಭಾರತೀಯ ಪರಂಪರೆಯಲ್ಲಿ ವೇದ ಮೂಲದ ವೈದಿಕ ಶಾಹಿಗೆ ವಿರೋಧವಿದ್ದವರಿಗೆ ಸಾಮಾನ್ಯವಾಗಿ ನಾಸ್ತಿಕರೆನ್ನಲಾಗಿದೆ. ಇದರಲ್ಲಿ ಆತ್ಮ, ಪುನರ್ಜನ್ಮ, ಮೋಕ್ಷಗಳನ್ನು ಒಪ್ಪುವ ಜೈನರೂ ಇದ್ದರು, ದೇವರನ್ನು ಒಪ್ಪದ ಬೌದ್ಧರೂ ಇದ್ದರು. ಇವರಿಗಿಂತ ಭಿನ್ನರಾದ ಪಕ್ಕಾ ನಾಸ್ತಿಕವಾದಿಗಳೂ ಇದ್ದರು. ಇವರು ಭೌತಿಕವಾದಿಗಳು. ಲೋಕಾಯುತರೆಂದು ಇವರನ್ನು ಕರೆಯಲಾಗುತ್ತದೆ.



ಚಿತ್ರ : [illegible]

ನಾಸ್ತಿಕವಾದಿ ಶುಕ್ರಾಚಾರ್ಯನೆ ರಾಜ್ಯಶಾಸ್ತ್ರದ ಕರ್ತೃವಾಗಿದ್ದಿರಬಹುದೇ ಎಂಬುದು ವಿಚಾರಣೀಯ ಅಂಶ. 'ಅರ್ಥಶಾಸ್ತ್ರ' ಎಂಬುದಕ್ಕೆ ಭೂಮಿಯ ವ್ಯವಹಾರಕ್ಕೆ ಸಂಬಂಧಪಟ್ಟ ಶಾಸ್ತ್ರ ಎಂಬ ಅರ್ಥ ಹೇಳಿರುವಲ್ಲಿಯೂ ಈ ಶಾಸ್ತ್ರ ಪರಂಪರೆ ದ್ರಾವಿಡ ಕೃಷಿಕರದ್ದೆಂದು ಊಹಿಸಲು ಅವಕಾಶ ನೀಡುತ್ತವೆ. ಏಕೆಂದರೆ ವೈದಿಕರು ಮೂಲತಃ ಪಶುಪಾಲಕರೆ ಹೊರತು ಕೃಷಿಕರಲ್ಲ.

'ತಂತ್ರ', 'ಆವಾತ', 'ತಂತ್ರಾವಾಪ', 'ತಂತ್ರಯುಕ್ತಿ' ಎಂದು ಈ ಗ್ರಂಥದ 15 ಅಭಿಕರಣಗಳನ್ನು ವಿಭಜಿಸಲಾಗಿದ್ದು ಇವುಗಳಲ್ಲಿ 'ತಂತ್ರ' ಎಂಬ ಪದ ಅವೈದಿಕವೆಂಬುದನ್ನು ಗಮನಿಸಬೇಕು. 'ತಾಂತ್ರಿಸಂ' ದ್ರಾವಿಡರಲ್ಲಿ ಕೃಷಿಕರ ಪ್ರಖ್ಯಾತ ಸಿದ್ಧಾಂತಚಾರಣೆ. ಇದು ಭೌತಿಕವಾದಿ ದೃಷ್ಟಿಕೋನದ್ದು. ರಾಜ್ಯ ಮತ್ತು ಅರ್ಥ ವಿಚಾರಗಳು ಪೂರ್ಣ ಪ್ರಮಾಣದಲ್ಲಿ ಭೌತಿಕ ಬದುಕಿಗೆ ಸಂಬಂಧಪಟ್ಟುವಲ್ಲವೇ?

'ವಿದ್ಯಾ ಸಮುದ್ದೇಶ' ಎಂಬ ಮೊದಲ ಪ್ರಕರಣದಲ್ಲಿ ಅನ್ವೇಷಕಿ, ತ್ರಯೀ, ವಾರ್ತಾ, ದಂಡ ನೀತಿಗಳ ಅರಿವು ಅರಸನಿಗಿರಬೇಕಾದ ಪ್ರಾಮುಖ್ಯತೆಯನ್ನು ಚರ್ಚಿಸಲಾಗಿದೆ. ವಿದ್ಯೆಯ ಈ ನಾಲ್ಕು ಪ್ರಕಾರಗಳಲ್ಲಿ ಅನ್ವೀಕ್ಷಾ ಎಂದರೆ

ಅರ್ಥತತ್ವಗಳನ್ನು ಪರೀಕ್ಷಿಸಿ ತಿಳಿಯುವುದು. ಮೊದಲ ಮೂರು ವೇದಗಳು 'ತ್ರಯೀ' ಕೃಷಿ ಪಶುಪಾಲನೆ, ವಾಣಿಜ್ಯಗಳೆ 'ವಾತೆ' ದಂಡ ನೀತಿಯೇ ರಾಜನೀತಿ.

'ಪರೀಕ್ಷಣ ಸಾಧನ' (Method) ವೆಂದು ಅನ್ವೀಕ್ಷತೆಗೆ ಅರ್ಥ ಹೇಳಿದುದು ಅರ್ಥಪೂರ್ಣ. ಅದೂ ಒಂದು ಪ್ರತ್ಯೇಕ ವಿದ್ಯೆ ಎಂದು ಇಲ್ಲಿ ಹೇಳಿದೆ. ಇದರ ವಿಷಯ ನಂತರ 'ತ್ರಯೀ'ಯನ್ನೇಕೆ ಇಲ್ಲಿ ಸೇರಿಸಲಾಗಿದೆ? ಇದಕ್ಕೆ ಈ ಶಾಸ್ತ್ರ ಕೊಡುವ ಕಾರಣವಿದು-"ಲೋಕ ತಂತ್ರವನ್ನು ನಿರ್ವಹಿಸುವುದಕ್ಕೆ ಸಮರ್ಥವಾಗಿದ್ದರೂ ತ್ರಯಿಯನ್ನವರಿಸ ದವನನ್ನು ಲೋಕವು ನಾಸ್ತಿಕನೆಂದು ನಿಂದಿಸುತ್ತದೆ"

ರಾಜ್ಯ, ಅರ್ಥಶಾಸ್ತ್ರಗಳು ವೇದಗಳಿಗೆ ಆಧೀನ ವಾಗಿರಬೇಕೆಂಬ ಹಟ ವೈದಿಕರದ್ದು. ವೇದ ಸಂಬಂಧವನ್ನು ಇದಕ್ಕೆ ಕಲ್ಪಿಸದಿದ್ದರೆ ಬ್ರಾಹ್ಮಣದ ಪಾರಮ್ಯವನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ ಏನಕೇನ ಪ್ರಕಾರೇಣ ಈ ತತ್ವವನ್ನು ವೈದಿಕಕ್ಕೆ ಜೋಡಿಸಬೇಕಾಯಿತು.

ನಾಸ್ತಿಕನಾದ ಬೃಹಸ್ಪತಿಯ ಶಿಷ್ಯರು ವಾರ್ತಾ, ದಂಡನೀತಿ-ಗಳೆರಡೇ 'ವಿದ್ಯೆ' ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಪ್ರಸ್ತಾಪವಾಗಿದೆ. ಇದನ್ನು ವಿರೋಧಿಸುತ್ತ ಮೇಲಿನ ವಾದವನ್ನು ಮಂಡಿಸಿದ್ದಾನೆ ಚಾಣಕ್ಯ. ಶುಕ್ರಾಚಾರ್ಯರ ಶಿಷ್ಯರು ದಂಡನೀತಿಯೊಂದೇ ಪ್ರಧಾನ ವಿದ್ಯೆಯೆಂದು ಹೇಳುತ್ತಿದ್ದರಂತೆ. ನಾವೀಗಾಗಲೇ ಗಮನಿಸಿರುವಂತೆ ದೇಹವಾದವನ್ನು ಪ್ರತಿಪಾದಿಸುತ್ತಿದ್ದ ರಾಕ್ಷಸರ ಗುರು ಶುಕ್ರಾಚಾರ್ಯ ನಾಸ್ತಿಕನಾಗಿದ್ದನೆಂಬುದು ಇದರಿಂದ ಖಚಿತವಾಗುತ್ತದೆ.

ಒಟ್ಟಾರೆ ರಾಜಕೀಯ ಅರ್ಥಶಾಸ್ತ್ರ ಅವೈದಿಕರ ನಾಸ್ತಿಕರ ಸಿದ್ಧಾಂತವಾಗಿತ್ತು. ಅವರ ಸಾಮಾಜಿಕ ಶಾಸ್ತ್ರವಾಗಿತ್ತು. ಅದನ್ನು ಚಾಣಕ್ಯ ವೈದಿಕೀಕರಿಸುತ್ತಿದ್ದಾನೆ. ದ್ರಾವಿಡರ ನಾಸ್ತಿಕ ಸಿದ್ಧಾಂತವನ್ನು, ಆರ್ಯ ವೈದಿಕರ ಆಸ್ತಿಕ ಸಿದ್ಧಾಂತವನ್ನಾಗಿ ಪರಿವರ್ತಿಸುತ್ತಿದ್ದಾನೆ. ಅನ್ವೇಷಣೆಯಲ್ಲಿ ಷಡ್ ದರ್ಶನಗಳಲ್ಲಿ ಬರುವ ಸಾಂಖ್ಯ, ಯೋಗ, ನ್ಯಾಯಗಳು ಸೇರುತ್ತವೆಂದು ಹೇಳಿರುವುದೂ ಕೂಡ ತಮ್ಮ ವಿಚಾರಗಳನ್ನು ಬಲಪಡಿಸುತ್ತದೆ. ಏಕೆಂದರೆ ದೇವಿ ಪ್ರಸಾದ ಚಟ್ಟೋಪಾಧ್ಯಾಯ ಮೊದಲಾದ ವಿದ್ವಾಂಸರ ಪ್ರಕಾರ ಸಾಂಖ್ಯ, ನ್ಯಾಯ, ಯೋಗ ಮೊದಲಾದವು ಮೊದಲು ಅವೈದಿಕರ ನಾಸ್ತಿಕ ಸಿದ್ಧಾಂತಗಳಾಗಿದ್ದವು. ಮೊದಲು ಇವಕ್ಕೂ ಅರ್ಥಶಾಸ್ತ್ರಕ್ಕೂ ಸಂಬಂಧವಿತ್ತೆಂಬ ಅಂಶ ಗಮನಾರ್ಹ. ಆದರೆ ಕೌಟಿಲ್ಯ ಅವುಗಳಲ್ಲಿ ವೇದಗಳನ್ನು ತುರುಕಿ ವೈದಿಕೀಕರಣಗೊಳಿಸಿದ.

ಅನ್ವೀಕ್ಷಿಕಿಯ ಮಹತ್ವವೇನೆಂದು ಪ್ರತಿಪಾದಿಸುತ್ತಿರುವ ಈ ಅಧ್ಯಾಯ ನಾಸ್ತಿಕವಾದಿ ಸಿದ್ಧಾಂತಗಳಾದ ಸಾಂಖ್ಯ, ಯೋಗ, ತರ್ಕ, ಪೂರ್ವ ಮೀಮಾಂಸಗಳನ್ನು ತ್ರಯಿಗೆ 'ಅನುಗಾಮಿ'ಗಳೆಂಬ ಕಾಮಂಧಕರ ಅಭಿಪ್ರಾಯವನ್ನು ಹೇಳುತ್ತಿದೆ. ವೇದತ್ರಯಿಗೆ ದ್ರಾವಿಡರ ಅವೈದಿಕತೆಯನ್ನು ಆಧೀನ ಮಾಡುತ್ತಿರುವ ಈ ಕುತಂತ್ರ, ವೈದಿಕರ ಪ್ರಾಬಲ್ಯವನ್ನು ಸಾಂಸ್ಕೃತಿಕ ಯಜಮಾನಿಕೆಯನ್ನು ಸಾಬೀತು ಮಾಡುತ್ತಿದೆ.

ಮೂರನೇ ಅಧ್ಯಾಯದಲ್ಲಿ ಇದು ಪೂರ್ಣರೂಪದಲ್ಲಿ ಹೀಗೆ ಪ್ರಕಟವಾಗಿದೆ-

ಈ ಶೋಷಕ ವ್ಯವಸ್ಥೆಯನ್ನು ರಾಜ ರಕ್ಷಿಸಬೇಕೆಂದು ವಿಧಿಸಿದ್ದೇ ಬ್ರಾಹ್ಮಣದ ದಿಗ್ವಿಜಯ. ವ್ಯವಸ್ಥೆಗೆ ಪೂರಕವಾದ ಈ ಸಿದ್ಧಾಂತವನ್ನು ಅನ್ಯಮತೀಯ ಅರಸರೂ ಚರಿತ್ರೆಯುದ್ದಕ್ಕೂ ಉಲ್ಲಂಘಿಸಿದಂತೆ ಅನುಸರಿಸಿದರು. ಇದಕ್ಕೆ ವಿರುದ್ಧ ಹೊರಟ ಧರ್ಮಗಳು ವ್ಯವಸ್ಥೆಗೆ ವಿರುದ್ಧವಾಗುತ್ತಿದ್ದುದರಿಂದ ಅವಕ್ಕೆ ನಾಸ್ತಿಕವೆಂಬ ಹಣೆಪಟ್ಟಿ ಕಟ್ಟಿ ತಿರಸ್ಕರಿಸಲಾಗುತ್ತಿತ್ತು. ಅವು ಸಂಸಾರ, ಕುಟುಂಬ ಸಮಾಜ ರೂಪಿಸಿ ವ್ಯವಸ್ಥೆಗೆ ವಿರುದ್ಧವಾದ ಸನ್ಯಾಸ ರೂಪಿ ವ್ಯವಸ್ಥೆಯ ಪರ್ಯಾಯವನ್ನು 'ಆದರ್ಶ'ವಾಗಿಡುವ ವಿಪರ್ಯಾಸಕ್ಕೆ ಸಿಕ್ಕಿ ಬಿದ್ದಿದ್ದವು.

ಋತ್, ಯಜುರ್, ಸಾಮವೇದಗಳ ಜತೆ ಅಥರ್ವವೇದ ಇತಿಹಾಸಗಳನ್ನು ಸೇರಿಸಿ ವೇದವೆನ್ನಬೇಕೆಂದು ಹೇಳಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಚತುರ್ ವರ್ಣದವರಿಗೆ, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸವೆಂಬ ಆಶ್ರಮದವರಿಗೆ ಅನುಕೂಲ ಒದಗಿಸಿಕೊಡುವುದೇ ರಾಜನ ಕರ್ತವ್ಯವೆಂದು, ಈ ಶಾಸ್ತ್ರ ಹೇಳುತ್ತದೆ. 'ತ್ರಯಿ' ವಿದ್ಯೆಯು ನಾಲ್ಕು ವರ್ಣ, ನಾಲ್ಕು ಆಶ್ರಮಿಗಳಿಗೆ ಅವರವರ ಧರ್ಮವನ್ನು ನಿರೂಪಿಸುತ್ತದೆ. ಹಾಗಾಗಿ ತ್ರಯೀ ಅಗತ್ಯವೆಂದು ಸಮರ್ಥಿಸುತ್ತಿರುವುದು. ವಿಶೇಷವೇನೆಂದರೆ ಶೂದ್ರ ಧರ್ಮವನ್ನು ಇಲ್ಲಿ ಹೇಳದಿರುವುದು. ಮನುಸ್ಮೃತಿ ಮೊದಲಾದ ಧರ್ಮಶಾಸ್ತ್ರಗಳಲ್ಲಿ ಹೇಳಿರುವಂತೆ ಹಗುರಾದ ದೈಹಿಕ ಪರಿಶ್ರಮವಿಲ್ಲದ ಸುಲಭ ಕೆಲಸಗಳನ್ನು (ಷಟ್‌ಕರ್ಮ) ಬ್ರಾಹ್ಮಣರಿಗೆ ಹೇಳುವುದನ್ನೇ ಇಲ್ಲಿ ಪುನರುತ್ತಿಸಲಾಗಿದೆ. ಕ್ಷತ್ರಿಯರಿಗೆ ಬ್ರಾಹ್ಮಣರಿಗಿಂತ ಕೀಳಾದ, ಕೆಳಮಟ್ಟದ ವೃತ್ತಿಗಳು, ವೈಶ್ಯ, ಶೂದ್ರರಿಗೂ ಹೀಗೇ, ಶ್ರೇಣೀಕೃತ ವ್ಯವಸ್ಥೆಯನ್ನು ಹೊಂದಿಸುವುದು.

ಬ್ರಹ್ಮಚಾರಿ ನೈಷ್ಠಿಕನಾಗಲಿಚ್ಛಿಸಿದರೆ ಮರಣ ಪರ್ಯಂತ ಗುರುಕುಲದಲ್ಲೇ ಇರಬೇಕೆಂದು ಹೇಳಿದ್ದು ವಿರಕ್ತಧರ್ಮಗಳಿಗೆ ಪರ್ಯಾಯವಾದ ವೈದಿಕತ್ರಯವೆಂದು ತೋರುತ್ತದೆ. ಆ ಶ್ರಮಧರ್ಮ ಇಳಿವಯಸ್ಸಿನಲ್ಲಿ ಸನ್ಯಾಸವನ್ನು ಹೇಳಿದ್ದು ಎಷ್ಟರಮಟ್ಟಿಗೆ ವಾಸ್ತವ ವಾಗಿದ್ದಿತೋ ಗೊತ್ತಾಗುವುದಿಲ್ಲ. ವೃದ್ಧರನ್ನು ಈ ರೀತಿ ಒಂಟಿಯಾಗಿ ಕಾಡಿಗಟ್ಟಿ ಅಸಹಾಯಕರನ್ನಾಗಿ ಮಾಡುವುದು ತೀರ ಅಮಾನವೀಯ.

ವರ್ಣಾಶ್ರಮ ಧರ್ಮವನ್ನು ತಾತ್ವಿಕವಾಗಿಯಾದರೂ ಅರಸ ರಕ್ಷಿಸಬೇಕೆಂದು 'ಶಾಸ್ತ್ರಗಳ ಜತೆ ಈ ಅರ್ಥಶಾಸ್ತ್ರವೂ ಕಟ್ಟುಪಾಡು ಮಾಡುತ್ತಿದೆ. ಇದಕ್ಕೆ ಭಂಗ ಬಂದರೆ ಲೋಕಕ್ಕೆ ಹಾನಿ ಎಂದು ಇಲ್ಲಿ ಎಚ್ಚರಿಸಲಾಗಿದೆ.

ಸ್ಥಿರೀಕೃತವಾದ ಈ ಶೋಷಕ ವ್ಯವಸ್ಥೆಯನ್ನು ರಾಜ ರಕ್ಷಿಸಬೇಕೆಂದು ವಿಧಿಸಿದ್ದೇ ಬ್ರಾಹ್ಮಣದ ದಿಗ್ವಿಜಯ. ವ್ಯವಸ್ಥೆಗೆ ಪೂರಕವಾದ ಈ ಸಿದ್ಧಾಂತವನ್ನು ಅನ್ಯಮತೀಯ ಅರಸರೂ ಚರಿತ್ರೆಯುದ್ದಕ್ಕೂ ಉಲ್ಲಂಘಿಸಿದಂತೆ ಅನುಸರಿಸಿದರು. ಇದಕ್ಕೆ ವಿರುದ್ಧ ಹೊರಟ ಧರ್ಮಗಳು ವ್ಯವಸ್ಥೆಗೆ ವಿರುದ್ಧವಾಗುತ್ತಿದ್ದುದರಿಂದ ಅವಕ್ಕೆ ನಾಸ್ತಿಕವೆಂಬ ಹಣೆಪಟ್ಟಿ ಕಟ್ಟಿ ತಿರಸ್ಕರಿಸಲಾಗುತ್ತಿತ್ತು. ಅವು ಸಂಸಾರ, ಕುಟುಂಬ ಸಮಾಜ ರೂಪಿಸಿ ವ್ಯವಸ್ಥೆಗೆ ವಿರುದ್ಧವಾದ ಸನ್ಯಾಸ ರೂಪಿ ವ್ಯವಸ್ಥೆಯ ಪರ್ಯಾಯವನ್ನು 'ಆದರ್ಶ'ವಾಗಿಡುವ ವಿಪರ್ಯಾಸಕ್ಕೆ ಸಿಕ್ಕಿ ಬಿದ್ದಿದ್ದವು.

ಅರ್ಥಶಾಸ್ತ್ರ ಆಜ್ಞಾಪಿಸುತ್ತಿರುವ ಈ ಮಾತನ್ನು ನೋಡಿ -"ತ್ರಯಿಯಿಂದ ರಕ್ಷಿಸಲ್ಪಟ್ಟ ವ್ಯವಸ್ಥಿತವಾದ ಸದಾಚಾರ ನಿಯಮವನ್ನುಳ್ಳ ವರ್ಣಾಶ್ರಮ ವ್ಯವಸ್ಥೆಯಿಂದ ಕೂಡಿಕೊಂಡಿರುವ ಲೋಕವು ಯಾವಾಗಲೂ ಆನಂದದಿಂದ ಕೂಡಿರುತ್ತಲ್ಲದೆ ನಾಶವನ್ನು ಎಂದಿಗೂ ಹೊಂದುವುದಿಲ್ಲ'

ವಾರ್ತಾ ಮತ್ತು ದಂಡನೀತಿಗಳನ್ನು ವಿವರಿಸುವ ನಾಲ್ಕನೇ ಅಧ್ಯಾಯದಲ್ಲಿ ಕೃಷಿ ಶಾಸ್ತ್ರ, ಪಶುಪಾಲನ ಶಾಸ್ತ್ರ, ವಾಣಿಜ್ಯ ಶಾಸ್ತ್ರಗಳೆಂಬ ಶಿಸ್ತುಗಳಿದ್ದು ಅವನ್ನು ಕ್ರಮವಾಗಿ ಪರಾಶರ, ಗೌತಮ, ಶಾಲಿಹೋತ್ರ, ವಿದೇಹರಾಜರು ಬರೆದಿದ್ದಾರೆಂದು ಹೇಳಲಾಗಿದೆ. ಈ ಮಾತನ್ನು 'ವಾರ್ತಾ' ಎಂದೂ ಧಾನ್ಯ, ಪಶು, ಹಿರಣ್ಯ, ರಜತ, ಕುಪ್ಯ, ಕೆಲಸಗಾರರು ಇವುಗಳ ಸಮೂಹವೂ "ವಾರ್ತೆ" ಕೃಷಿ ಎಂದು ಹೇಳಲಾಗಿದೆ. ಪಶುಪಾಲನೆ, ವಾಣಿಜ್ಯಗಳಿಂದ ಅರಸನಿಗೆ ತೆರಿಗೆ, ಕಂದಾಯ ಸುಂಕರೂಪದಿಂದ ಬರುವ ಧಾನ್ಯ, ಪಶು ಇತ್ಯಾದಿಗಳನ್ನು ಇಲ್ಲಿ 'ವಾರ್ತೆ' ಎನ್ನಲಾಗುತ್ತಿದೆ. ಜೀವಂತ ಕೆಲಸಗಾರರನ್ನೂ ಆದಾಯ ವಸ್ತುಗಳ ಜತೆ ಸೇರಿಸಿರುವುದು ಗುಲಾಮಗಿರಿಯ ಅಸ್ತಿತ್ವವನ್ನು ಸೂಚಿಸುತ್ತದೆ. ಕನ್ನಡದ ಹಲವಾರು ಶಾಸನಗಳೂ ಈ ವಿಷಯವನ್ನು ಸಮರ್ಥಿಸುತ್ತವೆ. ಈ 'ವಿದ್ಯೆ' ರಾಜನ ಕ್ಲೇಶವನ್ನು ತುಂಬುವುದರ ಕುರಿತು ಹೀಗೆ ಹೇಳುತ್ತಿದ್ದರೆ 'ದಂಡ'ವು ಈ ಕೋಶ ರಕ್ಷಣೆಗೆ ಅಗತ್ಯಬಿದ್ದ ಸೈನ್ಯ ವ್ಯವಸ್ಥೆಯನ್ನು ವಿವರಿಸುತ್ತದೆ.

"ದಂಡವೆಂದರೆ ದಮ, ಸಾಮಾದಿಗಳಲ್ಲಿ ಪ್ರಧಾನವಾದ ಉಪಾಯ. ಅಥವಾ ದಂಡಾಧಿಕಾರಿಯಾಗಿ ರಾಜ ನಿರುವುದರಿಂದ ರಾಜನಿಗೇ ದಂಡವೆಂದು ಹೆಸರು. ದಂಡದ ಭಯವಿದ್ದರೇ ಜನರು ಅನ್ವೀಕ್ಷಿತ್ಯಾದಿಗಳಿಗೆ ಸರಿಯಾಗಿ ಪ್ರವರ್ತಿಸುವುದರಿಂದ ದಂಡವು ಅನ್ವೀಕ್ಷಿತ್ಯಾದಿಗಳಿಗೆ ಯೋಗಕ್ಷೇಮ ಸಾಧನವೆನಿಸುವುದು"

ಪ್ರಭುತ್ವದ ಸ್ಥಾಪನೆಗೆ ಮತ್ತು ನಿರಾಂತಕ ಮುಂದುವರಿಕೆಗೆ ದಂಡಕ್ಕಿದ್ದ ಅನಿವಾರ್ಯತೆಯನ್ನು ಇಲ್ಲಿ ಖಚಿತಪಡಿಸಲಾಗುತ್ತಿದೆ. ಸಮಾನತೆಯ ಆಧಾರದ; ಯಾವ ವಿಧದ ದಂಡದ ಅಗತ್ಯವಿರದಿದ್ದ ಬುಡಕಟ್ಟು ಸಮಾಜಗಳು ನಾಶವಾಗಿ ಶೋಷಣೆಯ ಆಧಾರದ, ವರ್ಣ-ಜಾತಿ ವ್ಯವಸ್ಥೆ ಬಂದಾಗ ಅಲ್ಲಿರುವ ಶೋಷಕ ವರ್ಗದ ಆಸ್ತಿಯ ರಕ್ಷಣೆಗಾಗಿ ಹುಟ್ಟಿಕೊಳ್ಳುತ್ತದೆ 'ರಾಜ್ಯ' ರಾಜನಿಗೇ 'ದಂಡ', 'ದಂಡಧಾರಿ' ಎಂದು ಹೇಳುತ್ತಿರುವ ಚಾಣಕ್ಯ ವರ್ಗ ಸಮಾಜದಲ್ಲಿ ಶೋಷಿತರನ್ನು ನಿಯಂತ್ರಿಸುವ ಬಲಾತ್ಕಾರದ ಆಸ್ತ್ರವಾದ (Coersive weapon) ಸೈನ್ಯ, ಜೈಲು, ಕೋರ್ಟುಗಳನ್ನು, 'ದಂಡ' ಎಂಬ ಪದದ ಮೂಲಕ ಸೂಚಿಸುತ್ತಿದ್ದಾರೆ. ಬಲಾತ್ಕಾರದ ಅಸ್ತ್ರಗಳೇ ಪ್ರಭುತ್ವದ

(41ನೇ ಪುಟಕ್ಕೆ)

ಕ್ರಿಕೆಟ್‌ನ ಜಾತಿ

ಎರಡೂವರೆ ಶತಮಾನಗಳ ಕಾಲ ಭಾರತವನ್ನು ತಮ್ಮ ಬಿಗಿಮುಷ್ಠಿಯಲ್ಲಿಟ್ಟುಕೊಂಡು ಬ್ರಿಟೀಷರು, ಸ್ವಾತಂತ್ರ್ಯಾನಂತರ ಭಾರತದಲ್ಲಿ ಬಿಟ್ಟು ಹೋದ ಹಲವಾರು ಸಾಮ್ರಾಜ್ಯಶಾಹಿ ಪಳಿಯುಳಿಕೆಗಳಲ್ಲಿ ಕ್ರಿಕೆಟ್ ಕ್ರೀಡೆಯೂ ಒಂದು. ವಿಶ್ವದ ಜನಪ್ರಿಯ ಕ್ರೀಡೆಯಾಗಿರುವ ಕ್ರಿಕೆಟ್ ರಂಗಕ್ಕೆ ಭಾರತದ ಕೊಡುಗೆ ಆಶಾದಾಯಕವಾಗಿದ್ದರೂ, ಕ್ರೀಡಾಪಟುಗಳ ಆಯ್ಕೆ ಮತ್ತು ಉತ್ತೇಜನದಲ್ಲಿ ಕೇವಲ ಮೇಲ್ಜಾತಿ ಆಟಗಾರರಿಗೆ ಮಣೆ ಹಾಕುತ್ತಾ ಕ್ರಿಕೆಟ್ ಆಟವನ್ನು ಬ್ರಾಹ್ಮಣ್ಯೇಕರಣ ಗೊಳಿಸುತ್ತಿರುವುದು ದುರಂತವೇ ಸರಿ.



ಸ್ವಾತಂತ್ರ್ಯ ಪೂರ್ವ ಭಾರತವು ಪ್ರಖ್ಯಾತಿ ಪಡೆದ ಆರು ಜನ ದಲಿತ ಕ್ರಿಕೆಟಿಗರನ್ನು ತಯಾರಿಸಿತ್ತು. ಇವರು ಅತ್ಯಂತ ಪ್ರಸಿದ್ಧರಾದವರು. ಇವರಲ್ಲಿ ನಾಲ್ಕು ಜನ ಪಾಲ್ವಂಕರೌ ಸಹೋದರರು. ಆದರೆ ಇಂದು, ರಾಷ್ಟ್ರೀಯ ಹನ್ನೊಂದರ ತಂಡದಲ್ಲೂ ಒಬ್ಬ ದಲಿತ ಕ್ರಿಕೆಟ್ ಪಟುವನ್ನು ಕಾಣಲಾಗದು.

ರಾಬಿನ್‌ಸನ್ ತನ್ನ ಪ್ರಸಿದ್ಧ ಲೇಖನ "ಎಡ್ಡಿ ಗಿಲ್ಬರ್ಟ್ : ದಂತ ಕಥೆಯ ಸಾವು" ಎನ್ನುವುದರಲ್ಲಿ, ದಂತ ಕಥೆಯಾದ ಸರ್ ಡೊನಾಲ್ಡ್ ಬ್ರಾಡ್ಮನ್ ಒಮ್ಮೆ ವ್ಯಾಖ್ಯಾನಿಸಿದಂತೆ ತಾನು ಎದುರಿಸಿದ ಅತ್ಯಂತ ವೇಗದ ಬೌಲರ್‌ನೆಂದರೆ ಆದಿವಾಸಿಯಾದ ಎಡ್ಡಿ ಗಿಲ್ಬರ್ಟ್‌ನೊಬ್ಬನೇ. ಅದೊಂದೇ ಸಲವಷ್ಟೆ ತನ್ನ ಬ್ಯಾಟ್ ಕೈತಪ್ಪಿದ್ದು. ಬ್ರಾಡ್ಮನ್ ಪ್ರಕಾರ

ಮೂಲ : **ಬೋರಿಯಾ ಮಜುಂದಾರ್**

ಅನು : ಡಿಡಾಚಿ

ಗಿಲ್ಬರ್ಟ್‌ನಿಂದ ಬಂದ ಆ ವೇಗದ ಎಸೆತವು ಲಾರ್‌ವುಡಂ ಅಥವಾ ಇನ್ನಾರಿಂದಲೂ ಸಾಧ್ಯವಿರದ ಎಸೆತವಾಗಿತ್ತು. ಅಂಥ ಎಸೆತವನ್ನು ಬ್ರಾಡ್ಮನ್ ಎಂದೂ ಎದುರಿಸಿರಲಿಲ್ಲ. 1930ರ ಸಂದರ್ಭದಲ್ಲಿ ಅನಿರೀಕ್ಷಿತವಾಗಿ ಬ್ರಾಡ್ಮನ್‌ರನ್ನಲ್ಲದೆ, ಒಬ್ಬ ಆದಿವಾಸಿಯ ಕೈಯಿಂದ 'ಔಟ್' ಆಗಿದ್ದು ಆಸ್ಟ್ರೇಲಿಯಾವನ್ನು ಕಂಗೆಡಿಸಿತ್ತು. ಆದರೂ ಎಡ್ಡಿಗಿಲ್ಬರ್ಟ್ ತನ್ನ ದೇಶಕ್ಕಾಗಿ ಟೆಸ್ಟ್ ಪಂದ್ಯವನ್ನು ಆಡಲಾಗುವುದಿಲ್ಲ ಕಾರಣ ಆತನೊಬ್ಬ 'ಕುತಂತ್ರಿ'ಯೆಂದು ಹಣೆಪಟ್ಟಿ ಹಚ್ಚಿದ್ದು. ಆದರೆ ನಿಜವಾದ ಕಾರಣವೆಂದರೆ ಆತನೊಬ್ಬ ಆದಿವಾಸಿಯಾಗಿದ್ದುದೇ ಆಗಿತ್ತು.

ಅಲ್ಲದೆ ಮ್ಯಾಕ್ಸ್‌ವೆಲ್ ಮತ್ತು ಆರ್.ಎ. ಹಾವೆಲ್ ಬರೆದಿರುವಂತೆ, "ಜಾಕ್ ಮಾರ್ಷ್ ಹಾಗೂ ಆಲ್ಬರ್ಟ್ ಹೆನ್ರಿ ಎನ್ನುವ ಮತ್ತಿಬ್ಬರು ಆದಿವಾಸಿ ಬೌಲರ್‌ಗಳು ಸಹ ಕಾಕತಾಳೀಯವೆಂಬಂತೆ ಗಿಲ್ಬರ್ಟ್‌ನಂತೆ, 'ಕುತಂತ್ರಿ'ಗಳೆಂದು ಪರಿಗಣಿತವಾಗಿ ತಮ್ಮ ಅವಕಾಶಗಳನ್ನು ಕಳೆದುಕೊಳ್ಳುತ್ತಾರೆ. ಆದರೆ ಅನೇಕರ ಕಣ್ಣಲ್ಲಿ ಅವರಿಬ್ಬರಿಗೂ ಉನ್ನತ ಸಾಧನೆಯ ಸಾಮರ್ಥ್ಯವಿತ್ತು' ಭಾರತದಲ್ಲೂ, ಇಂತಹ ಅನೇಕ ಅದೃಷ್ಟಹೀನ ಆಟಗಾರರಿರುವರು. ಇವರಿಗೆ ಪ್ರತಿಭೆ ಇದ್ದಾಗ್ಯೂ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಇವರು ಶೋಷಿತ ಜಾತಿಗಳ ಸದಸ್ಯರಾಗಿದ್ದು, ಜಾತಿ ಹಿಂದೂಗಳಿಂದ (ಸವರ್ಣೀಯರಿಂದ) ಶೋಷಣೆಗೊಳಗಾಗುತ್ತಾರೆ. ಚರಿತ್ರೆ ಹೇಳುವಂತೆ, 19ನೇ ಶತಮಾನವ ಕೊನೆಯವರೆಗೆ, ಇವರ ಹೆಣ್ಣು ಮಕ್ಕಳಿಗೆ ತಮ್ಮ ಸ್ತನಗಳನ್ನು ಮುಚ್ಚಿಕೊಳ್ಳಲು ಅನುಮತಿಸಿರಲಿಲ್ಲ. ಈ ಕೃತ್ಯವನ್ನು ಸವರ್ಣೀಯರಿಗೆ ತೋರಿಸುವ ಗೌರವವೆಂದು ಸ್ವೀಕರಿಸಲಾಗಿತ್ತು. ಇವರ ಸ್ಪರ್ಶ, ಇವರ ನೋಟ ಅಥವಾ ಇವರ ನೆರಳನ್ನು ಸಹ 'ಮೇಲ್ಜಾತಿ'ಗಳಿಗೆ ಮೈಲಿಗೆಯನ್ನು ಉಂಟುಮಾಡುತ್ತಿತ್ತು.

ಜಾತಿ ಮತ್ತು ಕ್ರಿಕೆಟಿನ ನಡುವೆ ಸಂಬಂಧವು ಭಾರತೀಯ ಕ್ರಿಕೆಟ್ ಬರಹಗಾರರನ್ನು ಮತ್ತು ಚರಿತ್ರಕಾರರನ್ನು ತನ್ನತ್ತ ಸೆಳೆದುಕೊಂಡಿದೆ. ಜಾತಿಯಿಂದ ಚಮ್ಮಾರರಾದ ಪಾಲ್ವಂಕರ್, ಸಹೋದರರ ದೇದೀಪ್ಯಮಾನವಾದ ಉನ್ನತಿಯ ಬಗ್ಗೆ ಅತ್ಯಧಿಕವಾಗಿ ಬರೆಯಲಾಗಿದೆ.

ಇವರು ಸವರ್ಣೀಯ ಹಿಂದೂ ತಂಡಕ್ಕಾಗಿ ಮುಂಬಯಿಯ ಚತುಷ್ಕೋನ ಪಂದ್ಯಾವಳಿಯಲ್ಲಿ ಅತ್ಯುತ್ತಮವಾಗಿ ಆಡಿದ್ದರು. ಅವರಲ್ಲೊಬ್ಬ ಪಾಲ್ವಂಕರ್ ವಿಠಲ್ ಈ ಹಿಂದೂ ತಂಡವನ್ನು ಒಂದು ದಶಕದವರೆಗೂ ಮುನ್ನಡೆಸಿದಾಗ ಆತನನ್ನು ಸವರ್ಣೀಯ ಹಿಂದೂಗಳು! ಮೈದಾನದಲ್ಲಿ ಹೆಗಲ ಮೇಲೆ ಕೂರಿಸಿಕೊಂಡು ಹೊತ್ತಿದ್ದರು. ಕಾರಣ 1923ರ ಚತುಷ್ಕೋನ ಪಂದ್ಯದಲ್ಲಿ ಗೆಲುವನ್ನು ತಂದುಕೊಟ್ಟಿದ್ದರು. ಆದರೆ ಅನೇಕ ದಲಿತ ಕ್ರಿಕೆಟಿಗರಿಗೆ, ಪಾಲ್ವಂಕರರ ಹೆಜ್ಜೆ ಗುರುತುಗಳನ್ನು ಅನುಸರಿಸಲು ಸಾಧ್ಯವಾಗಿಲ್ಲ.

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಹೆಚ್ಚಿನ ಸಂಖ್ಯೆಯ ಖ್ಯಾತ ದಲಿತ ಕ್ರಿಕೆಟಿಗರು ಇದ್ದರು ಎಂಬುದನ್ನು ತೋರಿಸಲು ಅಂಕಿ-ಅಂಶಗಳೇ ಸಾಕು. ಸ್ವಾತಂತ್ರ್ಯ ಪೂರ್ವದಲ್ಲಿ ಹೆಮ್ಮೆ ಪಡಬಹುದಾದ ನಾಲ್ವರು

ಪಾಲ್ವಂಕರ್ ಸಹೋದರರಾದ - ಬಾಲೂ, ವಿಠಲ್, ಶಿವರಾಮ್ ಮತ್ತು ಗಣಪತಿ ಇದ್ದರು. ಇವರೊಂದಿಗೆ ಕರಾಚಿಯಿಂದ ಬಂದ ಹೆಚ್.ಎಲ್. ಸೆಂಪರ್ 1910-1915ರ ನಡುವೆ ಈ ಹಿಂದೂ ತಂಡದಲ್ಲಿ ಆಡಿದ್ದರು. ಡಿ.ಬಿ.ಇ ಡಿಯೋದಾರ್‌ರವರು ನೆನಪಿಸಿಕೊಳ್ಳುವಂತೆ, ಆತನೊಬ್ಬ ಅತ್ಯುತ್ತಮ ಆಲ್‌ರೌಂಡರ್ ಆಗಿದ್ದು ಅನೇಕ ಬಾರಿ ಉತ್ತಮ ಪ್ರದರ್ಶನಗಳನ್ನು ನೀಡಿದ್ದರು. ಅಂತಹ ಒಂದು ಸಂದರ್ಭದಲ್ಲಿ ಆತ ಪ್ರತಿಯೊಂದು ಇನ್ನಿಂಗ್ಸ್‌ನಲ್ಲಿ ಅರ್ಧ ಶತಕವನ್ನು ಗಳಿಸಿದ್ದಕ್ಕಾಗಿ ಬಾಂಬೆ ಗೌವರ್ನರ್ ಆದ ಲಾರ್ಡ್‌ವಿಲ್ಲಿಂಗ್‌ಟನ್‌ನಿಂದ ವಿಶೇಷ ಬಹುಮಾನವನ್ನು ಪಡೆದಿದ್ದ. ಅಂತಿಮವಾಗಿ ಬಾಲೂನ ಮಗ ವೈ.ಬಿ. ಪಾಲ್ವಂಕರ್ 1944-1955ರ ನಡುವೆ ಮುಂಬಯಿಯನ್ನು ಪ್ರತಿನಿಧಿಸಿದ್ದ. "ಆಂಟು"ವೆಂದು ಜನಪ್ರಿಯವಾಗಿ ಕರೆಯಲಾಗುತ್ತಿದ್ದ ಈತ ಒಬ್ಬ ಸಭ್ಯ ಆಲ್‌ರೌಂಡರ್, ಎಡಗೈ ಬ್ಯಾಟ್ಸ್‌ಮನ್ ಆಗಿದ್ದನಲ್ಲದೆ ಬಲಗೈ ಮಧ್ಯಮ ವೇಗಿ ಬೌಲರ್ ಆಗಿದ್ದ.

1875ರಲ್ಲಿ ಧಾರವಾಡದಲ್ಲಿ ಸಮಗಾರ ಜಾತಿಯಲ್ಲಿ ಹುಟ್ಟಿದ ಬಾಲೂ, ತನ್ನ ಕ್ರೀಡಾ ಪ್ರತಿಭೆಯಿಂದ ಬ್ರಾಹ್ಮಣರ ಡೆಕ್ಕನ್ ಜಿಮ್‌ಕಾನ ತಂಡವು-ಪೂನಾದ ಬ್ರಿಟಿಷ್ ಜಿಮ್‌ಕಾನ ತಂಡವನ್ನು ಸೋಲಿಸಲು, ಆತನನ್ನು ತಮ್ಮ ಹಿಂದೂ ತಂಡದಲ್ಲಿ 19ನೇ ಶತಮಾನದ ಕೊನೆಯಲ್ಲಿ ಸೇರಿಸಿಕೊಂಡಿದ್ದರು.

ಕ್ರೀಡಾ ಬರಹಗಾರ ಪರ್ತಾಪ್ ರಾಮಚಂದ್ರರ ಪ್ರಕಾರ, ಬಾಲೂ 1876ರಲ್ಲಿ ಬಾಂಬೆಯಲ್ಲಿ ಜನಿಸಿದ್ದು, ತಿಂಗಳಿಗೆ 3ರೂ. ಸಂಬಳಕ್ಕೆ ಕ್ಲಬ್ಬಿನಲ್ಲಿ ಮೈದಾನದ ಕಾವಲುಗಾರನಾಗಿ ಕೆಲಸ ಮಾಡುತ್ತಿದ್ದ. ಆತನ ಜಾತಿ ಶ್ರೇಣೀಯು, ವರದಾನವಾದ ಬೌಲರ್‌ನನ್ನು ಹೊರತಾಗಿ ಹಿಂದೂ ಆಟದ ಮೈದಾನದಲ್ಲಿ ಆಡುವಂತದ್ದಲ್ಲ. ಪಾಪಿಗಳು ಆತನಿಗೊಂದು ಅವಕಾಶವನ್ನು ಕೊಟ್ಟರು. ಕಾಲಕ್ರಮೇಣ, ಆತನ ಬೆರಳುಗಳಲ್ಲಿ ಕೆಲವು ಜಾದುಗಳಿವೆ ಎಂದು ಹಿಂದೂಗಳು ಕಂಡುಕೊಂಡರು. ಬಾಲೂವನ್ನು ಕೂಡಲೇ ಕ್ಲಬ್ಬಿನ ಸದಸ್ಯನನ್ನಾಗಿ ಮಾಡಲಾಯಿತು. ಅವನು ಹಿಂದೂಗಳ ನಾಯಕನಾಗಿಬಿಟ್ಟ.

ಬಾಲೂ ನಿಧಾನಗತಿಯ ಎಡಗೈ ಸ್ಪಿನ್ ಬೌಲರ್‌ನಾಗಿದ್ದು, ಮುಂಬಯಿ ಹಿಂದೂಗಳನ್ನು ಅತ್ಯುತ್ತಮವಾಗಿ ಪ್ರತಿನಿಧಿಸಿದ್ದಲ್ಲದೆ 1911ರಲ್ಲಿ ಪಾಟಿಯಾಲದ ಮಹಾರಾಜನು ಆಲ್ ಇಂಡಿಯಾ ತಂಡದೊಂದಿಗೆ ಇಂಗ್ಲೆಂಡ್ ಪ್ರವಾಸವನ್ನು ಕೈಗೊಂಡಿದ್ದಾಗ ಈತನೂ ಸಹ ಪಾಲ್ಗೊಂಡಿದ್ದ. ಈ ಪ್ರವಾಸದಲ್ಲಿ ಆತ 114 ವಿಕೆಟ್‌ಗಳನ್ನು ಪಡೆದು ಬೌಲಿಂಗ್ ಸರಾಸರಿಯಲ್ಲಿ 18.86ನ್ನು ಪಡೆದು ಶ್ರೇಷ್ಠನೆನಿಸಿಕೊಂಡಿದ್ದ. ಪ್ರವಾಸದ ಮೊದಲ ದರ್ಜೆಯ ಪಂದ್ಯಾವಳಿಗಳಲ್ಲಿ 75 ವಿಕೆಟ್‌ಗಳನ್ನು ಸರಾಸರಿ 20.12 ರನ್‌ಗಳನ್ನು ನೀಡಿ ಪಡೆದಿದ್ದ. ಡಿಯೋದಾರ್‌ನ ಅಭಿಪ್ರಾಯದಲ್ಲಿ ರೋಡ್ಸ್ ಅಥವಾ ವೆರಿಟಿಯರೊಂದಿಗೆ ಸಮಾನವಾಗಿ ನಿಲ್ಲತಕ್ಕವನು.

1906ರಲ್ಲಿ ಇಂಡಿಯನ್ ಸೋಶಿಯಲ್ ರಿಫಾರ್ಮರ್ ಹೀಗನ್ನುತ್ತದೆ; ಹಳೆಯ ವಿಚ್ಛಿದ್ರಕಾರಿ ಮತ್ತು ದೇಶದ್ರೋಹಾತ್ಮಕ ರೂಢಿಗಳಿಗೆ ರಾಷ್ಟ್ರವ್ಯಾಪ್ತಿ ಮುಕ್ತಿಯನ್ನು ನೀಡುವಂತಹ ಮಹತ್ವದ ಸಾಧನೆ...ಪೂನಾ ಮತ್ತು ಮುಂಬೈಯಲ್ಲಿರುವ ಎಲ್ಲ ಜಾತಿಯ ಹಿಂದೂ ಆಟಗಾರರಿಗೆ, ಹಿಂದಿನ ಪೂರ್ವಗ್ರಹಗಳನ್ನು ಮೆಟ್ಟಿಯಾದರೂ ರಾಷ್ಟ್ರದ ಹಿತಾಸಕ್ತಿಯನ್ನು ಕಾಪಾಡಲಿ, ಸಮಾನ ಅವಕಾಶಗಳನ್ನು ಕಲ್ಪಿಸುವುದು ಸೂಕ್ತವಾದುದು. ಆಟದಿಂದ ಕಲಿತ ಪಾಠಗಳು ರಾಜಕೀಯ, ಸಾಮಾಜಿಕ ಮತ್ತು ಶೈಕ್ಷಣಿಕ ಬದುಕಿನಲ್ಲಿ ಅನುಸರಿಸಲೇಬೇಕು. ಐಕ್ಯತೆ ಮತ್ತು ರಾಷ್ಟ್ರ ಮುರಿಯುವ ರೂಢಿ-ಸಂಪ್ರದಾಯಗಳು ಇಲ್ಲದಂತಾಗಲಿ ಹಾಗೂ ಜಗತ್ತಿನಲ್ಲಿ ಇಂಡಿಯ ಹಾಸ್ಯಾಸ್ಪದವಾಗುವುದು ಬೇಡ"

ಜಾತಿ ಪೂರ್ವಗ್ರಹಗಳನ್ನು ಆಟದ ಮೈದಾನದಲ್ಲಿ ತೊಡೆದುಹಾಕುವಂಥದ್ದು ಕೇವಲ ಮುಂಬಯಿಗಷ್ಟೇ ಸೀಮಿತವಾಗಬೇಕಿಲ್ಲ. ನಾಡೋರ್‌ನ ಮಹಾರಾಜ ಬಾಲೂನನ್ನು ಬೇಗನೆ ಕರೆಸಿಕೊಂಡು ಬಂಗಾಲದ ತಂಡಕ್ಕೆ ಕೋಚ್ ಆಗಲು ಕೋರುತ್ತಾರೆ. ಅಲ್ಲದೆ, ಮಹಾರಾಜ ತನ್ನ ಎದುರಾಳಿ ಕೋಚ್ ಬೇಹರ್ ರಾಜನನ್ನು ಮೀರಿಸಲು ತನ್ನ ಸಮಕಾಲೀನ ಭಾರತದಲ್ಲಿದ್ದ ಇತರ ಖ್ಯಾತಿ ಪಡೆದ ಆಟಗಾರರನ್ನು ನೇಮಿಸಿಕೊಳ್ಳುತ್ತಾರೆ (ಜೈಸ್, ವಾರ್ಡನ್, ಶಿರಾಮ್, ಗಣಪತಿ ಮುಂತಾದವರನ್ನು) ಅಂಥವರಲ್ಲಿ ಬಾಲೂ ಪ್ರಮುಖ ವ್ಯಕ್ತಿ. ಕೆಲವೊಮ್ಮೆ ಮಹಾರಾಜ ಆತನಿಗೆ ಬಹುಮಾನಗಳನ್ನಿತ್ತು ಗೌರವಿಸುತ್ತಿದ್ದ. ಬಂಗಾಲದ ಪ್ರಸಿದ್ಧ ಬ್ಯಾಟ್ಸ್‌ಮನ್ ಕುಲದ ರಂಜನಾರಾಯ್ ಮತ್ತಿತ್ತರರು ಹೇಳುವಂತೆ, ಬಾಲೂವಿನ ಜಾಣ್ಮೆಯ ಎಸೆತಗಳಿಂದಾಗಿ ಉತ್ತಮರಾಗಿ ಬ್ಯಾಟ್ ಮಾಡಲು ಕಲಿಯುತ್ತಾರೆ. ಅನೇಕ ಸಂದರ್ಭಗಳಲ್ಲಿ ಅವರ ಎಸೆತಗಳನ್ನು ಬಂಗಾಲದ ಬ್ಯಾಟ್ಸ್‌ಮನ್‌ಗಳಿಗೆ ಎದುರಿಸಲಾಗದೆ, ಇಡೀ ತಂಡವು 50ರನ್ನುಗಳೊಳಗೆ ಕುಸಿದು ಬಿಡುತ್ತಿತ್ತು.

ಪಾಲ್ವಂಕರ್ ಸಹೋದರರಲ್ಲಿ ಗಣಪತಿನ ಕ್ರಿಕೆಟ್ ಭವಿಷ್ಯ ಕೊನೆಮುಟ್ಟಿದೆ. 1918ರ ಅಕಾಲಿಕ ಮರಣದಿಂದ ಕೊನೆಗೊಳ್ಳುತ್ತದೆ. ಆತ ಒಬ್ಬ ಪ್ರತಿಭಾನ್ವಿತ ಆಟಗಾರನಾಗಿದ್ದ . 1914ರಲ್ಲಿ ಮುಂಬಯಿಯ ಚತುಷ್ಕೋನ ಸ್ಪರ್ಧೆಗಳಲ್ಲಿ ಹಿಂದೂಗಳನ್ನು ಪ್ರತಿನಿಧಿಸಿದ್ದ. ಭಾರತದಲ್ಲಿ ಕ್ಷೇತ್ರ ರಕ್ಷಣೆ ಅಂತರಾಷ್ಟ್ರೀಯ ಮಟ್ಟಕ್ಕಿಲ್ಲದಿದ್ದ ಆ ಸಂದರ್ಭದಲ್ಲಿ ಶಿವರಾಮು ಆಲ್‌ರೌಂಡ್ ಆಟಗಾರನಾಗಿ ಕ್ಷೇತ್ರ ರಕ್ಷಣೆಯಲ್ಲಿ ಅದ್ವಿತೀಯನಾಗಿದ್ದ. ಆತ ಪಾಟಿಯಾಲ ಮಹಾರಾಜನ ತಂಡದ ಭಾಗವಾಗಿ ಇಂಗ್ಲೆಂಡಿಗೆ ಪ್ರವಾಸ ಕೈಗೊಂಡಿದ್ದ. ಅಲ್ಲಿ ಜಾಣ್ಮೆಯ ಬ್ಯಾಟ್ಸ್‌ಮನ್‌ನಾಗಿ ಆಡವಾಡಿದ್ದ. ಪ್ರವಾಸದಲ್ಲಿ ಆತ 631 ರನ್ ಗಳಿಸಿ, ಬ್ಯಾಟಿಂಗ್

ಹೊರದೂಡಲ್ಪಟ್ಟ ಇಬ್ಬರು ಶೂದ್ರರು



ವಿನೋದ್ ಕಾಂಬ್ಳಿ

ದೊಡ್ಡ ನರಸಯ್ಯ ಗಣೇಶ್

ಕೋಮುವಾದಿ ಕ್ರಿಕೆಟ್

ಭಾರತ ಭಾಗ ವಾಗುವುದಕ್ಕಿಂತ ಮುಂಚೆ ಕ್ರಿಕೆಟ್ ಆಟವು ಕೋಮುವಾದಿ ನೆಲೆಗಳಲ್ಲಿ ವ್ಯವಸ್ಥೆಗೊಂಡಿತ್ತು. ಆ ಸಂದರ್ಭದಲ್ಲಿ ಮುಂಬಯಿಯಲ್ಲಿ ಪಂಚಷ್ಕೋನ (ಪೆಂಟಾಗ್ಯುಲರ್) ಕ್ರಿಕೆಟ್ ಸರಣಿ ಬಹಳ ಜನಪ್ರಿಯವಾಗಿತ್ತು. 1890ರಲ್ಲಿ ಪ್ರೆಸಿಡೆನ್ಸಿ ಪಂದ್ಯಾವಳಿಗಳ ಮೂಲಕ ಆರಂಭವಾದ ಈ ಆಟವು ಯುರೋಪಿಯನ್ನರು ಮತ್ತು ಪಾರ್ಸಿಗಳ ನಡುವೆ ನಡೆದಿತ್ತು. ಇದು ಕ್ರಮೇಣವಾಗಿ 1907ರಲ್ಲಿ ಹಿಂದೂಗಳಿಗೂ, 1912ರಲ್ಲಿ ಮುಸ್ಲಿಮರಿಗೂ ಪ್ರವೇಶ ನೀಡುತ್ತದೆ. ಉಳಿದಂತೆ 1937ರ ತನಕ ಕ್ರಿಶ್ಚಿಯನ್ನರು ಮತ್ತು ಆಂಗ್ಲೋ ಇಂಡಿಯನ್ನರಿಗೆ ಮಾತ್ರ ಸೀಮಿತವಾಗಿತ್ತು. ಇದು ಪ್ರತಿರೋಧಗಳ ನಡುವೆಯೂ 1940ರ ತನಕ ಮುಂದುವರಿದು, ಅಂತಿಮವಾಗಿ 1946ರಲ್ಲಿ ಅದನ್ನು ಇತರರಿಗೂ ತೆರೆಯಲಾಗುತ್ತದೆ.

ಸರಾಸರಿಯಲ್ಲಿ ಎರಡನೆಯವನಾಗುತ್ತಾನೆ. ಈ ಹಿಂದೆ ಗುರುತಿಸಿದಂತೆ, ವಿಠಲ್ ಮುಂಬಯಿಯ ಚತುಷ್ಕೋನ ಸ್ಪರ್ಧೆಗಳಲ್ಲಿ ನಾಯಕನಾಗಿ ಹಿಂದೂಗಳನ್ನು ಪ್ರತಿನಿಧಿಸಿದ್ದ. ಅಂದರೆ ಮುಂಚೂಣಿಯಲ್ಲಿದ್ದ ಸಮಕಾಲೀನ ಆಟಗಾರರಾದ ಸಿ.ಕೆ. ನಾಯ್ಡು, ಜಯ್ ಮತ್ತು ದಿಯೋಧರ್‌ಗಳಲ್ಲಿ ಈತನೂ ಸಹ ಒಬ್ಬನಾಗಿದ್ದ. 1926-27ರಲ್ಲಿ ಆತ ಎಂ.ಸಿ.ಸಿ.ಯ ವಿರುದ್ಧ ಸೆಣಸಲು ಇಂಡಿಯನ್ ತಂಡವನ್ನು ಪ್ರತಿನಿಧಿಸಲು ಆಯ್ಕೆಗೊಂಡಿದ್ದ. ಆದರೆ ಗಾಯಗೊಂಡದ್ದರಿಂದ ಆಡಲಾಗಲಿಲ್ಲ. ಅಂತಿಮವಾಗಿ, ಆತ 1928ರಲ್ಲಿ ನಿವೃತ್ತಿ ಹೊಂದುತ್ತಾನೆ.

ಬಾಲೂ ಸಾಮಾಜಿಕವಾಗಿ ಗಣನೀಯ ಪ್ರಶಂಸೆಯನ್ನು ಗಳಿಸಿದ್ದ. ಅಲ್ಲದೆ ಈತ ಅಂಬೇಡ್ಕರ್‌ರಂಥ ಹಲವಾರು ಪ್ರಮುಖರಿಗೆ ಸ್ಫೂರ್ತಿಯ ಸೆಲೆಯಾಗಿದ್ದ. 1927-28ರಲ್ಲಿ ಗ್ರಾಮೀಣ ಪ್ರೇಕ್ಷಕರಿಗೆ ಬಾಲೂವಿನ ಸಾಧನೆಗಳ ಬಗ್ಗೆ ತಿಳಿಸಿಕೊಡಲು ಅಂಬೇಡ್ಕರ್‌ರವರು ಸಾಕಷ್ಟು ಪ್ರಯತ್ನಿಸುತ್ತಿದ್ದರು. ಇತ್ತೀಚಿನ ಕಾಲದಲ್ಲಿ ನಾವೇಕೆ ದಲಿತ ಕ್ರಿಕೆಟ್ ಪಟುಗಳನ್ನು ತಯಾರಿಸಲಾಗಲಿಲ್ಲ? ಇಂಥ ಅಸಮತೆಯ ಹಿಂದಿನ ಕಾರಣಗಳನ್ನು ಅರಿಯಬೇಕಾದರೆ ಆಟವನ್ನು ಸಾಮಾಜಿಕ ವಿಶ್ಲೇಷಣೆಗೆ ಒಳಪಡಿಸಬೇಕಾಗುತ್ತದೆ ಹಾಗೆ ಮಾಡಿದಲ್ಲಿ ಅದು ರಾಷ್ಟ್ರೀಯ ಆವೇಶವಾಗಿ ಪರಿವರ್ತನೆಗೊಂಡು ಕ್ರಿಕೆಟ್ ಆಟದ ಲಕ್ಷಣವನ್ನೇ ಬದಲಾಯಿಸಿದ್ದನ್ನು ಅರ್ಥೈಸಲು ಸಾಧ್ಯವಾಗುತ್ತದೆ. ಈ ದೇಶದಲ್ಲಿ ಕ್ರಿಕೆಟ್ ಆಟದ ಅಂದಿನ ಪೋಷಕರೆಂದರೆ ಮಹಾರಾಜರು ಮತ್ತು ರಾಜಕುಮಾರರು ಅವರು ಬ್ರಿಟಿಷರ ಕಣ್ಣಲ್ಲಿ ಮಾನ್ಯತೆ ಪಡೆದು ಮೇಲ್ಮುಖ ಚಲನೆಯ ಸಾಧ್ಯತೆಯನ್ನು ಗಳಿಸಿಕೊಳ್ಳಲು ತಮ್ಮ ತಂಡಗಳಿಗಾಗಿ ಕ್ರಿಕೆಟ್ ಆಟಗಾರರನ್ನು ನೇಮಿಸಿಕೊಳ್ಳುತ್ತಿದ್ದರು. ಅವರ ರಾಜಕೀಯ ಭವಿಷ್ಯವು ತೂಗುಯ್ಯಾಲೆಯಲ್ಲಿದ್ದ ಕಾರಣ, ಅವರು ತಮ್ಮ ಗಮನವನ್ನು ಕ್ರಿಕೆಟಿನತ್ತ ಪಲ್ಲಟಗೊಳಿಸಿಕೊಂಡು ತಮ್ಮ ಸಾಮಾಜಿಕ ಅಂತಸ್ತನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದ್ದರು. ತಮ್ಮ ತಂಡಗಳ ಒಳಿತನ್ನಷ್ಟೇ ಇಷ್ಟಪಟ್ಟ ಅವರು ಆಟಗಾರರ ಸಾಮಾಜಿಕ ಹಿನ್ನೆಲೆಯನ್ನು ಪರಿಗಣಿಸುವ ಸ್ಥಿತಿಯಲ್ಲಿರಲಿಲ್ಲ. ಅನಕ್ಷರಸ್ಥ ವ್ಯಕ್ತಿಗಳು ಹಾಗೂ ಆರ್ಥಿಕವಾಗಿ ವಂಚಿತ ಹಿನ್ನೆಲೆಯುಳ್ಳವರು ಸಹ ಮಹಾರಾಜರ ಪೋಷಣೆಯನ್ನು ಪಡೆದಿದ್ದರು. ಪಾಲ್ವಂಕರರು ಹಾಗೂ ಅವರ ದಲಿತ ಸಮಕಾಲೀನರು ಪಾಟಿಯಾಲ ಮತ್ತು ನಾಥೋರ್ ಮಹಾರಾಜರಿಂದ ಪೋಷಣೆ ಗಳಿಸಿಕೊಂಡದ್ದನ್ನು ಇದು ವಿವರಿಸುತ್ತದೆ. ಆದರೆ ಕ್ರಮೇಣವಾಗಿ ಈ ಪೋಷಣೆಯ ಲಕ್ಷಣವೇ ಬದಲಾಗುತ್ತದೆ.

ನಿಗಮಗಳ ಪೋಷಣೆ-ಪ್ರೋತ್ಸಾಹ ಉದಯಿಸಿದಂತೆ, ರಾಷ್ಟ್ರೀಯ ಮಟ್ಟಕ್ಕೇರಿದ ಕ್ರಿಕೆಟ್ ಆಟವೂ ಸಹ ರಾಜಕುಮಾರರ ಪೋಷಣೆಯಿಂದ ಕಂಪನಿಗಳಿಗೆ ಪಲ್ಲಟಗೊಳ್ಳುತ್ತದೆ. ಈ ಕಂಪೆನಿಗಳ ಉದ್ದೇಶಕ್ಕನುಗುಣವಾಗಿ ಕ್ರಿಕೆಟ್ ಆಟಗಾರರನ್ನು ಶಿಕ್ಷಿತ ಹಿನ್ನೆಲೆಯಿಂದ ಆಯ್ದುಕೊಂಡು, ಆಟಗಾರರು ನಿವೃತ್ತಿಗೊಂಡಾಗಲೂ ಅವರ ಸೇವೆಯನ್ನು ತಾವೇ ಕಾಯ್ದಿರಿಸಿಕೊಂಡರು. ಇದೊಂದು ಪ್ರಜ್ಞಾಪೂರ್ವಕ ನೇಮಕವಾಗಿ ನಿಗದಿತ ಶೈಕ್ಷಣಿಕ ಮಟ್ಟವನ್ನು ಕಾಯ್ದುಕೊಳ್ಳಲಾಯಿತು. ಆಸ್ಟ್ರೇಲಿಯಾದ ಚರಿತ್ರೆಗಾರ ರಿಚರ್ಡ್ ಕ್ಯಾಶ್‌ಮನ್, ತನ್ನ 'ಭಾರತೀಯ ಕ್ರಿಕೆಟ್ ಇತಿಹಾಸ, ಪೋಷಕರು, ಆಟಗಾರರು ಮತ್ತು ಪ್ರೇಕ್ಷಕರು" (1979) ಎಂಬ ಕೃತಿಯಲ್ಲಿ ಹೀಗೆ ಬರೆದಿದ್ದಾರೆ.

"1956ರಲ್ಲಿ ಜಿ. ಸುಂದರಮ್, ದೇಶವನ್ನು ಈಗಾಗಲೇ ಪ್ರತಿನಿಧಿಸಿದ್ದಾಗ್ಯೂ, ಬಿ.ಇ.ಎಸ್.ಡಿಗೆ ಸೇರಲು ಬಂದಾಗ, ಅಲ್ಲಿನ ಜನರಲ್ ಮ್ಯಾನೇಜರ್‌ನ ಪ್ರಕಾರ ಕಂಪನಿಯ ನಿಯಮದಂತೆ ಕನಿಷ್ಠ ಅರ್ಹತೆಗಳನ್ನು ಪಡೆದುಕೊಳ್ಳಬೇಕಾಗುತ್ತದೆ. ಆಗಷ್ಟೆ ಕ್ರಿಕೆಟರಿಗೆ ಅಲ್ಲೊಂದು ಸ್ಥಾನ ಸಿಗುವುದು" ಅಲ್ಲದೆ ದೇಶದಲ್ಲಿ ಕ್ರೀಡೆಗಳನ್ನು ಪ್ರೋತ್ಸಾಹಿಸುವುದರಲ್ಲಿ ಮುಂಚೂಣಿಯಲ್ಲಿದ್ದ, ಟಾಟಾ ನಿಮಗವೂ ಸಹ ಪದವೀಧರರನ್ನು ಮಾತ್ರ ತೆಗೆದುಕೊಳ್ಳುತ್ತಿತ್ತು. ಏಕೆಂದರೆ ಆಟದಿಂದ ನಿವೃತ್ತಿಯಾದಾಗ ಅವರು ಕಂಪನಿಗೆ ಹೊರೆಯಾಗಬಾರದಿತ್ತು.

ಅಲ್ಲದೆ, ರಾಜಕುಮಾರರ ಪೋಷಣೆ ತಪ್ಪಿದಾಗ, ಮಂಚೂಣಿಗೆ ಬಂದ ಇತರ ಕೇಂದ್ರಗಳೆಂದರೆ ಶಾಲಾ-ಕಾಲೇಜುಗಳು ಮತ್ತು ಕ್ಲಬ್‌ಗಳು, ಕ್ರಿಕೆಟ್ ಆಟವನ್ನು ಪ್ರೋತ್ಸಾಹಿಸುವಲ್ಲಿ ಮುಂದೆ ಬಂದಂತಹ ಶಾಲಾ-ಕಾಲೇಜುಗಳಲ್ಲಿ ಅವಶ್ಯವಾದ ಮೂಲಭೂತ ಸೌಕರ್ಯಗಳು ಇತ್ತು ಎಂಬುದನ್ನು ಗಮನಿಸಬೇಕಾಗುತ್ತದೆ. ಅಂದರೆ

ಬಾಬಾ ಸಾಹೇಬ್ ವಿರುದ್ಧ ಬಾಲೂ

ಬಾಲೂ ಪಾಲ್ವಂಕರರನ್ನು ಶ್ಲಾಘಿಸುವಾಗ ಮತ್ತು ಅಂಬೇಡ್ಕರ್ ಅವರಿಂದ ಪಡೆದ ಪ್ರೇರಣೆಯನ್ನು ನೆನಪಿಸಿಕೊಳ್ಳುವಾಗ, ಅವರು ಕಾಂಗ್ರೆಸಿಗರಾಗಿದ್ದು, ಅಂಬೇಡ್ಕರ್ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು. ಮೊದಲಿಗೆ ಸೆಪ್ಟೆಂಬರ್ 1932ರಲ್ಲಿ ಕಾಂಗ್ರೆಸ್ ಕಡೆಯಿಂದ ಪೂನಾ ಒಪ್ಪಂದದಲ್ಲಿ ಮಧ್ಯಸ್ಥಗಾರನಾಗಿ ಕಾರ್ಯನಿರ್ವಹಿಸಿದ್ದ. ಹರಿಜನ ಸೇವಕ ಸಂಘವು ಬಾಲೂವನ್ನು 'ಶ್ರೀ ಪಿ. ಬಾಲೂ' ಎಂದು ಉಲ್ಲೇಖಿಸಿದೆ. 1933-34ರಲ್ಲಿ ಮುಂಬಯಿ ಪುರಸಭೆಯಲ್ಲಿನ ಸ್ಥಾನಕ್ಕೆ ಉಪಚುನಾವಣೆಯಲ್ಲಿ ಸ್ಪರ್ಧಿಸಿದ್ದ ಮತ್ತು ಪಾರ್ಸಿ ಡಾಕ್ಟರ್, ಹೋಮಿ, ಎಫ್. ಪೌರಿಯೊಂದಿಗೆ ಸೆಣಸಿ ಸೋಲುತ್ತಾನೆ. ಮೂರು ವರ್ಷಗಳ ನಂತರ ಮುಂಬಯಿ ನಗರದ 'ಇ' ಮತ್ತು 'ಎಫ್' ವಾರ್ಡ್‌ಗಳಿಗೆ 1937ರ ಚುನಾವಣೆಗಳಲ್ಲಿ ಅಂಬೇಡ್ಕರರ ವಿರುದ್ಧ ಪ್ರತಿಸ್ಪರ್ಧಿಯಾಗಿ ಬಾಲೂವನ್ನು ಕಾಂಗ್ರೆಸ್ ನಿಲ್ಲಿಸಿತು. ಅಂಬೇಡ್ಕರರು ಪೂನಾ ಒಪ್ಪಂದವನ್ನು ತಿರಸ್ಕರಿಸಿದರು. ಮತ್ತು ಪರಿಶಿಷ್ಟ ಜಾತಿ ಒಕ್ಕೂಟದ ಅಭ್ಯರ್ಥಿಯಾಗಿ ನಿಂತರು. ಬಾಲೂ 11,225 ಮತಗಳನ್ನು, ಅಂಬೇಡ್ಕರರು 13,245 ಮತಗಳನ್ನು ಪಡೆದರು. ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯು ಸ್ವತಂತ್ರ ಅಭ್ಯರ್ಥಿಯಾಗಿ ನಿಂತಿದ್ದರಿಂದ ಬಾಲೂವಿಗೆ ತೊಂದರೆಯಾಯಿತು.

ವರ್ಲ್ಡ್ ಕಪ್ ಗೆದ್ದು ತಂದ ವೀರ

ಇದುವರೆಗೆ ನಡೆದ ವಿಶ್ವಕಪ್ ಕ್ರಿಕೆಟ್ ಪಂದ್ಯಗಳಲ್ಲಿ ಭಾರತದ ಸಾಧನೆ ಅಷ್ಟೇನೂ ಗಮನಾರ್ಹವಲ್ಲದಿದ್ದರೂ ಈ ಕ್ರೀಡೆ ಯಲ್ಲಿನ ಜಾತಿ ಮತ್ತು ಕೋಮು ರಾಜಕೀಯದಲ್ಲಿ ಮಾತ್ರ ಮುಂದಿದ್ದು ಮೇಲ್ಜಾತಿಯ ಆಟಗಾರರಿಗೆ ಇನ್ನಿಲ್ಲದ ಸೌಲತ್ತು ಮತ್ತು ಅತಿಯಾದ ಪ್ರಚಾರದ ಭರಾಟೆಯನ್ನು ನೀಡುತ್ತಿದ್ದರೂ ಭಾರತಕ್ಕೆ ಮೊಟ್ಟ ಮೊದಲ ಬಾರಿಗೆ ವಿಶ್ವಕಪ್ (1983-3ನೇ ವಿಶ್ವಕಪ್) ತಂದುಕೊಟ್ಟ ಕೀರ್ತಿ ಮಾತ್ರ ಅಬ್ರಾಹ್ಮಣ ಕಪಿಲ್‌ದೇವಗೆ ಸಲ್ಲುತ್ತದೆ.

ಆಟವು ಅಧಿಕವಾದ ಖರ್ಚು-ವೆಚ್ಚಗಳನ್ನೊಳಗೊಂಡಿದ್ದರಿಂದ, ಅನೇಕ ಶೈಕ್ಷಣಿಕ ಸಂಸ್ಥೆಗಳು ಕ್ರಿಕೆಟನ್ನು ವೃದ್ಧಿಪಡಿಸಲು ಆಗುವುದಿಲ್ಲ. ಇದರಿಂದಾಗಿ ಶ್ರೀಮಂತ ಸವರ್ಣೀಯರು ಶ್ರೀಮಂತ ಶಿಕ್ಷಣ ಕೇಂದ್ರದಲ್ಲಿ ಪ್ರವೇಶ ಪಡೆದು, ಆಟದ ಮೇಲೆ ಏಕಸಾಮ್ಯವನ್ನು ಸ್ಥಾಪಿಸುತ್ತಾರೆ. ಅಲ್ಲದೆ, ಕ್ರಿಕೆಟ್ ಕ್ಲಬ್‌ಗಳೂ ಸಹ ದಲಿತರನ್ನು ಒಳಗೊಂಡಿರಲಿಲ್ಲ. ಈ ಕ್ಲಬ್‌ಗಳು ಅಧಿಕವಾದ ಸದಸ್ಯತ್ವ ಶುಲ್ಕವನ್ನು ವಿಧಿಸಿದ್ದರಿಂದ ವಂಚಿತ ಹಿನ್ನೆಲೆಯವರು ಅಲ್ಲಿ ಸೇರಲಾಗುವುದಿಲ್ಲ. ಕ್ರಿಕೆಟ್ ಆಡಲೇಬೇಕೆಂದು ಇಚ್ಛಿಸಿದವರು ತಮ್ಮದೇ ಆದ ಕ್ರಿಕೆಟ್ ಸಾಮಾಗ್ರಿಗಳನ್ನು ಖರೀದಿಸಿಕೊಳ್ಳಬೇಕಾಗಿತ್ತು. ಹಾಗಾಗಿ ಕ್ರಿಕೆಟ್ ದಲಿತರಿಗಂತು ದೂರದ ಕನಸೇ ಆಯಿತು.

ಈ ಆಟದಲ್ಲಿ ನಿಧಾನವಾಗಿ ವಿಕಾಸಗೊಂಡ ವೃತ್ತಿಪರತೆಯೂ ಸಹ ದಲಿತರು ಭಾಗವಹಿಸುವುದನ್ನು ತಡೆಯುತ್ತದೆ. ಆದರೆ ಈ ವೃತ್ತಿಪರತೆ ಬಹು ಹಿಂದೆಯೇ ಬಂದಿದ್ದಲ್ಲಿ, ಆಟಗಾರರು ತಮ್ಮ ಜೀವನ ನಿರ್ವಹಣೆಗಾಗಿ ಇತರೆ ಉದ್ಯೋಗವನ್ನು ಅರಸ ಬೇಕಾಗಿರಲಿಲ್ಲ. ಅಲ್ಲದೆ ಪ್ರತಿಭಾವಂತ ಆಟಗಾರರು ಮುನ್ನಡೆಗೆ ಬರುತ್ತಿದ್ದರು. ಆದಾಗ್ಯೂ ಆಟವೇ ಒಂದು ವೃತ್ತಿಯಾಗಿ ಇಂಡಿಯಾದಲ್ಲಿ ಪರಿಗಣಿತವಾಗುವುದು. ಇತ್ತೀಚೆಗಷ್ಟೇ ಬಡತನದ ಹಿನ್ನಲೆಯಿಂದ ಬಂದವರು ಕ್ರೀಡೆಯನ್ನೇ ವೃತ್ತಿಯನ್ನಾಗಿ ಪರಿಗಣಿಸುವುದು ದುಃಸಾಧ್ಯ. ಆದರೆ ಮೇಲ್ಜಾತಿ ಹಿಂದೂಗಳಿಗೆ ಇದು ತಮ್ಮ ವಿಶ್ರಾಂತ ಹವ್ಯಾಸವಾಗಿದ್ದು, ದಲಿತರಿಗೆ ಅಂಥ ಅವಕಾಶವೇನೂ ಇಲ್ಲ.

1983ರ ನಂತರ ಇಂಡಿಯಾದಲ್ಲಿ ಕ್ರಿಕೆಟ್ ಬಹು ಮಾನ್ಯತೆಯನ್ನು ಪಡೆದಿದ್ದು ಪ್ರೆಸಿಡೆನ್ಸಿಯಲ್ ಕಪ್ ಮೂಲಕವಷ್ಟೆ. ಅದೂ ಕೂಡ ಹಿಂದುಳಿದ ವರ್ಗದ ತಾರೆಗಳಾದ ಕಾಂಬ್ಳಿ ಮತ್ತು ಗಣೇಶ್‌ರಂತಹವರು ಮುನ್ನಡೆಗೆ ಬಂದಿದ್ದರಿಂದ. ಇವರು ಬಾಲ್ಯದಿಂದಲೇ ತೊಂಬತ್ತರ ದಶಕದಲ್ಲಿ ಈ ಆಟವನ್ನು ವೀಕ್ಷಿಸಿ, ಖುಷಿಯಿಂದಲೇ ಅದನ್ನು ಆರಿಸಿಕೊಳ್ಳುತ್ತಾರೆ. ಈ ಆಟ ಪ್ರಸಿದ್ಧಿ ಹಾಗೂ ಹಣವನ್ನು ತಂದು ಕೊಟ್ಟಿದ್ದರಿಂದ ಅವರ ಕುಟುಂಬಗಳು ತಮ್ಮ ಮಕ್ಕಳು ಕ್ರಿಕೆಟನ್ನು ಆಡಲು ಪ್ರೋತ್ಸಾಹಿಸಿದರು. ಆದಾಗ್ಯೂ ಈ ವ್ಯಕ್ತಿಗಳು ತಮ್ಮ ಸಾಮರ್ಥ್ಯಕ್ಕೆ ನ್ಯಾಯ ಒದಗಿಸಲಾಗಲಿಲ್ಲ. ಕಾಂಬ್ಳಿ, ನಮಗೆಲ್ಲಾ ತಿಳಿದಂತೆ, ತೆಂಡೂಲ್ಕರ್‌ನಂತೆ ಒಬ್ಬ ಅಸಾಮಾನ್ಯ ಬ್ಯಾಟಿಂಗ್ ಪಟುವೆಂದು ಪರಿಗಣಿಸಲಾಗಿತ್ತು. ಆದರೂ, ತೆಂಡೂಲ್ಕರ್ ಇಂದಿಗೂ ಅದನ್ನು ಯಶಸ್ವಿಯಾಗಿ ನಿಭಾಯಿಸಿದಂತೆ ಕಾಂಬ್ಳಿ ಮಾಡಲಾಗಲಿಲ್ಲ. ಕಾಂಬ್ಳಿ ಮುಂಬಯಿಯ ರಣಜಿ ಪಂದ್ಯಗಳಲ್ಲಷ್ಟೇ ಆಡುತ್ತಿದ್ದಾರೆ. ಇದಕ್ಕೆ ಕಾರಣ ಆತನ ದಲಿತ ಹಿನ್ನೆಲೆಯೇ ಆಗಿದೆ. ಗಂಗೂಲಿ ಅಥವಾ ದ್ರಾವಿಡ್‌ರ ಯಶಸ್ಸು ಅವರ ಸಹಜವಾದ ಪ್ರತಿಭೆಯೆಂದು ಪರಿಗಣಿಸಿದರೆ, ಕಾಂಬ್ಳಿಯ ಆಟ, ತನ್ನ ದಲಿತ ಹಿನ್ನೆಲೆಯಿಂದಾಗಿ, ಅಸಹಜವೆಂದೇ ಭಾವಿಸಲಾಗುತ್ತದೆ. ಅಲ್ಲದೆ ಮಾಧ್ಯಮಗಳು ಆತನ ದಲಿತ ಹಿನ್ನೆಲೆಯನ್ನು ಪದೇ ಪದೇ ನೆನಪಿಸಿದವೇ ಹೊರತು, ಆತನನ್ನು ಬೆಳೆಯಗೊಡಲಿಲ್ಲ. ಅಲ್ಲದೆ ಆತನದ್ದು ಅಸಾಧಾರಣ ಸಾಧನೆಯೆನ್ನುತ್ತ, ಆತನ ಸಹಜವಾದ ಪ್ರತಿಭೆಯನ್ನು ಮೂಲೆಗುಂಪಾಗಿಸುತ್ತದೆ.

ಈಗ ಕ್ರಿಕೆಟ್ ಒಂದು ವೃತ್ತಿಪರ ಆಯ್ಕೆ ಎಂಬುದು ಬಲವಾಗಿ ಬೇರೂರಿರುವುದರಿಂದ ಪ್ರತಿಭೆಯನ್ನು ಸಣ್ಣ ವಯಸ್ಸಿನಲ್ಲೇ ಗುರುತಿಸಿ, ರಾಷ್ಟ್ರೀಯ ಅಕಾಡೆಮಿಗಳಲ್ಲಿ ಬೆಳೆಸುವಂತಾಗಬೇಕು. ಆದಾಗ್ಯೂ, ಈ ಆಟದ ಬಗ್ಗೆ ದೇಶದಲ್ಲಿರುವ ನಿಯಮಾವಳಿಗಳಲ್ಲಿ ವಂಚಿತ ಸಮುದಾಯಗಳ ದಲಿತ ಯುವಕರಿಗೆ ಅವಕಾಶವೇ ಇಲ್ಲದಂತಾಗಿದೆ. ಇಂಡಿಯಾದಂತಹ ದೇಶದಲ್ಲಿ ಸಾಂಪ್ರದಾಯಿಕ ಸಂಪ್ರದಾಯಗಳು ಪ್ರಾಧಾನ್ಯತೆ ಪಡೆದಿರುವಾಗ, ನಡಾವಳಿಗಳ ಬಗ್ಗೆ ಮತ್ತು ಸಾಮಾಜಿಕ ಸಂರಚನೆಯಲ್ಲಿ ತೀವ್ರವಾಗಿ ಬದಲಾವಣೆಯನ್ನು ತರದ ಹೊರತು, ಕ್ರೀಡಾ ಜಗತ್ತಿನಲ್ಲಿ ಪ್ರಜಾಸತ್ತಾತ್ಮಕ ನಿಲುವು ಸಾಧ್ಯವಾಗುವುದಿಲ್ಲ.

(ಬೊರಿಯಾ ಮುಜುಮ್‌ಧಾರರವರು ಆಕ್ಸ್‌ಫರ್ಡ್‌ನಲ್ಲಿ ಸಂತ ಜಾನ್ಸ್ ಕಾಲೇಜಿನಲ್ಲಿ ಸಂಶೋಧಕರಾಗಿದ್ದಾರೆ)

ಸೌಜನ್ಯ : ದಿ ದಲಿತ್

ಬ್ರಾಹ್ಮಣರ ಸಸ್ಯಾಹಾರಿ ಆಟ

ಕ್ರಿಕೆಟ್ 1,000 ವರ್ಷಗಳ ಹಿಂದೆ ಬ್ರಿಟಿಷ್ ದರ್ಬಾರಿನ ಮತ್ತು ಮೇಲ್ವರ್ಗದವರ ಆಟವಾಗಿ ಮಾನ್ಯಗೊಂಡಿತ್ತು. ಈ ಆಟವು ಅವರ ವಸಾಹತುಶಾಹಿಯ ಗಂಟು ಮೂಟೆಯ ಭಾಗವಾಗಿದ್ದು, ಅವರು ಆಡಳಿತ ನಡೆಸಿದ ಪ್ರತಿಯೊಂದು ಪ್ರದೇಶಗಳಿಗೂ ಹರಡುತ್ತದೆ. ಭಾರತದಲ್ಲಿ, ಕ್ರಿಕೆಟನ್ನು ಆರಂಭದಲ್ಲಿ ಪ್ರೋತ್ಸಾಹಿಸಿದವರು ಮತ್ತು ಪೋಷಿಸಿದವರು ಸ್ಥಳೀಯ ಕುಲೀನರಾದ ಮಹಾರಾಜರು ಮತ್ತು ರಾಜಕುಮಾರರು. ಆದರೆ 1947ರ ನಂತರ, ಈ ಆಟವನ್ನು ಪ್ರಧಾನವಾಗಿ ಆಡುತ್ತಿದ್ದವರು ಬ್ರಾಹ್ಮಣರು ಮತ್ತು ಇತರ ಬ್ರಾಹ್ಮಿನಿಕಲ್ ಜಾತಿಗಳು ಎಂಬುದನ್ನು ನಾವು ಕಾಣಬಹುದು. ಕೆಲವೇ ಕೆಲವು ದಲಿತರು, ಆದಿವಾಸಿಗಳು ಅಥವಾ ಓಬಿಸಿಗಳು 'ಇಂಡಿಯನ್ XI' ತಂಡದಲ್ಲಿದ್ದರಷ್ಟೇ ಇದಕ್ಕೆ ಕಾರಣಗಳನ್ನು ಆರ್ಥಿಕ ನೆಲೆಯಲ್ಲಿ ಗುರುತಿಸಬಹುದು, ಆದರೆ ಈ ಸಮಾಜವು ಜಾತಿ ಆಧಾರಿತವಾಗಿದ್ದು ಕ್ರಿಕೆಟ್ ಬ್ರಾಹ್ಮಣರ ಜೀವನಮಾರ್ಗಕ್ಕೆ ಚೆನ್ನಾಗಿ ಹೊಂದುವಂತಹ ಆಟವಾಗಿದೆ. ಹಾಕಿಯಂತಹ ಆಟದಲ್ಲಿ ದಲಿತರೂ, ಆದಿವಾಸಿಗಳು, ಓಬಿಸಿಗಳು ಪ್ರಧಾನವಾಗಿದ್ದಾರೆ ಹಾಗೂ ಕ್ರಿಕೆಟ್ ಗವಾಸ್ಕರ್‌ಗಳು, ಮಂಜ್ರೇಕರ್‌ಗಳು, ತೆಂಡೂಲ್ಕರ್‌ರು, ಶಾಸ್ತ್ರಿಗಳು, ಬ್ಯಾನರ್ಜಿಗಳು, ಕೃಷ್ಣಮಾಚಾರ್‌ಗಳನ್ನು ಏಕೆ ಇಟ್ಟುಕೊಂಡಿದೆಯೆಂಬುದನ್ನು ನೋಡಬೇಕು.

ಕ್ರಿಕೆಟ್‌ನಿಂದ ದಲಿತರನ್ನು ಹೊರಗಿಟ್ಟಿರಲು ಕಾರಣ, ಆ ಆಟದಲ್ಲಿ ಬ್ರಾಹ್ಮಣ್ಯವು ನುಸುಳಿಕೊಂಡಿರುವುದು. ಹಿಂದೂ ಚರಿತ್ರೆಕಾರ ಅಶಿಸ್ ನಂದಿಯು ಕ್ರಿಕೆಟ್ ನಿಜವಾಗಿ ಇಂಡಿಯನ್ ಕ್ರೀಡೆಯಾಗಿದೆ. (ಹಿಂದೂ ಓದೀ) ಎಂದು ಹೇಳಿದ. ವಾಸ್ತವವಾಗಿ, ಕೆಲವು ಉಲ್ಲೇಖಕಾರರು ಅದನ್ನು 'ವೇದಾಂತಿಕ್' ಎಂದು ಹೇಳಿದ್ದಾರೆ, ಕೆಲವೊಮ್ಮೆ 'ಹಿಂದೂ ನೀತಿಶಾಸ್ತ್ರ'ಕ್ಕೆ ಸಾರಭೂತವಾಗಿ ಹೊಂದುತ್ತದೆ. ಕ್ರಿಕೆಟ್ ಆಟವು ದೈಹಿಕ ಶ್ರಮವನ್ನೇನೂ ಬಯಸುವುದಿಲ್ಲ. ಈ ಆಟಗಾರರನ್ನು ತುಂಬಾ ಹೊತ್ತು ಒಂದೇ ಸ್ಥಳದಲ್ಲಿ ನಿಲ್ಲಿಸಬಹುದು. ಅತ್ಯಂತ ವೇಗಿ ಬೌಲರ್ ಸಹ ಹಂತ ಹಂತವಾಗಿ ತನ್ನ ಶಕ್ತಿಯನ್ನು ವ್ಯಯಿಸುತ್ತಾನಷ್ಟೆ. ಆದರೆ ಕಪಿಲ್‌ದೇವ್ (ಬ್ರಾಹ್ಮಣೇತರ)ನಂತೆ ಇತರರನ್ನು ವಿಶ್ವದ ವೇಗದ ಬೌಲರ್ ಆಗಿ ತಯಾರಿಸಲಾಗಲಿಲ್ಲ. ಸ್ಪಿನ್ನಿಂಗ್ ಬೌಲ್ ಮೇಲ್ಜಾತಿಯವರಿಗೆ ತುಂಬಾ ಚೆನ್ನಾಗಿ ಹಿಡಿಸುವಂಥದು ಏಕೆಂದರೆ ಇದು ಕುತಂತ್ರವನ್ನು ಒಳಗೊಂಡಿರುತ್ತದೆ. ನೀವೊಬ್ಬ ಅತ್ಯಂತ ಶ್ರೇಷ್ಠ ಬ್ಯಾಟು ಪಟುಗಳಾಗಿ ಜಿ.ಆರ್. ವಿಶ್ವನಾಥ್ ಅಥವಾ ಸುನಿಲ್ ಗವಾಸ್ಕರರಂತೆ ಆಗಿ ಬ್ರಾಹ್ಮಣ ಪೂಜಾರಿಗಳಂತೆ ದೊಡ್ಡ ಹೊಟ್ಟೆಯನ್ನು ಬೆಳೆಸಿಕೊಳ್ಳಬಹುದು. ಕ್ರೀಡಾ ಜಗತ್ತಿನಲ್ಲಿ ಇತರ ಯಾವುದೇ ಆಟವೂ ಸಹ ಅಂಥ ಶರೀರವನ್ನು ಇಷ್ಟಪಡದು. ವಿಶ್ವನಾಥ್ ಅಥವಾ ಗವಾಸ್ಕರ್ ಹಾಕಿ ಅಥವಾ ಫುಟ್‌ಬಾಲನ್ನು ಆಡಲಾಗದು. ಕ್ರಿಕೆಟ್ ಬ್ರಾಹ್ಮಣರ ಆಟವಾಗಿದ್ದು ಬೇಳೆ ಮತ್ತು ತರಕಾರಿಯನ್ನು ತಿಂದು ಆಡಬಹುದು.

ತೊಂಬತ್ತರ ದಶಕದ ಮಧ್ಯಭಾಗದಲ್ಲಿ ಕರ್ನಾಟಕ ಭಾರತ ತಂಡಕ್ಕೆ ಸುಮಾರು ಆರು ಜನ ಆಟಗಾರರನ್ನು ನೀಡಿದೆ. ಅವರಲ್ಲಿ ಐದು ಮಂದಿ ಬ್ರಾಹ್ಮಣರು, ಎಂಬತ್ತರ ದಶಕದ ಕೊನೆಯಲ್ಲಿ ಮಹಾರಾಷ್ಟ್ರದ ಬ್ರಾಹ್ಮಣರು ಈ ಆಟದ ಸಾರಥ್ಯವನ್ನು ಹಿಡಿಯುತ್ತಾರೆ. ತಮಿಳುನಾಡಿನಲ್ಲಿ ಅದು ಜಾತಿ ಧಾರವನ್ನು ಧರಿಸಲು ಸಹಾಯಕವಾಗುತ್ತದೆ. ಕೆ. ಶ್ರೀಕಾಂತ್, ಶಿವರಾಮಕೃಷ್ಣನ್, ಡಬ್ಲ್ಯೂ.ವಿ. ರಾಮನ್, ಸಡಗೋಪನ್ ರಮೇಶ್, ಶ್ರೀರಾಂ ಮುಂತಾದವರೆಲ್ಲ ಬ್ರಾಹ್ಮಣರೇ ಆಗಿದ್ದಾರೆ. ಬ್ರಾಹ್ಮಣರೇ ಪ್ರಮುಖವಾಗಿದ್ದ ಭಾರತೀಯ ಕ್ರಿಕೆಟ್ ಒಂದು ಸಾಂಘಿಕ ಆಟವಾಗಿರದಿರುವುದು ಅಚ್ಚರಿಯೇ ಸರಿ. ಇಲ್ಲಿ ಅಹಂ ಬ್ರಹ್ಮಾಸ್ಮಿ ಎನ್ನುವ ನಿಯಮವು ಚಾಚೂ ತಪ್ಪದೆ ಅಸ್ತಿತ್ವಕ್ಕೆ ಬರುತ್ತದೆ. ಇಲ್ಲಿ ಪ್ರತಿಯೊಬ್ಬ ಕ್ರಿಕೆಟಿಗನು ತನಗಾಗಿ ಆಡುತ್ತಾನೆ. ಆದ್ದರಿಂದ ಒಂದು ತಂಡವಾಗಿ ಆಡುವಲ್ಲಿ ಸೋತರೂ ಸಹ ನಾವು ನೋಡುವಂತೆ ಆಟಗಾರರು ವೈಯಕ್ತಿಕ ದಾಖಲೆಗಳನ್ನು ಸ್ಥಾಪಿಸುತ್ತಾರೆ. ಇಲ್ಲಿ ಸ್ವಾರ್ಥವು ಕ್ರಿಯಾಶೀಲವಾಗಿದೆ. ಅನೇಕ ಬ್ಯಾಟ್ಸ್‌ಮನ್‌ಗಳು ತಮ್ಮ ವಿಕೆಟನ್ನು ಕಾಯ್ದುಕೊಳ್ಳಲು ಇಷ್ಟಪಡುತ್ತಾರಲ್ಲದೆ ಬೇರೆಯವರನ್ನು ರನ್ ಔಟ್ ಮಾಡಿಸುತ್ತಾರೆ. ಅಂದರೆ ಇದರರ್ಥ ಈ ಆಟವು ಬ್ರಾಹ್ಮಿನಿಕಲ್ ಆಗಿದ್ದು, ಜಾತಿ ಭೇದವನ್ನು ಒಳಗೊಂಡಿದೆಯೆಂದರೆ, ಅದು ಇರುವುದೇ ಹೀಗೆ.

ದಲಿತ ಮಹಿಳೆಯರ ಸಮಸ್ಯೆಗಳು

ದಲಿತ ಮಹಿಳೆಯರು ಮೇಲ್ಜಾತಿಯ ಮಹಿಳೆಯರಿಗಿಂತ ಹೆಚ್ಚು ಮಾನಸಿಕ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ದೈಹಿಕ ಶೋಷಣೆಗೆ ಒಳಗಾಗಿದ್ದಾರೆ. ಹೊಟ್ಟೆಯ ಹಸಿವು ಮತ್ತು ತನ್ನ ಅಸ್ತಿತ್ವದ ಉಳಿವಿಗೆ ದಲಿತ ಮಹಿಳೆ ನಿರಂತರವಾಗಿ ಹೋರಾಡುವ ಪ್ರಸಂಗಗಳಿವೆ ದಲಿತ ಮಹಿಳೆ ತನ್ನ ಮಕ್ಕಳನ್ನು ತಾನೇ ಪೋಷಿಸುವ ಮಹತ್ತರ ಜವಾಬ್ದಾರಿಯನ್ನು ನಿಭಾಯಿಸುತ್ತಾಳೆ. ಜೀವನಕ್ಕೆ ಅವಶ್ಯಕವಾದ ಆಹಾರ ಪೋಷಣೆಯ ವಿಚಾರದಲ್ಲಿ ದಲಿತ ಹೆಣ್ಣಿನ ಪಾಲಿಗೆ ಸದಾ ಬರಗಾಲ. ಆದ್ದರಿಂದ ಅವಳು ರೋಗಗಳಿಗೆ ಪಕ್ಕಾಗುವುದು ಹೆಚ್ಚು. ಇದರ ಜೊತೆಗೆ ಬೇಗ ಮದುವೆ, ಬೇಗ ಮಕ್ಕಳು ಆಗುವುದರಿಂದ ಅವಳ ಆರೋಗ್ಯ ಇನ್ನಷ್ಟು ಹದಗೆಡುತ್ತದೆ. ದಲಿತ ಮಹಿಳೆಯ ಅನಾರೋಗ್ಯಕ್ಕೆ ಬಡತನವೇ ಮುಖ್ಯ ಕಾರಣ.

○ ಆರ್. ಭಾರತಿ ರಾಜಣ್ಣ

ಮನುಷ್ಯನ ಹುಟ್ಟು, ಬದುಕಿನ ಚಕ್ರದಲ್ಲಿ ಮಹಿಳೆಯರಿಗೆ ಪುರುಷನಷ್ಟೇ ಸಮಾನ ಪಾತ್ರವಿದೆ. ಸೃಷ್ಟಿಯಲ್ಲಿ ಹೆಣ್ಣಿನದ ಅಗತ್ಯವಿದ್ದೇ ಇದೆ.

ಮಹಿಳೆ ದೇಹಬಲದಲ್ಲಿ ಪುರುಷನಿಗಿಂತ ಕಡಿಮೆ. ಅನಾಗರಿಕ ಕಾಲದಿಂದ ಪುರುಷ ಹೆಣ್ಣನ್ನು ಕೇವಲ ಭೋಗವಸ್ತು ಎಂದೇ ಪರಿಗಣಿಸುತ್ತಿರುವ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರನ್ನು ತನ್ನ ಮನಬಂದಂತೆ ನಡೆಯಿಸಿಕೊಂಡ. ಪುರುಷನ ತೋಳ್‌ಬಲಕ್ಕೆ ಬೆದರಿದ ಮಹಿಳೆ ಆತನ ಆಕ್ರಮಣವನ್ನು ಸಂಸ್ಕೃತಿಯೆಂದು ಒಪ್ಪಿ ದಬ್ಬಾಳಿಕೆಯನ್ನು ಧರ್ಮವೆಂದು ಸ್ವೀಕರಿಸಿ ಗುಲಾಮಗಿರಿಯನ್ನು ಬದುಕನ್ನಾಗಿ ಒಪ್ಪಿಕೊಂಡಳು. ಇದು ಆಗ ಅವಳಿಗೆ ಅನಿವಾರ್ಯವಾಗಿತ್ತು. ಆದರೆ ಹಲವಾರು ಶತಮಾನಗಳೇ ಕಳೆದರೂ ಸರಿಯಾದ ಬೆಳಕು ಕಾಣದೆ ಮಹಿಳೆ ಅಂಧಕಾರದಲ್ಲೇ ಉಳಿದಳು.

ಮನೆಯೊಳಗಿನ ಮತ್ತು ಮನೆಯ ಹೊರಗಿನ ಕೆಲಸಗಳಲ್ಲಿ ಪುರುಷನಿಗೆ ಹೆಗಲು ಕೊಟ್ಟು ದುಡಿಯುವುದು ಮಹಿಳೆಯ ಕರ್ತವ್ಯವಾಯಿತು. ಕಂದಾಚಾರಗಳ ಕೆಸರಿನಲ್ಲಿ ಹೆಣ್ಣನ್ನು ಮುಳುಗಿಸಿ ತನ್ನ ದೇಹವೇ ಅವಳಿಗೆ ಅಸಹ್ಯವಾಗುವಂತೆ, ಅರ್ಥವಾಗದ ರೀತಿಯಲ್ಲಿ ಹೆಣ್ಣಿನ ಮನಸ್ಥಿತಿಯನ್ನು ಬದಲಾಯಿಸಲಾಯಿತು. ಪುರುಷ ವಿಧಿಸಿದ ಕಾನೂನು ಕಟ್ಟಳೆಯನ್ನು ಮೀರಿದರೆ ತಾನು ಅಪಚಾರ ವೆಸಗಿದಂತೆ ಎಂಬ ಮನೋಭಾವ ಹೆಣ್ಣಿನಲ್ಲಿ ಮೂಡವಂತೆ, ಹೆಣ್ಣಿನ ಮನಸ್ಸನ್ನು ಬಿಗಿಯಾದ ಬಂಧನದಲ್ಲಿ ಇರಿಸಲಾಯಿತು.

ನಾಗರಿಕತೆ ಬೆಳೆದಂತೆ ಹೆಣ್ಣು ತನ್ನನ್ನು ಅರ್ಥಮಾಡಿಕೊಳ್ಳುತ್ತಿದ್ದಾಳೆ. ಗಂಡಿನ ಶೋಷಣಾ ಭಾವನೆಯನ್ನು ಅರ್ಥಮಾಡಿಕೊಳ್ಳಲು ಹೆಣ್ಣು ಈಗ ಸಮರ್ಥಳಾಗಬೇಕಾಗಿದೆ. ಸಮಾಜದ ಆಗು ಹೋಗುಗಳಲ್ಲಿ ಹೆಣ್ಣಿನ ಪಾತ್ರ ಮುಖ್ಯ. ಆಸ್ತಿಯ ಅಧಿಕಾರವಿಲ್ಲದೆ, ಅಪರಿಚಿತ ಪುರುಷನ ಹಿಂದೆ ನಡೆದು ಹೆತ್ತವರಿಂದ ದೂರವಾಗುವುದು ಇಂದಿಗೂ ಹೆಣ್ಣಿನ ಧರ್ಮವೆನಿಸಿದೆ !

ದಲಿತ ಮಹಿಳೆಯರು ಮೇಲ್ಜಾತಿಯ ಮಹಿಳೆಯರಿಗಿಂತ ಹೆಚ್ಚು ಮಾನಸಿಕ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ದೈಹಿಕ ಶೋಷಣೆಗೆ ಒಳಗಾಗಿದ್ದಾರೆ. ಹೊಟ್ಟೆಯ ಹಸಿವು ಮತ್ತು ತನ್ನ ಅಸ್ತಿತ್ವದ ಉಳಿವಿಗೆ ದಲಿತ ಮಹಿಳೆ ನಿರಂತರವಾಗಿ ಹೋರಾಡುವ ಪ್ರಸಂಗಗಳಿವೆ ದಲಿತ ಮಹಿಳೆ ತನ್ನ ಮಕ್ಕಳನ್ನು ತಾನೇ ಪೋಷಿಸುವ ಮಹತ್ತರ ಜವಾಬ್ದಾರಿಯನ್ನು ನಿಭಾಯಿಸುತ್ತಾಳೆ. ಜೀವನಕ್ಕೆ ಅವಶ್ಯಕವಾದ ಆಹಾರ ಪೋಷಣೆಯ ವಿಚಾರದಲ್ಲಿ ದಲಿತ ಹೆಣ್ಣಿನ ಪಾಲಿಗೆ ಸದಾ ಬರಗಾಲ. ಆದ್ದರಿಂದ ಅವಳು ರೋಗಗಳಿಗೆ ಪಕ್ಕಾಗುವುದು ಹೆಚ್ಚು. ಇದರ ಜೊತೆಗೆ ಬೇಗ ಮದುವೆ, ಬೇಗ ಮಕ್ಕಳು ಆಗುವುದರಿಂದ ಅವಳ

ಆರೋಗ್ಯ ಇನ್ನಷ್ಟು ಹದಗೆಡುತ್ತದೆ. ದಲಿತ ಮಹಿಳೆಯ ಅನಾರೋಗ್ಯಕ್ಕೆ ಬಡತನವೇ ಮುಖ್ಯ ಕಾರಣ.

ಜಾತಿಗಳು ಹುಟ್ಟುವಲ್ಲಿ ಹೆಣ್ಣಿಗೆ ವಿಧಿಸಿರುವ ಕಟ್ಟಳೆಗಳು ಪ್ರಮುಖ ಪಾತ್ರ ವಹಿಸಿವೆ. ಜಾತಿಗಳು ಅಡಕವಾಗಿರುವುದು ಹೆಣ್ಣಿನ ಬಂಧನದಲ್ಲಿ. ಒಂದು ಜಾತಿಯ ಹೆಣ್ಣನ್ನು ಇನ್ನೊಂದು ಜಾತಿಯ ಗಂಡು ಸಹಜವಾಗಿ ಮತ್ತು ಬಹಿರಂಗವಾಗಿ ವಿವಾಹವಾಗುವ ವಾಡಿಕೆ ಇದ್ದಿದ್ದರೆ, ಜಾತಿ ವ್ಯವಸ್ಥೆ ಹುಟ್ಟುತ್ತಿರಲಿಲ್ಲವೇನೋ!

ದಲಿತ ಯುವಕರು ಸ್ವಾರ್ಥ ಬಿಟ್ಟು ದಲಿತ ಹೆಣ್ಣುಗಳನ್ನು ವಿವಾಹವಾಗಲು ಮುಂದೆ ಬರಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ದಲಿತರಲ್ಲೂ ವರದಕ್ಷಿಣೇ ಪಿಡುಗು ಅತಿಯಾಗುತ್ತಿದೆ. ಅನೇಕ ಕಡೆ ಮಾತುಕತೆಗಳು ನಡೆದು ಹಣದ ಪ್ರಭಾವದಿಂದ ಮದುವೆ ನಿಂತುಹೋಗಿರುವುದು ಕಂಡು ಬಂದಿದೆ.

ಡಾ|| ಅಂಬೇಡ್ಕರ್ ಆಶಯದಂತೆ ದಲಿತ ಯುವಕರು ತಮ್ಮ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವ ಭ್ರಮೆಯಲ್ಲಿ ಹಾಗೂ ಅದ್ದೂರಿ ಮದುವೆಯ ವ್ಯಾಮೋಹದಲ್ಲಿ ಮುಳುಗುತ್ತಿದ್ದಾರೆ. ಇದು ಮೊದಲು ನಿಲ್ಲಬೇಕು. ಹೆತ್ತವರಿಗೆ ಹೆಣ್ಣು ಹೊರೆಯಾಗಲು ಈ ಆಮಿಷಗಳೇ ಕಾರಣವಾಗಿದೆ. ಹೆಣ್ಣನ್ನು ಇನ್ನೂ ದುರ್ಬಲಳಾಗಿ ಮಾಡಿ ಮಾನಸಿಕ ಹಿಂಸೆಯ ಕೂಪಕ್ಕೆ ತಳ್ಳುವುದು ನಡೆದಿದೆ. ಹೆಣ್ಣಿನ ಬಗ್ಗೆ ಸಾಮಾಜಿಕ ಕಳಕಳಿ ಬೆಳೆದು, ಅನುಕಂಪ ಸಮಾನತೆ ಗಳಿಸಲು ಹೋರಾಟ ಮುಖ್ಯ.

ನಾನು ದ.ಸಂ.ಸ. ಸಂಘಟನೆಯಲ್ಲಿ ಅನೇಕ ವರುಷಗಳಿಂದ ಸಕ್ರಿಯವಾಗಿ ಭಾಗವಹಿಸುತ್ತಿದ್ದೇನೆ. ಅನೇಕರನ್ನು ಭೇಟಿ ಮಾಡಿದ್ದೇನೆ. ಕುಟುಂಬದಲ್ಲಿ ಸರಿಯಾದ ಸ್ಥಾನಮಾನದ ಬಗ್ಗೆ ಯೋಚಿಸಲು ಪುರುಸೊತ್ತಿಲ್ಲದ ದಲಿತ ಮಹಿಳೆಗೆ ಸಮಾಜದಲ್ಲಿನ ತನ್ನ ಸ್ಥಾನದ ಬಗ್ಗೆ ಆಕೆಗೆ ಕಲ್ಪನೆಯೇ ಮೂಡುವುದಿಲ್ಲ. ದುಡಿಮೆಯ ಚಕ್ರದಲ್ಲಿ ಸುತ್ತುತ್ತಾ ಸಾಗುವ ಅವಳಿಗೆ ಕುಟುಂಬದ ಸೌಖ್ಯವಿಲ್ಲದೆ ಬೇರೆ ಯಾವುದೂ ಮುಖ್ಯವಾಗುವುದಿಲ್ಲ. ಆದರೆ ಈ ತ್ಯಾಗಕ್ಕೆ ಪ್ರತಿಫಲವೂ ಇಲ್ಲ. ಕುಟುಂಬದ ಸಂಪತ್ತಿನ ಅರ್ಧದಷ್ಟನ್ನೂ ಹೆಣ್ಣೇ ಉತ್ಪಾದಿಸಿದರೂ, ಶೇಕಡಾ ಒಂದು ಭಾಗದ ಒಡೆತನವೂ ಅವಳಿಗೆ ಇರುವುದಿಲ್ಲ. ಆಸ್ತಿಗೆ ಎಂದಿದ್ದರೂ ಗಂಡೇ ಒಡೆಯನಾಗಿದ್ದು ಎಲ್ಲಾ ನಿರ್ಧಾರಗಳನ್ನು ಅವನೇ ಕೈಗೊಳ್ಳುತ್ತಾನೆ. ಗಂಡಿನ ಸಂಪಾದನೆಯ ಬಹುಪಾಲು ಮನೆಗೆ ತಲುಪುವುದಿಲ್ಲ. ಹೆಂಗಸಿನ ಸಂಪಾದನೆ ಮಾತ್ರ ಪೂರ್ತಿಯಾಗಿ ಕುಟುಂಬಕ್ಕೆ ವಿನಿಯೋಗವಾಗುತ್ತದೆ. ಗಂಡಿಗೆ ಸರಿ ಸಮನಾಗಿ ಅಥವಾ ಅವನಿಗಿಂತ ಹೆಚ್ಚಾಗಿ ದುಡಿದರೂ ಅವಳ ಸ್ಥಾನ ಮನೆಯಲ್ಲಿ ಎರಡನೆಯ ದರ್ಜೆಯದು. ಅಲ್ಲದೇ ಅವನ ಕುಡಿತ, ಹೊಡೆತ, ಬಡಿತ ಎಲ್ಲವನ್ನೂ ಅವಳು ಸಹಿಸಬೇಕು.

ದಲಿತ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇದಕ್ಕೆ ಬಡತನ ಮತ್ತು ತಂದೆ-ತಾಯಿಗಳ ಅಜ್ಞಾನ ಕಾರಣ. ಮೊದಲಿಗೆ ಬಡತನ ಅವರನ್ನು ಶಿಕ್ಷಣದಿಂದ ದೂರವಿಡುತ್ತದೆ. ಹೊಟ್ಟೆ ತುಂಬಿಸಿಕೊಳ್ಳುವುದೇ ದಿನನಿತ್ಯದ ಸಮಸ್ಯೆಯಾಗುವಾಗ, ತಂದೆ ತಾಯಿ ಮಕ್ಕಳ ಓದಿನ ಬಗ್ಗೆ ಯೋಚಿಸುವುದು ಕಷ್ಟ. ಅಲ್ಪಸ್ವಲ್ಪ ಅನುಕೂಲವಿದ್ದರೆ ಸ್ವಾಭಾವಿಕವಾಗಿ ಹೆಣ್ಣು ಮಗುವಿನ ಓದಿಗಿಂತ ಗಂಡು ಮಗುವಿನ ಓದು ಹೆಚ್ಚಿನ ಪ್ರಾಮುಖ್ಯ ಪಡೆಯುತ್ತದೆ. ಹೇಗಿದ್ದರೂ ಹೆಣ್ಣು ಮದುವೆಯಾಗಿ ಇನ್ನೊಬ್ಬರ ಮನೆ ಸೇರುವವಳಾದ್ದರಿಂದ ಅವಳಿಗೆ ಮಾಡುವುದೆಲ್ಲ ದಂಡ ಎಂಬ ಭಾವನೆ ಬಲವಾಗಿದೆ. ಇಂಥ ಭಾವನೆ ತೊರೆದು ಸಮಾನತೆಯನ್ನು ತಂದೆ ತಾಯಿಗಳು ಮನೆಯಲ್ಲೇ ಮೊದಲು ಸೃಷ್ಟಿಸಬೇಕು.

ದಲಿತ ಹೆಣ್ಣು ತನ್ನ ಬದುಕಿನ ಎಲ್ಲಾ ಹಂತಗಳಲ್ಲೂ ಕಾನೂನು ಸೌಲಭ್ಯಗಳಿಂದ ದೂರವೇ ಉಳಿಯುತ್ತಾಳೆ. ಬಾಲ್ಯವಿವಾಹ, ಆಸ್ತಿ ಹಕ್ಕು, ಸಮಾನ ವೇತನ, ಕನಿಷ್ಠ ಕೂಲಿ, ಅತ್ಯಾಚಾರ ಯಾವುದರಲ್ಲೂ ಕಾನೂನಿನ ಅರಿವು ಮತ್ತು ನೆರವು ಅವಳಿಗಿಲ್ಲ. ಗಂಡ ಬಿಟ್ಟರೆ, ಗಂಡ ಮರು ಮದುವೆಯಾದರೆ, ಗಂಡ ಸರಿಯಾಗಿಲ್ಲದಿದ್ದರೆ ಹಣೆ ಬರಹವೆಂದು ಅವಳು ಸುಮ್ಮನಾಗುವಳು. ದುಡಿದು ಹೊಟ್ಟೆ ಹೊರೆದುಕೊಳ್ಳುವಳು. ವೈದ್ಯಕೀಯ ನೆರವು ಸಿಗದ ಹೆಣ್ಣಿಗೆ ಕಾನೂನಿನ ನೆರವು ಸಿಗುವುದು ದೂರದ ಮಾತು. ಅಭಿವೃದ್ಧಿಯ ಎಲ್ಲಾ ಯೋಜನೆಗಳು ದಲಿತ ಹೆಣ್ಣನ್ನು ಮುಟ್ಟಲಾರದೇ ಹೋಗಿದೆ. ಹೆಣ್ಣಿಗೆ ಸರಿಯಾದ ಶಿಕ್ಷಣವೇ ಇಲ್ಲದೆ ಅವಿದ್ಯಾವಂತಳಾಗಿರುವುದೇ ಇದಕ್ಕೆಲ್ಲಾ ಕಾರಣ.

ದಲಿತ ಮಹಿಳಾ ಒಕ್ಕೂಟಕ್ಕೆ ಇದುವರೆಗೆ ಸಕ್ರಿಯವಾಗಿ ಹೆಚ್ಚು ಮಹಿಳೆಯರು ಬರಲು ಸಾಧ್ಯವಾಗಿಲ್ಲ. ಏಕೆ?

ದಲಿತ ಹೆಣ್ಣು ತನ್ನ ಬದುಕಿನ ಎಲ್ಲಾ ಹಂತಗಳಲ್ಲೂ ಕಾನೂನು ಸೌಲಭ್ಯಗಳಿಂದ ದೂರವೇ ಉಳಿಯುತ್ತಾಳೆ. ಬಾಲ್ಯವಿವಾಹ, ಆಸ್ತಿ ಹಕ್ಕು, ಸಮಾನ ವೇತನ, ಕನಿಷ್ಠ ಕೂಲಿ, ಅತ್ಯಾಚಾರ ಯಾವುದರಲ್ಲೂ ಕಾನೂನಿನ ಅರಿವು ಮತ್ತು ನೆರವು ಅವಳಿಗಿಲ್ಲ. ಗಂಡ ಬಿಟ್ಟರೆ, ಗಂಡ ಮರು ಮದುವೆಯಾದರೆ, ಗಂಡ ಸರಿಯಾಗಿಲ್ಲದಿದ್ದರೆ ಹಣೆ ಬರಹವೆಂದು ಅವಳು ಸುಮ್ಮನಾಗುವಳು. ದುಡಿದು ಹೊಟ್ಟೆ ಹೊರೆದುಕೊಳ್ಳುವಳು. ವೈದ್ಯಕೀಯ ನೆರವು ಸಿಗದ ಹೆಣ್ಣಿಗೆ ಕಾನೂನಿನ ನೆರವು ಸಿಗುವುದು ದೂರದ ಮಾತು. ಅಭಿವೃದ್ಧಿಯ ಎಲ್ಲಾ ಯೋಜನೆಗಳು ದಲಿತ ಹೆಣ್ಣನ್ನು ಮುಟ್ಟಲಾರದೇ ಹೋಗಿದೆ. ಹೆಣ್ಣಿಗೆ ಸರಿಯಾದ ಶಿಕ್ಷಣವೇ ಇಲ್ಲದೆ ಅವಿದ್ಯಾವಂತಳಾಗಿರುವುದೇ ಇದಕ್ಕೆಲ್ಲಾ ಕಾರಣ.

ಸಂಘಟನೆಯಲ್ಲಿ ನಾವು ಕೆಲಸ ಮಾಡುವಾಗ ದಲಿತ ಮಹಿಳೆಯರ ಮೇಲೆ ನಡೆದ ನ್ಯಾಯಕ್ಕಾಗಿ ಹೋರಾಟ ನಡೆಸುತ್ತೇವೆ. ಹೋರಾಟದ ಅಗತ್ಯ ಮಹಿಳೆಯರಿಗೆ ಅನಿವಾರ್ಯ ಎಂಬುದು ಮಹಿಳೆಯರಿಗೆ ಅರ್ಥವಾಗಬೇಕು. ತನಗಾದ ಅವಮಾನವನ್ನು ಹೇಳಿಕೊಳ್ಳುವುದರಿಂದ ಸಮಾಜದಲ್ಲಿ ತನ್ನ ಸ್ಥಾನ ಮತ್ತು ಬದುಕಿಗೆ ತೊಂದರೆಯಾಗುತ್ತದೆ ಎಂಬ ಭಾವನೆ ಬೆಳೆದಿರುವುದು ವಿಷಾದಕರ.

ದ.ಸಂ.ಸ. ಸಂಘಟನೆಯ ಅವಿಭಾಜ್ಯ ಅಂಗವಾದ ದಲಿತ ಮಹಿಳಾ ಒಕ್ಕೂಟ ಸಮಸ್ಯೆಗಳನ್ನು ಸ್ವಂತವಾಗಿ ಇದುವರೆಗೆ ಎದುರಿಸಿಲ್ಲ. ಪ್ರಯತ್ನಗಳು ನಡೆಯದೆ, ವಸ್ತುಸ್ಥಿತಿ ಅರ್ಥವಾಗದೆ ದಲಿತ ಮಹಿಳಾ ಒಕ್ಕೂಟ ವ್ಯಾಪಕವಾಗಿ ಬೆಳೆದಿಲ್ಲ. ಅನುಭವ ಹೊಂದಲು ಮಹಿಳೆಯರಿಗೆ ಸೂಕ್ತವಾದ ವಾತಾವರಣ ನಿರ್ಮಿಸಿ, ದಲಿತ ಮಹಿಳಾ ಸಂಘಟನೆಯನ್ನು ಬೆಳೆಸಲು ದ.ಸಂ.ಸ. ಹೆಚ್ಚು ಆಸ್ಥೆವಹಿಸಬೇಕು.

ಸಂಘಟನೆ ಕಟ್ಟಲು ಮುಂದಾಗುವ ಕೆಲವೇ ಮಂದಿ ಮಹಿಳೆಯರಿಗೆ ಹೆಚ್ಚು ಹೆಚ್ಚು ಅವಕಾಶಗಳು ಇದುವರೆಗೆ ದೊರೆತಿಲ್ಲ. ಮಹಿಳೆ ತನ್ನಲ್ಲಿ ವೈಚಾರಿಕತೆ ಬೆಳೆಯಿಸಿಕೊಳ್ಳಲು ದ.ಸಂ.ಸ. ನೆರವು ಪಡೆಯಬೇಕು. ಮಹಿಳೆಯರಲ್ಲಿ ಪ್ರಜ್ಞೆ ಬೆಳೆಸಲು ಹಲವು ಮಾಧ್ಯಮಗಳನ್ನು ಬಳಸಿಕೊಳ್ಳಬೇಕು. ಇದಕ್ಕೆ ನಿರಂತರವಾದ ಪ್ರಯತ್ನ ಬಿಟ್ಟರೆ ಬೇರೆ ಮಾರ್ಗವಿಲ್ಲ. ದಲಿತರಲ್ಲಿ ಅಜ್ಞಾನ, ಬಡತನ, ಜಾತಿ ಪದ್ಧತಿ, ಧರ್ಮ, ದೇವರು, ಮೂಢನಂಬಿಕೆ ಹೆಚ್ಚು ಆಳವಾಗಿ ಬೇರೂರಿದೆ. ಹಾಗಾಗೇ ದಲಿತ ಮಹಿಳೆಯರಲ್ಲಿ ವೈಚಾರಿಕ ಪ್ರಜ್ಞೆ ಬೆಳೆದಿಲ್ಲ.

ಇದರಿಂದ ನಮ್ಮ ಸಮಾಜದಲ್ಲಿ ದೇವದಾಸಿ ಪದ್ಧತಿ, ಬಸವಿ ಬಿಡುವುದು ಮತ್ತು ವೇಶ್ಯಾವೃತ್ತಿ ಬೆಳೆದಿವೆ. ಇವುಗಳನ್ನು ಸಂಪೂರ್ಣ ನಾಶ ಮಾಡದೆ ಮಹಿಳೆಯ ಮತ್ತು ಸಮಾಜದ ಏಳ್ಗೆ ಸಾಧ್ಯವಿಲ್ಲ. ಹೆಣ್ಣು ತನ್ನನ್ನು ತಾನು ಎಚ್ಚರಿಸಿಕೊಳ್ಳಬೇಕು. ಮರೆತರೆ ತಾನೇ ಶೋಷಣೆಯ ಬಲಿಪಶುವಾಗುತ್ತಾಳೆ.

ಹಿಂದೆ ಬೆಂಗಳೂರಿನಲ್ಲಿ ಪ್ರಥಮ ದಲಿತ ಮಹಿಳಾ ಶಿಬಿರ ನಡೆಸಿದಾಗ 135 ಜನ ಶಿಬಿರಕ್ಕೆ ಬಂದಿದ್ದರು. ಇವರಲ್ಲಿ ಅನೇಕರು ಜಿಲ್ಲಾವಾರು ಜಿಲ್ಲಾ ಸಂಚಾಲಕಿಯರಾಗಿ ಆಯ್ಕೆಯಾದರು. ಆದರೆ ಕಾಲ ಕಳೆದಂತೆ ವೈವಾಹಿಕ ಜೀವನ ಅಥವಾ ಇತರೆ ಕಾರಣಗಳಿಂದ ಇವರೆಲ್ಲ ಇಂದು ಸಂಘಟನೆಯಲ್ಲಿ ಸಕ್ರಿಯರಾಗಿಲ್ಲ. ನಂತರ ಹೊಸಬರು ಬಂದಿಲ್ಲವೇಕೆ? ಎಂಬುದು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ.

ದಲಿತ ಮಹಿಳೆಯರ ಸಮಸ್ಯೆಯನ್ನು ದ.ಸಂ.ಸ ಗಂಭೀರವಾಗಿ ಪರಿಗಣಿಸಬೇಕು. ಡಾ|| ಅಂಬೇಡ್ಕರ್ ಅವರು ಮಹಿಳೆಯರ ಕಲ್ಯಾಣಕ್ಕಾಗಿ, ದಲಿತ ಹೆಣ್ಣಿನ ಉಳಿವಿಗಾಗಿ ತಮ್ಮ ಕಾಳಜಿಯನ್ನು ತೋರಿಸಿದ್ದಾರೆ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಪ್ರಧಾನ ಸೂತ್ರಧಾರಳು ಎಂಬುದನ್ನು ನಿದರ್ಶಿಸಿದ್ದಾರೆ. ಅಂಬೇಡ್ಕರ್ ದೃಷ್ಟಿಯಲ್ಲಿ ಮಹಿಳೆ-ಪುರುಷ ಸಮಾನರು, ದಲಿತ ಮಹಿಳೆ ತನ್ನ ಕಾಲೂರಿ ನಿಲ್ಲಬೇಕಾದರೆ ಅವಳಿಗೆ ಸ್ವಾವಲಂಬನೆಬೇಕು. ಮುಕ್ತ ಹಾಗೂ ಸ್ವತಂತ್ರ ಶಿಕ್ಷಣ ಅವಳಿಗೆ ಲಭಿಸಬೇಕು. ಹಾಗೆಯೇ ವಿವಿಧ ಕ್ಷೇತ್ರಗಳಲ್ಲಿ ಆಕೆಗೆ ಅವಕಾಶಗಳು ಒದಗಬೇಕು.

ಸೌಜನ್ಯ : ಪಂಚಮ

ತೋರುಬೆರಳಿನ ಹಾಡು

ಒಬ್ಬ ಗುರು, ಹೀಗೆ ಹಾಡಿ ಹೇಳುತ್ತಾನೆ....
ಅದು ಏನು ಎಂದು ತತ್-ತ್ವ ಕೇಳುತ್ತಾರೆ
ಕಾತರ ತುಂಬಿ, ಚೆಲ್ಲಿ,
ನೋಡಪ್ಪ, ಉತ್ತರ ಕಷ್ಟ.
ಆಸ್ತಿ ಎನಬೇಡ, ನಾಸ್ತಿ ಎನಬೇಡ,
ಸತ್ಯವಲ್ಲ.
ಆಸ್ತಿಯೂ ಅಲ್ಲ ನಾಸ್ತಿಯೂ ಅಲ್ಲ
ಹೇಳಲು ಸ್ಪಷ್ಟ
ಸತ್ಯ ಗೆದ್ದಿಲ್ಲ ನೀನು, ಗೆಲ್ಲಬೇಕಿನ್ನು.
ಗೆದ್ದೆ ಎನ್ನು ಅದನ್ನು ಕರೆತರಬೇಕು.

ಕರೆತಂದು ಕಾಣಿಸಬೇಕು
ಆದರೆ ಅಲ್ಲಿ, ಸೇತುವೆ ಕಟ್ಟಿಲ್ಲ ಪಥಕ್ಕೆ
ಆ ಪ್ರಾಂತದಲ್ಲಿ, ರಹದಾರಿಯೇ ಇಲ್ಲ ಮಾತಿನ ರಥಕ್ಕೆ

ಪ್ರಶ್ನೆಗುತ್ತರವಿರಲಿ ನಿನ್ನ ಮೌನ
ಅದೆ ಉರಿವ ವಜ್ರದ ಹರಳು:
ದಾರಿ ಕಡೆ ಚಾಚಿರಲಿ ತೋರುಬೆರಳು.

ಜಾತಿ ವ್ಯವಸ್ಥೆಯ ಆರ್ಥಿಕತೆ

ಜಾತಿಗಳು ಮತ್ತು ಅವುಗಳ ಉಗಮವನ್ನು ಸಮಾಜದ ರಚನೆಯನ್ನು ವಿಂಗಡಿಸುವ ಒಂದು ಉಪಕರಣವಾಗಿ ನೋಡದೆ, ಆರ್ಥಿಕ ದೃಷ್ಟಿಕೋನದಿಂದ ಮತ್ತು ಪಕ್ಷಪಾತದ ಒಂದು ಆಯುಧವಾಗಿ ನೋಡುವ ಸ್ಪಷ್ಟ ಸೂಚನೆ ನೀಡಿದರು. ದುರಾದೃಷ್ಟವಶಾತ್ ಸ್ವಾತಂತ್ರ್ಯಪೂರ್ವದ ಅವಧಿಯಲ್ಲಿ ಜಾತಿಯನ್ನು ಸಾಮಾಜಿಕ ಪದರ ರಚನೆಯ ಮತ್ತು ಉದ್ಯೋಗ ಹಂಚುವಿಕೆಯ ಉಪಕರಣವಾಗಿ ನೋಡಲಾಯಿತು. 60ರ ನಂತರದ ದಶಕಗಳಲ್ಲಿ ಸಾಮಾಜಿಕ ಮಾನವ ವಿಜ್ಞಾನದಲ್ಲಿ ಅನೇಕ ಅಧ್ಯಯನಗಳನ್ನು ಮಾಡಿದ್ದು ಅವು ಜಾತಿಯನ್ನು ಸಾಮಾಜಿಕ ವೈಷಮ್ಯದ ಉಪಕರಣವಾಗಿ ವಿಶ್ಲೇಷಿಸಿವೆ.

○ ಪ್ರೊ. ಆರ್.ಎಸ್. ದೇಶಪಾಂಡೆ

ಎಂಬತ್ತಾರು ವರ್ಷಗಳ ಹಿಂದೆ ಮೇ 9, 1916ರಂದು ಡಾ|| ಬಿ.ಆರ್. ಅಂಬೇಡ್ಕರ್‌ರವರು "ಭಾರತದಲ್ಲಿ ಜಾತಿಗಳು : ಅವುಗಳ ಉಗಮ, ರಚನೆ ಮತ್ತುಬೆಳವಣಿಗೆ" ಎಂಬ ವಿಷಯದ ಬಗ್ಗೆ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಡಾ|| ಎ.ಎ. ಗೋಲ್ಡನ್‌ವೀರ್ ಅವರ ಮಾನವ ವಿಜ್ಞಾನದ ಮೇಲಿನ ಸಮ್ಮೇಳನದಲ್ಲಿ ಒಂದು ಪ್ರಬಂಧ ಮಂಡಿಸಿದರು. ತಮ್ಮ ಈ ಪ್ರಬಂಧದಲ್ಲಿ ಭಾರತದಲ್ಲಿ ಜಾತಿಗಳು ಮತ್ತು ಜಾತಿ ಆಧಾರಿತ ವೈಷಮ್ಯವನ್ನು ಅವರು ಸಮರ್ಥಿಸಿಕೊಂಡಾಗ ಅವರು 25 ವರ್ಷದ ಯುವಕರಾಗಿದ್ದರು. ಮಾನವ ವಿಜ್ಞಾನ ಅವರ ಅಧ್ಯಯನದ ವಿಷಯವಾಗಿರಲಿಲ್ಲ. ಆದರೂ ಆಗಾಗಲೇ ಜಾತಿಗಳ ಮೇಲೆ ವಿಪುಲವಾಗಿದ್ದ ಸಾಹಿತ್ಯ, ಅದರಲ್ಲೂ ಸಾಮಾಜಿಕ ಮಾನವ ವಿಜ್ಞಾನಿಗಳ ಅಧ್ಯಯನದ ಬೆಂಬಲ ಪಡೆದಿದ್ದರು.

ಅವರ ವಿಶ್ಲೇಷಣೆಯ ಮೊದಲ ಭಾಗ, ಮನುಸ್ಮೃತಿಯ ಆಳವಾದ ವಿಶ್ಲೇಷಣೆ ಒಳಗೊಂಡಂತೆ ಭಾರತದಲ್ಲಿ ಜಾತಿಗಳ ಹುಟ್ಟಿನ ಬಗೆಗಿರುತ್ತದೆ. ಭಾರತದ ಶಾಸನಕಾರ ಮನು, ಅವನು ಬದುಕಿದ್ದುದೇ ಆಗಿದ್ದಲ್ಲಿ ಬಹಳ ಉದ್ಧಟ ವ್ಯಕ್ತಿಯಾಗಿದ್ದ ಎಂದು ಅಂಬೇಡ್ಕರ್ ಬರೆಯುತ್ತಾರೆ. ಅವನು ಜಾತಿ ನಿಯಮಗಳನ್ನು ನೀಡಿದ ಎಂಬ ಕಥೆ ನಿಜ ಇದ್ದಲ್ಲಿ, ಮನು ಒಬ್ಬ ಹುಚ್ಚು ಸಾಹಸಿ ಆಗಿದ್ದಿರಬಹುದು ಮತ್ತು ಅದನ್ನು ಒಪ್ಪಿಕೊಂಡ ಜನಾಂಗ ನಮಗೆ ಪರಿಚಯವಿರುವ ಜನಾಂಗಕ್ಕಿಂತ ಭಿನ್ನವಾಗಿರಬೇಕು ಎನ್ನುತ್ತಾರೆ. ಇಲ್ಲಿ ಅವರು ಜಾತಿಗಳು ಮತ್ತು ಅವುಗಳ ಉಗಮವನ್ನು ಸಮಾಜದ ರಚನೆಯನ್ನು ವಿಂಗಡಿಸುವ ಒಂದು ಉಪಕರಣವಾಗಿ ನೋಡದೆ, ಆರ್ಥಿಕ ದೃಷ್ಟಿಕೋನದಿಂದ ಮತ್ತು ಪಕ್ಷಪಾತದ ಒಂದು ಆಯುಧವಾಗಿ ನೋಡುವ ಸ್ಪಷ್ಟ ಸೂಚನೆ ನೀಡಿದರು. ದುರಾದೃಷ್ಟವಶಾತ್ ಸ್ವಾತಂತ್ರ್ಯಪೂರ್ವದ ಅವಧಿಯಲ್ಲಿ ಜಾತಿಯನ್ನು ಸಾಮಾಜಿಕ ಪದರ ರಚನೆಯ ಮತ್ತು ಉದ್ಯೋಗ ಹಂಚುವಿಕೆಯ ಉಪಕರಣವಾಗಿ ನೋಡಲಾಯಿತು. 60ರ ನಂತರದ ದಶಕಗಳಲ್ಲಿ ಸಾಮಾಜಿಕ ಮಾನವ ವಿಜ್ಞಾನದಲ್ಲಿ ಅನೇಕ ಅಧ್ಯಯನಗಳನ್ನು ಮಾಡಿದ್ದು ಅವು ಜಾತಿಯನ್ನು ಸಾಮಾಜಿಕ ವೈಷಮ್ಯದ ಉಪಕರಣವಾಗಿ ವಿಶ್ಲೇಷಿಸಿವೆ.

ಡಾ|| ಅಂಬೇಡ್ಕರ್‌ರವರು ಇಂತಹ ವಿಂಗಡನೆ ಪ್ರಾಕೃತಿಕವಲ್ಲ, ಮತ್ತು ಸಮುದಾಯಕ್ಕೆ ಸಮಾನ ಅವಕಾಶಗಳನ್ನು ಒದಗಿಸಿ ಕೊಡುವುದರಿಂದ ದೂರ ಸರಿದಿದೆಯಲ್ಲದೆ, ನ್ಯಾಯಸಮ್ಮತವಲ್ಲದ ಒಂದು ಕಾನೂನು ವ್ಯವಸ್ಥೆಯನ್ನು ಜಾರಿಗೆ ತಂದಿದೆ ಎಂಬುದನ್ನು ಒತ್ತಿ ಹೇಳಿದರು. ಅವರು "ಜಾತಿ ಎಂಬುದು ಏಕ ಸಂಖ್ಯೆಯಲ್ಲಿ ಇರಲು ಸಾಧ್ಯವಿಲ್ಲ. ಬಹುಸಂಖ್ಯೆಯಲ್ಲಿ ಮಾತ್ರ ಇರುತ್ತದೆ ಎಂದರು. ಈ ಮೂಲಕ ಅವರು ಅಸಮಾನತೆಯನ್ನು ಸತತವಾಗಿ ಮುಂದುವರಿಸುವುದೇ ಜಾತಿ ವ್ಯವಸ್ಥೆಯ ಅಡಿಪಾಯ ಎಂಬುದನ್ನು ಒತ್ತಿ ಹೇಳಿದರು. ವಿವಿಧ ಜಾತಿಗಳು ಅನುಸರಿಸುತ್ತಿರುವ ಕಸುಬುಗಳಲ್ಲಿನ ಕ್ರಮಾಗತ ವ್ಯವಸ್ಥೆ, ಸಮಾಜ ರಚನೆ, ಸಾಮಾಜಿಕ ಕಳಂಕಗಳು ಮತ್ತು ಸಾಂಪ್ರದಾಯಗಳು, ಇವುಗಳ ಪರಿಸ್ಥಿತಿಯನ್ನು ಡಾ|| ಅಂಬೇಡ್ಕರ್‌ರವರು ಪರಿಶೀಲಿಸಿ ಮೇಲ್ಜಾತಿಗಳನ್ನು ಇತರರು ಅನುಕರಿಸುವುದನ್ನು ಸ್ಪಷ್ಟಪಡಿಸಿದರು.

ಇದನ್ನು ಅವರು "ಅನುಕರಣೆಯ ಅಂಟುಜಾಡ್ಯ" ಎಂದು ಕರೆದಿದ್ದಾರೆ. ಈ ಅನುಕರಣೀಯ ನೀತಿ, ಕ್ರಮಾಗತ ವ್ಯವಸ್ಥೆಯ ಪ್ರಕಾರ ನಡೆಯುತ್ತದೆ. ಈ ವ್ಯವಸ್ಥೆಯಲ್ಲಿ ಕೆಳಹಂತದಲ್ಲಿರುವವರು ಮೇಲಂತದಲ್ಲಿರುವವರನ್ನು ಅನುಕರಿಸಲು ಪ್ರಯತ್ನಿಸುತ್ತಾರೆಂಬ ಅಭಿಪ್ರಾಯವನ್ನು ಮಂಡಿಸಿರುತ್ತಾರೆ. ಇಂತಹ ಅನುಕರಣೆಗೆ ಅವರು ಎರಡು ಸ್ಥಿತಿಗಳ ಅವಶ್ಯಕತೆಯನ್ನು ಗುರುತಿಸುತ್ತಾರೆ. ಅವು ಯಾವುವೆಂದರೆ, ಯಾವುದನ್ನು ಅನುಕರಿಸಬೇಕೋ ಅದು ಗುಂಪಿನಲ್ಲಿ ಗೌರವವನ್ನು ಹೊಂದಿರಬೇಕು, ಮತ್ತು ಗುಂಪಿನಲ್ಲಿರುವ ಸದಸ್ಯರಲ್ಲಿ ದೈನಂದಿನ ಅನೇಕ ಸಂಬಂಧಗಳು ಉಂಟಾಗುತ್ತಿರಬೇಕು. ಅನುಕರಣೆಯ ಅಂಟುಜಾಡ್ಯದ ಚಿಂತನೆ ದ್ವಿಮುಖವಾದುದು ಎಂಬುದು ಬಹಳ ಸ್ಪಷ್ಟ.

ಆದರೆ ತಮ್ಮ ಪ್ರಬಂಧದಲ್ಲಿ ಅಂಬೇಡ್ಕರ್‌ರವರು ಜಾತಿ ಒಳಗಿನ ಮದುವೆ ಮತ್ತು ಜಾತಿ ಹೊರಗಿನ ಮದುವೆ ಇವುಗಳಿಗೆ ಗಮನ ಸೆಳೆದಿದ್ದು, ಜಾತಿಯೊಳಗೇ ಮದುವೆಯಾಗುವುದನ್ನು ಅನುಕರಿಸಿದ್ದು ಜಾತಿ ಗುಂಪುಗಳ ಉಗಮಕ್ಕೆ ಎಡೆಮಾಡಿಕೊಟ್ಟಿದೆ ಎಂದಿದ್ದಾರೆ. ಇದು ಜಾತಿಗಳ ಉಗಮದ ಬಗ್ಗೆ ಅವರ ಯೋಚನೆಯ ಪ್ರಥಮ ಹಂತ ಮಾತ್ರ. "ಶೂದ್ರರು ಯಾರು" ಎಂಬ ತಮ್ಮ ಪುಸ್ತಕದಲ್ಲಿ ಈ ಬಗೆಗಿನ ತಮ್ಮ ಸಂಪೂರ್ಣ ಚಿಂತನೆಯನ್ನು ಅವರು ಮಂಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ, 60ರ ದಶಕದಲ್ಲಿ ಪ್ರೊ|| ಎಂ.ಎನ್. ಶ್ರೀನಿವಾಸ್‌ರವರು ಮುಂದಿಟ್ಟು ಈಗ ಬಹಳ ಪ್ರಖ್ಯಾತವಾಗಿರುವ "ಸಂಸ್ಕೃತೀಕರಣ" (Sanskritisation) ಕಲ್ಪನೆಯನ್ನು ಅಂಬೇಡ್ಕರ್ ಅವರ ಚಿಂತನೆಯ ಜತೆ ಹೋಲಿಸುವುದು ಸ್ವಾರಸ್ಯಕರವಿದ್ದೀತು. "ದಕ್ಷಿಣ ಭಾರತದ ಕೂರ್ಗಿಗಳಲ್ಲಿ ಧರ್ಮ ಮತ್ತು ಸಮಾಜ" ಎಂಬ ತಮ್ಮ ಪುಸ್ತಕದಲ್ಲಿ ಪ್ರೊ|| ಶ್ರೀನಿವಾಸ್‌ರವರು ಸಂಸ್ಕೃತೀಕರಣದ ಕಲ್ಪನೆಯನ್ನು ಬಿಡಿಸಿದ್ದಾರೆ. ಅವರು ಮೇಲ್ಜಾತಿಗಳನ್ನು ಅನುಕರಿಸುವ ಕೆಳಜಾತಿಗಳ ಪ್ರವೃತ್ತಿ, ಸಂಸ್ಕೃತಿಕ, ಧಾರ್ಮಿಕ ವಿಧಿವಿಧಾನ ಮತ್ತು ಸಂಪ್ರದಾಯಗಳ ಹರಡುವಿಕೆಯಲ್ಲಿ ಒಂದು ಬಹುಮುಖ್ಯ ಸಾಧನ ಎಂದು ಹೇಳಿದ್ದಾರೆ. ಇದು ಭಾರತದ ಉದ್ದಗಲಕ್ಕೂ ಒಂದೇ ಸಂಸ್ಕೃತಿಯ ನಮೂನೆ ಉಂಟಾಗುವುದಕ್ಕೂ ಸಹ ಕಾರಣ ಎಂದಿದ್ದಾರೆ.

ಡಾ|| ಅಂಬೇಡ್ಕರ್‌ರವರು ಯಾವುದನ್ನು ಅನುಕರಣೀಯ ಅಂಟುಜಾಡ್ಯ ಎಂದು ಕರೆದು ಅದಕ್ಕೆ ದ್ವಿಮುಖ ಅರ್ಥ ನೀಡಿದ್ದಾರೋ, ಅದನ್ನೇ ಪ್ರೊ|| ಶ್ರೀನಿವಾಸ್‌ರವರು ಕೂರ್ಗ್ ಮೇಲಿನ ತಮ್ಮ ಪ್ರಬಂಧದಲ್ಲಿ ಪ್ರಬಲ ಭಿನ್ನತೆಯ ಅರ್ಥ ನೀಡಿ ಮಂಡಿಸಿದ್ದಾರೆ. ಪ್ರೊ|| ಶ್ರೀನಿವಾಸ್‌ರವರು ಕೆಳದರ್ಜೆಯವರು ಅನುಸರಿಸುತ್ತಿರುವ ಧಾರ್ಮಿಕ ವಿಧಿ-ವಿಧಾನಗಳಿಗಿಂತ ಸಂಸ್ಕೃತೀಕೃತ ವಿಧಿ-ವಿಧಾನಗಳಿಗೆ ಮತ್ತು ಸಂಪ್ರದಾಯಗಳಿಗೆ ಮೇಲ್ಪಂಕ್ತಿಯನ್ನು ನೀಡಿದ್ದಾರೆ. ಡಾ|| ಅಂಬೇಡ್ಕರ್‌ರವರು ಧಾರ್ಮಿಕ ವಿಧಿ-ವಿಧಾನಗಳ ಅನುಕರಣೆಯನ್ನು ವೈಷಮ್ಯದ, ವಿಭಜನೆಯ ಒಂದು ಉಪಕರಣವಾಗಿ ನೋಡಿದ್ದರೆ, ಪ್ರೊ|| ಶ್ರೀನಿವಾಸ್‌ರವರು ಅನುಕರಣೆಯನ್ನು ಮೇಲಿಂದ ಕೆಳಗೆ ಬಿತ್ತರಗೊಳ್ಳುವ, ಅಂದರೆ ಜಾತಿ ಮತ್ತು ಉಪ ಜಾತಿಗಳ ಮಧ್ಯದ ಒಂದು ಪ್ರಕ್ರಿಯೆ ಎಂದು ವಾದಿಸಿದ್ದಾರೆ.

ಇದರಿಂದ ಇಂತಹ ವೈಷಮ್ಯವನ್ನು ಅವರು ಸಮರ್ಥಿಸಿಕೊಂಡಂತಾಗಿದೆ. ಅಂಬೇಡ್ಕರ್‌ರವರು ಇನ್ನೂ ಮುಂದೆ ಹೋಗಿ ಧಾರ್ಮಿಕ ವಿಧಿ-ವಿಧಾನ ಮತ್ತು ಸಂಪ್ರದಾಯಗಳ ಪ್ರತ್ಯೇಕತೆಯಿಂದ ಉಪಜಾತಿಗಳು ಉಂಟಾಗುವ ಬಗ್ಗೆ ವಿವರಿಸುತ್ತಾರೆ. ಅವರು ಅಕ್ಕಸಾಲಿಗರ ಒಂದು ಉಪಜಾತಿಯ ಉದಾಹರಣೆ ನೀಡುತ್ತಾರೆ. ಒಂದು ಉದಾಹರಣೆ ನೀಡುವುದಾದರೆ ಭಾವಸಾರ್ ಮತ್ತು ನಾಮದೇವ ಸಿಂಪಿ ಉಪಜಾತಿಗಳನ್ನು ನಾವು ನೋಡಬಹುದು. ಈ ಉಪಜಾತಿಗಳು ಒಬ್ಬರೊಡನೆ ಒಬ್ಬರು ಮದುವೆ ಆಗುವುದಿಲ್ಲ ಮತ್ತು ಇವುಗಳ ಧಾರ್ಮಿಕ

ವಿಧಿ-ವಿಧಾನ, ಸಂಪ್ರದಾಯಗಳು ಪ್ರತ್ಯೇಕವಾಗಿವೆಯಾದರೂ ಹೆಚ್ಚಾಗಿ ವೈಶ್ಯರ ಗುಂಪಿಗೆ ಸೇರಿವೆ.

ಒಟ್ಟಿನಲ್ಲಿ ಡಾ|| ಅಂಬೇಡ್ಕರ್‌ರವರು ತಮ್ಮ 25ರ ಎಳೆಯ ವಯಸ್ಸಿನಲ್ಲಿಯೆ ಯಾವ ಕಲ್ಪನೆಯನ್ನು ಮುಂದಿಟ್ಟಿದ್ದರೋ ಅದನ್ನೇ ತಮ್ಮೆಲ್ಲಾ ಬರಹಗಳಲ್ಲಿ ಮುಂದುವರೆಸಿರುತ್ತಾರೆ. ಅನೇಕ ವಿದ್ವಾಂಸರು ಜಾತಿ ಮೇಲೆ ಡಾ|| ಅಂಬೇಡ್ಕರ್‌ರವರ ಅಭಿಪ್ರಾಯಗಳನ್ನು ವಿಶ್ಲೇಷಿಸಿದ್ದಾರೆ. ತಮ್ಮೆಲ್ಲಾ ಬರಹಗಳಲ್ಲಿ ಅವರು ಜಾತಿ ವೈಷಮ್ಯದ ಆರ್ಥಿಕ ತಳಹದಿಯ ಮೇಲೆ ಒತ್ತು ಕೊಟ್ಟಿರುತ್ತಾರೆ. ಇದು ಹೇಗೋ ಜನರ ಗಮನಕ್ಕೆ ಬಾರದೆ ಉಳಿದಿದೆ. ಡಾ|| ಅಂಬೇಡ್ಕರ್‌ರವರು ಆರ್ಥಿಕ ಮತ್ತು ಸಾಮಾಜಿಕ ವೈಷಮ್ಯ ಕೆಲವು ಜಾತಿ ಗುಂಪುಗಳಿಗೆ ಆರ್ಥಿಕ ಅವಕಾಶಗಳ ನಷ್ಟಕ್ಕೆ ಎಡೆಮಾಡಿಕೊಡುವ ಬಗ್ಗೆ ತುಂಬ ಸ್ಪಷ್ಟವಾಗಿ ನುಡಿದಿದ್ದಾರೆ. ಅವರ ಬರಹಗಳಲ್ಲಿ ಇದಕ್ಕೆ ಬಹಳಷ್ಟು ಒತ್ತು ಕೊಟ್ಟಿದ್ದಾರೆ.

ನಾಲ್ಕು ಖಾಯಿಲೆಗಳ ಬಗ್ಗೆ ಅವರು ವಾದಿಸುತ್ತಾರೆ. ಅವು ಯಾವುವೆಂದರೆ, 1) ಕಸುಬನ್ನು ಗೊತ್ತು ಪಡಿಸುವುದು, ಇದರಿಂದ 2) ಆದಾಯವನ್ನು ಸೀಮಿತಗೊಳಿಸುವುದು, 3) ಶಕ್ತಿ ಇದ್ದರೂ ಮೇಲೆ ಹೋಗದಂತೆ ತಡೆಯುವುದು, ಮತ್ತು 4) ನ್ಯಾಯಾಂಗವನ್ನು ಮೇಲ್ಜಾತಿಗಳ ಪರವಾಗಿರುವಂತೆ ನೋಡಿಕೊಳ್ಳುವುದು. ಮೇಲಿನ ನಾಲ್ಕು ಕ್ರಮಗಳು ಕೆಳಜಾತಿಗಳು ಬಡತನದಲ್ಲೇ ಹೊರಳಾಡುವಂತೆ ನೋಡಿಕೊಂಡಿವೆ. ಆದುದರಿಂದ ಡಾ|| ಅಂಬೇಡ್ಕರ್‌ರವರು ಭಾರತದ ಜಾತಿ ವ್ಯವಸ್ಥೆಯನ್ನು ವಿಶ್ಲೇಷಿಸುವಾಗ ಒತ್ತುಕೊಟ್ಟ ಮೂಲಭೂತ ಆರ್ಥಿಕ ವಿಷಯಗಳ ಬಗ್ಗೆ ನಾವು ಗಮನ ಹರಿಸಬೇಕಾದದ್ದು ಅವಶ್ಯಕ. ●

ಜಾತಿ ಹಾಗೂ ವರ್ಗಗಳ ವಿನಾಶದೆಡೆಗೆ

(24ನೇ ಪುಟದಿಂದ)

ಹಾಗೂ ಬುದ್ಧಿ ಬಲದಿಂದಾಗುವ ಕೆಲಸಗಳ ನಡುವೆ ಏರ್ಪಟ್ಟ ಕಂದರ, ಒಂದು ಕಡಿಮೆ ಇನ್ನೊಂದು ಹೆಚ್ಚು ಎಂಬ ಖಾಯಿಲೆ ಹಾಗೂ ಇವು ಶಾಶ್ವತವಾಗಿ ಮುಂದುವರೆಯುವುದು ಒಟ್ಟಾರೆಯಾಗಿ ಒಟ್ಟಾರೆಯಾಗಿ ಜಾತಿಯ ಹುಟ್ಟಿನ ಹಿಂದಿನ ನೆಲೆಗಳಾಗಿವೆ. ಭಾರತದ ಜಾತಿಯ ಅನುಭವ ಇತರ ಯಾವುದೆ ರಾಷ್ಟ್ರದ ಸಾಮಾಜಿಕ ವ್ಯವಸ್ಥೆಗಿಂತಲೂ ಸಂಕೀರ್ಣವಾಗಿದ್ದು ಜಗತ್ತೇ ಇದರ ಕಷ್ಟಗಳಿಂದ ಪಾಠ ಕಲಿಯಬಹುದಾಗಿದೆ. ಪ್ರಸ್ತುತ, ಜಾತಿಯು ಭಾರತ ದೇಶಕ್ಕೆ ಮಾಡಿರುವ ಭಯಂಕರವಾದ ಹಾನಿಯನ್ನು ಕುರಿತು, ಅದರಿಂದ ಈ ದೇಶ ಹೇಗೆ ಮುಕ್ತಿಯನ್ನು ಪಡೆಯುತ್ತದೆ ಎಂಬುದನ್ನು ಕುರಿತು ಚರ್ಚಿಸುವುದು ಮುಖ್ಯವಾಗಿದೆ. ಜಾತಿಯಿಂದಾಗಿ ಸಮಸ್ತ ಮೌಲ್ಯಮಾಪನವೇ ಕಂಗೆಟ್ಟು ಹೋಗಿದೆ. ಮೇಲು ಜಾತಿಗಳು ಸಂಸ್ಕೃತಿ ವಂತರಾಗಿದ್ದಂತೆಯೇ ದಗಾಬಾಜಿಯವೂ ಆಗಿವೆ. ಕೆಳಜಾತಿಗಳು ನಿಶ್ಚಲವೂ ನಿರ್ಜೀವವೂ ಆಗಿವೆ. ಈ ದೇಶದಲ್ಲಿ ವಿದ್ವತ್ತು ಎಂದರೆ ಕೇವಲ ಭಾಷೆ ಹಾಗೂ ಅದರ ವ್ಯಾಕರಣಗಳಾಗಿವೆಯೆ ಹೊರತು, ವಿಷಯ ಸಂಪತ್ತಾಗಲಿ, ಜ್ಞಾನವಾಗಲಿ ಆಗಿಲ್ಲ. ಔದಾರ್ಯವೆಂಬುದೂ ಸಹ ಜಾತಿ ಮತ್ತು ಅದರ ಸಂಬಂಧ ಜಾಲಕ್ಕೆ ಸೀಮಿತಗೊಂಡಿದ್ದು ಸ್ವಾರ್ಥಕ್ಕಾಗಿ ಬಳಸಿಕೊಳ್ಳುವುದಾಗಿದೆ. ಭಿಕ್ಷೆ ಬೇಡುವುದೆಂದರೆ ದೈಹಿಕ ಶ್ರಮದ ಕೆಲಸಕ್ಕಿಂತಲೂ ಕಡಿಮೆ ಅಪಮಾನದ ಸಂಗತಿಯಾಗಿದೆ. ಏಕೆಂದರೆ ಕೆಲವು ದೊಡ್ಡ ಭಿಕ್ಷೆಗಳನ್ನು ಕೇಳಿದಾಗ ಕೊಡುವವನು ಮುಂದಿನ ಜನ್ಮದಲ್ಲಿ ಅಗಣಿತವಾದ ಅಮೋಘ ಸುಖ ಪಡೆಯುವನೆನ್ನಲಾಗಿದೆ. ನಿಷ್ಕಪಟವಾದ ನೇರ ನಡವಳಿಕೆ ಹಾಗೂ ಧೈರ್ಯವಂತಿಕೆಗಿಂತ, ಕುತಂತ್ರ, ಬಹಿರಂಗ ಶರಣಾಗತಿ ಹಾಗೂ ಒಳಗೊಳಗೇ ದ್ರೋಹ ಬಗೆಯುವುದು-ಇವೇ ಯಶಸ್ವಿ ರಾಜಕಾರಣಿಗಳ ಮೂಲಮಂತ್ರವಾಗಿದೆ. ಸುಳ್ಳು ಎಂಬುದು ಸಾರ್ವಜನಿಕ ಜೀವನದಲ್ಲಿನ ಶ್ರೇಷ್ಠ ಗುಣವಾಗಿದೆ. ನ್ಯಾಯ ಹಾಗೂ ರಾಷ್ಟ್ರದ ಒಳಿತನ್ನು ಕಾಪಾಡಿಕೊಳ್ಳುವುಕ್ಕಿಂತ ತನ್ನ ಜಾತಿಯ ಜನಗಳನ್ನು, ಜಾತಿಯ ಸಂಬಂಧಗಳನ್ನು ಕಾಯ್ದುಕೊಳ್ಳುವುದು ಶ್ರೇಷ್ಠವಾದುದು ಎಂಬ ಮೋಸದ ವಾತಾವರಣ ಎಲ್ಲೆಡೆ ನೆಲೆಸಿದೆ. ಒಟ್ಟಿನಲ್ಲಿ ರಾಷ್ಟ್ರದ ಅಗತ್ಯಗಳೊಂದಿಗೆ ಜಾತಿಯ ಅಗತ್ಯಗಳು ಸಮರ ಸಂಘರ್ಷದಲ್ಲಿ ತೊಡಗಿವೆ. ಇಲ್ಲಿ ಜಾತಿ ಗೆದ್ದು ಬಿಡುತ್ತದೆ. ಏಕೆಂದರೆ ಅದೊಂದೇ ಈಗ ಕಷ್ಟ ಹಾಗೂ ವಿಪತ್ತುಗಳಿಂದ ವ್ಯಕ್ತಿಗಳನ್ನು ರಕ್ಷಿಸಿಕೊಳ್ಳುವ ವಿಶ್ವಾಸನೀಯ ಭರವಸೆಯಾಗಿ ಬಿಟ್ಟಿದೆ. ●

ದ್ರಾವಿಡರ ಸ್ವಾಭಿಮಾನದ ಸಂಕೇತ ಪೆರಿಯಾರ್

(9ನೇ ಪುಟದಿಂದ)

ಬಿತ್ತುವ ದೇವಾಲಯಗಳನ್ನು ಗುಡಿ ಕೈಗಾರಿಕೆಗಳಾಗಿ ಪರಿವರ್ತಿಸಬೇಕು.

7. ಸ್ವಾಭಿಮಾನ ಚಳುವಳಿಯು ದೇವರು, ಧರ್ಮ, ಕಾಂಗ್ರೆಸ್, ಗಾಂಧಿ ಮತ್ತು ಬ್ರಾಹ್ಮಣ ವಿರೋಧಿ ಚಳುವಳಿ.
8. ಕಪ್ಪು ಅನಿಷ್ಟ ಎಂಬ ಮನುವಾದಿ ನಂಬಿಕೆಯನ್ನು ಧಿಕ್ಕರಿಸಿ, ಕಪ್ಪು ಶ್ರೇಷ್ಠ, ಬಿಳಿ ಅನಿಷ್ಟ ಎಂದು ವೈಜ್ಞಾನಿಕ ವಿಶ್ಲೇಷಣೆ ಮಾಡಿ ದ್ರಾವಿಡ ಕಳಗಂ ಸಂಘಟನೆಗೆ ಕಪ್ಪು ಸಮವಸ್ತ್ರವನ್ನೇ ನಿಗದಿಪಡಿಸಿದರು.
9. ಪ್ರಕೃತಿಯಲ್ಲಿ ಎಲ್ಲಾ ಕಾಲವೂ ಶ್ರೇಷ್ಠ. ಆದ್ದರಿಂದ ರಾಹುಕಾಲ, ಗುಳಿಕಕಾಲ, ಯಮಗಂಡಕಾಲ ಮುಂತಾದ ಬ್ರಾಹ್ಮಣ ಶಾಹಿ ನಂಬಿಕೆಗಳನ್ನು ತಿರಸ್ಕರಿಸಿ ರಾಹುಕಾಲದಲ್ಲಿ ಮದುವೆ, ನಾಮಕರಣ ಮುಂತಾದ ಶುಭ ಕಾರ್ಯಗಳನ್ನು ತಾವೇ ಮುಂದೆ ನಿಂತು ಮಾಡಿಸಿದರು.
10. ನೀವು ದಾರಿಯಲ್ಲಿ ಹೋಗುವಾಗ ಒಂದು ಹಾವು ಮತ್ತು ಒಬ್ಬ ಹಾರುವ ಎದುರಿಗೆ ಬಂದಾಗ ಮೊದಲು ಹಾರುವನನ್ನು ಕೊಲ್ಲಿ, ಕಾರಣ ಹಾವು ಕಚ್ಚಿದರೆ ಒಬ್ಬ ಸಾಯುತ್ತಾನೆ, ಹಾರುವ ಕಚ್ಚಿದರೆ ಊರೇ ಸಾಯುತ್ತದೆ ಎಂದರು.
11. ಸೀತೆ, ಸಾವಿತ್ರಿ, ದ್ರೌಪತಿ, ಅನಸೂಯ ಮುಂತಾದ ಮಹಿಳೆಯರ ಪತಿವ್ರತಾ ಕಲ್ಪನೆಗಳ ಮೂಲಕ ಉಳಿದ ಮಹಿಳಾ ಸಮುದಾಯವನ್ನು ಪರೋಕ್ಷವಾಗಿ ಅವಮಾನಿಸುತ್ತಿದ್ದ ಮನುವಾದಿ ಪುರಾಣ ಪೊಳ್ಳು ಕಥೆಗಳನ್ನು ಜನತೆಯ ಮುಂದೆ ಬಿಚ್ಚಿಟ್ಟು, ಜಾಗೃತಿ ಮೂಡಿಸುತ್ತಿದ್ದರು.

ಮುಖ್ಯ ಘಟನೆಗಳು :

1. 1927ರಲ್ಲಿ ಮನುಸ್ಮೃತಿಯನ್ನು ಸುಡಲಾಯಿತು.
2. 1940, 1944 ಮತ್ತು 1954ರ ಅವಧಿಯಲ್ಲಿ ಮೂರುಬಾರಿ ಡಾ|| ಅಂಬೇಡ್ಕರ್ ಅವರನ್ನು ಭೇಟಿ ಮಾಡಿ ಅವರ ಹೋರಾಟಕ್ಕೆ ಬೆಂಬಲ ನೀಡಿದರು.
3. 1951ರಲ್ಲಿ ಸುಪ್ರೀಂ ಕೋರ್ಟ್ ತೀರ್ಮಾನದ ವಿರುದ್ಧ, ಮೀಸಲಾತಿ ಪರ ಹೋರಾಟದ ಪರಿಣಾಮವಾಗಿ ಸಂವಿಧಾನಕ್ಕೆ ಮೊದಲನೇ ತಿದ್ದುಪಡಿ ತಂದು ಅನುಚ್ಛೇದ 16(4)ನ್ನು ಸೇರಿಸಲಾಯಿತು.
4. 1953ರಲ್ಲಿ ವಿನಾಯಕನ ವಿಗ್ರಹವನ್ನು ತೆಂಗಿನಕಾಯಿಗೆ ಹೊಡೆದು ಪ್ರತಿಭಟನೆ ಮಾಡಿದರು. ಗಣಪತಿಯ ಹುಟ್ಟನ್ನೇ ಪ್ರಶ್ನಿಸಿ ಅವನಿಗೆ 'ಪುಳ್ಳೆಯಾರ್'? (ಈ ಹುಡುಗ ಯಾರು) ಎಂದು ನಾಮಕರಣ ಮಾಡಿದರು.
5. 1955ರಲ್ಲಿ ರಾಮ ಲಕ್ಷ್ಮಣ ಸೀತೆಯರ ಪ್ರತಿಕೃತಿಯನ್ನು ಸುಟ್ಟು ರಾವಣ ಲೀಲೆ ಮಾಡಿದರು. ಈ ಪ್ರಕರಣ ಕೋರ್ಟಿಗೆ ಹೋದಾಗ ಬ್ರಾಹ್ಮಣರು ರಾವಣನನ್ನು ಸುಡುವುದನ್ನು ನಿಲ್ಲಿಸಿದರೆ, ನಾನು ರಾಮನನ್ನು ಸುಡುವುದನ್ನು ನಿಲ್ಲಿಸುತ್ತೇನೆಂದು ವಾದ ಮಾಡಿದರು.
6. ಜುಟ್ಟು ಜನಿವಾರಗಳ ಪ್ರದರ್ಶನದ ಮೂಲಕ ತಾವು ಶ್ರೇಷ್ಠರು ಎನ್ನುತ್ತಿದ್ದ ಬ್ರಾಹ್ಮಣರ ಜುಟ್ಟು, ಜನಿವಾರಗಳನ್ನು ಕತ್ತರಿಸುವ ಚಳುವಳಿಯನ್ನು ಮಾಡಿದರು.

ಅವರ ಅಂತಿಮ ಯಾತ್ರೆ : 95ನೆಯ ವಯಸ್ಸಿನವರೆಗೂ ಜೇನಿನಂತೆ ಕಾರ್ಯಮಗ್ನರಾಗಿ ದುಡಿದ ಪೆರಿಯಾರ್, 1973ರ ನವೆಂಬರ್ 17 ರಿಂದ ಡಿಸೆಂಬರ್ 3ರವರೆಗೆ ಬಿರುಗಾಳಿಯಂತೆ ತಮಿಳುನಾಡಿನಲ್ಲಿ ಸುತ್ತಿ ಮದ್ರಾಸಿಗೆ ಬಂದರು. ಅಲ್ಲಿಯೇ ತಂಗಿದ್ದು ತಮಿಳರ ಸಾಮಾಜಿಕ ಅನ್ಯಾಯ ನಿರ್ಮೂಲನೆಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದರು. ಎಡೆಬಿಡದ ಕಾರ್ಯಕ್ರಮಗಳಿಂದಾಗಿ ಪೆರಿಯಾರರ ಆರೋಗ್ಯ ಕೆಟ್ಟಿತು. ಗೆಳೆಯರ ಒತ್ತಾಯದ ಮೇಲೆ ವೆಲ್ಲೂರು ಆಸ್ಪತ್ರೆ ಸೇರಿದರು. ಡಿಸೆಂಬರ್ 24, 1973ರಂದು ಅವರ ಪವಿತ್ರ ಚೇತನ ದೇಹ ಬಿಟ್ಟು ಹೊರಟಿತು. ತಂದೆ ಪೆರಿಯಾರ್ ಹುಟ್ಟು ಹಾಕಿದ ಸಾಮಾಜಿಕ ಪರಿವರ್ತನಾ ಚಳುವಳಿಯು ತಮಿಳುನಾಡಿನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬದುಕಿನಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿದೆ. ●

ಮೂಲಭೂತ ಅವಶ್ಯಕತೆಯೊಂದರ ಕುರಿತು...

> ಜಾತಿ ವ್ಯವಸ್ಥೆ, ಈವತ್ತಿಗೂ ಕಟ್ಟುನಿಟ್ಟಾಗಿ ತನ್ನದಲ್ಲದ ಉದ್ಯೋಗಗಳೆಡೆಗೆ ತನ್ನ ಜನರನ್ನು ಬಿಟ್ಟು ಕೊಡುತ್ತಿಲ್ಲವೆಂದಲ್ಲ. ಗಣನೀಯ ಪ್ರಮಾಣದಲ್ಲಿಯೇ ಶ್ರಮದ ಜಾತ್ಯತೀತ ಚಲನೆ ಸಾಧ್ಯವಾಗಿದೆ. ಆದರೆ ಅದು ಯಾವ ದಿಕ್ಕಿನೆಡೆಗೆ ಚಲಿಸುತ್ತಿದೆ? ಬಹುಮಟ್ಟಿಗೆ ಕೆಳಜಾತಿಗಳವರು ಮೇಲು ಜಾತಿಗಳ ಉದ್ಯೋಗದೆಡೆಗೆ ಚಲಿಸುತ್ತಿದ್ದಾರೆ ಮತ್ತು ಮೇಲು ಜಾತಿಗಳು ಬದಲಾಗಿರುವ ಸಾಮಾಜಿಕ ಮನೋಭಾವನೆಯಲ್ಲಿ ಮೇಲು ಮಟ್ಟದ ಉದ್ಯೋಗಗಳೆನಿಸಿಕೊಂಡ ಉದ್ಯೋಗಗಳೆಡೆಗೆ ಚಲಿಸುತ್ತಿದ್ದಾರೆ. (ಉದಾ: ಸರಕಾರಿ ನೌಕರಿ) ಇದರ ಹೊರತು ಪಾರಂಪರಿಕವಾಗಿ ಕೆಳಜಾತಿಗಳ ಉದ್ಯೋಗಿಗಳೆನಿಸಿಕೊಂಡ ಉದ್ಯೋಗಗಳೆಡೆಗೆ ಮೇಲು ಜಾತಿಗಳವರು ಪ್ರವೇಶಿಸುವುದು. ವಿಶೇಷವಾಗಿ ಕಂಡು ಬರುತ್ತಿಲ್ಲ.
>
> ○ ಅರವಿಂದ ಚೊಕ್ಕಾಡಿ

ಯಾವುದೇ ಒಂದು ಜೀವಿಯಿರಲಿ, ಅದಕ್ಕೆ ಬಹು ಮುಖ್ಯವಾದ ಎರಡು ಮೂಲಭೂತ ಅವಶ್ಯಕತೆಗಳಿರುತ್ತವೆ. ಮೊದಲನೆಯದು ಬದುಕು. ಅಂದರೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ, ತನ್ನ ಬದುಕನ್ನು ರಕ್ಷಿಸಿಕೊಳ್ಳುವ ಅವಶ್ಯಕತೆ. ಇಲ್ಲಿನ ಅತ್ಯಮೂಲ್ಯ ವಿಚಾರ ಆಹಾರ, ಎರಡನೆಯದು ಬದುಕುವ ವಿಧಾನ. ಅಂಥಲ್ಲಿ ಜೀವಿಯೊಂದು ತನ್ನ ಸುತ್ತ ಮುತ್ತಲೂ ನಡೆಯುವ ಕ್ರಿಯೆಗಳಿಗೆ ಪ್ರತಿಕ್ರಿಯಿಸುವ ರೀತಿ, ಅದರ ನಡವಳಿಕೆ ಮುಂತಾದ ಅಂಶಗಳು ಗಮನಕ್ಕೆ ಬರುತ್ತದೆ.

ಮನುಷ್ಯ ಸಮಾಜಕ್ಕೆ ಸಂಬಂಧಿಸಿ ಹೇಳುವುದಾದರೆ ಆಹಾರ ಎಲ್ಲ ಜೀವಿಗಳಂತೆ ಮನುಷ್ಯನಿಗೂ ಮೂಲಭೂತ ಅವಶ್ಯಕತೆಯೇ. ಆದರೆ ನಾಗರಿಕತೆ ಬೆಳೆದು ಬಂದು 21ನೆಯ ಶತಮಾನದ ಕಾಲಘಟ್ಟದಲ್ಲಿ ನಿಂತಿರುವಾಗ ಕೇವಲ ಆಹಾರ ಮಾತ್ರ ಮನುಷ್ಯನ ಮೂಲಭೂತ ಅವಶ್ಯಕತೆಯಾಗಿ ಕಾಣಿಸುವುದಿಲ್ಲ. ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ, ವ್ಯಕ್ತಿ ಘಟನೆಯಿಂದ ಬಾಳುವ ಹಕ್ಕು ಇವೆಲ್ಲ ಮೂಲಭೂತ ಅವಶ್ಯಕತೆಗಳಾಗುತ್ತವೆ. ಇಂಥಲ್ಲಿ ಇವನ್ನೆಲ್ಲ ಸಾಧಿಸುವ ಅವಕಾಶ ಮುಖ್ಯ ವಿಚಾರವಾಗುತ್ತದೆ.

ಅದು ನಮ್ಮ ಸಾಮಾಜಿಕ ಸ್ವರೂಪವನ್ನು ನಾವು ಸಂಘಟಿಸಿರುವ ರೀತಿಯಲ್ಲಿ ನಿರ್ಧರಿತವಾಗುವಂಥದು. ಮಾನವ ಸಮಾಜ ಎನ್ನುವಂಥದ್ದು. ಆರ್ಥಿಕ ಸಮಾಜವೂ ಆಗಿದೆ. ಅಂಥಲ್ಲಿ ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಒಂದು ಅರ್ಥ (Economy) ವ್ಯವಸ್ಥೆಯಿಂದ ಸಾಧನೆಯಾಗಬೇಕಾದ್ದು, ಅದನ್ನು ಸಾಧಿಸುವ ಪ್ರಾಮಾಣಿಕ ಮಾರ್ಗವೆಂದರೆ ಉದ್ಯೋಗ ಸಂಪಾದಿಸಿಕೊಳ್ಳುವುದು.

ಹೀಗಿರುವಲ್ಲಿ ಉದ್ಯೋಗ ಸಾಧನೆಗೆ ತೊಡಕುಂಟಾದಾಗ ಮೂಲಭೂತ ಅವಶ್ಯಕತೆ ಯೊಂದರ ಅಲ್ಲಗಳೆಯುವಿಕೆ ನಡೆಯುವುದರೊಂದಿಗೆ ಸಾಮಾಜಿಕ ನ್ಯಾಯ ಹಿನ್ನಡೆಯನ್ನು ಅನುಭವಿಸುತ್ತದೆ ಎಂಬುದನ್ನು ಗಮನಿಸಬೇಕು. ಇಂಥಲ್ಲಿ ಆಧುನಿಕ ಕಾಲಮಾನದಲ್ಲಿ ನಿಂತು ನಿರುದ್ಯೋಗಕ್ಕೆ ಕಾರಣವಾಗುವ ನಾನಾ ಮೂಲಗಳು ನಮ್ಮೆದುರು ತೆರೆದುಕೊಳ್ಳುತ್ತವೆ.

'ಭಾರತದ ಅರ್ಥ ವ್ಯವಸ್ಥೆಯಲ್ಲಿ ಜಟಕಾ ಗಾಡಿಯೂ ಟ್ರಾಕ್ಟರ್ ಜೊತೆ ಜೊತೆಯಾಗಿ ಸಾಗುತ್ತವೆ' ಎಂಬ ಮಾತೊಂದಿದೆ. ಅದು ನಮ್ಮ ಒಟ್ಟೂ ಜೀವನ ಶೈಲಿಗೆ ಸಾಂಕೇತಿಕವಾಗುವ ಮಾತು. ಅಂದರೆ ಭಾರತೀಯ ಸಮಾಜದಲ್ಲಿ ಆಧುನಿಕ ಚಿಂತನೆ ಮತ್ತು ಸಾಂಪ್ರದಾಯಿಕ ಜೀವನ ವ್ಯವಸ್ಥೆ ಜೊತೆಜೊತೆಯಾಗಿ ಉಳಿದುಕೊಂಡಿದೆ. (ಜೊತೆ ಜೊತೆಯಾಗಿದೆ ಎನ್ನುವುದನ್ನು ಮುಖಾಮುಖಿ ಎಂಬ ಅರ್ಥದಲ್ಲಿ ಸ್ವೀಕರಿಸಲಾಗದು).

ಮೊದಲಿಗೆ ಸಾಂಪ್ರದಾಯಿಕ ಜೀವನ ವ್ಯವಸ್ಥೆ ಯಾವೆಲ್ಲ ರೀತಿಯಲ್ಲಿ ನಿರುದ್ಯೋಗಕ್ಕೆ ಕಾರಣವಾಗುತ್ತದೆ

ಚಿತ್ರ ಸೌಜನ್ಯ : 'ಹೊಸತು'

ಎಂಬ ಅಂಶವನ್ನು ತೆಗೆದುಕೊಂಡರೆ ಜಾತಿ ಪದ್ಧತಿ, ಶ್ರಮ ಗೌರವರಾಹಿತ್ಯ, ಮಹಿಳೆಯರ ಸ್ಥಿತಿಗತಿಗಳು, ಜನಸಂಖ್ಯೆಯ ಕುರಿತಾದ ನಂಬಿಕೆ ಉದ್ಯಮ ಸಾಹಸದ ಕೊರತೆ, ಅರ್ಥ ವ್ಯವಸ್ಥೆಯ ತಿಳಿವಳಿಕೆಯ ಅಭಾವ, ಆರ್ಥಿಕ ಅಶಿಸ್ತು ಮುಂತಾದವು ಕಂಡು ಬರುತ್ತವೆ.

ಸಾಂಪ್ರದಾಯಿಕವಾಗಿ ಜಾತಿ ವ್ಯವಸ್ಥೆ ಅದರದಲ್ಲದ ಉದ್ಯೋಗದ ಕಡೆಗೆ ತನ್ನ ಜನರನ್ನು ಬಿಟ್ಟುಕೊಡುವುದಿಲ್ಲ ಅದರಿಂದಾಗಿ ಬದಲಾಗಿರುವ ಅರ್ಥ ವ್ಯವಸ್ಥೆಯಲ್ಲಿ ಮಹತ್ವ ಕಳೆದುಕೊಂಡಿರುವ ಸಾಂಪ್ರದಾಯಿಕ ಉದ್ಯೋಗ ಕ್ಷೇತ್ರದಲ್ಲಿರುವ ಜಾತಿಗಳವರು ನಿರುದ್ಯೋಗ ಕ್ಕೀಡಾಗಬೇಕಾಗುತ್ತದೆ. ಹಾಗೆಯೇ ಹೆಚ್ಚುತ್ತಿರುವ ಜನಸಂಖ್ಯೆಗೆ ಸಾಲುವಷ್ಟು ಪ್ರಮಾಣದ ಜಾತಿ ಆಧಾರಿತ ಉದ್ಯೋಗಗಳು ಇಲ್ಲವಾದಾಗಲೂ ನಿರುದ್ಯೋಗ ಸಮಸ್ಯೆ ತಲೆದೋರುವುದುಂಟು.

ಅಂದರೆ ಜಾತಿ ವ್ಯವಸ್ಥೆ, ಈವತ್ತಿಗೂ ಕಟ್ಟುನಿಟ್ಟಾಗಿ ತನ್ನದಲ್ಲದ ಉದ್ಯೋಗಗಳೆಡೆಗೆ ತನ್ನ ಜನರನ್ನು ಬಿಟ್ಟು ಕೊಡುತ್ತಿಲ್ಲ ವೆಂದಲ್ಲ. ಗಣನೀಯ ಪ್ರಮಾಣದಲ್ಲಿಯೇ ಶ್ರಮದ ಜಾತ್ಯತೀತ ಚಲನೆ ಸಾಧ್ಯವಾಗಿದೆ. ಆದರೆ ಅದು ಯಾವ ದಿಕ್ಕಿನೆಡೆಗೆ ಚಲಿಸುತ್ತಿದೆ? ಬಹುಮಟ್ಟಿಗೆ ಕೆಳಜಾತಿಗಳವರು ಮೇಲು ಜಾತಿಗಳ ಉದ್ಯೋಗದೆಡೆಗೆ ಚಲಿಸುತ್ತಿದ್ದಾರೆ ಮತ್ತು ಮೇಲು ಜಾತಿಗಳು ಬದಲಾಗಿರುವ ಸಾಮಾಜಿಕ ಮನೋಭಾವನೆಯಲ್ಲಿ ಮೇಲು ಮಟ್ಟದ ಉದ್ಯೋಗ ಗಳೆನಿಸಿಕೊಂಡ ಉದ್ಯೋಗ ಗಳೆಡೆಗೆ ಚಲಿಸುತ್ತಿದ್ದಾರೆ. (ಉದಾ: ಸರಕಾರಿ ನೌಕರಿ) ಇದರ ಹೊರತು ಪಾರಂಪರಿಕವಾಗಿ ಕೆಳಜಾತಿಗಳ ಉದ್ಯೋಗಿಗಳೆನಿಸಿಕೊಂಡ ಉದ್ಯೋಗಗಳೆಡೆಗೆ ಮೇಲು ಜಾತಿಗಳವರು ಪ್ರವೇಶಿಸುವುದು ವಿಶೇಷವಾಗಿ ಕಂಡು ಬರುತ್ತಿಲ್ಲ. ಯಾಕೆ ಹೀಗಾಗುತ್ತಿದೆ ಎಂದರೆ ವ್ಯಕ್ತಿ ಘನತೆಯಿಂದ ಬಾಳುವ ಅಪೇಕ್ಷೆಯಿಂದ ಅವು ಅತ್ಯಂತ ಸೂಕ್ತವಾದ ಅಪೇಕ್ಷೆಯೇ ಆದರೆ ಅದೇ ಹೊತ್ತಿಗೆ ಶ್ರಮ ಗೌರವ ಪ್ರಜ್ಞೆ ಕಾಣಿಸಿಕೊಂಡು ಪ್ರತಿಯೊಂದು ವೃತ್ತಿಯೂ ಗೌರವಾರ್ಹವೇ ಎಂಬ ಅರಿವು ಮೂಡಬೇಕಿತ್ತು. ಅದಾಗಿಲ್ಲ ಅದರಿಂದಾಗಿ ಕೆಳಜಾತಿಗಳ ಉದ್ಯೋಗವೆನಿಸಿದ

ಕ್ಷೇತ್ರಗಳಲ್ಲಿ ಉದ್ಯೋಗಗಳು ಖಾಲಿ ಇದ್ದರೂ ಅದನ್ನು ಪ್ರವೇಶಿಸುವವರಿಲ್ಲದೆ ಆ ಉದ್ಯೋಗಗಳು ನಷ್ಟ ಹೊಂದುತ್ತವೆಯಲ್ಲದೆ ನಿರುದ್ಯೋಗಕ್ಕೂ ಕಾರಣ ವಾಗುತ್ತವೆ. (ಇಲ್ಲಿ ವ್ಯಕ್ತಿ ಘನತೆಯ ದೃಷ್ಟಿಯಿಂದ ತೊಲಗಲೇಬೇಕಾದ ಮಲಹೊರುವಂಥ ಉದ್ಯೋಗಗಳು ತೊಲಗಲೇಬೇಕು. ಅಂಥವುಗಳ ಕುರಿತಾಗಿ ಈ ಮಾತು ಹೇಳಿದ್ದಲ್ಲ).

ಜಾತಿ ವ್ಯವಸ್ಥೆಯೊಂದಿಗೆ ಬೆಳೆದು ನಿಂತಿರುವ ಶ್ರಮಗೌರವ ಸಾಹಿತ್ಯದ ವಿಷಯಕ್ಕೆ ಬಂದರೆ ಬೌದ್ಧಿಕ ವ್ಯಕ್ತಿಗಳು ಮೇಲು ಮಟ್ಟದವು ಹಾಗೂ ದೈವಿಕ ಉದ್ಯೋಗಗಳು ಕೆಳಮಟ್ಟದವು ಎಂಬ ಭಾವನೆ ಇದೆ. ಬಹುಶಃ ಇದು ಒಂದು ಕಾಲಮಾನದ ಸನ್ನಿವೇಶದಿಂದ ರೂಪು ತಳೆದಿರುವಂಥದು. ಕೃಷಿ ಮತ್ತು ವೇದಾಧ್ಯಯನ ಪರಸ್ಪರ ವಿನಾಶಕಾರಿ ಎನ್ನುವ ಬೌಧಾಯನ ಧರ್ಮ ಸೂತ್ರ! ಬ್ರಾಹ್ಮಣ, ಎಂತಹದೇ ಪರಿಸ್ಥಿತಿ ಬರದಾಗಲೂ ಕೃಷಿಕ್ಷೇತ್ರಕ್ಕೆ ಪ್ರವೇಶಿಸಬಾರದು ಎನ್ನುವ ಮನುಸ್ಮೃತಿ ಮುಂತಾದವುಗಳ ಕಾಲದಿಂದ ಈ ಶ್ರಮ ಗೌರವ ರಾಹಿತ್ಯ ಬೆಳೆದು ಬಂದುದಿರಬೇಕು. ಇಷ್ಟೇ ಹೇಳಿದ್ದರೆ ಶ್ರಮ ಗೌರವ ರಾಹಿತ್ಯ ಕಂಡು ಬರಬೇಕಾಗಿಲ್ಲ. ಶ್ರಮ ವಿಭಜನೆಯ ತತ್ವಕ್ಕನುಗುಣವಾಗಿ ಒಬ್ಬನ ವೃತ್ತಿಯನ್ನು ಇನ್ನೊಬ್ಬ ಕೈಗೊಳ್ಳಬಾರದೆಂಬ ತಿಳಿವಳಿಕೆ ಇದು ಎಂದು ಭಾವಿಸಬಹುದು. ಆದರೆ ವಾಸ್ತವದಲ್ಲಿ ಶೂದ್ರರು ಕೀಳು, ಆದ್ದರಿಂದ ಶೂದ್ರರ ವೃತ್ತಿಯೂ ಕೀಳು ಎಂಬ ಭಾವನೆ ಬೆಳೆದು ಬಂದಿದೆ. ಬಹುಶಃ ಅಂದಿನ ಕಾಲಮಾನದಲ್ಲಿ ಬೌದ್ಧಿಕ ಕಾರ್ಯ ನಿರ್ವಹಣೆಗೆ ಜನರ ಕೊರತೆ ಇದ್ದಿರಬಹುದು. ಅಂಥಲ್ಲಿ ಕೊರತೆಯನ್ನು ನೀಗಿಸುವವರು ಸಹಜವಾಗಿಯೇ ಗೌರವಾರ್ಹರಾಗಿ ಬಿಡುತ್ತಾರೆ. ಅಥವಾ ವರ್ಗ ವ್ಯವಸ್ಥೆಯನ್ನು ರೂಪಿಸಿದವರು ತಮ್ಮ ಸ್ವಾರ್ಥ ಹಿತಾಸಕ್ತಿಯ ದೃಷ್ಟಿಯಿಂದ ಶ್ರಮಗೌರವವನ್ನು ಅಲ್ಲಗಳೆಯುವ ಕಾರ್ಯ ಮಾಡಿರಲೂಬಹುದು.

ಆದರೆ ಈವತ್ತಿನ ಆಧುನಿಕ ಸಮಾಜದಲ್ಲಿಯೂ ಸಹ ಬೌದ್ಧಿಕ ದುಡಿಮೆ ಮೇಲು, ದೈಹಿಕ ದುಡಿಮೆ ಕೀಳು ಎಂಬ ಭಾವನೆ ಕಂಡುಬರಬೇಕಾಗಿಲ್ಲ. ಆಧುನಿಕ ಶಿಕ್ಷಣ ನಮ್ಮಲ್ಲಿ ವೃತ್ತಿ ಸಮಾನತೆಯ ಅರಿವು ಮೂಡಿಸಬೇಕಿತ್ತು. ಆದರೆ ಅದಾಗಿಲ್ಲವೆನ್ನುವಲ್ಲಿ ಜಡ್ಡುಗಟ್ಟಿದ ಸಂಪ್ರದಾಯಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ.

ಇಂಥಲ್ಲಿ ಸಾಂಪ್ರದಾಯಿಕ ಜಾತಿ ತಾರತಮ್ಯದಿಂದ ಸೃಷ್ಟಿಯಾಗುವ ನಿರುದ್ಯೋಗ ಹೇಗೂ ಇದ್ದೇ ಇದೆ. ಅದೇ ರೀತಿಯಲ್ಲಿ ಅಸಾಂಪ್ರದಾಯಿಕವಾಗಿ ನಿರ್ಮಿತವಾಗಿರುವ ಬೇರೊಂದು ರೀತಿಯ ವರ್ಗ ವ್ಯವಸ್ಥೆ ಕೂಡ ನಿರುದ್ಯೋಗಕ್ಕೆ ಕಾರಣವಾಗುತ್ತದೆ. ಅದೆಂದರೆ ವೃತ್ತಿ ಆಧಾರಿತ ಜಾತೀಯತೆ.

ಅಪೇಕ್ಷಣೀಯವಾಗಿಯೇ ಕೆಳಜಾತಿಗಳವರು ಮೇಲು ಜಾತಿಗಳ ಉದ್ಯೋಗದತ್ತ ಸರಿಯುತ್ತಿರುವುದು ಸಂತಸದ ವಿಷಯ. ಆದರೆ ಹೀಗೆ ಸರಿದಾಗ ಸಾಂಪ್ರದಾಯಿಕವಾಗಿ ಮೇಲು ಜಾತಿಗೆ ಸೇರಿದವರು ಮತ್ತು ಮೇಲು ಜಾತಿಗಳ ಉದ್ಯೋಗ ಕೈಗೊಳ್ಳುವ ಮೂಲಕ ಮಾನ್ಯತೆ ಪಡೆದ ಕೆಳಜಾತಿಗಳವರು, ಇವರ ಒಕ್ಕೂಟದಿಂದ ಹೊಸ ಒಂದು ವರ್ಗ ಸೃಷ್ಟಿಯಾಗಿ ಬಿಟ್ಟಿದೆ.

ಮಹಿಳೆಯರ ಸ್ಥಿತಿಗತಿಗಳೊಂದಿಗೆ ತಳುಕು ಹಾಕಿಕೊಂಡಿರುವಂಥದು ಜನಸಂಖ್ಯಾ ಸಮಸ್ಯೆ. ಹತೋಟಿ ಮೀರಿ ಮುನ್ನಡೆಯುವ ಜನಸಂಖ್ಯೆ, ದೇಶದ ನಿರುದ್ಯೋಗಕ್ಕೆ ಬಹುದೊಡ್ಡ ಮಟ್ಟಿನ ಕಾರಣವಾಗಿದೆ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ನಮ್ಮ ಸಾಂಪ್ರದಾಯಿಕ ವ್ಯವಸ್ಥೆ ಜನಸಂಖ್ಯಾ ನಿಯಂತ್ರಣವನ್ನು ಒಪ್ಪಿಕೊಳ್ಳುವಂಥದೇನಲ್ಲ. ಅಂಥಲ್ಲಿ ಸಾಂಪ್ರದಾಯಿಕ ಚಿಂತನೆಯನ್ನು ಈ ಒಂದು ವಿಷಯದ ಮಟ್ಟಿಗಾದರೂ ಒಪ್ಪಿಕೊಳ್ಳುವ ಜನರು ಜನಸಂಖ್ಯಾ ನಿಯಂತ್ರಮಕ್ಕೆ ಸಿದ್ಧರಾಗಲಾರರು. ಅದರಿಂದಾಗಿ ಜನಿಸಿದ ಮಕ್ಕಳಿಗೆ ಯೋಗ್ಯ ಆಹಾರ, ಶಿಕ್ಷಣ, ಉದ್ಯೋಗವನ್ನು ಕಲ್ಪಿಸಿಕೊಡಲಾಗದೆ ಆರ್ಥಿಕ ಪ್ರಗತಿ ಹಿನ್ನಡೆ ಅನುಭವಿಸಬೇಕಾಗುತ್ತದೆ. ನಿಜವಾಗಿಯಾದರೂ ಇಂಥ ಸಂಪ್ರದಾಯ ಹುಟ್ಟಿಕೊಂಡ ಕಾಲದಲ್ಲಿ ಜನಸಂಖ್ಯೆಯ ಅವಶ್ಯಕತೆ ಇತ್ತು.

ಅದೇ ವೃತ್ತಿ ಆಧಾರಿತ ಜಾತೀಯತೆ

ಅದರಿಂದ ಏನಾಗುತ್ತದೆ ಎಂದರೆ ಒಮ್ಮೆ ಮಾನ್ಯ ಸ್ಥಾನವನ್ನು ಪಡೆದ ಈ ವರ್ಗದ ಮುಂದಿನ ಜನಾಂಗ ಕೆಳ ವೃತ್ತಿಗಳನ್ನು ಕೈಗೊಳ್ಳಲು ಮುಂದೆ ಬರುವುದಿಲ್ಲ. ಇಂಥಲ್ಲಿ ಕೆಳವೃತ್ತಿಗಳ ಸ್ಥಿತಿ ಬೇರೆಯದಾಗಿರುತ್ತದೆ. ಸಾಂಪ್ರದಾಯಿಕವಾಗಿ ಮೇಲು ಜಾತಿಗೆ ಸೇರಿದವರು ಅಕಸ್ಮಾತ್ ಕೆಳ ವೃತ್ತಿಗಳೆಡೆಗೆ ಪ್ರವೇಶಲ್ಪಟ್ಟಿದ್ದರೂ ಮತ್ತೆ ಅವರು ಮೇಲು ವರ್ಗದ ವೃತ್ತಿಗಳೆಡೆಗೆ ತುಡಿಯುತ್ತಿರುತ್ತಾರೆ. ಹಾಗೆಯೇ ಇವರೊಂದಿಗೆ ಇರುವ ಸಾಂಪ್ರದಾಯಿಕ ಕೆಳಜಾತಿಗಳವರೂ ಸಹ. ಅಂಥಲ್ಲಿ ಮತ್ತೆ ಕೆಳವೃತ್ತಿಗಳನ್ನು ಕೈಗೊಳ್ಳುವವರ ಸಂಖ್ಯೆ ಕೊರತೆಯಾಗಿ ನಿರುದ್ಯೋಗದ ವಾತಾವರಣ ಉಂಟಾಗಿ ಬಿಡುತ್ತದೆ. ಮೇಲು ಎನ್ನಲಾದ ಔದ್ಯೋಗಿಕ ಕ್ಷೇತ್ರದಲ್ಲಾದರೋ ಈ ಎಲ್ಲರ ಅಪೇಕ್ಷೆ ತೀರುಸುವಷ್ಟು ಪ್ರಮಾಣದ ಉದ್ಯೋಗ ಇರುತ್ತದೆ ಎನ್ನಲಾಗದು. ಅಂಥಲ್ಲಿ ನಿರುದ್ಯೋಗ ತಾಂಡವವಾಡುವುದು ಸಹಜ. ಹೀಗಿರುವಾಗ ಬಹು ಸುಲಭವಾಗಿ 'ದೈಹಿಕ ದುಡಿಮೆಗೆ ವಿದ್ಯಾವಂತರು ಸಿದ್ಧರಾಗಬೇಕು; ಕೆಳವೃತ್ತಿಗಳನ್ನು ಕೈಗೊಳ್ಳಬೇಕು' ಎಂಬ ಸಲಹೆಯನ್ನೇನೋ ಕೊಡಬಹುದು. ಆದರೆ ಒಟ್ಟೂ ಸಮಾಜದಲ್ಲಿ ಶ್ರಮ ಗೌರವದ ವಾತಾವರಣ ಕಂಡು ಬರದೆ ಈ ರೀತಿ ಸಲಹೆ ಕೊಡುವುದು ಕ್ರೌರ್ಯವಾಗುತ್ತದೆ. ಏಕೆಂದರೆ ವೃತ್ತಿ ಘನತೆಯಿಂದ ಬಾಳಬೇಕೆಂಬ ಅಪೇಕ್ಷೆ ಎಲ್ಲರಿಗೂ ಸಹಜ. ಅಂಥಲ್ಲಿ ಆ ಸಹಜ ಅಪೇಕ್ಷೆಯನ್ನು ಅಲ್ಲಗಳೆಯುವುದು ಕ್ರೌರ್ಯವಲ್ಲದೆ ಬೇರೇನಲ್ಲ. ಬದಲಿಗೆ ಒಟ್ಟು ಸಮಾಜದಲ್ಲಿ ಶ್ರಮ ಗೌರವ ಕಾಣಿಸುವಂಥ ಪ್ರಯತ್ನಕ್ಕೆ ತೊಡಗಬೇಕಾದ್ದು ಅಗತ್ಯ.

ಮಹಿಳೆಯರ ಕುರಿತಾಗಿನ ನಮ್ಮ ಸಾಂಪ್ರದಾಯಿಕ ತಿಳಿವಳಿಕೆಗಳು ಆಕೆ ಔದ್ಯೋಗಿಕ ಕ್ಷೇತ್ರಕ್ಕೆ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುವಂಥದೇನೂ ಅಲ್ಲ. ಶ್ರಮ ವಿಭಜನೆಯ ತತ್ವ ಇಲ್ಲಿಯೂ ಸಹ ಕೆಲಸ ಮಾಡಿ ಮಹಿಳೆ ಗೃಹ ಕೃತ್ಯಗಳಿಗೆ ಸೀಮಿತವಾಗಿರಬೇಕು. ಆದರೆ ಇಂದಿನ ಕಾಲ ಸ್ಥಿತಿಯಲ್ಲಿ ಬೆಳೆಯುತ್ತಿರುವ ಅರ್ಥ ವ್ಯವಸ್ಥೆಯಲ್ಲಿ ಪುರುಷನೊಬ್ಬನ ತೊಡಗುವಿಕೆ ಮಾತ್ರ ಸಾಕಾದೀತು ಎನ್ನುವಂತಿಲ್ಲ. ಅಲ್ಲದೆ ಮಹಿಳಾ ಶೋಷಣೆಗೆ ಕಾರಣೀಭೂತವಾಗುವ ನಾನಾ ಅಂಶಗಳಲ್ಲಿ ಆಕೆ ಆರ್ಥಿಕ ಪರಾವಲಂಬಿಯಾಗಿರುವುದೂ ಒಂದು ಕಾರಣ. ಇಂಥಲ್ಲಿ ಆರ್ಥಿಕ ಸುಭದ್ರತೆಗಾಗಿ ಹಾಗೂ ಮಹಿಳಾ ಶೋಷಣೆಯನ್ನು ನಿವಾರಿಸುವ ಪ್ರಯತ್ನವಾಗಿ ಮಹಿಳೆಯರು ಅರ್ಥ ವ್ಯವಸ್ಥೆಯಲ್ಲಿ ತೊಡಗಿಕೊಳ್ಳುವುದು ಅಗತ್ಯವಾಗುತ್ತದೆ. ಆದರೆ ಸಾಂಪ್ರದಾಯಿಕ ನಂಬಿಕೆಯ ತಡೆಗೋಡೆಯೊಂದು ಮಹಿಳೆಯರಿಗೆ ಶಿಕ್ಷಣವನ್ನು ವಂಚಿಸುವಲ್ಲಿ, ಹೆಣ್ಣು ಮಗುವಿನ ಆರೋಗ್ಯದ ಕುರಿತಾದ ಕಾಳಜಿಯಲ್ಲಿ, ಆಕೆ ತನ್ನ ಬದುಕಿನ ಬಗ್ಗೆ ತೆಗೆದುಕೊಳ್ಳಬೇಕಾದ ನಿರ್ಧಾರವನ್ನು ವಿಫಲಗೊಳಿಸುವಲ್ಲಿ ಸಾಕಷ್ಟು ಮಟ್ಟಿಗೆ ಕಾರ್ಯನಿರ್ವಹಿಸುತ್ತವೆ. ಮಹಿಳೆಯರ ಶೀಲದ ಕುರಿತಾದ ಅತಿರೇಕದ ಪಾವಿತ್ರ್ಯ ದೃಷ್ಟಿ ಹಾಗೂ ಪುರುಷರ ಶೀಲಕ್ಕೆ ಅಂತಹದೇ ಮಹತ್ವ ದೊರೆಯದಿರುವ ಸನ್ನಿವೇಶದಲ್ಲಿ ಲೈಂಗಿಕ ಪಾವಿತ್ರಹರಣವಾಗುವ ಹಲವು ನಡವಳಿಕೆಗಳು ಕಂಡು ಬರುತ್ತಿವೆ. ಇವೆಲ್ಲ ಮಹಿಳೆಯರನ್ನು ಮತ್ತೆ ಮತ್ತೆ ಶೀಲದ ಹೆಸರಿನಲ್ಲಿ ಶೋಷಿಸುತ್ತಾ ಮನೆಯೊಳಗೆ ಕೂಡಿಹಾಕುವ ಸಂಪ್ರದಾಯವನ್ನು ಪ್ರಚೋದಿಸಿ ಬಿಡಬಲ್ಲವು.

ಇಂಥಲ್ಲಿ ಮಹಿಳೆಯರ ಗೃಹಕೃತ್ಯಗಳು ಆರ್ಥಿಕ ಉದ್ಯೋಗವೆಂದು ಪರಿಗಣಿಸಲ್ಪಟ್ಟಿಲ್ಲ ಹಾಗೂ ದೇಶದ ಒಟ್ಟಾರೆ ನಿರುದ್ಯೋಗಿಗಳನ್ನು ಪರಿಗಣಿಸುವಾಗ ಮಹಿಳೆಯರೂ ಅದರಲ್ಲಿ ಸೇರಿಕೊಳ್ಳುತ್ತಾರೆ ಎಂಬುದು ಗಮನಾರ್ಹ ಸಂಗತಿ. ಇದರಿಂದಾಗಿ ನಿರುದ್ಯೋಗವನ್ನು ನಿವಾರಿಸಲು ತೊಡಕುಂಟಾಗಿ ಬಿಡುತ್ತದೆ.

ಮಹಿಳೆಯರ ಸ್ಥಿತಿಗತಿಗಳೊಂದಿಗೆ ತಳುಕು ಹಾಕಿಕೊಂಡಿರುವಂಥದು ಜನಸಂಖ್ಯಾ ಸಮಸ್ಯೆ. ಹತೋಟಿ ಮೀರಿ ಮುನ್ನಡೆಯುವ ಜನಸಂಖ್ಯೆ, ದೇಶದ ನಿರುದ್ಯೋಗಕ್ಕೆ ಬಹುದೊಡ್ಡ ಮಟ್ಟಿನ ಕಾರಣವಾಗಿದೆ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ನಮ್ಮ ಸಾಂಪ್ರದಾಯಿಕ ವ್ಯವಸ್ಥೆ ಜನಸಂಖ್ಯಾ ನಿಯಂತ್ರಣವನ್ನು ಒಪ್ಪಿಕೊಳ್ಳುವಂಥದೇನಲ್ಲ. ಅಂಥಲ್ಲಿ ಸಾಂಪ್ರದಾಯಿಕ ಚಿಂತನೆಯನ್ನು ಈ ಒಂದು ವಿಷಯದ ಮಟ್ಟಿಗಾದರೂ ಒಪ್ಪಿಕೊಳ್ಳುವ ಜನರು ಜನಸಂಖ್ಯಾ ನಿಯಂತ್ರಮಕ್ಕೆ ಸಿದ್ಧರಾಗಲಾರರು. ಅದರಿಂದಾಗಿ ಜನಿಸಿದ ಮಕ್ಕಳಿಗೆ ಯೋಗ್ಯ ಆಹಾರ, ಶಿಕ್ಷಣ, ಉದ್ಯೋಗವನ್ನು ಕಲ್ಪಿಸಿಕೊಡಲಾಗದೆ ಆರ್ಥಿಕ ಪ್ರಗತಿ ಹಿನ್ನಡೆ ಅನುಭವಿಸಬೇಕಾಗುತ್ತದೆ. ನಿಜವಾಗಿಯಾದರೂ ಇಂಥ ಸಂಪ್ರದಾಯ ಹುಟ್ಟಿಕೊಂಡ ಕಾಲದಲ್ಲಿ ಜನಸಂಖ್ಯೆಯ ಅವಶ್ಯಕತೆ ಇತ್ತು. ವೇದಕಾಲೀನ ನಾಗರಿಕತೆಯ ಸ್ಥಿತಿಯಲ್ಲಿ ಸಾಮುದಾಯಿಕ ಹೋರಾಟ, ಕ್ರೂರ ಮೃಗಗಳ ಹಾವಳಿ, ವೈದ್ಯಕೀಯ ಸೌಲಭ್ಯಗಳ ಕೊರತೆ ಮುಂತಾದ ಕಾರಣಗಳಿಂದಾಗಿ ಜನಸಂಖ್ಯೆ ನಷ್ಟವಾಗುತ್ತಿತ್ತು.

ಅದಕ್ಕಾಗಿ ಜನಸಂಖ್ಯೆಯನ್ನು ಹೆಚ್ಚಿಸುವ ಅವಶ್ಯಕತೆ ಕಂಡು ಬಂದು ಪ್ರಜೋತ್ಪತ್ತಿಗೆ ಒಂದು ಧಾರ್ಮಿಕ ಪಾವಿತ್ರ್ಯದ ಕಲ್ಪನೆ ಒದಗಿಸಲಾಯಿತೆಂದು ತೋರುತ್ತದೆ. ಅದು ಎಷ್ಟರ ಮಟ್ಟಿಗೆ ಗಾಢವಾಗಿತ್ತೆಂದರೆ, ಕೃಷ್ಣ ಯಜುರ್ವೇದ, ಶುಕ್ಲ ಯಜುರ್ವೇದಗಳು ಸಾಮೂಹಿಕ ಲೈಂಗಿಕ ಕ್ರಿಯೆಯನ್ನು ಉಲ್ಲೇಖಿಸಿದ ಉದಾಹರಣೆ ಇದೆ. ಬಹುಶಃ ಆ ಕಾಲದಲ್ಲಿ ಪ್ರಜೋತ್ಪತ್ತಿಗೆ 'ಇದ್ದಂಥ' ಪ್ರಾಮುಖ್ಯತೆಯೋ ಪಾವಿತ್ರ್ಯವೋ, ಶೀಲದ ಕುರಿತಾದ ಕಲ್ಪನೆಗೆ ಇರಲಿಲ್ಲವೆಂದು ತೋರುತ್ತದೆ.

ಅದೇನೇ ಇದ್ದರೂ ಹುಟ್ಟಲಿರುವ ಜೀವವನ್ನು ನಾಶಪಡಿಸಬಾರದು ಎಂಬ ನಂಬಿಕೆ ಬೆಳೆದು ಬಂದಿರುವಲ್ಲಿ ಜೀವಪರ ದೃಷ್ಟಿಕೋನವೊಂದರ ಅಸ್ತಿತ್ವ ಇರುವುದನ್ನು ಮರೆಯಲಾಗದು. ಇಂದಿನ ಸ್ಥಿತಿಯಲ್ಲಿ ಹುಟ್ಟಲಿರುವ ಮಗುವನ್ನು ನಾಶಪಡಿಸುವುದು ಅಲ್ಲವಾದರೂ, ಮಗು ಹುಟ್ಟದಂತೆ ಮುನ್ನೆಚ್ಚರಿಕೆ ವಹಿಸುವುದೇ ಆದರೂ ಸೈದ್ಧಾಂತಿಕವಾಗಿ ಅದು ಜೀವ ಪರದೃಷ್ಟಿಕೋನಕ್ಕೆ ಕೊಂಚ ವಿಮುಖ ನಡವಳಿಕೆಯಾಗುತ್ತದೆ. ಆದರೆ ಈವತ್ತಿನ ಸ್ಥಿತಿಯಲ್ಲಿ ನಮಗದು ಅನಿವಾರ್ಯ. ಹುಟ್ಟಲಿರುವ ಮಕ್ಕಳ ಬಗ್ಗೆ ಚಿಂತಿಸುತ್ತಾ ಹುಟ್ಟಲಿರುವ ಮಕ್ಕಳಿಗೆ ಶಿಕ್ಷಣ, ಪೌಷ್ಠಿಕ ಆಹಾರ, ವೈದ್ಯಕೀಯ ಸೌಲಭ್ಯ, ಉದ್ಯೋಗಗಳನ್ನು ಕೊಡಿಸಿ ಮೂಲಭೂತ ಅವಶ್ಯಕತೆಯೊಂದನ್ನು ಪೂರೈಸದಿರುವುದು ಯೋಗ್ಯ ವಿಚಾರ ಎನ್ನಲಾಗದು. ಆದ ಕಾರಣ ಜನನ ನಿಯಂತ್ರಣವನ್ನು ಸ್ವೀಕರಿಸುವುದು ಸುಯೋಗ್ಯ ಮಾರ್ಗವಾಗುತ್ತದೆ.

ಜನನ ನಿಯಂತ್ರಣಕ್ಕೂ ಮಹಿಳೆಯರ ಸ್ಥಿತಿಗತಿಗಳಿಗೂ ನಡುವೆ ಸಂಬಂಧವಿದೆ. ಅಮರ್ತ್ಯಸೇನ್ ಹೇಳುವಂತೆ ಮಹಿಳಾ ಶಿಕ್ಷಣವನ್ನು, ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮ ಪಡಿಸುವ ಮೂಲಕ ಜನನ ನಿಯಂತ್ರಣವನ್ನು ಐಚ್ಛಿಕ ವಿಧಾನದ ಮೂಲಕ ಸಾಧಿಸಲು ಸಾಧ್ಯವಿದೆ. ಅದಕ್ಕೆ ಅವರು ಕೇರಳ ರಾಜ್ಯವನ್ನು ಉದಾಹರಿಸುತ್ತಾರೆ.

ಆದರೆ ಕೇರಳ ರಾಜ್ಯದ ಸ್ಥಿತಿ ಎಲ್ಲಾರಾಜ್ಯಗಳಲ್ಲೂ ಇಲ್ಲ. ಮಹಿಳೆಯರ ಕುರಿತಾದ ಒಟ್ಟೂ ದೃಷ್ಟಿಕೋನ ಸಮಾನತೆಯ ತಾತ್ವಿಕ ಹಿನ್ನೆಲೆಯಲ್ಲಿ ಬದಲಾಗುವ ತನಕ ಮಹಿಳಾ ಶಿಕ್ಷಣ, ಸಮಾಜಿಕ-ಆರ್ಥಿಕ-ರಾಜಕೀಯ ಚಟುವಟಿಕೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು ಕಷ್ಟಕರ. ಮಹಿಳೆಯರು ಈ ಸ್ಥಾನಕ್ಕೆ ಏರುವ ತನಕ ಜನನ ನಿಯಂತ್ರಣ ಯಶಸ್ವಿಯಾದೀತು ಎನ್ನಲು ಬರುವುದಿಲ್ಲ (ಸ್ವತಃ ಪುರುಷನೇ ಜನನ ನಿಯಂತ್ರಣದ ಪರವಾಗಿದ್ದರೆ ಆ ಮಾತು ಬೇರೆ). ಏಕೆಂದರೆ ಜನತಾಂತ್ರಿಕ ವ್ಯವಸ್ಥೆಯೊಂದರ ಪ್ರಭುತ್ವ ಜನರ ತೀರಾ ವೈಯಕ್ತಿಕ ವಿಷಯದ ಮೇಲೆ, ಕಡಿವಾಣ ಹಾಕುವುದು ಸುಲಭವಲ್ಲ. ಒತ್ತಡದ ಮೂಲಕ ಜನನ ನಿಯಂತ್ರಣ ಸಾಧಿಸ ಹೊರಟರೆ ಪ್ರಭುತ್ವ ಜನರ ವಿಶ್ವಾಸವನ್ನು, ಜನರ 'ಮತ'ಗಳನ್ನು ಕಳೆದುಕೊಳ್ಳಬೇಕಾಗಬಹುದು. ಪ್ರಾಯಶಃ ಯಾವ ಪ್ರಭುತ್ವಗಳೂ ಜನರ 'ಮತ'ದಲ್ಲಿರುವ ತಮ್ಮ ಹಿತಾಸಕ್ತಿಯನ್ನು ಕಳೆದುಕೊಳ್ಳಲಾರವು. ಇಂಥ ಒಂದು ಸ್ಥಿತಿಯಲ್ಲಿ ಮಿತಿಮೀರಿ ಹೆಚ್ಚುತ್ತಿರುವ ಜನಸಂಖ್ಯೆ ನಿರುದ್ಯೋಗವನ್ನು ಹೆಚ್ಚಿಸುತ್ತದೆ. (ಅಂದರೆ ಕೇರಳ ರಾಜ್ಯದಲ್ಲಿ ನಿರುದ್ಯೋಗವಿಲ್ಲವೆಂದಲ್ಲ. ಏಕೆಂದರೆ ನಿರುದ್ಯೋಗಕ್ಕೆ ಇದರ ಹೊರತಾದ ಹಲವು ಕಾರಣಗಳೂ ಇವೆ).

ಯಾವತ್ತೂ ಭಾರತೀಯ ಅರ್ಥ ವ್ಯವಸ್ಥೆಯಲ್ಲಿ ಕಂಡು ಬಂದಿರುವಂಥದು ಉದ್ಯಮ ಸಾಹಸದ ಕೊರತೆ. ಬದುಕಿನ ಅಸಹಾಯಕತೆಗೆ ದೈವವೊಂದನ್ನೇ ಮೊರೆ ಹೋಗುವ, ಅದೃಷ್ಟವನ್ನೇ ನಂಬಿ ಕುಳಿತುಕೊಳ್ಳುವ ಮನೋಭಾವ ನಮ್ಮಲ್ಲಿ ಜಾಸ್ತಿ ಇದೆ. ಅದೇನೇ ನೋವು, ಸಂಕಟಗಳಿದ್ದರೂ 'ಹಣೆ ಬರಹ'ವೆಂದು ಸಹಿಸಿಕೊಳ್ಳುವ, ಮುಂದಿನ ಜನ್ಮದಲ್ಲಿ ಒಳ್ಳೆಯದಾದೀತೆಂದು ನಿರೀಕ್ಷಿಸಿ ಎಲ್ಲವನ್ನೂ ಅನುಭವಿಸಿಕೊಂಡು ಬಾಳುವ ಪ್ರವೃತ್ತಿ ನಮ್ಮಲ್ಲಿದೆ. ಬಲಾಢ್ಯರನ್ನು ಪ್ರಶ್ನಿಸದಿರುವ ದಾಸ್ಯ ಮನೋಧರ್ಮವಿದೆ. ಉಳ್ಳವರನ್ನು ಯೋಗ್ಯತೆ-ಅಯೋಗ್ಯತೆಯನ್ನು ಪರಿಗಣಿಸದೆ ಹೊತ್ತುಮೆರೆಸುವ ಪರಿಪಾಠವಿರುವಂತೆ ಆ ಮೂಲಕ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವ ನಡವಳಿಕೆಯೂ ಇದೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ನೊಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಗುನ್ನಾರ್ ಮಿರ್‌ಡಾಲ್ ಹೇಳುವಂತೆ, 'ಭಾರತದ ಜನರು ಕ್ರಾಂತಿಯಿಂದ ತಮಗೆ ದೊರಕಬಹುದಾದ ಸುಖದ ಅರಿವು ಹೊಂದಿಲ್ಲ...ಇಲ್ಲಿನ ಹಲವಾರು ಆರ್ಥಿಕ ದೋಷಗಳಿರುವುದು ಸಂಸ್ಕೃತಿಯಲ್ಲಿ. ಅಂಥಲ್ಲಿ ಭಾರತಕ್ಕೆ ಸಾಂಸ್ಕೃತಿಕ ಸುಧಾರಣೆಯೊಂದರ ಅಗತ್ಯವಿದೆ".

ಅಂಥ ಸುಧಾರಣೆಯಾಗದೆ ದುರ್ಬಲರು ದೃಢ ರಾಗುವುದು ಕಷ್ಟ. ಆದರೆ ಆ ದೇಶದ ಹಲವಾರು ಸಾಂಸ್ಕೃತಿಕ ಭಿನ್ನತೆಗಳನ್ನು ಬಳಸಿಕೊಂಡು ದುರ್ಬಲರನ್ನು ಸಂಘಟಿತರಾಗದಂತೆ ಮಾಡುವ ವ್ಯವಸ್ಥೆಯೂ ನಮ್ಮಲ್ಲಿದೆ. ಇದರಿಂದ ಏನಾಗುತ್ತದೆ ಎಂದರೆ ಬದುಕನ್ನು ಸವಾಲಾಗಿ ಸ್ವೀಕರಿಸಿ ತಮ್ಮ ಉದ್ಯೋಗಗಳನ್ನು ತಾವೇ ಸೃಷ್ಟಿಸಿಕೊಳ್ಳುವ ಉದ್ಯಮ ಸಾಹಸದ ಅಭಾವ ನಿರುದ್ಯೋಗವನ್ನು ಯಥಾ ರೀತಿಯಲ್ಲಿ ಉಳಿಸಲು ಕಾರಣವಾಗುತ್ತದೆ.

ಯಾವತ್ತೂ ಭಾರತೀಯ ಅರ್ಥ ವ್ಯವಸ್ಥೆಯಲ್ಲಿ ಕಂಡು ಬಂದಿರುವಂಥದು ಉದ್ಯಮ ಸಾಹಸದ ಕೊರತೆ. ಬದುಕಿನ ಅಸಹಾಯಕತೆಗೆ ದೈವವೊಂದನ್ನೇ ಮೊರೆ ಹೋಗುವ, ಅದೃಷ್ಟವನ್ನೇ ನಂಬಿ ಕುಳಿತುಕೊಳ್ಳುವ ಮನೋಭಾವ ನಮ್ಮಲ್ಲಿ ಜಾಸ್ತಿ ಇದೆ. ಅದೇನೇ ನೋವು, ಸಂಕಟಗಳಿದ್ದರೂ 'ಹಣೆ ಬರಹ'ವೆಂದು ಸಹಿಸಿಕೊಳ್ಳುವ, ಮುಂದಿನ ಜನ್ಮದಲ್ಲಿ ಒಳ್ಳೆಯದಾದೀತೆಂದು ನಿರೀಕ್ಷಿಸಿ ಎಲ್ಲವನ್ನೂ ಅನುಭವಿಸಿಕೊಂಡು ಬಾಳುವ ಪ್ರವೃತ್ತಿ ನಮ್ಮಲ್ಲಿದೆ. ಬಲಾಢ್ಯರನ್ನು ಪ್ರಶ್ನಿಸದಿರುವ ದಾಸ್ಯ ಮನೋಧರ್ಮವಿದೆ. ಉಳ್ಳವರನ್ನು ಯೋಗ್ಯತೆ-ಅಯೋಗ್ಯತೆಯನ್ನು ಪರಿಗಣಿಸದೆ ಹೊತ್ತುಮೆರೆಸುವ ಪರಿಪಾಠವಿರುವಂತೆ ಆ ಮೂಲಕ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವ ನಡವಳಿಕೆಯೂ ಇದೆ.

ಈ ರೀತಿಯ ಒಂದು ಸ್ಥಿತಿ ಯಾಕೆ ಬಂತೆಂಬುದನ್ನು ಭಾರತೀಯ ಜೀವನ ಸ್ವರೂಪದಲ್ಲಿ ಬೆಳೆದು ಬಂದ ತಾತ್ವಿಕ ಸ್ವರೂಪವನ್ನು ಗಮನಿಸಬೇಕು. ಪಾಶ್ಚಾತ್ಯ ತತ್ವಜ್ಞಾನ ತನ್ನ ಮೂಲ ಸ್ವರೂಪದಲ್ಲೇ ಜೀವನದ ಹಲವಾರು ಮಜಲುಗಳನ್ನು ವಿಭಜಿಸಿ, ವಿಶ್ಲೇಷಿಸಿ, ಪ್ರತ್ಯೇಕವಾಗಿ ನೋಡಬಲ್ಲಂಥದು. ಅದರಿಂದ ಅಲ್ಲಿನ ಅಧ್ಯಯನ ಕ್ಷೇತ್ರಗಳು ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ವಿಜ್ಞಾನ...ಹೀಗೆ ನಾನಾ ಶಾಖೆಗಳಾಗಿ ಬೆಳೆಯಲು ಸಹಾಯಕವಾದಂತೆ ಬದುಕಿನ ಭೌತಿಕ ಪರಿವ್ಯಾಪ್ತಿಯನ್ನು ಉತ್ತಮ ಪಡಿಸಿಕೊಳ್ಳುವ ದೃಷ್ಟಿಕೋನವೂ ಕಾಣಿಸಿಕೊಂಡಿದೆಯೆಂದರೆ ತಪ್ಪಾಗಲಾರದು.

ಭಾರತೀಯ ತತ್ವಜ್ಞಾನ ಹೀಗಲ್ಲ. ಅದು ಇಡೀ ಬದುಕನ್ನು ಮಾತ್ರವಲ್ಲದೆ ಬದುಕಿಗೆ ಪೂರಕವಾಗುವ ಅಲೌಕಿಕ ನೆಲೆಯ ಚಿಂತನೆಯನ್ನು ಸೇರಿದಂತೆ ಒಟ್ಟೂ ವ್ಯವಸ್ಥೆಯನ್ನು ಸಮಗ್ರವಾಗಿ ಗ್ರಹಿಸುವಂಥದು. ಹಾಗಾಗಿ ನಮ್ಮಲ್ಲಿ ಪ್ರತ್ಯ-ಪ್ರತ್ಯೇಕ ಅಧ್ಯಯನ ಶಾಖೆಗಳು ವ್ಯವಸ್ಥಿತವಾಗಿ ಮೂಡಿ ಬಂದಿಲ್ಲವೆಂದರೆ ತಪ್ಪಾಗಲಾರದು. ತರ್ಕಕ್ಕೆ ಒಡ್ಡಲಾಗದ ಹಲವಾರು ಭಾವನಾತ್ಮಕ ವಿಚಾರಗಳು, ಅಲೌಕಿಕವಾದಿ ನೆಲೆ ಒಟ್ಟೂ ಬದುಕಿನೊಂದಿಗೆ ಬೆರೆಯಲ್ಪಟ್ಟು ವಿಮರ್ಶಾಪ್ರಜ್ಞೆಯನ್ನು ತೆಳುವಾಗಿಸಲು ಸಾಧ್ಯವಾದುದು ಹೀಗೆಯೇ ಇರಬೇಕು. ಅದರಿಂದಾಗಿ ಇಲ್ಲಿ ಭಾವನಾತ್ಮಕ ನೆಮ್ಮದಿಗೆ ಸಿಕ್ಕಂತ ಪ್ರಾಮುಖ್ಯ, ಅಲೌಕಿಕ ನಂಬಿಕೆಗೆ ಸಿಕ್ಕ ಪ್ರಾಧಾನ್ಯ ಲೌಕಿಕ ಅವಶ್ಯಕತೆಗಳಿಗೆ ಸಿಕ್ಕಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಅಂದರೆ ಅದು ನಿಷ್ಪ್ರಯೋಜಕವೆಂದಲ್ಲ. ಬದುಕಿಗೆ ಮೃದುತ್ವದ ಮೆರುಗು ಕೊಡಲು ಇವೆಲ್ಲವೂ ಸಹಾಯಕವೇ. ಆದರೆ ಮೃದುತ್ವದೊಂದಿಗೆ ಇರಬೇಕಾದ ದೃಢತೆಯನ್ನು ಕೊಡಲು ಇವು ವಿಫಲವಾಗಿರುವಂತಿದೆ. ಏಕೆಂದರೆ ಭಾರತೀಯ ಸಮಾಜದ ಮೃದುತ್ವವನ್ನು ದುರುಪಯೋಗಪಡಿಸಿಕೊಂಡು ತಮ್ಮ ಲೌಕಿಕ ದುರಾಸೆಯನ್ನು ಪೂರೈಸಿಕೊಳ್ಳುವ ವರ್ಗ ಇಲ್ಲಿ ಮೊದಲಿನಿಂದಲೂ ಇತ್ತು. ಈಗಲೂ ಇದೆ. ಅದನ್ನು ಅನ್ಯ ದೇಶೀಯರು ತಮ್ಮ ಸ್ವಾರ್ಥ ಸಾಧನೆಗಾಗಿ ಬಳಸಿಕೊಂಡದ್ದೂ ಇದೆ. ಈಗ ಬಳಸಿಕೊಳ್ಳುತ್ತಲೂ ಇದ್ದಾರೆ. ಈ ಒಂದು ಶಕ್ತಿ ದುರ್ಬಲ ವರ್ಗದ ಮೃದುತ್ವಕ್ಕೆ ದೃಢತೆಯನ್ನು ಕಂಡುಕೊಳ್ಳದಂತೆ ತಡೆಯಲು ನಾನಾ ರೀತಿಯ ತಂತ್ರಗಳನ್ನು ಬಳಸಿಬಿಡುತ್ತವೆ. ಅದು ಉದ್ಯಮ ಸಾಹಸದ ಅಭಾವವಾಗಿ ಕಾಣಿಸಿಕೊಂಡು ನಿರುದ್ಯೋಗವನ್ನು ಉಳಿಸಿಬಿಡುತ್ತದೆ.

ಇದರಿಂದ ಉದ್ಭವವಾಗಿರುವಂಥದು ಆರ್ಥಿಕ ಅಶಿಸ್ತು ಮತ್ತು ಅರ್ಥ ವ್ಯವಸ್ಥೆಯ ಸೂಕ್ಷ್ಮ ಒಳನೋಟದ ತಿಳಿವಳಿಕೆಯ ಅಭಾವ. ಸಾಂಪ್ರದಾಯಿಕ ಕೃಷಿ ಪ್ರಧಾನ ಭಾರತೀಯ ಜೀವನ ಶೈಲಿಯಲ್ಲಿ ಆರ್ಥಿಕತೆ ಜೀವನಕ್ಕೆ ಪೂರಕವೇ ಹೊರತು ಅದಕ್ಕೆ ಪ್ರಮುಖ ಸ್ಥಾನಮಾನ ಲಭ್ಯವಾದಂತಿಲ್ಲ. ಅಂಥಲ್ಲಿ ಜೀವನ ನಿರ್ವಹಣೆಯ ಮಟ್ಟಿಗಷ್ಟೇ ಆರ್ಥಿಕತೆಯ ಅವಶ್ಯಕತೆ. ಅದರಿಂದಾಗಿ ಆರ್ಥಿಕ ಅಂಶಗಳ ಬಗ್ಗೆ ಕೂಲಂಕುಷವಾಗಿ ತಿಳಿಯುವ

> ಆರ್ಥಿಕ ಚಿಂತನೆಯ ಅತಿರೇಕ ಕಾಣಿಸಿಕೊಂಡಾಗ ವ್ಯಕ್ತಿ ತೀರಾ ಸಂಕುಚಿತನಾಗುತ್ತಾನೆ. ದುರಾಶಾಪೀಡಿತ ಕೂಡಿ ಹಾಕುವ ಮನೋವೃತ್ತಿ ಯುವನಾಗುತ್ತಾನೆ. ಸಹಬಾಳ್ವೆ ಸಹಕಾರದ ಸಾಂಪ್ರದಾಯಿಕ ಆಶಯಗಳು ಕಳೆದುಹೋಗುತ್ತವೆ. ಈ ಚಿಂತನೆ ಸಮಗ್ರ ಜನಜೀವನದಲ್ಲಿ ಕಂಡು ಬಂದಾಗ ಸೃಷ್ಟಿಯಾಗುವ ವಾತಾವರಣ ಬೇರೆ. ಆದರೆ ನಮ್ಮಲ್ಲಿ ಅದು ಹಾಗಿಲ್ಲ. ಒಂದು ಕಡೆ ಈ ತೆರನ ಮನೋವೃತ್ತಿ ಇರುತ್ತಲೇ ಇನ್ನೊಂದೆಡೆ ಸಾಂಪ್ರದಾಯಿಕ ಜೀವನದ ಬಗ್ಗೆ ಒಲವು ಉಳ್ಳ ಜನರು, ಮುಗ್ಧರು ವಿಪುಲ ಸಂಖ್ಯೆಯಲ್ಲಿದ್ದಾರೆ. ಅಂಥಲ್ಲಿ ಈ ಜನರನ್ನು ಅತಿರೇಕ ಆರ್ಥಿಕವಾದಿಗಳಾದ ಮಂದಿ ಸುಲಭದಲ್ಲಿ ಶೋಷಿಸಬಲ್ಲರು. ಅದರಿಂದಾಗಿ ಬಹು ಮಂದಿಯ ಮಾನವ ಉದ್ಯೋಗಗಳು ಕಸಿಯಲ್ಪಡುತ್ತದೆ. ಹಾಗೂ ಉದ್ಯೋಗಕ್ಕೆ ಸಮಾನಾದ ವೇತನ ಸಂದಾಯವಾಗದೆ ಬಹುಮಂದಿ ನಿಕೃಷ್ಟ ಜೀವನಮಟ್ಟದತ್ತ ಸರಿಯಬೇಕಾಗುತ್ತದೆ.

ಉತ್ಸಾಹ ನಮ್ಮ ಜನರಲ್ಲಿ ಬಹಳ ಕಡಿಮೆ ಇದೆ. ಹಾಗಾಗಿ 'ಬದುಕು ಹೇಗೆ ಲಭ್ಯವಾಗುತ್ತದೋ ಅದನ್ನು ಹಾಗೆಯೇ ಸ್ವೀಕರಿಸುವ' ಮನೋಧರ್ಮಕ್ಕೆ ಸಿಕ್ಕಂಥ ಪ್ರಾಶಸ್ತ್ಯ 'ಬದುಕನ್ನು ತನಗೆ ಬೇಕಾದಂತೆ ರೂಪಿಸಿಕೊಳ್ಳುವ' ಪ್ರಯತ್ನಕ್ಕೆ ಸಿಕ್ಕಿಲ್ಲ. ಇದು ಕೇವಲ ಶಿಕ್ಷಣದ ಕೊರತೆಯಿಂದ ಮೂಡಿ ಬಂದಿರುವ ವಿಚಾರವಲ್ಲ. ಹಾಗೆಂದರೆ ಉನ್ನತ ಶಿಕ್ಷಣವೂ ಸಹ ಬದುಕಿನಲ್ಲಿ ಆರ್ಥಿಕ ಜೀವನ ದೃಷ್ಟಿ ರೂಪಿಸಿಕೊಳ್ಳುವುದಕ್ಕೆ ಸಾಕಷ್ಟು ಸಹಯಾಕವಾಗಿಲ್ಲವೆಂದೇ ಹೇಳಬೇಕಾಗುತ್ತದೆ. ಭಾರತದ ತಾತ್ವಿಕ ಸ್ವರೂಪದಲ್ಲಿ ಸಮಗ್ರವಾಗಿ ಕೊಂಚ ಬದಲಾವಣೆಯಾಗದೆ ಆರ್ಥಿಕ ಜೀವನದೃಷ್ಟಿ ಹೊಂದುವುದು ಕಷ್ಟಸಾಧ್ಯ. (ಇಲ್ಲಿ ಸಮಗ್ರ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಏಕೆಂದರೆ ಆಧುನಿಕ ವ್ಯವಸ್ಥೆಯಲ್ಲಿ ಬಹುಮಂದಿಯ ವರ್ಗ ಆರ್ಥಿಕ ಜೀವನ ದೃಷ್ಟಿ ಹೊಂದದೆ ಇರುವಂತೆಯೇ ಕೆಲಮಂದಿಯ ವರ್ಗ ಅತಿರೇಕದ ಆರ್ಥಿಕ ದೃಷ್ಟಿ ಇಟ್ಟುಕೊಂಡು ದುರಾಶಾಪೀಡಿತವಾಗಿರುವುದು ಗಮನಾರ್ಹ ಸಂಗತಿ).

ಅಂದರೆ ಇಲ್ಲಿ ಭಾರತೀಯ ಸಾಂಪ್ರದಾಯಿಕ ಜೀವನದೃಷ್ಟಿಯಲ್ಲಿ ಆರ್ಥಿಕತೆಗೆ ವಿಶೇಷ ಮಹತ್ವ ಸಿಗದೆ ಇರುವುದು ದೋಷವೆಂದಲ್ಲ. ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಅದು ಸರಿ ಇದ್ದೀತು. ಏಕೆಂದರೆ ನಮ್ಮ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಆಸ್ತಿಯ ಮೇಲೆ ಸಾಮುದಾಯಿಕ ಒಡೆತನದ ಹಕ್ಕು ಇರುವುದಕ್ಕೆ ನಿದರ್ಶನಗಳಿವೆ. ಬೌದ್ಧರು ಹೇಳುವಂಥ 'ಸಂಘಂ ಶರಣಂಗಚ್ಛಾಮಿ' ಎಂಬ ಮಾತಿನಲ್ಲಿ ಸಾಮುದಾಯಿಕ ಒಡೆತನದ ಆಶಯವಿದೆ. ಭಾರತೀಯ ಕೂಡು ಕುಟುಂಬ ಪದ್ಧತಿಯಲ್ಲಿ ಸಮೂಹ ಜೀವನದ ಅಪೇಕ್ಷೆ ಇದೆ. ಇಲ್ಲಿನ ಕೊಡುಕೊಳ್ಳುವ ವ್ಯವಹಾರದಲ್ಲಿ, ದುರ್ಬಲರಿಗೆ ನೆರವಾಗಬೇಕು ಎಂಬ ಧಾರ್ಮಿಕ ಚಿಂತನೆ, ಪಾಪ-ಪುಣ್ಯಗಳ ಪರಿಕಲ್ಪನೆಯಲ್ಲಿ ಸಹಕಾರಿ ಮನೋಭಾವವಿದೆ. ಮಹಿಳೆಯರನ್ನು ಪುರುಷರ ಚರಾಸ್ತಿ ಎಂದು ಪರಿಗಣಿಸಲ್ಪಟ್ಟಿದ್ದ ಕಾಲದಲ್ಲಿ ಹೆಂಗಸರ ಮೇಲೆ ಸಾಮೂಹಿಕ ಒಡೆತನದ ಹಕ್ಕು ಇತ್ತು ಎನ್ನುವುದಕ್ಕೆ ಹಲವಾರು ನಿದರ್ಶಗಳಿವೆಯಾದಲ್ಲಿ ಇಲ್ಲಿ ಒಂದನ್ನಷ್ಟೇ ಗಮನಿಸಿದರೆ ಸಾಕಾದೀತು.

ಮಹಾಭಾರತದಲ್ಲಿ ಉದ್ದಾಲಕ-ಶ್ವೇತಕೇತು ಅವರ ಕಥೆ ಇದೆ. ಒಂದು ದಿನ ಶ್ವೇತಕೇತುವಿನ ಎದುರಿಗೆ ಒಬ್ಬ ಬ್ರಾಹ್ಮಣ ಆತನ ತಾಯಿಯನ್ನು ಹಿಡಿದೆಳೆದು ಸಮಾಗಮಕ್ಕಾಗಿ ಕರೆದೊಯ್ಯುತ್ತಾನೆ. ಆಗ ಶ್ವೇತಕೇತುವಿಗೆ ಸಂಕಟವಾಗುತ್ತದೆ. ಅದಕ್ಕೆ ಶ್ವೇತ ಕೇತುವಿನ ತಂದೆ, ಉದ್ದಾಲಕ ಹೀಗೆ ಹೇಳುತ್ತಾನೆ-"ಮಗನೇ ಕೋಪಗೊಳ್ಳಬೇಡ. ಇದು ನಮ್ಮ ಪರಂಪರೆಯಿಂದ ಬೆಳೆದು ಬಂದ ಆಚಾರ, ಗಾಳಿ, ನೀರಿನಂತೆ ಹೆಂಗಸರೂ ಸಹ ಎಲ್ಲರಿಗೂ ಅನುಭವ ಯೋಗ್ಯರಾಗಿರುವ ಅವರು ಯಾರೊಬ್ಬರ ಆಸ್ತಿಯಲ್ಲ. ಗಂಡಸರು ಈ ಹೆಂಗಸು ನನ್ನವಳೆಂದು ಹಕ್ಕಾಗಿ ಹಾಗೆಯೇ ಉಳಿಸಿಕೊಳ್ಳಲು ಸಾಧ್ಯವಿಲ್ಲ"

ಈ ಘಟನೆಯಲ್ಲಿ ಕಾಣಿಸಿರುವ, ಈವತ್ತು ನಾವು ತಕ್ಕುದಲ್ಲವೆನ್ನಬೇಕಾದ ಸ್ತ್ರೀ ಶೋಷಣೆ, ಸ್ತ್ರೀಯರನ್ನು ಆಸ್ತಿಯಂತೆ ಪರಿಗಣಿಸಿದ್ದು ತೀವ್ರ ಖಂಡನಾರ್ಹವೇ ಆದರೂ ಅದರಲ್ಲಿ ಸಾಮುದಾಯಿಕ ಒಡೆತನದ ಆಶಯವಿತ್ತು ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಇದನ್ನೆಲ್ಲ ಈಗ ಹೇಳುತ್ತಿರುವುದೇಕೆಂದರೆ ಈ ಎಲ್ಲ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿರುವ ಸಮಾಜ ಮುಖಿ ಚಿಂತನೆಯನ್ನು ಗುರುತಿಸುವುದಕ್ಕಾಗಿ ಆದರೆ ಸಾಂಪ್ರದಾಯಿಕ ಸ್ಥಿತಿಯ ಒಟ್ಟು ಬದುಕಿನಲ್ಲಿ ಬೆರೆತುಹೋದ ಇಂಥ ಆರ್ಥಿಕ ಆಶಯವನ್ನು ಪ್ರತ್ಯೇಕಿಸುವುದಕ್ಕೆ ಸಂಪ್ರದಾಯದ ಹಲವಾರು ವಿಗತಿಗಾಮಿ ನಡವಳಿಕೆಗಳು ಅಡ್ಡಬರುತ್ತವೆ. ಹೆಚ್ಚೇಕೆ? ಸ್ತ್ರೀಯರ ಮೇಲಿನ ಸಾಮೂಹಿಕ ಒಡೆತನವೆನ್ನುವಂಥದ್ದೇ ಅತ್ಯಂತ ದುರದೃಷ್ಟಕರ ಸಂಗತಿ. ಇಂಥಲ್ಲಿ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿರುವ ಹಲವಾರು ಆರ್ಥಿಕ ಚಿಂತನೆಗಳ ನಾನಾ ರೀತಿಯ ದೋಷಗಳನ್ನು ನಿವಾರಿಸಬೇಕಿದೆ. ಆ ಮೂಲಕ ಸಮಾಜ ಮುಖಿ ಆರ್ಥಿಕ ಚಿಂತನೆಯನ್ನು ಸ್ಪಷ್ಟಪಡಿಸಿಕೊಳ್ಳಬೇಕಿದೆ. ಹಾಗೆ ಸ್ಪಷ್ಟಪಡಿಸಿಕೊಂಡಾಗ ನಮಗೆ ದಕ್ಕುವುದು ಸಮಾಜವಾದಿ ಚಿಂತನೆಯಲ್ಲದೆ ಬೇರೇನಲ್ಲ.

ಈವತ್ತು ವ್ಯಕ್ತಿ ಮುಖಿ ಚಿಂತನೆಯ ಅತಿರೇಕದ ಸ್ವರೂಪವಾದ ಬಂಡವಾಳಶಾಹಿ ಚಿಂತನೆ ಸಾಮಾಜಿಕ ನ್ಯಾಯದ ಆಶಯವನ್ನು ಕುಂದಿಸುತ್ತಿರುವಾಗ ಸಮಾಜವಾದ ತನ್ನ ಅವಶ್ಯಕತೆಯನ್ನು ವಿಸ್ತರಿಸುತ್ತಲೇ ಹೋಗುತ್ತಿದೆ. ಆದ ಕಾರಣವೇ ಅದು ಹೆಚ್ಚು ಪ್ರಸ್ತುತವಾಗುವುದು. ಆದರೆ ಸಮಾಜವಾದದ ಬಗ್ಗೆ ಚಿಂತಿಸುವಾಗ ಒಂದಂಶವನ್ನು ಖಚಿತಪಡಿಸಿಕೊಳ್ಳಬೇಕು. ಯಾವುದೇ ರೀತಿಯ ನಮ್ಮ ಸಮಾಜಮುಖಿ ಚಿಂತನೆ ವ್ಯಕ್ತಿಯ ತೀರಾ ವೈಯಕ್ತಿಕ ಸ್ವಾತಂತ್ರ್ಯವನ್ನು ಅಂತರಂಗದ ಘನತೆಯನ್ನು, ಸಮಾಜದ ಹಿತಾಸಕ್ತಿಗಾಗಿ ಅಲ್ಲಗಳೆಯದಂತೆ ನೋಡಿಕೊಳ್ಳಬೇಕು. ಏಕೆಂದರೆ ಪ್ರತಿಯೊಂದನ್ನೂ ಸಮಾಜದ ದೃಷ್ಟಿಯಲ್ಲೇ ನೋಡುತ್ತಾ ವ್ಯಕ್ತಿಯನ್ನು ಅದರ ಒಂದು ಭಾಗವಾಗಿಯಷ್ಟೇ ಗಮನಿಸುವ (ಅಂದರೆ ವ್ಯಕ್ತಿಯ ಸ್ವತಂತ್ರ ಅಸ್ತಿತ್ವಕ್ಕೆ ಪ್ರಾಮುಖ್ಯತೆ ಕೊಡದ) ಒಂದು ವ್ಯವಸ್ಥೆ, ಅದೆಷ್ಟೇ ಮಹೋನ್ನತ ಆಶಯವಿಟ್ಟುಕೊಂಡಿದ್ದರೂ ಅದರ ಕುಸಿತಕ್ಕೆ ಇದೂ ಒಂದು ಕಾರಣವಾಗುತ್ತದೆ. ಅದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ವಿಶ್ವದ ನಿರ್ಗತಿಕ ವರ್ಗದ ನವೋದಯದ ಮುಂಬೆಳಕಾಗಿ ಗೋಚರಿಸಿದ ಸೋವಿಯತ್ ರಷ್ಯಾ ಇನ್ನೂ ಪೂರ್ಣ ಬೆಳಕು ಕೊಡುವ ಮುಂಚೆಯೇ 1991ರಲ್ಲಿ ಕುಸಿದು ಹೋಗಿ ಈವತ್ತು ಬಂಡವಾಳಶಾಹಿಗಳ ದುರಾಸೆಯನ್ನು ಹಿಡಿಯುವವರೇ ಇಲ್ಲದಂತಾಗಿರುವುದು.

ಹೊಸ ಜೀವನ ದೃಷ್ಟಿಯನ್ನು ಹೊಂದುವ ಮೂಲಕವೋ ಅಥವಾ ಪಾರಂಪರಿಕ ವ್ಯವಸ್ಥೆಯಲ್ಲಿನ ಸಮಾಜಮುಖಿ ಆಶಯಕ್ಕೆ ಹೊಸ ಸ್ವರೂಪವನ್ನು ಕೊಡುವ ಮೂಲಕವೋ ನಾವು ಆರ್ಥಿಕ ಜೀವನ ದೃಷ್ಟಿ ಹೊಂದುವ ತನಕ ಇದು ಹೀಗೆಯೇ. ಪ್ರಾಯಶಃ ನಿರುದ್ಯೋಗವನ್ನು ತಡೆಯಲಾಗದು, ಸಾಮಾಜಿಕ ನ್ಯಾಯವನ್ನು ಸಾಧಿಸಲಾಗದು.

ಈ ಎಲ್ಲ ಸಾಂಪ್ರದಾಯಿಕ ಸ್ಥಿತಿಗತಿಗಳಿಗೆ ಪ್ರತಿಯಾಗಿ ನಿಂತಿರುವ ಆಧುನಿಕತೆ ಹೇಗಿದೆ ಎನ್ನುವುದೂ ಸಹ ನಿರುದ್ಯೋಗದ ವಿಚಾರದಲ್ಲಿ ಚರ್ಚಿಸಬೇಕಾದ ವಿಷಯವೇ ಆಗಿದೆ. ಇಂಥಲ್ಲಿ ಭಾರತದ ಆಧುನಿಕ ವ್ಯವಸ್ಥೆಯನ್ನು ಎರಡು ಸ್ತರಗಳಾಗಿ ವಿಂಗಡಿಸಬೇಕಾಗುತ್ತದೆ. ಮೊದಲನೆಯದು ಈ ಹಿಂದೆಯೇ ಹೇಳಿದಂತೆ ಸಾಂಪ್ರದಾಯಿಕ ಶೈಲಿಯನ್ನು ಅನುಸರಿಸುತ್ತಿರುವ ಒಂದು ಭಾಗ. ಇನ್ನೊಂದು ಆಧುನಿಕತೆಯನ್ನು ಸ್ವೀಕರಿಸಿರುವ ಭಾಗ.

ಆಧುನಿಕತೆಯನ್ನು ಸ್ವೀಕರಿಸಿರುವಲ್ಲಿ, ಅದಕ್ಕೆ ಸಂಸ್ಕಾರದ ಹೊಳಪು ದಕ್ಕದೆ ಇರುವ ಅಂಶವನ್ನು ಗಮನದಲ್ಲಿಟ್ಟು ಹೇಳುವುದಾದರೆ ಕ್ರೌರ್ಯದ ವಿಜೃಂಭಣೆ ಇಲ್ಲಿ ನಡೆಯುತ್ತದೆ. ಅದು ಸಕಾರಣಕ್ಕಾಗಿ ನಡೆಯುವ ಹಿಂಸೆಯಾಗಿರದೆ ವಿನಾಕಾರಣ ನಡೆಯುವ ಕ್ರೌರ್ಯವೇ ಆಗಿರುತ್ತದೆಯೆಂಬುದು ಗಮನಾರ್ಹ ಸಂಗತಿ. ಒಂದು ಒಳ್ಳೆಯ ಉದಾಹರಣೆ ಕೊಡಬೇಕೆಂದರೆ ಜಾಗತೀಕರಣದ ಇಂದಿನ ಸ್ಥಿತಿಯಲ್ಲಿ ನಮ್ಮ ಪ್ರಭುತ್ವದ ಕಾರ್ಯನೀತಿಯನ್ನು ಗಮನಿಸಬೇಕು. ದಿನದಿಂದ ದಿನಕ್ಕೆ ಜಾಗತೀಕರಣದಿಂದ ಆರ್ಥಿಕ ಪ್ರಗತಿಯಾಗುತ್ತದೆ ಎನ್ನುವಲ್ಲಿ ಯಾರ ಪ್ರಗತಿಯಾಗುತ್ತಿದೆ? ಬಹುಮಟ್ಟಿಗೆ ಬೃಹತ್ ಬಂಡವಾಳಶಾಹಿಗಳದು. ಅವರ ಬೆನ್ನು ಬಿದ್ದಿರುವ ಪ್ರಭುತ್ವ, ಯಾಂತ್ರೀಕರಣಕ್ಕೆ ಸಮ್ಮತಿಸಿರುವುದಷ್ಟೇ ಅಲ್ಲದೆ ತಾನೇ ಅದನ್ನು ಅಳವಡಿಸಿಕೊಳ್ಳತೊಡಗಿದೆ. ಇದರಿಂದಾಗಿ ಉದ್ಯೋಗ ವಂಚಿತರಾಗಿರುವ, ಆಗುವ ಜನತೆ ನಿರ್ಗತಿಕರಾಗುತ್ತಾರೆ ಎಂದು ಬೇರೆ ಹೇಳಬೇಕಿಲ್ಲ. ನಿಜವಾಗಿಯಾದರೂ ಉದ್ಯೋಗವಂಚಿತರಾಗುವ ಈ ಜನತೆ ಸಮಾಜಕ್ಕಾಗಲಿ, ಪ್ರಭುತ್ವಕ್ಕಾಗಲಿ, ಬಂಡವಾಳಶಾಹಿಗಳೇ ಆಗಲಿ ಅನ್ಯಾಯ ಮಾಡಿದವರಲ್ಲ. ಹಾಗೂ ಇದರಿಂದ

ಕಸಿದುಕೊಳ್ಳಲಾಗುತ್ತಿರುವ ಮಾನವ ಉದ್ಯೋಗದಿಂದ ಪಿಡಿಯಷ್ಟು ದುರಾಶಾಪೀಡಿತರಿಗೆ ಒಳಿತಾಗಬಹುದೇ ಹೊರತು ಸಮಗ್ರ ಜನತೆಗೇನೂ ಅಲ್ಲ. ಅಂಥಲ್ಲಿ ಈ ಜನರ ಉದ್ಯೋಗವನ್ನು ಕಸಿದುಕೊಳ್ಳುವುದಕ್ಕೆ ಸಕಾರಣವೇನೂ ಇಲ್ಲ. ಆದ್ದರಿಂದಲೇ ದುಡಿಯುವ ಜನರ ದುಡಿಮೆಯನ್ನು ಅಲ್ಲಗಳೆಯುವ ಮೂಲಕ ಬದುಕುವ ಹಕ್ಕನ್ನು ಕಸಿದುಕೊಳ್ಳುತ್ತಿರುವ ನೀತಿಯನ್ನು ಕ್ರೌರ್ಯವೆಂದು ಕರೆದಿರುವುದು.

ಆಧುನಿಕ ಭಾರತದಲ್ಲಿ ಈ ರೀತಿಯ ಕ್ರೌರ್ಯ ವ್ಯಾಪಕವಾಗಿ ಹರಡುತ್ತಿರುವುದು ವಿಷಾದನೀಯ. ಅಂಥಲ್ಲಿ ಅವ್ಯಕ್ತವಾಗಿದ್ದು ಭಾವನಾತ್ಮಕವಾಗಿ ಮನುಷ್ಯನಿಗೆ ಮಾರ್ಗದರ್ಶನ ಮಾಡಬಹುದಾದ ಧರ್ಮ, ಖಚಿತ ವ್ಯಾಖ್ಯಾನಕೊಳ್ಳಪಡುತ್ತಾ 'ಇದು ಹೀಗೇ ಇರಬೇಕು' ಎನ್ನುವ ಮೂಲಭೂತವಾದವಾಗಿ, ನಂತರ ಅದನ್ನು ದುರುಪಯೋಗಪಡಿಸಿಕೊಳ್ಳುವ ರಾಜಕೀಯ ಮಧ್ಯ ಪ್ರವೇಶಿಸಿ ಕೋಮುವಾದದ ಸ್ವರೂಪಕ್ಕೆ ತಿರುಗಿ, ಕೊನೆಗೊಂದು ಅಸ್ಥಿರ ಭಾವನೆಯನ್ನು ಮೂಡಿಸುವ ಮೂಲಕ ಭಯೋತ್ಪಾದನೆಯ ತನಕ ಮುಂದುವರಿಯುತ್ತದೆ. ಇದರಿಂದ ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಎರಡು ರೀತಿಯ ನಷ್ಟ ಅನುಭವಿಸಬೇಕಾಗುತ್ತದೆ. ಇಂತಹುದರಲ್ಲಿ ತೊಡಗಿಸಿಕೊಳ್ಳುವ ಜನರ ಶಕ್ತಿ ಪೋಲಾಗಿ ಆರ್ಥಿಕ ಸಂಪನ್ಮೂಲಗಳನ್ನು ನಾಶಪಡಿಸುವ ಮೂಲಕ ನಿರುದ್ಯೋಗಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಿ ಬಿಡುತ್ತದೆ. ಅಷ್ಟೇ ಅಲ್ಲ ಯುವ ಶಕ್ತಿ ಯಾವ ಪ್ರಗತಿಪರ ದೃಷ್ಟಿ ಇಟ್ಟುಕೊಂಡು ತಮ್ಮ ಉದ್ಯೋಗದ ಬಗ್ಗೆ ಯೋಚಿಸಬೇಕಾಗಿದೆಯೋ ಆ ಯೋಚನೆಯನ್ನೇ ಅವರಿಂದ ನಾಶಪಡಿಸಿ ಬಿಡುತ್ತದೆ.

ಇಲ್ಲಿನ ಇನ್ನೊಂದು ಅಂಶ ನಿರಂತರ ಆರ್ಥಿಕ ಅತೃಪ್ತಿ ಮತ್ತು ಸಂಕುಚಿತ ಮನೋಭಾವನೆ. ಅತೃಪ್ತಿ ಎನ್ನುವಂಥದ್ದು ಸಾಧನೆಯ ಪ್ರಯತ್ನದ ಶಕ್ತಿ ಎನ್ನುವುದು ನಿಜವೇ ಆದರೂ ಅದು ಇತರರನ್ನು ಬಲಿ ತೆಗೆದುಕೊಂಡು ಸಾಧಿಸುವಂತಹದಾಗಬಾರದು. ಇದನ್ನೇ ಆರ್ಥಿಕ ಅತಿರೇಕದ ಜೀವನ ದೃಷ್ಟಿ ಎಂದು ಕರೆದಿರುವುದು.

ಈ ರೀತಿಯ ಆರ್ಥಿಕ ಚಿಂತನೆಯು ಅತಿರೇಕ ಕಾಣಿಸಿಕೊಂಡಾಗ ವ್ಯಕ್ತಿ ತೀರಾ ಸಂಕುಚಿತನಾಗುತ್ತಾನೆ. ದುರಾಶಾಪೀಡಿತ ಕೂಡಿಹಾಕುವ ಮನೋಪ್ರವೃತ್ತಿಯವನಾಗುತ್ತಾನೆ. ಸಹಬಾಳ್ವೆ ಸಹಕಾರದ ಸಾಂಪ್ರದಾಯಿಕ ಆಶಯಗಳು ಕಳೆದುಹೋಗುತ್ತವೆ. ಈ ಚಿಂತನೆ ಸಮಗ್ರ ಜನಜೀವನದಲ್ಲಿ ಕಂಡು ಬಂದಾಗ ಸೃಷ್ಟಿಯಾಗುವ ವಾತಾವರಣ ಬೇರೆ. ಆದರೆ ನಮ್ಮಲ್ಲಿ ಅದು ಹಾಗಿಲ್ಲ. ಒಂದು ಕಡೆ ಈ ತೆರನ ಮನೋವೃತ್ತಿ ಇರುತ್ತಲೇ ಇನ್ನೊಂದೆಡೆ ಸಾಂಪ್ರದಾಯಿಕ ಜೀವನದ ಬಗ್ಗೆ ಒಲವು ಉಳ್ಳ ಜನರು, ಮುಗ್ಧರು ವಿಪುಲ ಸಂಖ್ಯೆಯಲ್ಲಿದ್ದಾರೆ. ಅಂಥಲ್ಲಿ ಈ ಜನರನ್ನು ಅತಿರೇಕ ಆರ್ಥಿಕವಾದಿಗಳಾದ ಮಂದಿ ಸುಲಭದಲ್ಲಿ ಶೋಷಿಸಬಲ್ಲರು. ಅದರಿಂದಾಗಿ ಬಹು ಮಂದಿಯ ಮಾನವ ಉದ್ಯೋಗಗಳು ಕಸಿಯಲ್ಪಡುತ್ತದೆ. ಹಾಗೂ ಉದ್ಯೋಗಕ್ಕೆ ಸಮಾನಾದ ವೇತನ ಸಂದಾಯವಾಗದೆ ಬಹುಮಂದಿ ನಿಕೃಷ್ಟ ಜೀವನಮಟ್ಟದತ್ತ ಸರಿಯಬೇಕಾಗುತ್ತದೆ.

ಪ್ರಭುತ್ವ ನಿರ್ಮಿಸುತ್ತಿರುವ ಯಾಂತ್ರೀಕರಣದ ಅತಿರೇಕವನ್ನು ಕ್ರೌರ್ಯದ ಸಂಕೇತವಾಗಿ ಹಿಂದೆಯೇ ಹೇಳಿದೆ. ಅದು ಖಾಸಗಿ ಒಡೆತನಕ್ಕೆ ಹೆಚ್ಚು ಹೆಚ್ಚು ಅವಕಾಶ ಕಲ್ಪಿಸಿದಂತೆಲ್ಲ ಯಾಂತ್ರೀಕರಣದ ಹಾವಳಿ ಸಮಗ್ರ ಅರ್ಥ ವ್ಯವಸ್ಥೆಯನ್ನು ಆವರಿಸಿಬಿಡುತ್ತದೆ. ಇದರ ಉದ್ದೇಶವಾದರೋ ಅತಿಯಾದ ಲಾಭ ಸಂಪಾದಿಸುವುದು. ಅದಕ್ಕೆ ಪೂರಕವಾಗಿ ಯಾಂತ್ರೀಕರಣದಿಂದ ಕೆಲಸದ ವೇಗ ಹೆಚ್ಚುತ್ತದೆ, ದಕ್ಷತೆ ಹೆಚ್ಚುತ್ತದೆ, ಕಾರ್ಮಿಕ ಮುಷ್ಕರಗಳಂಥ ತೊಂದರೆಗಳಿರುವುದಿಲ್ಲ ಎಂಬ ತಿಳಿವಳಿಕೆ ಇದೆ. ಎಲ್ಲವೂ ನಿಜ. ಆದರೆ ಆರ್ಥಿಕತೆ ಇರುವುದು ಮನುಷ್ಯನಿಗಾಗಿಯೇ ವಿನಃ ಮನುಷ್ಯನಿರುವುದು ಆರ್ಥಿಕತೆಗಾಗಿ ಅಲ್ಲ. ಅಂಥಲ್ಲಿ ಯಾಂತ್ರೀಕರಣದಿಂದ ಅದೆಷ್ಟೇ ಒಳಿತುಗಳಿದ್ದರೂ ಕಳೆದುಹೋಗುತ್ತಿರುವ ಮಾನವ ಉದ್ಯೋಗಗಳನ್ನು ಗಮನಿಸಿದಾಗ ಒಳ್ಳೆಯದಲ್ಲ. ಮಾನವ ಶ್ರಮ ಬಳಕೆಯಿಂದ ಉದ್ಭವವಾಗುವ ಸಮಸ್ಯೆಗಳನ್ನು ನಿವಾರಿಸುವ ಪ್ರಯತ್ನ ಕೈಗೊಳ್ಳುವುದು ಮುಖ್ಯವೇ ಹೊರತು ಮಾನವ ಶ್ರಮವನ್ನು ಅಲ್ಲಗಳೆಯುವುದಲ್ಲ.

ಇದಕ್ಕೆ ಇರಬೇಕು, ಆರ್ಥಿಕ ಪ್ರಗತಿಯಲ್ಲಿ 'ಮಾನವ ಅಭಿವೃದ್ಧಿ ಸೂಚಿ' ಎಂಬ ಮಾನ ದಂಡವನ್ನು ಅಮರ್ತ್ಯಸೇನ್ ಬಳಸಿರುವುದು. ಆ ಪ್ರಕಾರ ಮನುಷ್ಯ ಪ್ರಗತಿಗೆ ಪೂರಕವಾಗುವಂತೆ ಯಾಂತ್ರೀಕರಣದ ಹೊಂದಾಣಿಕೆ ನಡೆಯಬೇಕೇ ಹೊರತು ಯಾಂತ್ರೀಕರಣಕ್ಕೆ ಪೂರಕವಾಗಿ ಮಾನವ ಶಕ್ತಿಯನ್ನು ಅಂದಾಜಿಸುವುದಿಲ್ಲ. ಈ ಕೆಲಸವನ್ನು ಯಾರು ಮಾಡಬೇಕು? ಪ್ರಭುತ್ವ ಮಾಡಬೇಕು.

ಆದರೆ ಪ್ರಭುತ್ವವೇ ಕೊಂಚ ಕೊಂಚವಾಗಿ ಸಾಮಾಜಿಕ ನ್ಯಾಯದ ಆಶಯದಿಂದ ವಿಮುಖವಾಗುತ್ತಿರುವಾಗ, ಅದರ ನೀತಿಗಳೇ ನಿರುದ್ಯೋಗವನ್ನು ಸೃಷ್ಟಿಸುತ್ತಿರುವಾಗ, ಪ್ರಭುತ್ವವನ್ನು ನಮ್ಮ ಆಶಯಕ್ಕನುಗುಣವಾಗಿ ಪರಿವರ್ತಿಸಿಕೊಳ್ಳಲು ಸಾಧ್ಯವಾಗದೇ ಇರುವಾಗ ನಮಗೆ ನಾವೇ ಉದ್ಯೋಗಗಳನ್ನು ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಬಹುಶಃ ಆ ಕಾರಣಕ್ಕಾಗಿಯೇ ಈ ಹೊತ್ತು ಗಾಂಧೀಜಿಯವರ ಆರ್ಥಿಕ ಚಿಂತನೆಗಳು ಇತರೆಲ್ಲ ಚಿಂತನೆಗಳಿಗಿಂತ ನಮಗೆ ಹೆಚ್ಚು ಹೆಚ್ಚು ಪ್ರಸ್ತುತವಾಗುತ್ತಾ ಹೋಗುತ್ತದೆ.

ಗಾಂಧೀಜಿಯವರ ಆರ್ಥಿಕ ಚಿಂತನೆಯಲ್ಲಿ ಪ್ರಭುತ್ವಕ್ಕೆ ವಿಶೇಷವಾದ ಮಹತ್ವವೇನಿಲ್ಲ. ಬದಲು ಅವರು ನೇರವಾಗಿ ಜನರ ಬದುಕಿನೊಂದಿಗೆ ಸಂವಾದಿಸಿದರು. ಒಟ್ಟೂ ವ್ಯವಸ್ಥೆಯ ತಳಮಟ್ಟದ ಮೂರ್ತ ಸ್ವರೂಪವಾದ ವ್ಯಕ್ತಿಯ ಕುರಿತು ಹೇಳಿದರು. ಒಟ್ಟಾರೆಯಾಗಿ ಅವರ ಆರ್ಥಿಕ ಚಿಂತನೆಯಲ್ಲಿ ನಮಗೆ ಸೂಕ್ತವಾಗುವ ಅಂಶಗಳು ಇವು -

ಗಾಂಧೀಜಿಯವರು ಈ ದೇಶದ ಕೃಷಿ ಪ್ರಧಾನ ಅರ್ಥ ವ್ಯವಸ್ಥೆಯನ್ನು ಬಲಪಡಿಸುವ ಬಗ್ಗೆ, ಅದಕ್ಕಾಗಿ ಮಾನವ ಶ್ರಮ ಮುಖ್ಯವಾಗಬೇಕಾದ ಬಗ್ಗೆ ಹೇಳಿದರು. ಅದನ್ನು ನಾವು ಎಲ್ಲ ರಂಗಗಳಿಗೆ ಅನ್ವಯಿಸಿಕೊಳ್ಳಬಹುದಾದರೂ ಕೃಷಿ ಕ್ಷೇತ್ರದ ಮೂಲ ತಳಹದಿಯಿಂದ ಅದು ಆರಂಭವಾದರೆ ಚೆನ್ನ.

ಗ್ರಾಮ ಸ್ವರಾಜ್ಯದ ಕಲ್ಪನೆ ಮುಖ್ಯವಾಗುವುದು ಇಲ್ಲಿಯೇ. ಅಂದರೆ ಆಧುನಿಕ ಯುಗದಲ್ಲಿ ಎಲ್ಲವೂ ಸ್ವಾವಲಂಬಿಯಾಗಲು ಸಾಧ್ಯವಿಲ್ಲ. ಆದರೆ ಹೆಚ್ಚು ಸ್ವಾವಲಂಬಿಯಾಗುವ ಪ್ರಯತ್ನ ಮಾಡಬಹುದು. ಅದಕ್ಕಾಗಿ ರೈತರು ಸಂಘಟಿತರಾಗಬೇಕಿದೆ. ಅವರು ನಷ್ಟ ಅನುಭವಿಸುವ ಮೂಲವಾದ ಮಧ್ಯವರ್ತಿಗಳ ವಿಪರೀತ ಹಾವಳಿಯನ್ನು ನಿವಾರಿಸಬೇಕಿದೆ. ಇಂಥಲ್ಲಿ ರೈತರು ನಷ್ಟ ಅನುಭವಿಸಲು ಮುಖ್ಯ ಕಾರಣಗಳಲ್ಲಿ ಒಂದು ಅವರು ತಮ್ಮ ಉತ್ಪನ್ನಗಳನ್ನು ಕಚ್ಚಾ ವಸ್ತುವಾಗಿ ಮಾರುವುದು ಎಂಬುದನ್ನು ಅರಿತುಕೊಳ್ಳಬೇಕು.

ಆ ಸ್ಥಿತಿಯಲ್ಲಿ ಬದಲಾವಣೆಯಾಗಬೇಕು. ಅವರು ತಮ್ಮ ಉತ್ಪನ್ನಗಳನ್ನು ಸಿದ್ಧ ವಸ್ತುವಾಗಿ, ಅರೆ ಸಿದ್ಧ ವಸ್ತುವಾಗಿ ಮಾರ್ಪಡಿಸಿ ಮಾರಲು ಅನುಕೂಲವಾಗಬೇಕು. ಅದಕ್ಕಾಗಿಯೇ ಗ್ರಾಮಮಟ್ಟದಲ್ಲಿ ಸಂಘಟನಾತ್ಮಕ ಚಟುವಟಿಕೆಗಳು ಹೆಚ್ಚಬೇಕು. ರೈತರ ಸಾಮೂಹಿಕ ಒಡೆತನದಲ್ಲಿ ಗ್ರಾಮಮಟ್ಟದಲ್ಲಿ ಸಣ್ಣ ಮಟ್ಟಿನ ಕೈಗಾರಿಕಾ ಘಟಕಗಳು ಸ್ಥಾಪನೆಯಾಗಬೇಕು. ಅವು ರೈತರ ಕೃಷಿ ಉತ್ಪನ್ನಗಳನ್ನು ಸಿದ್ಧವಸ್ತುವಾಗಿ, ಅರೆ ಸಿದ್ಧವಸ್ತುವಾಗಿ ಮಾರ್ಪಡಿಸಿ ಮಾರುವಂತಾಗಬೇಕು. ಒಂದು ಉದಾಹರಣೆ ಹೇಳಬೇಕೆಂದರೆ ಈವತ್ತು ಟೊಮೆಟೋ ಬಳಸಿಕೊಂಡು ಟೊಮೆಟೋ ಸಾಸ್ ತಯಾರಿಸಿ ಮಾರುವ ಕೈಗಾರಿಕೋದ್ಯಮಿ ಲಾಭ ಸಂಪಾದಿಸಬಲ್ಲ. ಅದರ ಬದಲು ರೈತರೇ ಸಾಸ್ ತಯಾರಿಸಿ ಮಾರುವಂತಾಗಬೇಕು.

ಇದು ಕೇವಲ ಒಂದು ಉದಾಹರಣೆಯಷ್ಟೆ. ಗ್ರಾಮ ಮಟ್ಟದಲ್ಲಿ ದೊರಕುವ ನಾನಾ ರೀತಿಯ ಸಂಪನ್ಮೂಲಗಳನ್ನು ಹಾಗೆ ಸಿದ್ಧವಸ್ತು, ಅರೆ ಸಿದ್ಧವಸ್ತುವಾಗಿ ಮಾರ್ಪಡಿಸಿ ರೈತರು ಮಾರಬಲ್ಲರಾದರೆ ಅವರ ನಷ್ಟದ ಪ್ರಮಾಣ ಇಳಿಮುಖವಾಗಬಲ್ಲದು.

ಹೀಗೆ ಗ್ರಾಮ ಮಟ್ಟದಲ್ಲಿ ಇಂಥ ಚಟುವಟಿಕೆಗಳು ನಡೆದಾಗ ರೈತರು ಸಬಲರಾಗುವುದಷ್ಟೇ ಅಲ್ಲ. ಉದ್ಯೋಗದ ಸೃಷ್ಟಿಯೂ ನಡೆಯುತ್ತದೆ. ಸಣ್ಣ ಕೈಗಾರಿಕೆಗಳ ನಿರ್ವಹಣೆಗೆ ಉದ್ಯೋಗಿಗಳು ಬೇಕು. ಅದನ್ನು ಮಾರುಕಟ್ಟೆಗೆ ಸಾಗಿಸುವುದಕ್ಕೆ, ಮಾರುಕಟ್ಟೆ ವ್ಯವಹಾರ ನಿಯಂತ್ರಿಸುವುದಕ್ಕೆ ಉದ್ಯೋಗಿಗಳು ಬೇಕು. ಹಾಗೆಯೇ ಈ ವ್ಯವಹಾರಗಳಿಗೆ ವಿದ್ಯಾವಂತರ ಅವಶ್ಯಕತೆಯೂ ಇರಲಾಗಿ ವಿದ್ಯಾವಂತ ನಿರುದ್ಯೋಗಿಗಳಿಗೆ ಪರ್ಯಾಯ ಉದ್ಯೋಗ ದೊರಕಿಸಿಕೊಡಬಹುದು. ಕಾಲಕ್ರಮೇಣ ದೈಹಿಕ ಶ್ರಮ-ಬೌದ್ಧಿಕ ಶ್ರಮವೆರಡರ ನಡುವಿನ ಸೇತುವೆಯಾಗಿ ಕಾರ್ಯ ನಿರ್ವಹಿಸುವ ಈ ಉದ್ಯೋಗಿಗಳಲ್ಲಿ ಸಂಘಟಿತ ಬಲವಿರುವುದರಿಂದ ನಿಧಾನಗತಿಯಲ್ಲಿ ಅವರು ಶ್ರಮ ಗೌರವ ಪ್ರಜ್ಞೆ ಬೆಳೆಸಿಕೊಂಡು ದೈಹಿಕ ಶ್ರಮದತ್ತ ತೆರಳಲು ಅನುಕೂಲವಾದೀತು.

ಗ್ರಾಮ ಮಟ್ಟದಲ್ಲಿ ಈ ರೀತಿಯ ಪ್ರಯತ್ನಗಳು ನಡೆಯುವಾಗ ನಗರಗಳಲ್ಲಿನ ನಿರುದ್ಯೋಗಿಗಳು ಸಂಘಟಿತರಾಗಿ ಈ ಗ್ರಾಮೀಣ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ನಿರ್ಮಿಸಿಕೊಡುವ ಕೆಲಸ ಮಾಡುವ ಮೂಲಕ ಅವರ ನಿರುದ್ಯೋಗವನ್ನು ನಿವಾರಿಸಿಕೊಳ್ಳಬಹುದು. ಬೃಹತ್ ಉದ್ದಿಮೆಗಳ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಈ ಉತ್ಪನ್ನಗಳನ್ನು ಕೊಡಲು ಹೆಚ್ಚು ಅವಕಾಶವಿದೆ. ಹಾಗಾದಾಗ ಗ್ರಾಹಕರಿಗಾಗುವ ನಷ್ಟವೂ ತಪ್ಪುತ್ತದೆ. ಇದು ಸಫಲವಾಗುತ್ತಾ ಹೋದಂತೆ ಅನಿವಾರ್ಯವಾಗಿ ಬೃಹತ್ ಉದ್ದಿಮೆಗಳು, ಅತಿ ಲಾಭ ಸಂಪಾದಿಸುವ ವ್ಯಾಪಾರಿಗಳು ತಮ್ಮ ವ್ಯವಹಾರವನ್ನು ನ್ಯಾಯಬದ್ಧವಾಗಿ ಸಂಯೋಜಿಸಬೇಕಾಗುತ್ತದೆ.

ಈ ರೀತಿಯ ಸಂಘಟಿತ ಪ್ರಯತ್ನಗಳ ಮೂಲಕ ಜಾಗತೀಕರಣದ ಮುಕ್ತ ಮಾರುಕಟ್ಟೆಗೆ ಪರ್ಯಾಯವಾದ ದೇಶೀಯ ಮಾರುಕಟ್ಟೆಯನ್ನು ನಿರ್ಮಿಸುವ ಶಕ್ತಿ ನಮಗಿದೆ. ಆದರೆ ನಮ್ಮ ಶಕ್ತಿಯನ್ನು ನಾವು ಅರಿಯಬೇಕು. ಹಾಗೂ ಈ ರೀತಿಯ ಪರ್ಯಾಯ ವ್ಯವಸ್ಥೆ ದುರ್ಬಲವರ್ಗದಿಂದ ಮೂಡಿ ಬಂದು ಸಾಮೂಹಿಕ ಒಡೆತನದ ಆಶ್ರಯದಲ್ಲಿರುವಂತೆ ಎಚ್ಚರಿಕೆ ವಹಿಸಬೇಕಾದ್ದು ಅಗತ್ಯ. ಏಕೆಂದರೆ ಯಾವ ಪ್ರಯತ್ನವೇ ಆಗಲಿ ಅದು ಒಬ್ಬ ವ್ಯಕ್ತಿಯಿಂದ ನಡೆದಾಗ ಊಳಿಗ ಮಾನ್ಯ ರೀತಿಯ ವ್ಯಕ್ತಿ ಕೇಂದ್ರೀಕೃತ ಹಿತಾಸಕ್ತಿಯ ಅತಿರೇಕವಾಗಲು ಸಾಧ್ಯವಿದೆ. ದುರ್ಬಲ ವರ್ಗವೇ ಇಲ್ಲಿ ಪ್ರಾಧಾನ್ಯತೆ ವಹಿಸಬೇಕು. ಏಕೆಂದರೆ ನಷ್ಟ ಅನುಭವಿಸುತ್ತಿರುವ ವರ್ಗ ಅದು ಅಂಥಲ್ಲಿ ಸಬಲ ವರ್ಗ ಇಲ್ಲಿ ಒಳ ನುಸುಳಿ ಬಿಟ್ಟರೆ ಒಟ್ಟು ಆಶಯಗಳು ಶಿಥಿಲಗೊಳ್ಳುವುದಕ್ಕೆ ಅವಕಾಶವಿದೆ.

ಈ ಒಂದು ಆರ್ಥಿಕ ವಿಚಾರಕ್ಕೆ ಸಂಬಂಧಿಸಿದಂತೆ ಸಾಮೂಹಿಕ ಒಡೆತನವಿರಬೇಕೆಂದ ಮಾತ್ರಕ್ಕೆ ವ್ಯಕ್ತಿಯ ಸ್ವಾತಂತ್ರ್ಯವೇನೂ ಹೊರಟು ಹೋಗುವುದಿಲ್ಲ. ಅದರ ಅಸ್ತಿತ್ವದ ಜೊತೆಯಲ್ಲೇ ಈ ಕಾರ್ಯ ನಡೆಯಬೇಕು. ಅದಕ್ಕಾಗಿ ಸಮಾನ ಮನಸ್ಕರು ಒಂದೆಡೆ ಸೇರಬೇಕಾಗಿದೆ. ಸೇರಿಸುವ ಕೆಲಸ ನಡೆಯಬೇಕಿದೆ. ಇಲ್ಲದೆ ಹೋದರೆ ನಿಧಾನವಾಗಿ ಬಹು ಸಂಖ್ಯಾತ ದುರ್ಬಲ ವರ್ಗ ಬದುಕಿನ ಮೂಲಭೂತ ಅಂಶಗಳಲ್ಲೊಂದಾದ ಆರ್ಥಿಕ ಶಕ್ತಿಯನ್ನು ಕಳೆದುಕೊಂಡು ದುರ್ಬಲವಾಗುತ್ತಾ, ಆಗುತ್ತಾ ನಾಮಾವಶೇಷವಾಗುವ ಸ್ಥಿತಿ ಬಂದೊದಗೀತು. ಹಾಗಾಗದಿರುವಂತೆ ಸಾಮಾಜಿಕ ಪ್ರಜ್ಞೆ ರೂಪಿಸಬೇಕಾದ್ದು ನಮ್ಮ ಈವತ್ತಿನ ಆದ್ಯತೆಯಾಗಬೇಕು. ಈ ನಿಟ್ಟಿನಲ್ಲಿ ಮುಂದಡಿಯಿಟ್ಟಿರುವ ಈ ಪತ್ರಿಕೆ ಆ ಕಾರ್ಯವನ್ನು ಪ್ರಮಾಣಿಕವಾಗಿ ನಿರ್ವಹಿಸುತ್ತದೆಂಬ ನಿರೀಕ್ಷೆಯಿಂದ, ಹಾಗಾಗಲಿ ಎಂಬ ಹಾರೈಕೆಯಿಂದ ಲೇಖನ ಪೂರ್ಣಗೊಳ್ಳುತ್ತದೆ.

ಆದರೆ ಇನ್ನೊಂದು ವಿಚಾರ. ಅದು ಬದುಕಿನ ಎರಡನೆಯ ಮೂಲಭೂತ ಅಂಶವಾದ ಜೀವನ ವಿಧಾನಕ್ಕೆ ಸಂಬಂಧಿಸಿದ್ದು. ಅದರಲ್ಲಿ ವಾಸ್ತವ ಚಿಂತನೆ, ತರ್ಕಾತೀತ ತತ್ತ್ವಜ್ಞಾನ, ಸಂಸ್ಕೃತಿ, ಸಂಪ್ರದಾಯ, ವಿಚಾರ-ಆಚಾರಗಳೆಲ್ಲ ಸೇರಿಕೊಂಡು ಬದುಕಿನ ಒಂದು ಮುಖ ಆಯಾಮ ಒಳಗೊಳ್ಳುತ್ತದೆ. ಅದರ ಬಗ್ಗೆ ಮುಂದೆಂದಾದರೂ ಚರ್ಚಿಸೋಣ. ●

ಉಲ್ಲೇಖಗಳು :

1) ಬೌಧಾಯನ ಧರ್ಮಸೂತ್ರ - 1, 5.101
2) ಮನಸ್ಮೃತಿ - X, 115
3) ನೋಟ-ಭಾರತೀಯ ವಿವಾಹ ಸಂಸ್ಥೆಯ ಇತಿಹಾಸ-ವಿ.ಕಾ. ರಾಜವಾಡೆ-ನವಕರ್ನಾಟಕ ಪ್ರಕಾಶನ
4) Development As freedom - Amartyasen-page 199, Oxford India Paperbacks fourth impression.
5) ಗಣಪತಿ - ಪುರಾಣಂ ಸುಬ್ರಹ್ಮಣ್ಯ ಶರ್ಮಾ-ನವಕರ್ನಾಟಕ ಪ್ರಕಾಶನ, ಪುಟ ಸಂಖ್ಯೆ 23-24

ಕೌಟಿಲ್ಯನ 'ವೈದಿಕ' ಅರ್ಥಶಾಸ್ತ್ರ

(26ನೇ ಪುಟದಿಂದ)

ಅಸ್ತಿತ್ವಕ್ಕೆ ಆಧಾರ. ವರ್ಣಾಶ್ರಮ ವ್ಯವಸ್ಥೆಯನ್ನು ರಕ್ಷಿಸುವುದೇ ದಂಡದ ಉದ್ದೇಶವಾಗಿತ್ತೆಂದು ಈ ಶಾಸ್ತ್ರ ಸ್ಪಷ್ಟಪಡಿಸುತ್ತದೆ. ಶೋಷಕ ವ್ಯವಸ್ಥೆಯ ರಕ್ಷಕನಾಗಿ ಅರಸನಿರಬೇಕಿತ್ತು ಎಂಬುದೇ ಇಲ್ಲಿಯ ಧ್ವನಿ.

ಉಗ್ರದಂಡ, ಮೃದು ದಂಡರಾದ ಅರಸರು ಉದ್ವೇಗ ಉಂಟು ಮಾಡುವ ಇಲ್ಲವೆ ಪರಾಭವ ಹೊಂದುವರಾದ್ದರಿಂದ ದೇಶ, ಕಾಲ, ಅಪರಾಧಗಳಿಗೆ ಅನುರೂಪವಾದ ದಂಡವನ್ನು ಉಪಯೋಗಿಸಿ ರಾಜ ಪೂಜ್ಯನಾಗಬೇಕೆಂದು ಇಲ್ಲಿ ಪ್ರತಿಪಾದಿಸಲಾಗಿದೆ. ದಂಡನೀತಿ ಕಾಲದೇಶಗಳಿಗೆ ಸಾಪೇಕ್ಷವಾಗಿರಬೇಕೆಂಬ ಮಾತು ಚಾಣಕ್ಯನ ಬುದ್ಧಿವಂತಿಕೆಯನ್ನು ನಿರೂಪಿಸುತ್ತದೆ. ಇದೊಂದೇ ಅಲ್ಲ ಇಂಥ ಹಲವಾರು ಪ್ರಸಂಗಗಳಲ್ಲಿ ಚಾಣಕ್ಯ ಹೇಳುವುದು ಸಾಪೇಕ್ಷ ಕಲ್ಪನೆಯನ್ನೇ. ಜನ ವಿರೋಧಿಯಾದ ಈ ದಂಡನೀತಿಯನ್ನು ಸಮರ್ಥಿಸಿಕೊಳ್ಳುತ್ತ, ಈ ರೀತಿ ಆಳುವ ವರ್ಗ ದಂಡನೀತಿಯನ್ನು ಅನುಷ್ಠಾನ ಮಾಡದಿದ್ದರೆ ಲೋಕದಲ್ಲಿ ಮ್ಯತ್ಸ್ಯ ನ್ಯಾಯವುಂಟಾಗುವುದೆಂದು ಹೇಳುತ್ತಾನೆ. ದೊಡ್ಡ ಮೀನು ಸಣ್ಣ ಮೀನನ್ನು ತಿನ್ನುವಂತೆ, ಪ್ರಬಲರು ದುರ್ಬಲರನ್ನು ಪೀಡಿಸುವದೇ ಮತ್ಸ್ಯ, ನ್ಯಾಯ ದಂಡವನ್ನು ಉಪಯೋಗಿಸುವ ಏನಿಲ್ಲದಿದ್ದರೆ ದುರ್ಬಲರನ್ನು ಪ್ರಬಲರು ನಾಶಮಾಡುವರು. ಆದ್ದರಿಂದ ದಂಡದಿಂದ ರಕ್ಷಿಸಲ್ಪಟ್ಟ ದುರ್ಬಲವೂ ಪ್ರಬಲನಾಗುತ್ತಾನೆ' ಎಂದು ಹೇಳಿರುವಲ್ಲಿನ ಕುತಂತ್ರವನ್ನು ತಿಳಿಯಬೇಕಿದೆ.

ಪ್ರಬಲರು, ದುರ್ಬಲರು ಅಂದರೆ ಯಾರು? ಸಾಮಾನ್ಯವಾಗಿ ದುರ್ಬಲರೆಂದರೆ (ಸಣ್ಣ ಮೀನು) ಬಡವರು, ಪ್ರಬಲರೆಂದರೆ (ದೊಡ್ಡ ಮೀನು) ಶ್ರೀಮಂತರು, (ಶೋಷಿತರು, ಶೋಷಕರು) ಎಂದು ಭಾವಿಸಿಕೊಂಡು ಬರಲಾಗಿದೆ. ಆದರೆ ಇಲ್ಲಿ ದುರ್ಬಲರೆಂದರೆ ಸಣ್ಣ ಶೋಷಕರು ಎಂದರ್ಥವೇ ಹೊರತು ಶೋಷಿತರೆಂದಲ್ಲ. ದೊಡ್ಡ ಶೋಷಕರಿಂದ ಸಣ್ಣ ಶೋಷಕರನ್ನು ರಕ್ಷಿಸಬೇಕಿತ್ತು. ಇವರಿಬ್ಬರೂ ಶ್ರಮಿಕರನ್ನು (ಶೋಷಿತರನ್ನು) ಸುಲಿಯುತ್ತಿದ್ದುದೇ, ಈ ವ್ಯವಸ್ಥೆಯ ಅಡಿಪಾಯ. ಹಾಗಾಗಿ ದುರ್ಬಲರನ್ನು ಶೋಷಿತರೆಂಬರ್ಥದಲ್ಲಿ ಹೇಳುವುದರಲ್ಲಿ ಅರ್ಥವಿಲ್ಲ. ಬ್ರಾಹ್ಮಣರು ದುರ್ಬಲವರ್ಗವಾಗಿದ್ದರೆ ಅವರನ್ನು ಪ್ರಬಲ ವರ್ಗಗಳಿಂದ ರಕ್ಷಿಸಬೇಕಿತ್ತು ಎಂಬರ್ಥದಲ್ಲಿ ಕೂಡ ಇದನ್ನು ಗ್ರಹಿಸಬೇಕು. ಏಕೆಂದರೆ ಶಿಕ್ಷಣ, ಸಂಸ್ಕೃತಿಯಂಥ ಬಲಾತ್ಕಾರವಲ್ಲದ ಅಸ್ತ್ರಗಳನ್ನು (Non-coersive weapon) ಶೋಷಕವರ್ಗದ ಪರವಾಗಿ, ಈ ಬ್ರಾಹ್ಮಣರೇ ಜನರಲ್ಲಿ ಉಪಯೋಗಿಸಬೇಕಿತ್ತು.

ಒಟ್ಟಾರೆ ಪ್ರಭುತ್ವ, ಭಾರತದಲ್ಲಿ ಬ್ರಾಹ್ಮಣ ಕೇಂದ್ರಿತ ವರ್ಣಾಶ್ರಮ ಧರ್ಮವನ್ನು ರಕ್ಷಿಸುವುದನ್ನೇ ತನ್ನ ಪ್ರಪ್ರಥಮ ಕರ್ತವ್ಯವೆಂದು ಭಾವಿಸಬೇಕಿತ್ತು. ದೇಶವ್ಯಾಪಿಯಾಗಿ ಹರಡಿಕೊಂಡ ಬ್ರಾಹ್ಮಣರು ಪ್ರಭುತ್ವಕ್ಕೆ ಈ ನೀತಿಯನ್ನು ನಿರಂತರವಾಗಿ ಮನವರಿಕೆ ಮಾಡಿಕೊಡುತ್ತ ಬಂದರು. ಆ ಮೂಲಕ ತಮ್ಮ ಹಿತವನ್ನು ಸಂರಕ್ಷಿಸಿಕೊಂಡು ಬಂದರು. ಪ್ರಭುತ್ವದ ಮೇಲೆ ತಮ್ಮ ನಿಯಂತ್ರಣವನ್ನು ಬಿಟ್ಟುಕೊಡದಂತೆ ಮಂತ್ರಿ, ದಂಡಾಧಿಕಾರಿ ಮೊದಲಾದ ಆಡಳಿತಶಾಹಿವರ್ಗವಾದರು. ಪ್ರಭುತ್ವಕ್ಕೆ ಈ ಬ್ರಾಹ್ಮಣರ ಸೇವೆ ಅಗತ್ಯವೂ, ಅನಿವಾರ್ಯವೂ ಆಗಿತ್ತು. ಇದನ್ನು ಸ್ಥಿರಗೊಳಿಸುವುದಕ್ಕೇನೆ ಶೂದ್ರ ವರ್ಣಗಳು ಓದಬಾರದು, ಬರೆಯಬಾರದಿತ್ತು. ಕ್ಷತ್ರಿಯ ಮತ್ತು ವೈಶ್ಯರು ಮಾತ್ರ ಓದಬಹುದಷ್ಟೇ. ಓದಿಸುವಂತಿರಲಿಲ್ಲ. ಯಜ್ಞ ಮಾಡಿಸಬಹುದು, ಮಾಡುವಂತಿರಲಿಲ್ಲ, ದಾನ ಕೊಡಬಹುದು, ಪಡೆಯುವಂತಿರಲಿಲ್ಲ. ಇದರರ್ಥವೆಂದರೆ ಕ್ಷತ್ರಿಯ, ವೈಶ್ಯರು, ಬ್ರಾಹ್ಮಣ್ಯವನ್ನು ಸಮರ್ಥಿಸಬೇಕಿತ್ತು, ಪೋಷಿಸಬೇಕಿತ್ತು. ಅದನ್ನು ಪ್ರಶ್ನಿಸುವಂತಿರಲಿಲ್ಲ. ಅಕ್ರಮಿಸುವಂತಿರಲಿಲ್ಲ, ಹೀಗೆ ವ್ಯವಸ್ಥೆಯ ಯಜಮಾನಿಕೆಯ ಸೂತ್ರಗಳನ್ನು ಸಂಪೂರ್ಣವಾಗಿ, ಭದ್ರವಾಗಿ ತಮ್ಮ ಕೈಯಲ್ಲಿ ಬ್ರಾಹ್ಮಣರು ಹಿಡಿದುಕೊಳ್ಳಲೆತ್ನಿಸುತ್ತಿದ್ದರು. ●

ಹಿಂದೂ ವಿವಾಹಗಳ ಸೂತ್ರ-3

(ಹಿಂದಿನ ಸಂಚಿಕೆಯಿಂದ)

ತನ್ನನ್ನು ಒಂದು ಜಾತಿಗೊಳಪಡಿಸಲು ಇಚ್ಛಿಸುವ ಗುಂಪಿನಲ್ಲಿ, ಹೆಚ್ಚುವರಿ ಹೆಣ್ಣಿನದಕ್ಕಿಂತ ಹೆಚ್ಚುವರಿ ಗಂಡಸಿನ (ವಿಧುರನ) ಸಮಸ್ಯೆ ಇನ್ನೂ ಪ್ರಮುಖತರ ಮತ್ತು ಸಮಸ್ಯಾತ್ಮಕವಾಗಿದೆ. ಅನಾದಿಕಾಲದಿಂದಲೂ ಹೆಣ್ಣಿಗೆ ಹೋಲಿಸಿದಾಗ ಗಂಡು ಮೇಲುಗೈ ಪಡೆದಿದ್ದಾನೆ. ಎಲ್ಲ ಗುಂಪಿನಲ್ಲೂ ಆತ ಪ್ರಧಾನ ವ್ಯಕ್ತಿ, ಎರಡು ಲಿಂಗಗಳಲ್ಲಿ ಆತನಿಗೇ ಅಧಿಕತರವಾದ ಪ್ರತಿಷ್ಠೆಯಿದೆ. ಸ್ತ್ರೀಯ ಮೇಲಿನ ಅವನ ಈ ಸಾಂಪ್ರದಾಯಿಕವಾದ ಶ್ರೇಷ್ಠತೆಯಿಂದಾಗಿ ಆತನ ಅಪೇಕ್ಷೆಗಳನ್ನು ಯಾವಾಗಲೂ ಪರಿಶೀಲಿಸಲಾಗುತ್ತಿದೆ. ಇನ್ನೊಂದು ಕಡೆ ಧಾರ್ಮಿಕ, ಸಾಮಾಜಿಕ ಅಥವಾ ಆರ್ಥಿಕ-ಎಲ್ಲ ಬಗೆಯ ಪಕ್ಷಪಾತ ಕಟ್ಟಳೆಗಳಿಗೂ ಸ್ತ್ರೀ ಸುಲಭವಾಗಿ ಬಲಿಯಾಗುತ್ತಿದ್ದಾಳೆ. ಆದರೆ ಗಂಡಸು, ಕಟ್ಟಳೆಗಳನ್ನು ಮಾಡುವ ವ್ಯಕ್ತಿಯಾಗಿ ಅನೇಕ ಬಾರಿ ಅವುಗಳಿಗೆ ಅತೀತನಾಗಿದ್ದಾನೆ. ಪರಿಸ್ಥಿತಿ ಹೀಗಿರುವುದರಿಂದಾಗಿ, ಒಂದು ಜಾತಿಯಲ್ಲಿ ಹೆಚ್ಚುವರಿ ಹೆಣ್ಣಿಗೆ ನೀವು ತೋರುವಂತಹ ವರ್ತನೆಯನ್ನು ಗಂಡಿಗೂ ತೋರಲಾರಿರಿ.

ಆತನನ್ನು ಸತ್ತ ಆತನ ಹೆಂಡತಿಯೊಂದಿಗೆ ಸುಡುವುದು ಎರಡು ರೀತಿಗಳಲ್ಲಿ ಕಷ್ಟಸಾಧ್ಯವಾದುದು: ಎಲ್ಲಕ್ಕಿಂತಲೂ ಮೊದಲನೆಯದೆಂದರೆ, ಆತ ಗಂಡಸು ಎಂಬೊಂದೇ ಸರಳ ಕಾರಣಕ್ಕಾಗಿ, ಆತನನ್ನು ಚಿತೆಯೇರಿಸಲು ಸಾಧ್ಯವಾಗುವುದಿಲ್ಲ. ಎರಡನೆಯದಾಗಿ, ಹಾಗೆ ಮಾಡಿದರೂ, ಆ ಜಾತಿಗೆ ಒಬ್ಬ ಬಲಿಷ್ಠ ವ್ಯಕ್ತಿ ನಷ್ಟವಾಗುತ್ತಾನೆ. ಆದ್ದರಿಂದ ಅವನನ್ನು ಪ್ರಶಸ್ತವಾಗಿಯೇ ನಿವಾರಿಸಿಕೊಳ್ಳಲು ಇನ್ನೆರಡು ಪರಿಹಾರಗಳುಳಿಯುತ್ತವೆ. ಪ್ರಶಸ್ತವಾಗಿಯೇ ಎಂದು ನಾನು ಹೇಳುತ್ತಿರುವುದು ಏಕೆಂದರೆ ಆತ ಗುಂಪಿಗೊಂದು ಆಸ್ತಿ.

ಆತ ಗುಂಪಿಗೆ ಮುಖ್ಯನಾದುದರಿಂದಲೂ, ಸ್ವಜಾತಿ ಪದ್ಧತಿ ಇನ್ನೂ ಮುಖ್ಯವಾಗಿರುವುದರಿಂದಲೂ ಇದರ ಪರಿಹಾರ ಈ ಎರಡೂ ಗುರಿಗಳಿಗೂ ಸಲ್ಲುವಂತಿರಬೇಕು. ಇಂಥ ಪರಿಸ್ಥಿತಿಗಳಲ್ಲಿ ವಿಧವೆಗೆ ಇರುವ ರೀತಿಯಲ್ಲಿ, ಆಜೀವಪರ್ಯಂತವೂ ವಿಧುರನಾಗಿರುವಂತೆ ಆತನನ್ನು ಬಲಾತ್ಕರಿಸಬಹುದು ಅಥವಾ ಪ್ರೇರೇಪಿಸಲೂಬಹುದೆಂದು ನಾನು ಹೇಳುತ್ತೇನೆ. ಒಟ್ಟಾರೆ, ಈ ಪರಿಹಾರ ಅಷ್ಟೇನೂ ಕಷ್ಟವಲ್ಲ. ಏಕೆಂದರೆ ಯಾವುದೇ ಒತ್ತಾಯಗಳಿಲ್ಲದೆಯೂ ಕೆಲವರು ಸ್ವಯಿಚ್ಛೆಯಿಂದಲೇ ಬ್ರಹ್ಮಚರ್ಯವನ್ನು ಆನಂದಿಸಬಲ್ಲರು; ಅಥವಾ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅವರು ತಾವಾಗಿಯೇ ಜಗತ್ತನ್ನೂ ಅವರ ಸಂತೋಷವನ್ನೂ ತ್ಯಜಿಸಬಲ್ಲರು. ಆದರೆ ಮನುಷ್ಯ ಸ್ವಭಾವದಿಂದಾಗಿ, ಈ ಪರಿಹಾರವನ್ನು ನಿರೀಕ್ಷಿಸುವುದು ದುರ್ಲಭವೇ ಸರಿ. ಇನ್ನೊಂದು ರೀತಿಯಲ್ಲಿ ಸಾಮಾನ್ಯವಾಗಿ ಆಗುವಂತೆ ಹೆಚ್ಚುವರಿ ಮನುಷ್ಯ ಗುಂಪಿನಲ್ಲೇ ಉಳಿದು ಸಾಮೂಹಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳುವುದಾದರೆ, ಆತ ಗುಂಪಿನ ನೀತಿಗಳಿಗೆ ಅಪಾಯವಾಗುತ್ತಾನೆ. ಭಿನ್ನದೃಷ್ಟಿಕೋನದಿಂದ ನೋಡಿದ್ದಾದರೆ ಬ್ರಹ್ಮಚರ್ಯ, ಅದು ಯಶಸ್ವಿಯಾಗುವೆಡೆಗಳಲ್ಲಿ ಸುಲಭವೇ ಆದರೂ, ಜಾತಿಯ ಭೌತಿಕ ಭವಿಷ್ಯಕ್ಕೆ ಅದು ಅನುಕೂಲಕರವಾದುದಲ್ಲ. ಆತ ನಿಷ್ಠುರ ಬ್ರಹ್ಮಚರ್ಯವನ್ನು ಪಾಲಿಸಿ ಪ್ರಪಂಚವನ್ನು ತ್ಯಜಿಸಿದಲ್ಲಿ, ಜಾತಿ ಪದ್ಧತಿ ಅಥವಾ ಜಾತಿಗಳ, ನೀತಿಗಳ ಸಂರಕ್ಷಣೆಗೆ ಅಡ್ಡಿಯಾಗಲಾರ; ಒಂದು ವೇಳೆ ಆತ ಜಾತ್ಯಾತೀತ ವ್ಯಕ್ತಿಯಾಗಿ ಉಳಿದದ್ದೇ ಆದರೆ ಆಗ ಆತ ಒಂದು ಪಿಡುಗಾಗುತ್ತಾನೆ. ಆದರೆ ತನ್ನ ಜಾತಿಯ ಲೌಕಿಕ ಸಂರಕ್ಷಣೆಯ ದೃಷ್ಟಿಯಿಂದ, ಯತಿಯು ನೈಷ್ಠಿಕ ಬ್ರಹ್ಮಚಾರಿಯಾಗಿ ಆತ ಹೆಚ್ಚುಕಡಿಮೆ ಸುಟ್ಟ ವ್ಯಕ್ತಿಯೇ. ಒಂದು ಜಾತಿ, ಕಠಿಣವಾದ ಸಮುದಾಯ ವ್ಯವಸ್ಥೆ ಸಾಧ್ಯವಾಗುವಂತೆ ದೊಡ್ಡದಾಗಿದ್ದು, ಅದು ಒಂದು ಸಂಖ್ಯಾ ಬಲವನ್ನೂ ಉಳಿಸಿಕೊಂಡಿರಬೇಕಾಗುತ್ತದೆ. ಆದರೆ ಈ ಸಂಖ್ಯಾಬಲವನ್ನು ನಿರೀಕ್ಷಿಸುತ್ತ ಬ್ರಹ್ಮಚರ್ಯವನ್ನು ಸಾರುವುದು, ಕ್ಷಯರೋಗವನ್ನು ರಕ್ತಸ್ರಾವದಿಂದ ಗುಣಪಡಿಸಿದಂತಾಗುತ್ತದೆ.

ನಿಷ್ಠುರ ಬ್ರಹ್ಮಚರ್ಯವನ್ನು ಪಾಲಿಸಿ ಪ್ರಪಂಚವನ್ನು ತ್ಯಜಿಸಿದಲ್ಲಿ, ಜಾತಿ ಪದ್ಧತಿ ಅಥವಾ ಜಾತಿಗಳ, ನೀತಿಗಳ ಸಂರಕ್ಷಣೆಗೆ ಅಡ್ಡಿಯಾಗಲಾರ; ಒಂದು ವೇಳೆ ಆತ ಜಾತ್ಯಾತೀತ ವ್ಯಕ್ತಿಯಾಗಿ ಉಳಿದದ್ದೇ ಆದರೆ ಆಗ ಆತ ಒಂದು ಪಿಡುಗಾಗುತ್ತಾನೆ. ಆದರೆ ತನ್ನ ಜಾತಿಯ ಲೌಕಿಕ ಸಂರಕ್ಷಣೆಯ ದೃಷ್ಟಿಯಿಂದ, ಯತಿಯು ನೈಷ್ಠಿಕ ಬ್ರಹ್ಮಚಾರಿಯಾಗಿ ಆತ ಹೆಚ್ಚುಕಡಿಮೆ ಸುಟ್ಟ ವ್ಯಕ್ತಿಯೇ. ಒಂದು ಜಾತಿ, ಕಠಿಣವಾದ ಸಮುದಾಯ ವ್ಯವಸ್ಥೆ ಸಾಧ್ಯವಾಗುವಂತೆ ದೊಡ್ಡದಾಗಿದ್ದು, ಅದು ಒಂದು ಸಂಖ್ಯಾ ಬಲವನ್ನೂ ಉಳಿಸಿಕೊಂಡಿರಬೇಕಾಗುತ್ತದೆ. ಆದರೆ ಈ ಸಂಖ್ಯಾಬಲವನ್ನು ನಿರೀಕ್ಷಿಸುತ್ತ ಬ್ರಹ್ಮಚರ್ಯವನ್ನು ಸಾರುವುದು, ಕ್ಷಯ ರೋಗವನ್ನು ರಕ್ತಸ್ರಾವದಿಂದ ಗುಣಪಡಿಸಿದಂತಾಗುತ್ತದೆ.

ಆದ್ದರಿಂದ, ಒಂದು ಗುಂಪಿನಲ್ಲಿ ಹೆಚ್ಚುವರಿ ಗಂಡಸಿನ ಮೇಲೆ ಬ್ರಹ್ಮಚರ್ಯವನ್ನು ಹೇರುವಿಕೆ, ತಾತ್ವಿಕವಾಗಿಯೂ, ಪ್ರಾಯೋಗಿಕವಾಗಿಯೂ ವಿಫಲಗೊಳ್ಳುತ್ತದೆ. ಒಂದು ಸಂಸ್ಕೃತ ಪರಿಭಾಷಿಕ ಶಬ್ದವನ್ನು ಬಳಸಿ ಹೇಳುವುದಾದರೆ, ಅವನನ್ನು ಒಬ್ಬ ಗೃಹಸ್ಥ (ಒಂದು ಕುಟುಂಬ ಪಾಲಕ)ನನ್ನಾಗಿ ಇಡುವುದು ಜಾತಿಯ ಹಿತದೃಷ್ಟಿಯಿಂದಲೇ. ಆದರೆ ಜಾತಿಯೊಳಗೆ ಒಬ್ಬ ಹೆಂಡತಿಯನ್ನು ಅವನಿಗೆ ಒದಗಿಸುವುದೇ ಸಮಸ್ಯೆಯಾಗಿದೆ. ಹೊರನೋಟಕ್ಕೆ ಇದು ಅಸಾಧ್ಯ. ಏಕೆಂದರೆ ಒಂದು ಜಾತಿಯಲ್ಲಿರಬೇಕಾದ ಪ್ರಮಾಣವೆಂದರೆ ಒಂದು ಗಂಡಿಗೆ ಒಂದು ಹೆಣ್ಣು, ಎರಡು ಬಾರಿ ಮದುವೆ ಆಗುವ ಅವಕಾಶವನ್ನು ಯಾರೂ ಹೊಂದಲಾಗದು. ಬಿಗಿಯಾಗಿ ತಾನೇ ಬೇಲಿ ಹಾಕಿರುವ ಒಂದು ಜಾತಿಯೊಳಗೆ ಮದುವಣಿಗರ ಬಳಿಗೆ ಹೋಗುವ ಮದುವಣಗಿತ್ತಿಯರು ಯಾವಾಗಲೂ ತಕ್ಕಷ್ಟೇ ಇರುತ್ತಾರೆ. ಇಂಥ ಸಂದರ್ಭಗಳಲ್ಲಿ ಹೆಚ್ಚುವರಿ ಗಂಡಸಿಗೆ, ಆತನನ್ನು ಒಂದು ಗುಂಪಿಗೇ ಕಟ್ಟಿಹಾಕುವ ಸಲುವಾಗಿ, ಮದುವೆಯಾಗಬಲ್ಲ ಹಂತವನ್ನು ಇನ್ನೂ ತಲುಪಿರದ ವಧುವನ್ನು ಹೆಂಡತಿಯಾಗಿ ತುಂಬಿಸಬಹುದು. ಹೆಚ್ಚುವರಿ ಗಂಡಸಿನ ವಿಚಾರದಲ್ಲಿ ನಿಶ್ಚಯವಾಗಿಯೂ ಇದು ಅತ್ಯುತ್ತಮವಾದ ಸಾಧ್ಯ ಪರಿಹಾರ. ಇದರಿಂದ ಆತನನ್ನು

ಜಾತಿಯಲ್ಲೆ ಉಳಿಸಿದಂತಾಗುತ್ತದೆ. ಜಾತಿಯಿಂದ ನಿರಂತರವಾಗಿ ಹೊರಗೆ ಹರಿಯುವ ಸಂಖ್ಯಾಬಲವನ್ನು ಈ ವಿಧಾನದಿಂದ ಸಂರಕ್ಷಿಸಿದಂತಾಗುವುದಲ್ಲದೆ ಸ್ವಜಾತಿ ಪದ್ಧತಿ ಮತ್ತು ನೀತಿಗಳನ್ನೂ ಕಾಪಾಡಿದಂತಾಗುತ್ತದೆ.

ಸ್ತ್ರೀ ಪುರುಷರ ನಡುವೆ ಇರುವ ಸಾಂಖ್ಯಿಕ ತಾರತಮ್ಯವನ್ನು ನಾಲ್ಕು ರೀತಿಗಳಿಂದ ಹೇಗೆ ಅನುಕೂಲಕರವಾಗಿ ಪಾಲಿಸಲಾಗುತ್ತಿದೆಯೆಂಬುದನ್ನು ಈಗ ನೋಡಬಹುದು. 1) ತನ್ನ ಸತ್ತ ಗಂಡನೊಂದಿಗೆ ವಿಧವೆಯನ್ನು ಸುಡುವುದು, 2) ಕಡ್ಡಾಯ ವೈಧವ್ಯ-ಸತಿ ಪದ್ಧತಿಗಿಂತ ಸೌಮ್ಯರೂಪ, 3) ವಿಧುರನ ಮೇಲೆ ಬ್ರಹ್ಮಚರ್ಯವನ್ನು ಹೇರುವುದು, 4) ಅಪ್ರಾಪ್ತ ವಯಸ್ಕಳೊಂದಿಗೆ ಅವನ ವಿವಾಹ, ನಾನು ಮೇಲೆ ಹೇಳಿದಂತೆ, ವಿಧವೆಯನ್ನು ಸುಡುವುದು ಮತ್ತು ವಿಧುರನಿಗೆ ಬ್ರಹ್ಮಚರ್ಯ ಹೇರುವುದು-ಇವು ಗುಂಪಿನ ಸ್ವಜಾತಿ ಪದ್ಧತಿ ಪರಿಪಾಲನೆಗೆ ನೆರವಾಗುತ್ತವೆಂಬುದು ಸಂದೇಹ. ಇವೆಲ್ಲ ಸಾಧನಗಳಾಗಿ ಆಚರಣೆಯಲ್ಲಿವೆ. ಆದರೆ ಸಾಧನಗಳೂ ಬಿಡುಗಡೆಗೊಂಡಾಗ ಇಲ್ಲವೆ ಚಾಲನೆಗೊಳಿಸಿದಾಗ ಗುರಿ ತಲುಪಲು ಶಕ್ತವಾಗುತ್ತವೆ. ಹಾಗಾದರೆ ಈ ಸಾಧನೆಗಳು ಸೃಷ್ಟಿಸುವ ಗುರಿಯಾದರೂ ಯಾವುದು? ಅವು ಸ್ವಜಾತಿ ಪದ್ಧತಿಯನ್ನು ಸೃಷ್ಟಿಸುತ್ತವೆ ಮತ್ತು ಮುಂದುವರಿಸುತ್ತವೆ. ಜಾತಿ ಕುರಿತ ವಿವಿಧ ವ್ಯಾಖ್ಯೆಗಳಿಗೆ ಮಾಡಿದ ನಮ್ಮ ವಿಶ್ಲೇಷಣೆಯಂತೆ ಜಾತಿ ಮತ್ತು ಸ್ವಜಾತಿ ಪದ್ಧತಿ ವಿಭಿನ್ನವಾಗಿವೆ. ಈ ರೀತಿಯಾಗಿ ಈ ಸಾಧನಗಳ ಅಸ್ತಿತ್ವವು ಜಾತಿಗೆ ತದ್ರೂಪವಾಗಿದೆ. ಮತ್ತು ಜಾತಿಯೂ ಈ ಸಾಧನಗಳನ್ನು ಒಳಗೊಂಡಿಡೆ.

ನನ್ನ ಅಭಿಪ್ರಾಯದ ಪ್ರಕಾರ, ಜಾತಿಗಳ ಒಂದು ವ್ಯವಸ್ಥೆಯಲ್ಲಿ ಇದು ಜಾತಿಯ ಸಾಮಾನ್ಯ ಕ್ರಿಯಾ ವಿಧಾನ. ಈಗ ನಾವು ಈ ಪ್ರೌಢ ಸಾಧಾರಣೀಕರಣದಿಂದ ಹಿಂದೂ ಸಮಾಜದಲ್ಲಿ ಜಾತಿಗಳತ್ತ ಹೊರಳೋಣ. ಅವುಗಳ ಕಾರ್ಯವಿಧಾನವನ್ನು ಪರಿಶೀಲಿಸೋಣ. ಭಾರತದ ಭೂತಕಾಲವನ್ನು ಮತ್ತು ಜಾತಿ ವ್ಯವಸ್ಥೆ ಅತ್ಯಂತ ಪ್ರಾಚೀನ ಸಂಸ್ಥೆಯಾಗಿತ್ತೆ ಎಂಬುದನ್ನು ಅನಾವರಣಗೊಳಿಸಲು ಹೊರಡುವವರ ಹಾದಿಯಲ್ಲಿ ಅನೇಕ ದೊಡ್ಡ ಹಳ್ಳ ತಗ್ಗುಗಳಿವೆಯೆಂಬುದನ್ನು ನಾನು ಪೀಠಿಕಾ ರೂಪವಾಗಿ ಹೇಳಬೇಕಾಗಿಲ್ಲ. ಅದರಲ್ಲಿಯೂ ವಿಶೇಷವಾಗಿ ವಿಶ್ವಾಸಾರ್ಹವಾದ ಅಥವಾ ಲಿಖಿತ ದಾಖಲೆಗಳ ಅಭಾವದಿಂದಾಗಿ ಇದು ಅತ್ಯಂತ ನಿಜವೆನ್ನಿಸಿದೆ: ಇಲ್ಲಿ ಜನರು, ಹಿಂದೂಗಳ ಹಾಗೆ, ಜಗತ್ತೊಂದು ಭ್ರಮೆಯೆಂದು ಭಾವಿಸಿದ್ದರಿಂದ ಇತಿಹಾಸ ಬರೆಯುವುದನ್ನು ಅಪರಾಧವೆಂದೆಣಿಸಿದ್ದರು. ಬಹುಕಾಲದವರೆಗೆ ದಾಖಲಿಸಿದ್ದಾಗ್ಯೂ ಸಂಸ್ಥೆಗಳು ಮಾತ್ರ ಜೀವಂತವಾಗಿವೆ; ರೀತಿ ರಿವಾಜುಗಳು ಮತ್ತು ನೀತಿ ನಡಾವಳಿಗಳು ಅನೇಕ ವೇಳೆ ಅದರದೇ ಕಥೆಯನ್ನು ಹೇಳುವ ಪಳೆಯುಳಿಕೆಗಳಾಗಿರುತ್ತವೆ. ಇದು ನಿಜವಾದರೆ, ಹೆಚ್ಚುವರಿ ಗಂಡಸು ಮತ್ತು ಹೆಚ್ಚುವರಿ ಹೆಂಗಸಿನ ಸಮಸ್ಯೆಗಳನ್ನು ಎದುರಿಸಲು ಹಿಂದೂಗಳು ಕಂಡುಕೊಂಡ ಪರಿಹಾರವನ್ನು ನಾವು ಪರಿಶೀಲಿಸಿದರೆ ಅಲ್ಲಿಗೆ ನಮ್ಮ ಪ್ರಯತ್ನಕ್ಕೆ ಅಧಿಕ ಪ್ರತಿಫಲ ಸಿಕ್ಕಿದಂತಾಗುತ್ತದೆ.

ಹಿಂದೂ ಸಮಾಜವು ತನ್ನ ಸಾಮಾನ್ಯ ನಡವಳಿಕೆಯಲ್ಲಿ ಸಂಕೀರ್ಣವೆನಿಸಿದರೂ, ಮೇಲುನೋಟಕ್ಕೇ ಮೂರು ಪ್ರತ್ಯೇಕ ಸಂಪ್ರದಾಯಗಳು ವ್ಯಕ್ತವಾಗುತ್ತವೆ. ಅವುಗಳೆಂದರೆ :

1) ಸತಿ ಅಥವಾ ತನ್ನ ಸತ್ತ ಗಂಡನ ಚಿತೆಯಲ್ಲೇ ಸುಡುವುದು
2) ವಿಧವೆ ಮತ್ತು ಮದುವೆಯಾಗಲು ಬಿಡದಂತೆ ವೈಧವ್ಯವನ್ನು ಹೇರುವುದು,
3) ಬಾಲ್ಯ ವಿವಾಹ

ಇದರೊಂದಿಗೆ, ವಿಧುರನು ಸಂನ್ಯಾಸ (ತ್ಯಾಗ) ಕೈಗೊಳ್ಳಬೇಕೆಂಬ ಒಂದು ದೊಡ್ಡ ಗೀಳು ಕೆಲವರಿಗುಂಟು; ಆದರೆ, ಇದು ಕೆಲವು ಸಂದರ್ಭಗಳಲ್ಲಿ ಕೇವಲ ಮಾನಸಿಕ ಏರುಪೇರಿನಿಂದಾಗಿ ಆದುದೆನ್ನಬಹುದು.

ನಾನು ತಿಳಿದ ಮಟ್ಟಿಗೆ, ಈ ಸಂಪ್ರದಾಯಗಳ ಹುಟ್ಟಿಗೆ ಯಾವ ವೈಜ್ಞಾನಿಕ ವಿವರಣೆಯೂ ಇಂದಿನ ತನಕ ಸಾಧ್ಯವಾಗಿಲ್ಲ. ಈ ಸಂಪ್ರದಾಯಗಳನ್ನು ಗೌರವಿಸಿದ್ದೇಕೆಂದು ತಿಳಿಸಲು ನಮಗೆ ಸಮೃದ್ಧ ಸಿದ್ಧಾಂತವಿದೆಯಾದರೂ ಅವುಗಳ ಉಗಮ ಮತ್ತು ಅಸ್ತಿತ್ವ ಕುರಿತು ಹೇಳಲು ಏನೂ ಇಲ್ಲ. ಗಂಡ ಹೆಂಡತಿಯರ "ದೇಹ ಮತ್ತು ಆತ್ಮಗಳ ಪರಿಪೂರ್ಣ ಮಿಲನದ ಸಾಕ್ಷ್ಯ"ವೆಂದು 'ಸತಿ' ಪದ್ಧತಿಯನ್ನು ಪುರಸ್ಕರಿಸಲಾಗಿದೆ; ಅದು 'ಸಮಾಧಿಯ ಆಚೆಗೂ ಇರುವ ಭಕ್ತಿ'; ಏಕೆಂದರೆ ಪತ್ನೀತ್ವದ ಆದರ್ಶವನ್ನು ಇದು ಗರ್ಭೀಕರಿಸಿದೆ, ಉಮೆ ಹೇಳುವ ಈ ಮಾತುಗಳಲ್ಲಿ ಇದು ಚೆನ್ನಾಗಿ ಒಡಮೂಡಿದೆ- "ತನ್ನ ಈಶ್ವರನಿಗೆ ನಿಷ್ಠಳಾಗಿರುವುದು ಹೆಣ್ಣಿನ ಗೌರವ, ಅದು ಅವಳ ಅನಂತ ಸ್ವರ್ಗ; ಆಕೆ ಅತ್ಯಂತ ಹೃದಯಸ್ಪರ್ಶಿಯಾದ ಮಾನವ ಕೂಗಿನಿಂದ ಮತ್ತೂ ಹೇಳುತ್ತಾಳೆ- 'ಓ ಮಹೇಶ್ವರ, ನೀನು ನನ್ನಿಂದ ತೃಪ್ತಿ ಪಡೆಯದಿದ್ದಲ್ಲಿ ನಾನು ಸ್ವರ್ಗವನ್ನು ಕೂಡ ಆಸೆಪಡುವುದಿಲ್ಲ. (ನೋಡಿ : ಎ.ಕೆ. ಕುಮಾರಸ್ವಾಮಿ; ಎ ಡಿಫೆನ್ಸ್ ಆಫ್ ದಿ ಈಸ್ಟರ್ನ್ ವುಮನ್ ಇನ್ ದಿ ಬ್ರಿಟಿಷ್ ಸೋಸಿಯಲಾಜಿಕಲ್ ರಿವ್ಯೂ, ಸಂ. IV, 1913). ಕಡ್ಡಾಯ ವೈಧವ್ಯವನ್ನು ಗೌರವಿಸಿದ್ದೇಕೆಂಬುದು ನನಗೆ ಗೊತ್ತಿಲ್ಲ; ಅದಕ್ಕೆ ಬದ್ಧರಾದವರು ಅನೇಕ ಜನರಿದ್ದರೂ ಅದನ್ನು ಹಾಡಿ ಹೊಗಳಿದ ಒಬ್ಬನನ್ನಾದರೂ ನಾನು ಭೆಟ್ಟಿಯಾಗಿಲ್ಲ. ಡಾ. ಕೇತ್ಕರ್ ಅವರು ಬಾಲ್ಯ ವಿವಾಹದ ಗೌರವಾರ್ಥವಾಗಿರುವ ಸ್ತೋತ್ರವನ್ನು ಮುಂದೆ ಹೇಳಿರುವ ಹಾಗೆ ವರದಿ ಮಾಡಿದ್ದಾರೆ : "ಆಕೆ ಅಥವಾ ಆತ ಲಗ್ನವಾದವರೊಂದಿಗಲ್ಲದೆ ಇತರ ಪುರುಷ ಅಥವಾ ಸ್ತ್ರೀಯೊಂದಿಗೆ ಅನುರಾಗವನ್ನು ನಿಜವಾಗಿಯೂ ಪ್ರಾಮಾಣಿಕರಾದ ಗಂಡು ಅಥವಾ ಹೆಣ್ಣು ಹೊಂದಬಾರದು. ಅಂಥ ಪಾವಿತ್ರ್ಯವು ವಿವಾಹೋತ್ತರದಲ್ಲೇ ಅಲ್ಲದೆ ವಿವಾಹಪೂರ್ವದಲ್ಲೂ ಕಡ್ಡಾಯವಾಗಿರುತ್ತದೆ; ಏಕೆಂದರೆ ಅದೊಂದೇ ಸರಿಯಾದ ಆದರ್ಶ ಪರಿಶುದ್ಧತೆ. ತಾನು ಮದುವೆಯಾಗಲಿರುವ ಪುರುಷನ ಹೊರತು ಬೇರೆ ಪುರುಷನಲ್ಲಿ ಪ್ರೀತಿಪಡುವ ಯಾವ ಕನ್ಯೆಯನ್ನೂ ಪರಿಶುದ್ಧಳೆಂದು ಪರಿಗಣಿಸುವುದಿಲ್ಲ. ತಾನು ಯಾರನ್ನು ಮದುವೆಯಾಗಲಿದ್ದೇನೆಂಬುದು ಆಕೆಗೆ ಗೊತ್ತಿಲ್ಲವಾದ್ದರಿಂದ, ಮದುವೆಗೆ ಮೊದಲು ಆಕೆ ಯಾವ ಪುರುಷನಲ್ಲೂ ಅನುರಕ್ತಳಾಗಕೂಡದು. ಹಾಗೆ ಮಾಡಿದ್ದೇ ಆದರೆ ಅದೊಂದು ಪಾಪ. ಆದ್ದರಿಂದ ಕನ್ಯೆಯು ತನ್ನಲ್ಲಿನ್ನೂ ಲೈಂಗಿಕ ಪ್ರಜ್ಞೆ ಜಾಗೃತಗೊಳ್ಳುವ ಮೊದಲೇ ಆಕೆ ತಾನು ಯಾರನ್ನು ಪ್ರೀತಿಸಬೇಕೆಂಬುದನ್ನು ತಿಳಿಯುವುದು ಒಳ್ಳೆಯದು" ಈ ಕಾರಣದಿಂದಾಗಿ ಬಾಲ್ಯವಿವಾಹ.

(ಮುಂದಿನ ಸಂಚಿಕೆಗೆ)

ಸ್ಫೂರ್ತಿಧಾಮದಲ್ಲಿ ಚರ್ಚೆ ಚಿಂತನೆ, ಸಂವಾದ....

ಪ್ರತಿ ವರ್ಷದ ಏಪ್ರಿಲ್ 14 ಶೋಷಿತ ಸಮುದಾಯದ ಎಲ್ಲ ಜನವರ್ಗಗಳ ಬದುಕಿನಲ್ಲೊಂದು ಮಹತ್ವದ ದಿನ. ತಮ್ಮ ಸಾಮಾಜಿಕ ದಾಸ್ಯ ವಿಮೋಚನೆಗಾಗಿ ದುಡಿದ ಮಹಾನ್ ಮಾನವಾತಾವಾದಿ ಡಾ|| ಅಂಬೇಡ್ಕರ್‌ರವರ ಜನ್ಮದಿನವದು.

ದೀನ-ದಲಿತರ ಬದುಕಿನ ಸಾಂಸ್ಕೃತಿಕ ಹಬ್ಬವಾದ ಈ ದಿನದಂದು "ಸ್ಫೂರ್ತಿಧಾಮ" ಪ್ರತೀವರ್ಷವೂ ಸಮುದಾಯದ ಜ್ವಲಂತ ಸಮಸ್ಯೆಗಳನ್ನು ಕುರಿತು ಚರ್ಚೆ, ಸಂವಾದ, ವಿಚಾರ ಸಂಕಿರಣ, ಹಾಡು-ಸಂಗೀತಗಳ ಮೂಲಕ ಗಂಭೀರ ಚಿಂತನೆಗಳನ್ನು ನಡೆಸುತ್ತಾ ಬಂದಿದೆ.

ಅದರಂತೆ 14-4-2003ರಂದು ಇಡೀ ದಿನದ ಒಂದು ಅರ್ಥಪೂರ್ಣ ಚರ್ಚೆಯೊಂದಿಗೆ ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಗುತ್ತಿದೆ. ದಯಮಾಡಿ ದಲಿತರ ಸರ್ವಾಂಗೀಣ ಪ್ರಗತಿಯ ಆಶಯ ಹೊತ್ತ ಈ ಕಾರ್ಯಕ್ರಮಕ್ಕೆ ಬಂಧು-ಮಿತ್ರರೊಡನೆ ಆಗಮಿಸಬೇಕಾಗಿ ವಿನಂತಿ.



ದಯವಿಟ್ಟು ಓದಿರಿ

ಡಾ|| ಬಾಬಾಸಾಹೇಬ್ ಅಂಬೇಡ್ಕರ್ ನಂತರ ಶೋಷಿತರ ಬದುಕಿನಲ್ಲಿ ಸ್ವಾಭಿಮಾನದ ಬೀಜಬಿತ್ತಿ ಹೋರಾಟದ ಫಲ ತಂದಿತ್ತ ಕೀರ್ತಿ ಕರ್ನಾಟಕದ ದಲಿತ ಚಳವಳಿಗೆ ಸಲ್ಲುತ್ತದೆ. ಕಾಲು ಶತಮಾನಗಳ ಕಾಲದ ದಲಿತ ಚಳವಳಿಯ ವಿಭಿನ್ನ ಅಭಿವ್ಯಕ್ತಿ ಮತ್ತು ಪ್ರತಿಭಟನೆಯ ಮಾದರಿಗಳನ್ನು ಕುರಿತು ಚಿಂತಕ ಡಾ|| ಡಿ.ಆರ್. ನಾಗರಾಜ್ ಬರೆದಿರುವ 'ದಿ ಫ್ಲೇಮಿಂಗ್ ಫೀಟ್' ಕೃತಿಯನ್ನು ಎಂ.ಎಸ್. ಆಶಾದೇವಿಯವರು ಕನ್ನಡೀಕರಿಸಿ ಓದುಗರಿಗಾಗಿ ನೀಡಿದ್ದಾರೆ.

ಪ್ರತಿಗಳಿಗಾಗಿ ಸಂಪರ್ಕಿಸಿ : **ವಸಂತ ಪ್ರಕಾಶನ**

ನಂ. 59, 38/1, 19ನೇ ಮುಖ್ಯರಸ್ತೆ

ಪದ್ಮನಾಭನಗರ, ಬೆಂಗಳೂರು-560 070

ಬೆಲೆ : ರೂ. **75/-**



ಅತಿ ಶ್ರೇಷ್ಠವಾದ ಮಾನವೀಯ ಮೌಲ್ಯಗಳನ್ನು ಜಗತ್ತಿಗೆ ಸಾರಿದ ಬೌದ್ಧ ಸಾಹಿತ್ಯದ ಪವಿತ್ರ ಗ್ರಂಥಗಳಾದ ತ್ರಿಪಿಟಕಗಳನ್ನೆಲ್ಲಾ ಸಂಗ್ರಹವಾಗಿಯಾದರೂ ಸಾರವತ್ತಾಗಿಯೇ ಅಧ್ಯಯನ ಮಾಡಿದಂತಾಗುವ ಕೃತಿ **'ಸೌಂದರನಂದ'** ಮಹಾಕಾವ್ಯ. ಅಶ್ವಘೋಷನ ಈ ಕೃತಿಯನ್ನು ಓದುಗರಿಗಾಗಿ ಕನ್ನಡದಲ್ಲಿ ನೀಡಿರುವವರು ಹಿರಿಯ ವಿದ್ವಾಂಸರೂ, ಸಂಶೋಧಕರೂ ಆದ ಡಾ|| ಎಲ್. ಬಸವರಾಜುರವರು.

ಪ್ರತಿಗಳಿಗಾಗಿ ಸಂಪರ್ಕಿಸಿ : **ಲೋಹಿಯಾ ಪ್ರಕಾಶನ**

'ಕ್ಷಿತಿಜ', ಈಪ್ಪಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ - 583103

ದೂರವಾಣಿ : 08392/57412 ಬೆಲೆ : ರೂ. **180/-**



ಭಾರತ ಸ್ವಾತಂತ್ರ್ಯ ಚಳವಳಿ ದೇಶವನ್ನು ಕ್ರಮೇಣ ವ್ಯಾಪಿಸುತ್ತಲಿದ್ದ ಸಂದರ್ಭದಲ್ಲಿ ದಕ್ಷಿಣ ಭಾರತ ಇದಕ್ಕೆ ಸ್ಪಂದಿಸುತ್ತ ಬಂದ ರೀತಿಗಳನ್ನು ಆಳವಾಗಿ ಶೋಧಿಸಿದ ಡಾ|| ಎಸ್. ಚಂದ್ರಶೇಖರ್ ಅವರ **'ದಕ್ಷಿಣ ಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ'** ಎಂಬ ಆಂಗ್ಲ ಕೃತಿಯನ್ನು ಕನ್ನಡಿಗರಿಗಾಗಿ ಅನುವಾದಿಸಿದ್ದಾರೆ ಲೇಖಕ ಸಿ. ನಾಗಣ್ಣನವರು.

ಪ್ರತಿಗಳಿಗಾಗಿ ಸಂಪರ್ಕಿಸಿ : **ನಿರ್ದೇಶಕರು ಪ್ರಸಾರಾಂಗ**

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - 583276

ಬೆಲೆ : ರೂ. **120/-**



20ನೇ ಶತಮಾನದ ಶ್ರೇಷ್ಠ ಭಾರತೀಯ ಚಿಂತಕರೂ, ಕ್ರಿಯಾಶೀಲ ರಾಜಕಾರಣಿಗಳೂ ಕರ್ನಾಟಕ ರಾಜಕೀಯ ಹಾಗೂ ಸಾಂಸ್ಕೃತಿಕ ಜಗತ್ತಿನ ಮೇಲೆ ಮಹತ್ತರ ಪ್ರಭಾವ ಬೀರಿದ ರಾಮಮನೋಹರ ಲೋಹಿಯಾ ಅವರ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮಾಡಿದೆ. ಇದರ ಫಲವೇ **"ಕಣ್ಣೆದುರಿಗಿನ ಪ್ರಶ್ನೆಗಳು"** ಕೃತಿ ಸಂಪುಟ ಐದು.

ಪ್ರತಿಗಳಿಗಾಗಿ ಸಂಪರ್ಕಿಸಿ : **ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ**

ಬೆಂಗಳೂರು - 560 001 ಬೆಲೆ : ರೂ. **25/-**